TIGHT BINDING BOOK

UNIVERSAL LIBRARY
OU_200007
UNIVERSAL LIBRARY

OUP—1700—8-11-77—7,000.

OSMANIA UNIVERSITY LIBRARY

Call No. K83 Accession No. K3219
K89H

Author

Title

This book should be returned on or before the date last marked bel

# ಹೊಸಲು ದಾಟಿದ ಹೆಣ್ಣು

(ಕಾದಂಬರಿ)

ಅ. ನ. ಕೃ.

ಪ್ರಕಾಶಕರು :

ಡಿ. ವಿ. ಕೆ. ಮೂರ್ತಿ

ಕೃಷ್ಣಮೂರ್ತಿಪುರಂ, ಮೈಸೂರು

ಮೊದಲನೆಯ ಮುದ್ರಣ : ನವಂಬರ್ ೧೯೪೯
ಎರಡನೆಯ ಮುದ್ರಣ : ಮಾರ್ಚ್ ೧೯೫೪
ಮೂರನೆಯ ಮುದ್ರಣ : ನವೆಂಬರ್ ೧೯೭೪

(ಎಲ್ಲ ಹಕ್ಕುಗಳೂ ಲೇಖಕರವು)

ಮುಖಚಿತ್ರ : ಆರ್. ಎಸ್. ಎನ್.

ಬೆಲೆ : ಒಂದೂವರೆ ರೂಪಾಯಿ

ಮುದ್ರಕರು :
**ಪರಿಮಳ ಪ್ರೆಸ್**
ನೂರಡಿ ರಸ್ತೆ–ಮೈಸೂರು

# ಹೊಸಲು ದಾಟಿದ ಹೆಣ್ಣು

## ೧

"ಏನೇ, ಸುಭಾ ಮನೆಗೆ ಬಂದಳೇನೇ ?"

"ಗಂಟೆಯೆಷ್ಟು ?"

"ಎಂಟು ಹೊಡೆಯಿತು."

"ಇನ್ನೇನು ಬರುವ ಸಮಯ"

" ಚೆನ್ನಾಗಿದೆ. ಹೆಣ್ಣು ಹುಡುಗಿ ಎಂಟು ಗಂಟೆ ಒಂಭತ್ತು ಗಂಟೆಯಾದರೂ ಮನೆ ಮುಖ ಕಾಣಬೇಡವೇ ?"

ಅಡಿಗೆ ಮನೆಯಿಂದಲೇ ಉತ್ತರ ಕೊಡುತ್ತಿದ್ದ ನರಸಮ್ಮ ಹೊಟ್ಟಿಗೆ ಬಂದು ಯಜಮಾನರ ಮುಂದೆ ನಿಂತರು. ಒಗ್ಗರಣೆಯ ಸೌಟು ಕೈಯಲ್ಲಿಯೇ ಇತ್ತು.

"ಏನೋ ಗೊಣಗಿಕೊಂಡಿರಿ ?"

"ಗಂಟೆ ೮-೯ ಆದರೂ ಹೆಣ್ಣು ಹುಡುಗಿ ಮನೆಗೆ ಬರುವುದಕ್ಕೆ ಹೊತ್ತಾಗಲಿಲ್ಲವೇ ಎಂದು ಹೇಳಿದೆ. ಗೊಣಗಿಕೊಳ್ಳಲಿಲ್ಲ."

"ಪ್ರಮಾದವೇನಾಯಿತು. ಕಾಲೇಜಿನಲ್ಲಿ ಸ್ಪೆಷಲ್ ಕ್ಲಾಸೋ. ಟೆನಿಸ್ ಮ್ಯಾಚೊ ಏನೋ ಇರಬಹುದು."

"ದಿನ ಒಂದೊಂದು ಇದ್ದೇ ಇರತ್ತೆ. ಇದು ತಪ್ಪಿದ್ದೆಂದು ಹೇಳು ?"

"ಅವಳು ಕಾಲೇಜಿಗೆ ಹೋಗುವುದು ನಿಮಗೆ ಬೇಡವಾಗಿದ್ದರೆ ಕಾಲೇಜು ಬಿಡಿಸಿ ಬಿಡಿ. ಸುಮ್ಮನೆ ಹೀಗೆ ನನ್ನ ಅರೆಯಬೇಡಿ."

"ಕಾಲೇಜು ಬಿಡಿಸಿದರೆ ನೀನು ಈ ಮನೆಯಲ್ಲಿ ನನ್ನ ಉಳಿಸುತೀಯಾ ?"

"ಹೌದು. ಈ ಮನೆಯಲ್ಲಿ ಎಲ್ಲಾ ನನ್ನ ಇಚ್ಛೆಯಂತೆಯೇ ನಡೆಯುತ್ತಿರುವುದು ?"

"ಇನ್ನು ಯಾರ ಇಚ್ಛೆ ಇಲ್ಲಿ ನಡೆಯುತ್ತಿದೆ?"

"ನೀವು ಸುಮ್ಮನೆ ಮಾತಿಗೆ ಮಾತು ಜೋಡಿಸಬೇಡಿ. ಈ ಲಾಯರ್ ಜಾಣತನವೆಲ್ಲಾ ನಿಮ್ಮ ಕಕ್ಷಿಗಾರರಿಗೆ ಮುಡಿಪಾಗಿಡಿ."

ವೆಂಕಪ್ಪಯ್ಯನವರು ಮುದುರಿಕೊಂಡು ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡ ಸಾಕಿದ ಬೆಕ್ಕಿನ ಹಾಗೆ ನೋಡತೊಡಗಿದರು.

"ರಂಗಣ್ಣ ಕಾಗದ ಬರೆದಿದ್ದಾನೆ. ಅದನ್ನು ನಿನಗೆ ಹೇಳೋಣ ಎಂದು ಬೆಳಿಗ್ಗೆಯಿಂದ ಪ್ರಯತ್ನಿಸಿದೆ. ಕಕ್ಷಿಗಾರರ ಕಾಟ!"

"ಏನಂತೆ ಅವನ ಪ್ರಲಾಪ ?"

"ಈ ಸಾರೆ ಕಾಗದ ಸ್ವಲ್ಪ ಬಿಗಿಯಾಗಿಯೇ ಇದೆ."

"ಇರಲಿ. ಏನು ಬರೆದಿದ್ದಾನೆ ಹೇಳಿ."

"ಇನ್ನು ಮುಂದೆ ಸುಭದ್ರಾ ಓದುವುದು ಅವನಿಗಿಷ್ಟವಿಲ್ಲವಂತೆ! ಅವಳ ಪರೀಕ್ಷೆಯಾದ ಕೂಡಲೆ ಪ್ರಸ್ತ ಮಾಡಿಕೊಟ್ಟು ಕಳಿಸಿಕೊಡದಿದ್ದರೆ ತಾನು ಬೇರೆ ಮದುವೆ ಮಾಡಿಕೊಳ್ಳುತ್ತಾನಂತೆ !!"

"ಅವನ ಹುಟ್ಟಿಗೆ ಬೇರೆ ಮದುವೆಯೊಂದು ಕೇಡು."

"ಅವನ ಹೆಂಡತಿಯನ್ನು ಅವನು ಕರೆದುಕೊಂಡು ಹೋಗುವುದಕ್ಕೆ ನಾವು ಅಡ್ಡಿ ಪಡಿಸಿದವರಾಗುತ್ತದೆಯೇ ?"

"ಆ ಮಂಕು ಮುಂಡೇದಕ್ಕೆ ಸುಭದ್ರೆಯನ್ನು ಕೊಡಬೇಡಿ ಎಂದು ನಾನು ಬಡಕೊಂಡೆ. ನನ್ನ ಮಾತು ಕೇಳಿದಿರಾ ?"

"ಅವಳಿಗೆ ವಯಸ್ಸು ಇಪ್ಪತ್ತಾಗಿತ್ತು. ಇನ್ನೂ ಮನೆಯಲ್ಲಿಟ್ಟುಕೊಂಡಿದ್ದರೆ ಬಹು ಗೌರವ ಬರುತ್ತಿತ್ತು."

"ಮಗಳಿಗೆ ವಯಸ್ಸಾಯಿತು ಎಂದು ಬೀದಿ ದಾಸಯ್ಯನಿಗೆ ಕೊಟ್ಟು ಮದುವೆ ಮಾಡೋದೇನು ?"

"ರಂಗಣ್ಣ ಏನಾಗಿದ್ದಾನೆ?"

"ನಿಮ್ಮ ಅಳಿಯ ಮನ್ಮಥ, ಕುಬೇರ ಸರಿಯೊ ?"

"ಅವನು ಮನ್ಮಥನೂ ಅಲ್ಲ, ಕುಬೇರನೂ ಅಲ್ಲ ಎಂದು ನಾನು ಬಲ್ಲೆ. ಆದರೆ ಗೌರವಸ್ಥ. ಮರ್ಯಾದೆಯಾಗಿ ಜೀವನ ಮಾಡಿಕೊಂಡಿದ್ದಾನೆ."

"ಅರವತ್ತು ರೂಪಾಯಿ ಸಂಬಳದಲ್ಲಿ !"

"ಸಂಬಳ ಎಷ್ಟಾದರೇನು ? ಗೌರವ ಮುಖ್ಯ."

"ಅವನಿಗೆ ಬರುವುದು ಅವನ ಹೊಟ್ಟೆ ಬಟ್ಟೆಗೆ ಸಾಲದು. ಇನ್ನು ಸುಭದ್ರೆಯನ್ನು ಹೇಗೆ ಸಾಕುತ್ತಾನೆ ?"

"ನೀನು ಹೇಳುತ್ತಿರುವುದೇನೆಂದು ನನಗೆ ಅರ್ಥವಾಗಲಿಲ್ಲ."

"ಅವನು ಸರಿಯಾಗಿ ಸಂಪಾದನೆಮಾಡಿ ತನ್ನ ಹೆಂಡತಿಯನ್ನು ಸಾಕುವ ಯೋಗ್ಯತೆ ಸಂಪಾದನೆ ಮಾಡಿಕೊಳ್ಳುವ ತನಕ ನಾನು ಸುಭದ್ರೆಯನ್ನು ಕಳುಹಿಸಿಕೊಡುವುದಿಲ್ಲ. ಗಿಣಿಯ ಹಾಗೆ ಸಾಕಿದ ಮಗುವನ್ನು ಹದ್ದಿನ ಬಾಯಿಗೆ ಹಾಕುವುದಕ್ಕೆ ನನಗೆ ಸುತರಾಂ ಇಷ್ಟವಿಲ್ಲ."

"ನಾವು ಹಾಗೆ ಹೇಳುವುದಕ್ಕೆ ಸಾಧ್ಯವಿಲ್ಲ ಕಣೇ. ಕಾಯಿದೆ ಕಾನೂನು ಎಲ್ಲಾ ಅವನ ಪರ. ನಾಳೆ ಅವನು 'Restituion of Conjugal Rights'ಗೆ ಅರ್ಜಿ ಹಾಕಿದರೆ ಬಾಯಿ ಮುಚ್ಚಿಕೊಂಡು ನಾವು ಕಳಿಸಿಕೊಡಬೇಕಾಗುತ್ತದೆ. ಮನೆ ಮಾತು ಕೋರ್ಟು ಕಛೇರಿ ಹತ್ತುವುದು ಚೆನ್ನಾಗಿಲ್ಲ ನೋಡು."

"ಕೋರ್ಟಿಗೆ ಹೋಗಲಿ ನೋಡುವ. ನೀವು ಲಾಯರಾಗಿ ಏನು ಸಾರ್ಥಕವಾದ ಹಾಗಾಯಿತು."

"ನಾನು ಲಾಯರಾಗಿದ್ದೀನೀಂತ ನನ್ನ ಮಗಳ ತಲೆಯ ಮೇಲ್ಕೆ ಕಲ್ಲು ಎತ್ತಿ ಹಾಕಲೇ ?"

"ಆ ಮೂದೇವೀಗೆ ಸುಭದ್ರೆಯನ್ನು ಕಟ್ಟಿದಾಗಲೇ ಕಲ್ಲು ಎತ್ತಿ ಹಾಕಿದಿರಿ."

"ಅರಿಯದ ಹುಡುಗಿ ತಲೆಗೆ ಹೆತ್ತ ತಾಯಿ ನೀನೇ ಈ ವಿಷಯಗಳನ್ನು ತುಂಬುತ್ತ ಬಾ. ನಾಳೆ ಏನಾದರೂ ಹೆಚ್ಚು ಕಡಿಮೆಯಾದರೆ ಅನುಭವಿಸುವುದಕ್ಕೆ ನಾನು ಗಟ್ಟಿಯಾಗಿದ್ದೀನಿ."

"ಬಹಳ ಅನುಭವಿಸುವವರು ! ಸಾಕು ಸುಮ್ಮನಿರೀಂದ್ರೆ. ಸುಮ್ಮನೆ ಊರಗಲ ಬಾಯಿ ತೆಗೆಯಬೇಡಿ."

"ರಂಗಣ್ಣನಿಗೇನು ಬರೆಯಲಿ ?"

"ನಿಮಗೆ ತೋರಿದ್ದು ಬರೆಯಿರಿ. ನಾನು ಹೇಳಬೇಕಾದದ್ದು ಹೇಳಿ ಪೂರೈಸಿಯಾಯಿತು."

ವೆಂಕಪ್ಪಯ್ಯ ತಲೆ ತುರಿಸಿಕೊಳ್ಳುತ್ತಾ ಕುಳಿತರು. ಹೆಂಡತಿಯ ಮುಖದಲ್ಲಿ ಮೂಡಿದ್ದ ಮುನಿಸು ಅವರ ಅಲ್ಪ ಸ್ವಲ್ಪ ಧೈರ್ಯವನ್ನೂ

ಉಡುಗಿಸಿತು. ಪ್ರಸ್ತುತ ವಿಷಯವನ್ನು ಒಂದು ನಿಲುಗಡೆಗೆ ತರದಿದ್ದರೆ ಮುಂದಾಗುವ ಭಯಂಕರ ಪರಿಣಾಮದ ಚಿಂತೆ ಅವರನ್ನು ಒಂದೇ ಸಮನಾಗಿ ಕಾಡುತ್ತಿತ್ತು. ಧೈರ್ಯ ತಂದುಕೊಂಡು

"ಬೇಸಿಗೆ ರಜದಲ್ಲಿ ಪ್ರಸ್ತುದ ಶಾಸ್ತ್ರ ಮುಗಿಸಿಬಿಡೋಣ. ಕಾಲೇಜು ತೆಗೆಯುವ ತನಕ ಅವಳು ಗಂಡನ ಮನೆಯಲ್ಲಿದ್ದು ಬರಲಿ. ಈ ವರ್ಷ ದೈವಾನುಗ್ರಹದಿಂದ ಅವಳಿಗೆ ಪಾಸಾಗಿಬಿಟ್ಟರೆ ಪುನಃ ಕಾಲೇಜಿಗೆ ಹೋಗುವ ತೊಂದರೆಯೂ ಇಲ್ಲ."

"ಅವಳು ಮುಂದಕ್ಕೆ ಎಂ. ಎಸ್. ಸೀಗೆ ಓದುತ್ತಾಳೆ."

"ದುಡ್ಡು !"

"ಮಗಳ ಸ್ಕೂಲ್ ಫೀಸು ಕೊಡುವಷ್ಟು ನಿಮಗೆ ಗತಿಯಿಲ್ಲವೇನು?"

"ಆ ಮಾತಿಗೆ ಇನ್ನೂ ಕಾಲಾವಕಾಶವಿದೆ. ರಂಗಣ್ಣನ ವಿಷಯ ?"

"ಪ್ರಸ್ತುದ ಶಾಸ್ತ್ರ ಬೇಕಾದರೆ ಮುಗಿಸೋಣ. ಅವನೇ ಬಂದು ಬೇಸಿಗೆಯ ರಜ ಇಲ್ಲಿ ಕಳೆಯಲಿ. ನೀವು ಅವನಿಗೆ ಹಾಗೇ ಕಾಗದ ಬರೆಯಿರಿ."

"ಅಲ್ಲವೇ ? ಮದುವೆಯಾದ ಮೇಲೆ ಇನ್ನೆಷ್ಟು ವರ್ಷ ಅವನು ಕೈಯಿಂದ ಅಡಿಗೆ ಮಾಡಿಕೊಂಡು ಕಾಲ ಹಾಕಬೇಕೇ ?"

"ಅವನ ಮನೆ ಹಿಟ್ಟು ತೊಳೆಸುವುದಕ್ಕೆ ನನ್ನ ಮಗಳನ್ನು ನಾನು ಕಳಿಸುವುದಿಲ್ಲಾಂಪ್ರೆ—ಈ ಮಾತು ಖಂಡಿತ. ಸೆರಗಿನಲ್ಲಿ ಗಂಟು ಹಾಕಿಕೊಳ್ಳಿ—ನನ್ನ ಪದೇ ಪದೇ ಪೀಡಿಸಬೇಡಿ."

ಎಂದು ನರಸಮ್ಮ ಬಿರುನಾಗಿ ಒಳಗೆ ನಡದೇಬಿಟ್ಟರು. ವೆಂಕಪ್ಪಯ್ಯ ದಿಕ್ಕುಗಾಣದೆ ತಲೆಯ ಮೇಲೆ ಕೈ ಹೊತ್ತು ಕುಳಿತರು

ಮಗಳ ಧ್ವನಿ ಕೇಳಿಬಂತು.

ಒಂದು ಕೈಯಲ್ಲಿ ಟೆನಿಸ್ ರ್‍ಯಾಕೆಟ್, ಇನ್ನೊಂದು ಕೈಯಲ್ಲಿ ಕೈ ಚೀಲ ಪುಸ್ತಕ ಹಿಡಿದು ಸುಭದ್ರಾ ಒಳಗೆ ಬಂದು ಚೀಲ ಪುಸ್ತಕವನ್ನು ಕುರ್ಚಿಯ ಮೇಲೊಗೆದು ಟೆನಿಸ್ ರ್‍ಯಾಕೆಟ್ ಗೂಟಕ್ಕೆ ತಗಲು ಹಾಕಿ ಕುಳಿತಳು.

"ಹೊತ್ತು ಬಹಳವಾಯಿತಲ್ಲೇ ತಾಯೀ." ಎಂದರು ವೆಂಕಪ್ಪಯ್ಯ.

"ಇವತ್ತು ಟೆನಿಸ್ ಮ್ಯಾಚ್ ಇತ್ತೂ ಡ್ಯಾಡಿ. ಮ್ಯಾಚಾದ ಮೇಲೆ ಒಂದು ಪಾರ್ಟಿ - ಸ್ವಲ್ಪ ಹೊತ್ತಾಯಿತು."

"ಯಾರು ಗೆದ್ದವರು ?"

"ಲೇಡಿಸ್ ಸಿಂಗಲ್ಸ್‌ನಲ್ಲಿ ನಾನೇ ಗೆದ್ದೆ. ಮಿಕ್ಸೆಡ್ ಡಬ್ಬಲ್ಸ್‌ನಲ್ಲಿ ಡ್ರಾ ಆಯಿತು. ನಿಮ್ಮ ಶ್ರೀನಿವಾಸಮೂರ್ತಿ ಚೆನ್ನಾಗಿ ಆಡುತ್ತಾನೆ ಡ್ಯಾಡಿ."

"ನಿನ್ನ ಪಾರ್ಟನರ್ ಏನವನು?"

"ಇಲ್ಲ–ನನ್ನ ವಿರುದ್ಧ ಪಕ್ಷ. ಒಳ್ಳೆ ಆಟಗಾರ–ಒಳ್ಳೆ ಡಿಬೇಟರ್—ಆದರೆ . . ."

"ಆದರೇನು ?"

"ತುಂಬ ಸೀರಿಯಸ್ ಪ್ರಾಣಿ. ಸೋಷಿಯಲ್ ಹ್ಯಾಬಿಟ್ಸೇ ಇಲ್ಲ. ಮ್ಯಾಚ್ ಮುಗಿದ ಮೇಲೆ ಲಂಚಿಗೆ ಕುಳಿತರೆ ಐದು ನಿಮಿಷವಿದ್ದು ಹಾರಿ ಹೋಗೋದೇ ?"

"ತಂದೆ ಸ್ವಲ್ಪ ಖಂಡಿತವಾದಿ. ಅದಕ್ಕಾಗಿ ಅವನು ಹೆಚ್ಚು ಹೊತ್ತು ಹೊರಗೆ ನಿಲ್ಲುವುದಿಲ್ಲ."

"ಇವರೆಲ್ಲಾ ಕಾಲೇಜಿಗೇಕೆ ಬರುತ್ತಾರೋ"

ಎಂದುಕೊಂಡು ಒಳಗೆ ಎದ್ದು ಹೋದಳು. ವೆಂಕಪ್ಪಯ್ಯನವರೂ ಅವಳನ್ನನುಸರಿಸಿ ಹೋಗಿ ಹಾಕಿದ್ದ ಎಲೆಯ ಮುಂದೆ ಊಟಕ್ಕೆ ಕುಳಿತರು.

## ೨

ಕಾಲೇಜ್ ವರ್ತುಲದಲ್ಲಿ ಸುಭದ್ರೆಯನ್ನರಿಯದವರೇ ವಿರಳ. ಪಾಠ ಪ್ರವಚನಗಳಲ್ಲಿ ಅವಳು 'ರ್‍ಯಾಂಕ್' ವಿಧ್ಯಾರ್ಥಿಗಳ ಪಂಕ್ತಿಗೆ ಸೇರದಿದ್ದರೂ ಪಠ್ಯೇತರ ಚಟುವಟಿಕೆಗಳಲ್ಲಿ ಅವಳೇ ಮುಂದು. ಕಾಲೇಜಿನಲ್ಲಿ ಅವಳು ಉತ್ತಮ ಟೆನಿಸ್ ಆಟಗಾತಿ, ಉತ್ತಮ ವಾಗ್ಮಿ ಎಂದು ಹೆಸರು ಪಡೆದಿದ್ದುದಲ್ಲದೆ 'ಸ್ತ್ರೀ ಸ್ವಾತಂತ್ರ್ಯವಾದಿ' ಯೆಂದು ಪ್ರಸಿದ್ಧಳಾಗಿದ್ದಳು. ಅವಳ ಚುರುಕು ನಾಲಗೆಗೆ ವಿಧ್ಯಾರ್ಥಿಗಳೂ, ಉಪಾಧ್ಯಾಯರೂ ಗಡಗಡ ನಡುಗುತ್ತಿದ್ದರು.

ಕಾಲೇಜಿನಲ್ಲಿ ಈ ಸ್ಥಾನ ಪಡೆದುಕೊಳ್ಳುವುದಕ್ಕೆ ಸುಭದ್ರಾ ಸ್ವಲ್ಪ ಪ್ರಯಾಸ ಪಡಬೇಕಾಯಿತು. ಅವಳ ತರಗತಿಯಲ್ಲಿ ಎಂಟು ಮಂದಿ ಹೆಣ್ಣು ಮಕ್ಕಳಿದ್ದರು. ತರಗತಿಯ ಪಕ್ಕದಲ್ಲಿ ಹೆಣ್ಣು ಮಕ್ಕಳ ಸಲುವಾಗಿ ಪ್ರತ್ಯೇಕ

ವಿಶ್ರಾಂತಿ ಕೋಣೆ ವ್ಯವಸ್ಥೆಮಾಡಲಾಗಿತ್ತು. ವಿಧ್ಯಾರ್ಥಿನಿಯರು ಪಾಠ ಆರಂಭವಾದ ಕೂಡಲೆ ಕ್ಲಾಸಿಗೆ ಬರುವುದು ; ಪಾಠ ಮುಗಿದ ಕೂಡಲೆ ತಮ್ಮ ಕೋಣೆಗೆ ಹಿಂದಿರುಗುವುದು ಪದ್ಧತಿಯಾಗಿತ್ತು. ಹೆಣ್ಣು ಮಕ್ಕಳು ತಮ್ಮ ಕೋಣೆಗೆ ಹೋಗುತ್ತಿದ್ದಾಗ, ಬರುತ್ತಿದ್ದಾಗ ಅವರ ಹಾದಿಯ ಮಧ್ಯೆ ನಿಂತು ಕಾಡುವುದು ವಿದ್ಯಾರ್ಥಿಗಳ ದಿನಚರಿಯಾಗಿತ್ತು. ವಿಧ್ಯಾರ್ಥಿಗಳ ಲಕ್ಷ್ಯ ಹೆಚ್ಚಾಗಿ ತೆಳ್ಳಗೆ ಬೆಳ್ಳಗಿದ್ದ ಎರಡು ಜಡೆ ಹಾಕಿಕೊಂಡು ಬರುತ್ತಿದ್ದ ವರದಾಬಾಯಿಯ ಕಡೆ ಹೋಗಿತ್ತು. ವರದಾ ಏಕಾಂಗಿಸಿಯಾಗಿ ಕ್ಲಾಸಿಗೆ ಹೋಗಿ ಬರುವುದಕ್ಕೆ ಅಂಜುತ್ತಿದ್ದಳು. ವಿಧ್ಯಾರ್ಥಿಗಳ ಹಾವಳಿ ವಿಪರೀತ ಕ್ಕೆಟ್ಟುಕೊಂಡಿತು. ಪ್ರಿನ್ಸಿಪಾಲರಿಗೆ ದೂರು ಹೇಳಬೇಕೆಂದು ವಿಧ್ಯಾರ್ಥಿನಿಯರು ನಿಶ್ಚಯಿಸಿದರು. ಸುಭದ್ರಾ ಆ ನಿರ್ಧಾರವನ್ನೆದುರಿಸಿ

"ನಾವು ಪ್ರಿನ್ಸಿಪಾಲರಿಗೆ ದೂರು ಹೇಳಿದರೆ ವಿಧ್ಯಾರ್ಥಿಗಳು ಮತ್ತಷ್ಟು ಆಗ್ರಹಗೊಂಡು ನಮ್ಮನ್ನು ಕಾಡುತ್ತಾರೆ. ಈ ಜಗಳ ನಮ್ಮಲ್ಲಿಯೇ ಪರಿಹರಿಸಿಕೊಳ್ಳಬೇಕು. ಅಧಿಕಾರಿಗಳ ತನಕ ಇಂತಹ ಸಣ್ಣ ವಿಷಯ ಕೊಂಡುಹೋದರೆ ನಾವು ಹೇಡಿತನ ಪ್ರದರ್ಶನ ಮಾಡಿದಂತಾಗುತ್ತದೆ."

"ಇನ್ನೇನು ಮಾಡೋಣವಮ್ಮ. ಹುಡುಗರು ದಿನ ದಿನಕ್ಕೆ ಕಾಟ ಹೆಚ್ಚಿಸುತ್ತಿದ್ದಾರೆ. ಇದೆಲ್ಲಾ ನಮ್ಮ ಮನೆಯವರಿಗೆ ತಿಳಿದರೆ ಕಾಲೇಜೇ ಬಿಡಿಸಿ ಬಿಡುತ್ತಾರೆ" ಎಂದು ವರದಾ ಉತ್ತರವಿತ್ತಳು. ಮಾತಿನ ಸಂಗಡಲೇ ಅವಳ ಕಣ್ಣಲ್ಲಿ ನೀರು ಹೊರಟು ಬಿಡುತ್ತಿತ್ತು. ಸುಭದ್ರಾ ಅವಳನ್ನು ತಿರಸ್ಕಾರದಿಂದ ನೋಡುತ್ತಾ

"ಅಯ್ಯೋ - ಅಳುಮೂಂಜಿ - ಹುಡುಗರ ಕೀಟಲೆಗೆ ಹೆದರುವವಳು ಕಾಲೇಜಿಗೇಕೇ ಬಂದೆ? ಅವರ ಉಪಟಳಕ್ಕೆ ಎಂದಿನವರೆಗೆ ನಾವು ಹೆದರುತ್ತೇವೆಂದು ತೋರಿಸಿಕೊಳ್ಳುತ್ತೇವೆಯೋ ಅಂದಿನವರೆಗೆ ಅವರು ಕಾಡುತ್ತಲೇ ಇರುತ್ತಾರೆ. ಸೇರಿಗೆ ನಾವು ಸವಾಸೇರಾಗಬೇಕು."

"ಹ್ಯಾಗೇ ಅಮ್ಮಾ...."

"ತಡೀ ತೋರಿಸುತ್ತೇನೆ"

ಎಂದು ಭರವಸೆಯಿತ್ತಳು. ಮಾರನೆಯ ದಿನ ಹಳಿಯ ಪ್ರಕರಣದ ಪುನರಾಭಿನಯವಾಗಲು ಸುಭದ್ರಾ ಬಿರುಗಾಳಿಯಂತೆ ನುಗ್ಗಿದಳು. ವರದ

ನನ್ನು ಸುತ್ತುಗಟ್ಟಿದ್ದ ವಿದ್ಯಾರ್ಥಿಗಳನ್ನು ಅತ್ತಿತ್ತ ನೂಕಿ ಅವರಿಗೆ ಚೆನ್ನಾಗಿ ಛೀಮಾರಿಮಾಡಿ

"ಮತ್ತೆ ನೀವು ಹೀಗೆ ಮಾಡಿದರೆ ನಾನು ಸುಮ್ಮನಿರುವುದಿಲ್ಲ"

ಎಂದು ಆರ್ಭಟಿಸಿದಳು. ಪ್ರೊಫೆಸರ್ ಬಂದುದನ್ನು ನೋಡಿ ವಿದ್ಯಾರ್ಥಿಗಳು ತಮ್ಮ ಸ್ಥಾನಗಳಲ್ಲಿ ಕುಳಿತರು. ಸುಭದ್ರೆಯ ಮಾತನ್ನು ಅರ್ಧಮರ್ಧ ಕೇಳಿಸಿಕೊಂಡಿದ್ದ ಪ್ರೊಫೆಸರರು ಕ್ಲಾಸಿನಲ್ಲಿ ಕೇಳಿದರು

"ಏನಾಯಿತು ಮಿಸ್. ಸುಭದ್ರಾ. ವಿದ್ಯಾರ್ಥಿಗಳು ತೊಂದರೆ ಕೊಡುತ್ತಿದ್ದಾರೇನು ?"

ವಿದ್ಯಾರ್ಥಿಗಳು ಬೆದರಿ ಸುಭದ್ರೆಯ ಮುಖ ದಿಟ್ಟಿಸಿ ನೋಡ ತೊಡಗಿದರು. ಫಿಸಿಕ್ಸ್ ಪ್ರೊಫೆಸರ್ ಬಹಳ ಖಂಡಿತವಾದಿಗಳೆಂದು ಹೆಸರಾಗಿದ್ದರು. ಅವರ ವಕ್ರಕಣ್ಣಿನ ಪ್ರಭಾವಕ್ಕೆ ಸಿಕ್ಕಿದ ವಿದ್ಯಾರ್ಥಿ ಕಾಲೇಜಿನಿಂದ ಪಾರಾಗುವುದು ದುಸ್ತರವಾಗಿತ್ತು. ಸುಭದ್ರಾ ಯಾರ ಹೆಸರು ಹೇಳಿಬಿಡುವಳೋ ಎಂದು ವಿದ್ಯಾರ್ಥಿಗಳು ಬಾಯಿಗೆ ಅಕ್ಕೀಕಾಳು ಹಾಕಿಕೊಂಡರು. ಸುಭದ್ರಾ ಮೌನವಾಗಿದ್ದುದನ್ನು ಕಂಡು ಪ್ರೊಫೆಸರರು ಮತ್ತೆ ಪ್ರಶ್ನಿಸಿದರು. ಸುಭದ್ರಾ ಯೋಚಿಸಿ ಸಾವಧಾನವಾಗಿ

"ಏನೂ ಇಲ್ಲ ಸರ್. ನಾವೇ ಗಟ್ಟಿಯಾಗಿ ಮಾತನಾಡುತ್ತಿದ್ದೆವು."

"ಹೇಳಿ ಹೆದರಬೇಡಿ-ವಿದ್ಯಾರ್ಥಿಗಳು ತೊಂದರೆಕೊಟ್ಟರೆ ರಿಪೋರ್ಟ್ ಮಾಡಿ. ನಾನೂ ಅವರನ್ನು ಹತೋಟಿಗೆ ತರುತ್ತೇನೆ."

"ವಿದ್ಯಾರ್ಥಿಗಳು ನಮ್ಮ ವಿಷಯದಲ್ಲಿ ಬಹಳ ಚೆನ್ನಾಗಿ ನಡೆದುಕೊಳ್ಳುತ್ತಿದ್ದಾರೆ ಸರ್."

"ಸರಿ" ಎಂದು ಪ್ರೊಫೆಸರರು ಪಾಠ ಆರಂಭಿಸಿದರು.

ವಿದ್ಯಾರ್ಥಿಗಳು ವಿದ್ಯಾರ್ಥಿನಿಯರ ಜಡೆ ಎಳೆಯುವುದು, ಕಾಗದದ ಚೆಂಡು ಎಸೆಯುವುದು ಮೊದಲಾದ ಚೇಷ್ಟೆಗಳು ಅಂದಿನಿಂದ ಕಡಿಮೆಯಾದುವು.

ಸುಭದ್ರಾ ತೋರಿಸಿದ ದಿಟ್ಟತನ ಕಂಡು ಅವಳ ಗೆಳತಿಯರು ಬೆರಗಾದರು. ತಮ್ಮನ್ನು ಬಿಟ್ಟುಕೊಡದೆ ತಮ್ಮ ಮರ್ಯಾದೆ ಕಾಪಾಡಿದುದಕ್ಕಾಗಿ ವಿದ್ಯಾರ್ಥಿಗಳು ಅವಳ ಬಗ್ಗೆ ಗೌರವ, ಅಭಿಮಾನ ತಳೆದರು. ಕೆಲವು ದಿವಸ

ಗಳಾನಂತರ ನಡೆದ ಕಾಲೇಜ್ ಯೂನಿಯನ್ ಚುನಾವಣೆಯಲ್ಲಿ ವಿದ್ಯಾರ್ಥಿಗಳು ಸುಭದ್ರೆಯನ್ನು ಬಹುಮತದಿಂದ ಉಪಾಧ್ಯಕ್ಷತೆಗೆ ಚುನಾಯಿಸಿದರು.

ಸುಭದ್ರೆ ಹುಟ್ಟಾ ಧೈರ್ಯಶಾಲಿ. ಅವಳ ತಾಯಿ ಆಗಾಗ್ಗೆ ಹೇಳುತ್ತಿದ್ದಂತೆ ಸ್ವಲ್ಪ 'ಗಂಡು ಬೀರಿ.' ಯಾವುದಕ್ಕೂ ಹೆದರದೆ, ಎಂತಹ ಸಮಸ್ಯೆ ಬಂದೊದಗಿದರೂ ಅದನ್ನು ಧೈರ್ಯವಾಗಿ ಎದುರಿಸುವುದು ಅವಳ ಹುಟ್ಟು ಗುಣವಾಗಿತ್ತು. ಶಾಲೆಗೆ ಹೋಗುವ ಹೆಣ್ಣು ಮಕ್ಕಳನ್ನು ಕೀಟಲೆ ಮಾಡುವ ಹುಡುಗರ ಮನೋಭಾವ ಅವಳಿಗೆ ಮೊದಲಿನಿಂದ ಚೆನ್ನಾಗಿ ಗೊತ್ತಿತ್ತು

ಅವಳು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಒಂದು ಆಟದ ಬಯಲು ದಾಟಿ ಮನೆಗೆ ಹೋಗಬೇಕಾಗಿತ್ತು. ಸುಭದ್ರಾ ಆದೇ ಬೈಸಿಕಲ್ ಸವಾರಿ ಕಲಿತಿದ್ದಳು. ಶಾಲೆಗೆ ಬೈಸಿಕಲ್ ಮೇಲೆ ಹೋಗುವುದು ಅವಳ ವಾಡಿಕೆ. ಹೆಣ್ಣು ಮಕ್ಕಳು ಬೈಸಿಕಲ್ ಸವಾರಿ ಮಾಡುವುದು ಅಷ್ಟು ಪ್ರಚಾರದಲ್ಲಿಲ್ಲದಿದ್ದುದರಿಂದ ಅವಳ ವಾಹನಾರೂಢತೆಯನ್ನು ಕಂಡು ಜನ ಹಾಸ್ಯ ಮಾಡುತ್ತಿದ್ದರು. ಅವಳು ಸ್ಕೂಲ್ ಮುಗಿಸಿಕೊಂಡು ಮನೆಗೆ ಹೋಗುವ ಹೊತ್ತಿಗೆ ಸರಿಯಾಗಿ ಆಟದಬಯಲಿನಲ್ಲಿ ವಿದ್ಯಾರ್ಥಿಗಳು ಚೆಂಡಾಟಕ್ಕೆ ಸೇರುತ್ತಿದ್ದರು. ಅವಳು ಬಯಲನ್ನು ಬಿಟ್ಟು ಪಕ್ಕದ ರಸ್ತೆಯಲ್ಲಿ ಸುಸೂತ್ರವಾಗಿ ಹೋಗಬಹುದಾಗಿತ್ತು. ಆದರೆ ವಿದ್ಯಾರ್ಥಿಗಳ ಕೆಣಕುವ ಬುದ್ಧಿ ಕಂಡು ಅವಳೂ ಹಟತೊಟ್ಟು ಅದೇ ಮಾರ್ಗವಾಗಿ ಹೋಗುತ್ತಿದ್ದಳು. ವಿದ್ಯಾರ್ಥಿಗಳು ಬೇಕೆಂತಲೇ ಚೆಂಡನ್ನು ಅವಳ ಬೈಸಿಕಲ್ಲಿಗೆ ಹೊಡೆಯುತ್ತಿದ್ದರು. ಒಂದು ದಿನ ಚೆಂಡು ಬಂದು ಬೈಸಿಕಲ್ಲಿಗೆ ತಾಕಲು ಸುಭದ್ರಾ ಬೈಸಿಕಲ್ ಇಳಿದು ಅದನ್ನು ಎತ್ತಿಕೊಂಡು ಹೊರಟುಬಿಟ್ಟಳು. ವಿದ್ಯಾರ್ಥಿಗಳು ಚೆಂಡು ಬೇಡುತ್ತ ಹಿಂಬಾಲಿಸಿದರು. ಸುಭದ್ರಾ ಅವರನ್ನು ಸ್ವಲ್ಪ ದೂರ ಓಡಿಸಿ, ಬೈಸಿಕಲ್ ಇಳಿದು ಅವರಿಗೆ ಚೆನ್ನಾಗಿ ಬುದ್ಧಿ ಹೇಳಿ ಚೆಂಡನ್ನು ಹಿಂದಕ್ಕೆ ಇತ್ತಳು. ಅಂದಿನಿಂದ ಅವಳ ಬೈಸಿಕಲ್ ಮೇಲೆ ಚೆಂಡು ಒಗೆಯುವ ಪರಿಪಾಠ ತಪ್ಪಿತು.

ಸುಭದ್ರಾ ತನ್ನ ಕ್ಲಾಸಿನಲ್ಲಿ ಫಸ್ಟ್ ಬರದಿದ್ದರೂ ಫೇಲಾಗುತ್ತಿರಲಿಲ್ಲ. ಯಾವ ಕ್ಲಾಸಿನಲ್ಲೂ ಫೇಲಾಗದೆ ಬಿ.ಎಸ್.ಸಿ. ವರೆಗೆ ಮುಟ್ಟಿದ್ದೇನೆಂಬುದು ಅವಳ ಹೆಮ್ಮೆ.

ಹೆಣ್ಣು ಮಗಳನ್ನು ಯೂನಿಯನ್ನಿನ ಉಪಾಧ್ಯಕ್ಷತೆಗೆ ಚುನಾಯಿಸಿದುದು ಕೆಲವು ವಿದ್ಯಾರ್ಥಿಗಳಿಗೆ ತುಂಬ ಅಸಂತೋಷವನ್ನುಂಟುಮಾಡಿತ್ತು. ಆ ಸ್ಥಾನಕ್ಕೆ ಶ್ರೀನಿವಾಸಮೂರ್ತಿಗಿಂತ ಅರ್ಹರಾದವರು ಕಾಲೇಜಿನಲ್ಲಿಯೇ ಇರಲಿಲ್ಲ. ಆದರೆ ತನ್ನ ಹೆಸರು ಸೂಚಿಸಲ್ಪಟ್ಟಾಗ ಅವನದನ್ನು ಅತ್ಯಂತ ಔದಾರ್ಯದಿಂದ ಹಿಂದಕ್ಕೆ ತೆಗೆದುಕೊಂಡು ಸುಭದ್ರೆಯ ಉಮೇದುವಾರಿಕೆಗೆ ಪೂರ್ಣ ಬೆಂಬಲವಿತ್ತಿದ್ದ.

ಹೊರಗಿನಿಂದ ಅತಿಥಿಗಳನ್ನು ಯೂನಿಯನ್ನಿಗೆ ಬರಮಾಡಿಕೊಂಡಾಗ ವಿದ್ಯಾರ್ಥಿ—ಉಪಾಧ್ಯಕ್ಷರೇ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಿರ್ವಹಿಸಿತಕ್ಕದ್ದು ಕಾಲೇಜಿನ ವಾಡಿಕೆಯಾಗಿತ್ತು. ಅನಾಯಾಸವಾಗಿ ಡಾ|| ರಾಧಾಕೃಷ್ಣನ್, ಡಾ|| ಸಿ. ಆರ್. ರೆಡ್ಡಿ, ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ ಮೊದಲಾದ ಮಹನೀಯರ ಭಾಷಣಗಳಿಗೆ ಅಧ್ಯಕ್ಷಸ್ಥಾನ ವಹಿಸುವ ಅವಕಾಶ ಸುಭದ್ರೆಗೆ ಸಿಕ್ಕುತ್ತಿತ್ತು.

ಚಿಕ್ಕದಾದ ಹತ್ತು ಮಾತುಗಳಲ್ಲಿ ಮುಖ್ಯ ಅತಿಥಿಯ ಪರಿಚಯ ಮಾಡಿಕೊಡುತ್ತಿದ್ದಳು ಅವರ ಪಾಂಡಿತ್ಯದ ವೈಶಿಷ್ಟ್ಯವನ್ನು ಸೂಚಿಸಿ ವಿವರಿಸುತ್ತಿದ್ದಳು. ಅತಿಥಿಯ ಭಾಷಣಾನಂತರ ಅವರ ಭಾಷಣ ವಸ್ತುವನ್ನು ಕೆಲವೇ ಮಾತುಗಳಲ್ಲಿ ಸಂಗ್ರಹಿಸಿ ಹೇಳಿ ಉಪಸಂಹಾರ ಮಾಡುತ್ತಿದ್ದಳು.

ಸುಭದ್ರೆಯ ಕಾರ್ಯನಿರ್ವಹಣ ಶಕ್ತಿಯನ್ನು ಕಂಡೊಮ್ಮೆ ಶ್ರೀನಿವಾಸಶಾಸ್ತ್ರಿಗಳು

"ಅಮ್ಮಾ, ನಿನ್ನಲ್ಲಿ ಅಪೂರ್ವ ವಾಕ್‌ಶಕ್ತಿಯಿದೆ. ನೀನು ಸಾರ್ವಜನಿಕ ರಂಗಕ್ಕೆ ಕಾಲಿಟ್ಟರೆ ದೊಡ್ಡ ವ್ಯಕ್ತಿಯಾಗುವೆ" ಎಂದು ಹೇಳಿದ್ದರು.

ಶಾಸ್ತ್ರಿಗಳವರ ಮಾತು ನಿರರ್ಥಕವಾಗಲಿಲ್ಲ. ಸುಭದ್ರೆಯ ಮನಸ್ಸಿನ ಮೇಲೆ ಅದು ವಿಶೇಷ ಪರಿಣಾಮವನ್ನುಂಟುಮಾಡಿತು. ಅಂದಿನಿಂದ ಜಗತ್ಪ್ರಸಿದ್ಧ ರಾಜಕಾರಣಿಗಳ ಜೀವನ ಚರಿತ್ರೆಗಳನ್ನೂ, ಸಿಸಿರೊ, ಬರ್ಕ್, ಮಕಾಲೆ ಮೊದಲಾದ ವಾಗ್ಮಿಗಳ ಭಾಷಣಗಳನ್ನೂ ಪಾಠ ಮಾಡತೊಡಗಿದಳು. ದೊಡ್ಡ ದೊಡ್ಡ ವಾಗ್ಮಿಗಳ ಭಾಷಣಗಳನ್ನು ಪೃಥಕ್ಕರಿಸಿ ಅವರ ಕಲೆ,

ತಂತ್ರದ ಒಳತಿರುಳನ್ನು ಅರ್ಥಮಾಡಿಕೊಳ್ಳಲೆತ್ನಿಸುತ್ತಿದ್ದಳು. ದಿನದಿನಕ್ಕೆ ಅವಳ ವಾಗ್ಮಿತೆ ಅಭಿವೃದ್ಧಿಯಾಗುತ್ತಿದ್ದುದನ್ನು ಕಂಡು ಇಡೀ ಕಾಲೇಜೇ ಬೆರಗಾಗಿತ್ತು.

ಕಾಲೇಜ್ ಯೂನಿಯನ್ನಿನಲ್ಲಿ ಸುಭದ್ರೆಯ ಪ್ರಭಾವ ಮೂಡಿದ್ದಂತೆ ಕರ್ನಾಟಕ ಸಂಘದಲ್ಲಿ ಶ್ರೀನಿವಾಸಮೂರ್ತಿಯ ಪ್ರಭಾವ ಮೂಡಿತ್ತು. ಅದು ಕನ್ನಡ ಸಾಹಿತ್ಯದ ಅರುಣೋದಯ ಕಾಲ. ಕಾಲೇಜಿನ ಕನ್ನಡ ಅಧ್ಯಾಪಕ ರಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರು ಮತ್ತು ಶ್ರೀ ಟಿ. ಎಸ್. ವೆಂಕಣ್ಣ ಯ್ಯನವರು ಇಂಗ್ಲಿಷಿನ ಬಗ್ಗೆ ವಿದ್ಯಾರ್ಥಿಗಳಲ್ಲಿದ್ದ ಉತ್ಕಟ ಅಭಿಮಾನ, ಕನ್ನಡದ ಬಗ್ಗೆ ಅವರಿಗಿದ್ದ ತಿರಸ್ಕಾರ ಕಂಡು 'ಕರ್ನಾಟಕಸಂಘ' ಸ್ಥಾಪಿಸಿ, ಅದರ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೇಮ ಬೆಳೆಯಲು ಪ್ರಯತ್ನಿ ಸುತ್ತಿದ್ದರು.

ಶಾಸ್ತ್ರಿಗಳ ಮತ್ತು ವೆಂಕಣ್ಣಯ್ಯನವರ ಪ್ರಯತ್ನಕ್ಕೆ ಮೊದ ಮೊದಲು ವಿದ್ಯಾರ್ಥಿಗಳಿಂದ ಹೆಚ್ಚಿನ ನೆರವು ದೊರೆಯಲಿಲ್ಲ. ಆರು ಜನ ವಿದ್ಯಾರ್ಥಿ ಗಳು ಮಾತ್ರ ಕರ್ನಾಟಕ ಸಂಘದ ಬಳಿಗೆ ಬಂದರು. ಅವರಲ್ಲಿ ಶ್ರೀನಿವಾಸ ಮೂರ್ತಿಯೂ ಒಬ್ಬ.

ಈ ಆರು ಜನ ವಿದ್ಯಾರ್ಥಿಗಳನ್ನು ಕಡೆದು ಅವರ ಮೂಲಕ ಸಂಘದ ಚಟುವಟಿಕೆಗಳನ್ನು ಬೆಳೆಸುವ ಕೆಲಸವನ್ನು ಶಾಸ್ತ್ರಿಗಳೂ, ವೆಂಕಣ್ಣಯ್ಯ ನವರೂ ತ್ರಿಕರಣ ಪೂರ್ವಕವಾಗಿ ಕೈಗೊಂಡರು.

ಕಾಲೇಜಿನ ಒಂದು ಟರ್ಮ್ ಮುಗಿಯುವುದರೊಳಗಾಗಿ ಕರ್ನಾಟಕ ಸಂಘ ತಳವೂರಿ ನಿಂತಿತು. ಸಂಘಕ್ಕೆ ಬರಮಾಡಿಕೊಂಡ ಕನ್ನಡ ವಿದ್ವಾಂ ಸರು ಕನ್ನಡ ಸಾಹಿತ್ಯದ ಸವಿಯನ್ನು ತೋರಿಸಿಕೊಟ್ಟಿದ್ದರು. 'ಕನ್ನಡ ದಲ್ಲೇನಿದೆ?' ಎಂದು ಕೇಳುತ್ತಿದ್ದವರು 'ಕನ್ನಡದಲ್ಲಿ ಏನೋ ಇದೆ' ಎಂದು ಕುತೂಹಲಪಡುವಂತಾಯಿತು.

ಅಧ್ಯಾಪಕರಿಬ್ಬರ ಆಳವಾದ ಪಾಂಡಿತ್ಯ, ಶ್ರೀನಿವಾಸಮೂರ್ತಿಯ ಸಾಧನೆಯಿಂದ ವಿದ್ಯಾರ್ಥಿಗಳ ಲಕ್ಷ್ಯ ಕರ್ನಾಟಕ ಸಂಘದ ಕಡೆ ಹೊರಳಿತು. ಸಂಘದ ಭಾಷಣಗಳಿಗೆ ವಿದ್ಯಾರ್ಥಿಗಳೂ, ಆಮಂತ್ರಿತರೂ ಕಿಕ್ಕಿರಿದು ತುಂಬು ತ್ತಿದ್ದರು.

ಶ್ರೀನಿವಾಸಮೂರ್ತಿಗೆ ವಿದ್ಯಾರ್ಥಿಗಣದಲ್ಲಿಯೂ ಕರ್ನಾಟಕ ಸಂಘ ದಲ್ಲಿಯೂ ಇದ್ದ ಸ್ಥಾನಮಾನ ಕಂಡು ಸುಭದ್ರೆಗೆ ಅಸೂಯೆ ಇರಲಿಲ್ಲ.

ಆದರೆ ಅವನ ಸ್ವಾತಂತ್ರ್ಯವೃತ್ತಿ ಕಂಡು ಅವಳು ಕಸವಿಸಿಯಾಗುತ್ತಿದ್ದಳು. ಕಾಲೇಜಿನ ಲಕ್ಷ್ಯ ತನ್ನ ಬಿಟ್ಟು ಬೇರೆ ಯಾವ ಕಡೆಗೂ ಹೋಗಬಾರದೆಂದು ಅವಳ ಇಚ್ಛೆ. ಶ್ರೀನಿವಾಸಮೂರ್ತಿ ಇತರ ವಿದ್ಯಾರ್ಥಿಗಳಂತೆ ಸುಭದ್ರೆಯ ಮುಂದೆ ನುಲಿದು, ಅವಳನ್ನು ಹೊಗಳಿ, ಅವಳ ಮೆಚ್ಚುಗೆ ದೊರಕಿಸುವ ಯತ್ನ ಮಾಡುತ್ತಿರಲಿಲ್ಲ.

ಭಾಷಣ ಮುಗಿಸಿ ಸುಭದ್ರೆ ವೇದಿಕೆಯಿಂದ ಕೆಳಗಿಳಿದ ಕೂಡಲೆ ವಿದ್ಯಾರ್ಥಿಗಳು ಅವಳನ್ನು ಸುತ್ತುಗಟ್ಟಿ 'ಕನ್‌ಗ್ರಾಜುಲೇಷನ್ಸ್' (Congratulations) ಅರ್ಪಿಸುತ್ತಿದ್ದುದು ರೂಢಿಯಾಗಿತ್ತು. ಆ ಗುಂಪಿನಲ್ಲಿ ಶ್ರೀನಿವಾಸಮೂರ್ತಿ ಇರುತ್ತಿರಲಿಲ್ಲ. ಬೇಕಾದವರು ಬೇಕಾದಷ್ಟು ಹೊಗಳಲಿ ಶ್ರೀನಿವಾಸಮೂರ್ತಿ ಒಂದು ಒಳ್ಳೆಯ ಮಾತು ಆಡಲಿಲ್ಲವಲ್ಲಾ ಎಂದು ಸುಭದ್ರಾ ಮುಖಿಕ್ಕೀಡಾಗುತ್ತಿದ್ದಳು.

ಒಂದು ಸಾರೆ ಯೂನಿಯನ್ನಿನಲ್ಲಿ ಒಂದು ಚರ್ಚಾಕೂಟ ವ್ಯವಸ್ಥೆಯಾಗಿತ್ತು. ಊರಿನ ಕೆಲವು ಮಹನೀಯರು ಪೂರ್ವ ಪಕ್ಷ, ಉತ್ತರ ಪಕ್ಷಗಳನ್ನು ಹಿಡಿದು ಸಮರ್ಥಿಸಿದರು. ಸುಭದ್ರೆಯೇ ಅಂದೂ ಸಭಾಧ್ಯಕ್ಷೆ.

ಸಭೆ ಮುಗಿದ ಮೇಲೆ ಎಲ್ಲರೂ ಹೊರಟು ನಿಂತರು.

ಶ್ರೀನಿವಾಸಮೂರ್ತಿ ಬೈಸಿಕಲ್ ದೀಪ ಹಚ್ಚಿಕೊಳ್ಳುತ್ತಿದ್ದ. ಸುಭದ್ರೆ ಅವನ ಬಳಿಗೆ ಬಂದು

"ನನ್ನ ಮನೆ ಮುಟ್ಟಿಸುವುದಿಲ್ಲವೇ?" ಎಂದು ಕೇಳಿದಳು.

"ಯೂನಿಯನ್ ಆಳು ಮನೆಗೆ ಹೋಗಿಬಿಟ್ಟನೇನು?"

"ಇನ್ನೂ ಇಲ್ಲ. ಆದರೆ ನೀವು ನನ್ನ ಮನೆಗೆ ಮುಟ್ಟಿಸಬಾರದೇನು?"

"ಯಾಕಾಗಬಾರದು—ಬನ್ನಿ." ಎಂದು ಹೇಳಿದ.

ಒಂದು ಫರ್ಲಾಂಗು ನಡೆದು ಹೋಗುವಷ್ಟರಲ್ಲಿ ಎದುರಿಗೆ ಒಂದು ಜಟಕಾ ಗಾಡಿ ಬಂತು. ಶ್ರೀನಿವಾಸ ಅದನ್ನು ನೋಡಿ

"ಗಾಡಿ ಗೊತ್ತುಮಾಡಿಕೊಡುತ್ತೇನೆ"

"ಏಕೆ? ನನ್ನ ಜತೆ ಬರುವುದಕ್ಕೆ ಅವಮಾನವೇ?"

"ಅವಮಾನವಲ್ಲ. ಈಗಲೇ ಬಹಳ ಹೊತ್ತಾಗಿದೆ. ನೀವು ನಡೆಯಬೇಕಲ್ಲಾ ಎಂದು ಹೇಳಿದೆ."

"ಚಿಂತೆಯಿಲ್ಲ. ನಡೆದು ಹೋಗಬೇಕೆಂದೇ ನನ್ನ ಇಚ್ಛೆ."

"ಆಗಬಹುದು."

ಇಬ್ಬರೂ ಮೌನವಾಗಿ ಸ್ವಲ್ಪ ದೂರ ನಡೆದರು. ಸುಭದ್ರಾ ವಿಚಾರ ಮಾಡಿಮಾಡಿ ಕೊನೆಗೆ

"ಮೂರ್ತಿ—ನನ್ನ ಮನಸ್ಸಿನಲ್ಲಿ ಒಂದು ಸಂದೇಹವಿದೆ. ಅದಕ್ಕೆ ಪರಿಹಾರ ಕೇಳಲೇ?"

"ಅವಶ್ಯಕವಾಗಿ ಕೇಳಿ."

"ನಿಮಗೆ ನನ್ನ ಕಂಡರೆ ಏಕಾಗುವುದಿಲ್ಲ?"

"ಹಾಗೆ ಯಾರು ಹೇಳಿದರು."

"ನಿಮ್ಮ ವರ್ತನೆ."

"ನಾನು ಯಾವಾಗಲಾದರು ಅಸಭ್ಯ ರೀತಿಯಲ್ಲಿ ನಡೆದು ಕೊಂಡಿರುವೆನೇ?"

"ಇಲ್ಲ."

"ಸರಿ. ಇನ್ನು 'ಕಂಡರಾಗುವುದಿಲ್ಲ' ಎನ್ನುವ ಪ್ರಶ್ನೆ ಏಳುವುದೇ ಇಲ್ಲವಲ್ಲಾ."

"ಏಳುತ್ತದೆ. ನೀವು ಒಮ್ಮೆಯೂ ನನ್ನ ಕನ್‌ಗ್ರಾಜುಲೇಟ್ ಮಾಡ ಲಿಲ್ಲ. ನನ್ನ ಯೋಗಕ್ಷೇಮ ವಿಚಾರಿಸುವುದಿಲ್ಲ."

"ನಿಮ್ಮ ಯೋಗಕ್ಷೇಮ ವಿಚಾರಿಸಿಕೊಳ್ಳುವುದಕ್ಕೆ ನೀವೇ ಸಮರ್ಥ ರಾಗಿದ್ದೀರಿ. ಇಡೀ ಕಾಲೇಜೇ ನಿಮ್ಮನ್ನು ಕನ್‌ಗ್ರಾಜುಲೇಟ್ ಮಾಡುವಾಗ ನನ್ನ ಮಾತು ಎಷ್ಟರದು?"

"ನಾನೇನು ಅಪರಾಧ ಮಾಡಿರುವೆ?"

"ಏನೂ ಇಲ್ಲ."

"ಹಾಗಾದರೆ ನನ್ನ ದೂರದವಳಂತೆ ಏಕೆ ನೋಡುವಿರಿ?"

"ಓದುವ ಹೆಣ್ಣುಮಕ್ಕಳೊಂದಿಗೆ ವಿದ್ಯಾರ್ಥಿಗಳು ಹೆಚ್ಚಿಗೆ ಸಲಿಗೆ ತೋರಿಸುವುದು ನ್ಯಾಯವಲ್ಲ."

"ನಾವಿಬ್ಬರೂ ಕೂಡಿ ಓದಬೇಕೆಂದು ನನ್ನ ಆಸೆ."

"ಏಕಾಂಗಿಯಾಗಿ ಓದಿದರೇ ನನಗೆ ಪಾಠ ತಲೆಗೆ ಹತ್ತುವುದು. ನಾನು ಯಾರೊಂದಿಗೂ ಜಾಯಿಂಟ್ ಸ್ಟಡಿ ಮಾಡುವ ಅಭ್ಯಾಸವಿಲ್ಲ."

"ನಮ್ಮ ಮನೆಗೇಕೆ ನೀವು ಬರುವುದಿಲ್ಲ."

"ನಿಷ್ಕಾರಣವಾಗಿ ಏಕೆ ಬರಬೇಕು ?"

"ಸ್ನೇಹಿತರನ್ನು ನೋಡುವುದಕ್ಕೆ ಅವರ ಮನೆಗೆ ಹೋಗುವುದಕ್ಕೆ ಕಾರಣ ಬೇಕೇ ?"

"ಬೇಕು-ಪ್ರತಿಯೊಬ್ಬರ ಜೀವನವೂ ಬಹು ಸಣ್ಣದು. ಜೀವಮಾನದಲ್ಲಿ ಇರುವ ಅಲ್ಪ ಅವಧಿಯನ್ನು ಪ್ರತಿಯೊಬ್ಬರೂ ಸರಿಯಾಗಿ ಬಳಸಬೇಕು. ವೃಥಾ ಇನ್ನೊಬ್ಬರ ಕಾಲಹರಣ ಮಾಡಬಾರದು ಕಾಲಕ್ಕೆ ಬೆಲೆಯಿದೆ. ಅದನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು."

"ನಿಮ್ಮ ವಾದ ವಿಚಿತ್ರವಾಗಿದೆ. ಲೋಕದ ಸಂಸರ್ಗವೇ ಇಲ್ಲದೆ ಬಾಳಬೇಕೆಂದು ನಿಮ್ಮ ಇಚ್ಛೆಯೇ ?"

"ಅದು ಸಾಧ್ಯವಾಗುವ ಹಾಗಿದ್ದಲ್ಲಿ ಹಾಗೇ ಬಾಳಲು ನನ್ನ ಆಸೆ."

ಸುಭದ್ರೆಯ ಮುಖ ಗಂಭೀರವಾಯಿತು. ಬಾಯಿಂದ ಮಾತುಗಳು ಹೊರಡಲಿಲ್ಲ. ಹೃದಯದೊಳಗೆ ತುಮುಲ ವಿಪ್ಲವ. ಅವಳ ಕಣ್ಣಿನಿಂದ ಒಂದೆರಡು ಹನಿ ಜಾರಿದವು. ರಸ್ತೆಯ ಮಬ್ಬು ಬೆಳಕಿನಲ್ಲಿ ಕಣ್ಣೀರು ಮಿಂಚಿನಂತೆ ಪ್ರಕಾಶಿಸಿತು. ಶ್ರೀನಿವಾಸ ಅದನ್ನು ಕಂಡು

"ಸುಭದ್ರಾ-ನೀವು ಕಣ್ಣೀರು ಹಾಕುವುದು ನನಗೆ ಪರಮಾಶ್ಚರ್ಯವನ್ನುಂಟುಮಾಡಿದೆ."

"ಆ ಕಣ್ಣೀರು ತೊಡೆಯಬಾರದೆಂದು ನೀವು ನಿರ್ಧರಿಸಿರುವಾಗ ನಾನು ಇನ್ನೇನು ಮಾಡಬೇಕು."

"ಕಣ್ಣೀರಿಗೆ ಕಾರಣವೇ ಇಲ್ಲವಲ್ಲಾ."

"ಕಲ್ಲೆದೆಯವರಾದ ನಿಮಗೆ ಅದು ಹೇಗೆ ತಿಳಿಯಬೇಕು."

ಸುಭದ್ರಾ ನಿರಾಧಾರ ಆಪಾದನೆ ಮಾಡಿದುದಕ್ಕೆ ಶ್ರೀನಿವಾಸನಿಗೆ ತುಸ ಕೋಪ ಬಂದಿತು. ಅದನ್ನು ಅಡಗಿಸಿಕೊಂಡು

"ಮನೆ ಹತ್ತಿರ ಬಂತು."

"ತುಂಬ ಸಂತೋಷ. ಇತ್ತ ಯಾವಾಗಲಾದರೂ ಬರುವಿರಾ ?"

"ಖಂಡಿತವಾಗಿ ಬರುತ್ತೇನೆ."

"ಯಾವಾಗ ?"

"ಯಾವಾಗಲಾದರೂ."

"ಹಾಗೆ ಹೇಳಬೇಡಿ. ನಾಳೆ ಕಾಲೇಜಿಲ್ಲ. ಮಧ್ಯಾಹ್ನ ನಮ್ಮ ಮನೆಗೇ ಕಾಫೀಗೆ ಬನ್ನಿ."

"ನಾನು ಕ್ರಿಕೆಟ್ಟಿಗೆ ಹೋಗಬೇಕಲ್ಲಾ."

"ಸ್ವಲ್ಪ ತಡೆದು ಹೋಪರಾಯಿತು."

'ಸಾಧ್ಯವಿಲ್ಲ' ಎಂದು ಹೇಳಲು ಶ್ರೀನಿವಾಸಮೂರ್ತಿಗೆ ಧೈರ್ಯ ವಾಗಲಿಲ್ಲ.

"ಹಾಗೇ ಆಗಲಿ" ಎಂದು ಮೃದುವಾಗಿ ನುಡಿದ.

ಸುಭದ್ರೆಯ ಮನೆ ಸಿಕ್ಕಲು, ಅವಳನ್ನು ಬಿಟ್ಟು ತಾನು ಬೈಸಿಕಲ್ ಹತ್ತಿ ಹೊರಟುಬಿಟ್ಟ.

## ೪

ಸೂರಪ್ಪನವರು ಸ್ವನಾಮಖ್ಯಾತರಾಗಿದ್ದರು. ಎಲ್ಲರೂ ಪ್ಲೀಡರ್ ಪರೀಕ್ಷೆಮಾಡಿ ಬೋರ್ಡು ಹಾಕುತ್ತಿದ್ದ ಕಾಲದಲ್ಲಿ ಸೂರಪ್ಪನವರು ಮದರಾಸಿಗೆ ಹೋಗಿ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಂದಿದ್ದರು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಟೇಟ್ ಸಾಹೇಬರ ಶಿಷ್ಯರಾಗಿದ್ದುದರಿಂದ ಅದ್ವಿತೀಯ ಇಂಗ್ಲಿಷ್ ಪಂಡಿತರೆಂದೂ ಅವರಿಗೆ ಖ್ಯಾತಿಯಿತ್ತು.

ಸೂರಪ್ಪನವರು ವಕೀಲಿ ಆರಂಭಿಸಿದ ಕಾಲ ಒಳ್ಳೆಯ ಕಾಲ. ಆಗ ಎಲ್ಲೋ ಒಬ್ಬಿಬ್ಬರು ಬಿ. ಎಲ್. ಮಾಡಿದ ಲಾಯರುಗಳು, ಕೆಲವರು ಪ್ಲೀಡರುಗಳು. ಆ ಕಾಲದ ಸಾಧಾರಣ ಪ್ಲೀಡರುಗಳೂ ಬೇಕಾದಷ್ಟು ಸಂಪಾದಿಸಿ ಘನವಾದ ಆಸ್ತಿ ಮಾಡಿದ್ದಾಗ ಸೂರಪ್ಪನವರು ಒಂದು ಲಕ್ಷದ ತನಕ ಗಳಿಸಿದ್ದುದೇನೂ ದೊಡ್ಡ ವಿಷಯವಲ್ಲ.

ಕಕ್ಷಿಗಾರ ಸಾಮಾನ್ಯವಾಗಿ ದಿವಾಳಿಯಾಗುವುದಕ್ಕೆ ಸಿದ್ಧನಾಗಿಯೇ ಸೂರಪ್ಪನವರ ಕಛೇರಿ ಕಟ್ಟೆ ಹತ್ತಬೇಕಾಗಿತ್ತು. ಫೀಸಿನ ಹಣದ ನಾಲ್ಕರಷ್ಟನ್ನು ಅವರು ವಸೂಲ್ಮಾಡಿಕೊಳ್ಳುತ್ತಿದ್ದುದಲ್ಲದೆ, ಕಕ್ಷಿಗಾರನ ಅಂಗಿ ರುಮಾಲುಗಳನ್ನು ತಮ್ಮ ಕಾರಕೂನರಿಂದ ಶೋಧಿಸಿ, ಅಲ್ಲಿ ಅವನು ಊಟ ತಿಂಡಿ ಖರ್ಚಿಗೊ ಗಾಡಿ ಖರ್ಚಿಗೋ ಮುಚ್ಚಿಟ್ಟುಕೊಳ್ಳುತ್ತಿದ್ದ ನಾಲ್ಕಾರು ರೂಪಾಯಿಗಳನ್ನೂ ನಿರ್ದಾಕ್ಷಿಣ್ಯದಿಂದ ಕಿತ್ತುಕೊಳ್ಳುತ್ತಿದ್ದರು.

ಸೂರಪ್ಪನವರ ದುರಾಸೆ, ಸುಲಿಗೆಯ ಮನೋವೃತ್ತಿ ಲೋಕಪ್ರಸಿದ್ಧವಾಗಿದ್ದರೂ ಅವರಲ್ಲಿಗೆ ಕಕ್ಷಿಗಾರರು ಬರುವುದು ಕಡಿಮೆಯಾಗಲಿಲ್ಲ. ಕಷ್ಟಪಟ್ಟು ದುಡಿಯುತ್ತಿದ್ದ ಪ್ಲೀಡರಿಗೆ ಎಂಟಾಣೆ ಕೊಡಲು ಮೀನ ಮೇಷ ಎಣಿಸುತ್ತಿದ್ದ ಹಳ್ಳಿಯವರು ಸೂರಪ್ಪನವರ ಸುಲಿಗೆಯನ್ನು ಸಂತೋಷದಿಂದ ಸಹಿಸುತ್ತಿದ್ದರು.

ಇದಕ್ಕೆ ಸೂರಪ್ಪನವರ ಪ್ರಚಾರ ಪಾಂಡಿತ್ಯವೂ ಸ್ವಲ್ಪ ಮಟ್ಟಿಗೆ ಕಾರಣ. ಊರಿನಲ್ಲಿ ಸನಾತನ ಧರ್ಮ ಸಭೆಯಿಂದ ಮೊದಲುಗೊಂಡು ಕಾಂಗ್ರೆಸ್ ಸಮಿತಿಯವರೆಗೆ ಸೂರಪ್ಪನವರ ವ್ಯಾಪ್ತಿ. ಗಾಯನ ಸಭೆಯ ಅಧ್ಯಕ್ಷರೂ ಅವರೇ, ಅನಾಥ ಶಿಶು ಸಂರಕ್ಷಣಾಲಯದ ಪೋಷಕರೂ ಅವರೇ. ಊರಿನಲ್ಲಿ ಯಾವ ಸಭೆಯಾದರೂ ಸೂರಪ್ಪನವರೇ ಅಧ್ಯಕ್ಷರಾಗಬೇಕು. ಅಜಾಗರೂಕರಾದ ಕಾರ್ಯದರ್ಶಿಗಳು ಒಮ್ಮೊಮ್ಮೆ 'ಸೂರಪ್ಪನವರು ಎಂದಿನಂತೆ ಅಧ್ಯಕ್ಷತೆವಹಿಸುವರು' ಎಂದು ಹೇಳುತ್ತಿದ್ದುದೂ ಸಾಮಾನ್ಯವಾಗಿತ್ತು.

ಸನಾತನ ಧರ್ಮದ ಬಗ್ಗೆ ಸೂರಪ್ಪನವರ ಆಸ್ಥೆ ಬಹಳ. ಸಾರ್ವಜನಿಕ ಜೀವನದ ಮುಂದಾಳುಗಳಾಗಿದ್ದರೂ, ದಿನ ಬೆಳಗಾದರೆ ದಿವಾನರು, ಕೌನ್ಸಿಲರುಗಳ ಮನೆಗೆ ತೊಂಗುತ್ತಿದ್ದರೂ ಅವರು ಕ್ರಾಪ್ ಬಿಡಿಸಿರಲಿಲ್ಲ. ಈಗಿನ ಕಾಲದ ತರುಣರ ನಾಸ್ತಿಕತೆಯನ್ನು ಕಂಡು ಅವರು ಸಿಡಿಮಿಡಿಗೊಳ್ಳುತ್ತಿದ್ದರು.

ಒಮ್ಮೊಮ್ಮೆ ಶ್ರೀನಿವಾಸನಿಗೂ ಸೂರಪ್ಪನವರಿಗೂ ಧರ್ಮದ ವಿಷಯದಲ್ಲಿ ವಾದ ವಿವಾದವೇಳುತ್ತಿತ್ತು. ಸೂರಪ್ಪನವರು ವಾದರಂಗ ಬಿಟ್ಟು ಭರ್ತ್ಸನೆಗೆ ಕಾಲಿಟ್ಟಕೂಡಲೆ ಶ್ರೀನಿವಾಸ ಹಿಂದೆ ಸರಿದು ತನ್ನ ಸೋಲನ್ನೊಪ್ಪಿಕೊಳ್ಳುತ್ತಿದ್ದ.

ಯಾರಿಗೂ ಅಂಜದ ಗಂಡುಗಲಿ ಶ್ರೀನಿವಾಸ ತಂದೆಗೆ ಗಡಗಡ ನಡುಗುತ್ತಿದ್ದ. ಅವರ ಗಡಸುದನಿ ಕಿವಿಯ ಮೇಲೆ ಬಿದ್ದರೆ ಅವನ ಜಂಘಾಬಲವೇ ಉಡುಗಿ ಹೋಗುತ್ತಿತ್ತು.

ಶ್ರೀನಿವಾಸನ ತಾಯಿ ಗೌರಮ್ಮನವರೂ ಗಂಡನಿಗೆ ಹಾಗೇ ಹೆದರುತ್ತಿದ್ದರು. ಸೂರಪ್ಪನವರ ಜತೆ ಗೌರಮ್ಮ ಮೂವತ್ತೈದು ವರ್ಷ ಬಾಳುವೆ ಸಾಗಿಸಿದ್ದರು. ಅತಿ ದಾರುಣವಾದ ಬಡತನದಿಂದ ಈ ಶ್ರೀಮಂತ ಪದವಿಗೆ ಗಂಡ ಏರಿದುದನ್ನು ಕಂಡಿದ್ದರು. ಗೌರಮ್ಮನವರ ತಂದೆ ಸೂರಪ್ಪನವರ

ಕೈಹಿಡಿದು, ವಿದ್ಯೆ ಕಲಿಸಿ, ಮದರಾಸಿಗೆ ಕಳಿಸಿಕೊಟ್ಟು ಲಾ ಪರೀಕ್ಷೆ ಮಾಡಿಸಿ ಉಪಕಾರ ಮಾಡದಿದ್ದರೆ ಅವರು ಯಾವುದೋ ತಾಲ್ಲೂಕು ಕಛೇರಿಯ ಗುಮಾಸ್ತೆಗಿರಿಯಲ್ಲಿ ಕೊಳೆಯಬೇಕಾಗುತ್ತಿತ್ತು.

ಸೂರಪ್ಪನವರಿಗೆ ಧನಲಕ್ಷ್ಮಿಯ ಅನುಗ್ರಹವಾದಂತೆ ಗೌರಮ್ಮನವರ ಪರಿಸ್ಥಿತಿ ಬದಲಾಗಲಿಲ್ಲ. ಆಕೆ ಅದೇ ಬಿಚ್ಚೋಲೆ ಮುತ್ತೈದೆ. ಚನಡಿ ಸೀರೆ ಬಿಟ್ಟು ಬೇರೆ ವಸ್ತ್ರ ಕಾಣಳು. ಕೊರಳಲ್ಲಿ ದಪ್ಪ ಕರೀಮಣಿಗೆ ಪೋಣಿಸಿದ ನಾಲ್ಕು ಗುಂಡು ಸೇರಿಸಿದ ಮಾಂಗಲ್ಯ ಬಿಟ್ಟು ಬೇರೆ ಆಭರಣವಿಲ್ಲ. ಕೈಯಲ್ಲಿ ಮಾತ್ರ ಒಂದು ಜತೆ ಚಿನ್ನದ ಬಳೆ.

ಗಂಡನ ಆರ್ಭಟೆ, ರೋಷ, ಕೋಪ, ಸ್ವಾರ್ಥ ಅನುಭವಿಸಿ ಅನುಭವಿಸಿ ಗೌರಮ್ಮನವರಿಗೆ ಎಳೆಪ್ರಾಯದಲ್ಲಿಯೇ ಮುಪ್ಪು ಬಂದಿತ್ತು. ಆಕೆಯ ವಯಸ್ಸು ೪೫ ದಾಟದಿದ್ದರೂ ಹಣ್ಣು ಹಣ್ಣು ಮುದುಕಿಯಂತಾಗಿದ್ದರು. ತಲೆಯ ಕೂದಲು ಬೆಳ್ಳಗಾಗಿತ್ತು. ತಲೆಯಲ್ಲಿ ಮಾದರಿಗೊಂದು ಕಪ್ಪು ಕೂದಲು ದೊರೆಯುತ್ತಿರಲಿಲ್ಲ. ಮುಖ ಸುಕ್ಕಾಗಿ ಸುಟ್ಟ ಬದನೆಯಕಾಯಿಯಂತಾಗಿತ್ತು. ದೇಹ ಜೀರ್ಣವಾಗಿ ಮೂಳೆ, ಚರ್ಮದ ಬಲದ ಮೇಲೆ ತನ್ನ ಯಾತ್ರೆ ಸಾಗಿಸಿತ್ತು.

ಬೆಳಿಗ್ಗೆ ನಾಲ್ಕು ಗಂಟೆಗೆದ್ದರೆ ಗೌರಮ್ಮನವರು ವಿರಮಿಸಲು ರಾತ್ರಿ ೧೧-೧೨ ಗಂಟೆಯಾಗುತ್ತಿತ್ತು. ಗಾಣದೆತ್ತಿನಂತೆ ದುಡಿಯುವುದನ್ನು ಬಿಟ್ಟು ಏನೂ ಕಾಣಳು ಆಕೆ. ಅಷ್ಟೆಲ್ಲ ದುಡಿಮೆಗೆ ಪ್ರತಿಫಲವಾಗಿ ಒಮ್ಮೊಮ್ಮೆ ಗಂಡನ ಬೂಟ್ಸು ಕಾಲಿನ ಸವಿ ಸಿಕ್ಕುತ್ತಿತ್ತು.

ತಾಯಿಯ ಸ್ಥಿತಿ ಕಂಡು ಶ್ರೀನಿವಾಸ ಮಮ್ಮಲ ಮರುಗುತ್ತಿದ್ದ. ಓದುತ್ತ ಕುಳಿತಿದ್ದಂತೆ ಅವನಿಗೆ ತಾಯಿಯ ನೆನಪಾಗುತ್ತಿತ್ತು ಎದ್ದು ಹೋಗಿ ಅಡಿಗೆಯ ಮನೆಯಲ್ಲಿ ತಾಯಿಯ ಮುಂದೆ ಕೂಡುತ್ತಿದ್ದ.

"ಏನೋ ಮಗೂ-ಓದಿದ್ದು ಮುಗೀತೇನೋ" ಎಂದು ಗೌರಮ್ಮ ಕೇಳುತ್ತಿದ್ದರು.

"ಇಲ್ಲಮ್ಮ, ಕಾಲೇಜ್ ಓದು ಹನುಮಂತನ ಬಾಲವಿದ್ದ ಹಾಗೆ. ಅದು ಮುಗಿಯುವುದೇ ಇಲ್ಲಮ್ಮ."

"ಬೇಗ ಪರೀಕ್ಷೆ ಮಾಡಿಕೊಂಡು ಬಿಡಪ್ಪ. ಆಮೇಲೆ ದೊರೆ ಇದ್ದ ಹಾಗಿರಬಹುದು."

"ಹಾಗೇ ಆಗಲಮ್ಮ. ಸ್ವಲ್ಪ ಕಾಫಿ ಕೊಡತ್ತೀಯಾ ?"

ತಾಯಿ ಒಲೆಯ ಮೇಲಿದ್ದ ಸಾರಿನ ಪಾತ್ರೆ ಕೆಳಗಿಳಿಸಿ ಕಾಫೀಗೆ ಎಸರಿಡುತ್ತಿದ್ದರು. ಶ್ರೀನಿವಾಸನಿಗೂ ನಿಜಕ್ಕೂ ಕಾಫಿ ಬೇಕಿರುತ್ತಿರಲಿಲ್ಲ. ಕಾಫಿ ಆಗುವ ತನಕವಾದರೂ ತಾಯಿಯ ಬಳಿ ಕುಳಿತಿರಬಹುದಲ್ಲಾ ಎಂದು ಅವನು ಕಾಫಿ ಬೇಡುತ್ತಿದ್ದ. ತಾಯಿ ಮಾಡಿಕೊಟ್ಟ ಕಾಫಿ ಕುಡಿದು ತನ್ನ ಕೋಣೆಗೆ ಹಿಂದಿರುಗುತ್ತಿದ್ದ. ಮಗನ ಮನಸ್ಸಿನಲ್ಲಾಗುತ್ತಿದ್ದ ಆಂದೋಲನ ಗೌರಮ್ಮನವರಿಗೆ ಚೆನ್ನಾಗಿ ಅರ್ಥವಾಗುತ್ತಿತ್ತು. ಅವನನ್ನೇ ನೋಡಿ ನಿಟ್ಟುಸಿರ್ಗರೆಯುತ್ತಿದ್ದರು. ಕಣ್ಣಿನಿಂದ ಜಾರಿದ ಹನಿಯನ್ನು ಸೆರಗಿನ ತುದಿಯಿಂದ ಒರಸಿಕೊಂಡು, ಒಲೆಗೆ ಸೌದೆ ದೂಡುತ್ತಿದ್ದರು.

## ೫

ಮನೆಗೆ ಕಾಫಿ ಸೇವಿಸಲು ಬರುತ್ತೇನೆಂದು ಶ್ರೀನಿವಾಸ ಹೇಳಿದುದು ಸುಭದ್ರೆಗೆ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿತ್ತು. ಸುಭದ್ರೆಗೆ ಕಾಲೇಜಿನಲ್ಲಿ ಮೆಚ್ಚಿನ ಗೆಳೆಯನೆಂದರೆ ಶಂಕರ್. ಅವನೇ ಅವಳ ಟೆನಿಸ್ ಪಾರ್ಟ್ನರ್ ಮತ್ತು ಯೂನಿಯನ್ನಿನ ಕಾರ್ಯದರ್ಶಿ. ಶಂಕರನನ್ನು ಕೂಡ ಅಂದು ಅವಳು ಕಾಫಿ ಸಮಾರಂಭಕ್ಕೆ ಆಹ್ವಾನಿಸಲಿಲ್ಲ.

ಮಗಳ ಮೋಜುವಾನಿಯೆಂದರೆ ವಿಶೇಷ ಸಂತೋಷಿಸುತ್ತಿದ್ದವರು ನರಸಮ್ಮ. ಮಗಳ ಜತೆಗೂ ಕುಣಿಯುವುದಕ್ಕೆ ಅವರು ಸಿದ್ಧವಾಗುತ್ತಿದ್ದರು. ಬೆಳಿಗ್ಗೆಯಿಂದ ತಾಯಿ ಮಗಳಿಬ್ಬರೂ ಮನೆಯನ್ನಲಂಕರಿಸಿ, ಉಪಾಹಾರ ಸಿದ್ಧತೆಯಲ್ಲಿ ತೊಡಗಿದರು.

ಸುಭದ್ರೆಯ 'ದಾಷ್ಟೀಕ'ವನ್ನು ಕಂಡು ಆಗಾಗ್ಗೆ ಎಚ್ಚರಕೊಡುತ್ತಿದ್ದವಳು ಕಾವೇರಮ್ಮ. ಗಂಡ ಸತ್ತಮೇಲೆ ಕಾವೇರಮ್ಮ ಅಣ್ಣನ ಮನೆ ಸೇರಿಕೊಳ್ಳಬೇಕಾಗಿ ಬಂತು. ವೆಂಕಪ್ಪಯ್ಯ ನಿರ್ದಾಕ್ಷಿಣ್ಯವಾಗಿ ತಂಗಿಯ ಹೊಲಗದ್ದೆ, ಒಡವೆಗಳು, ಕೈಯ್ಯಲ್ಲಿದ್ದ ನಗದು ಹಣ ಹೊತ್ತುಹಾಕಿ ಆಕೆಯನ್ನು ಮನೆಯ ಆಳು ಮಗಳನ್ನಾಗಿ ಮಾಡಿಕೊಂಡಿದ್ದರು.

ಸುಭದ್ರೆಯ ಮಾತಿಗೆ ಒಮ್ಮೊಮ್ಮೆ ನರಸಮ್ಮನವರಿಗೂ ಕಾವೇರಮ್ಮನಿಗೂ ಹಣಾಹಣಿ ವ್ಯಾಜ್ಯ ಹತ್ತಿಬಿಡುತ್ತಿತ್ತು. ವ್ಯಾಜ್ಯ ಪರಿಹರಿಸಲು ಬಂದ ವೆಂಕಪ್ಪಯ್ಯ ಸೋತು ಸುಮ್ಮನಾಗುತ್ತಿದ್ದರು. ತಂಗಿ ಹೇಳುತ್ತಿದ್ದುದು

ನಿಜವೆಂದು ಅವರಿಗೆ ತೋರುತ್ತಿತ್ತು. ಆದರೆ ಹೆಂಡತಿಯ ಮಾತಿಗೆ ಎದುರು ಹೇಳುವ ಧೈರ್ಯವಿಲ್ಲ. ಕಾವೇರಮ್ಮ ವಾದದಲ್ಲಿ ಗೆಲ್ಲುವ ಸೂಚನೆ ಕಂಡು ಬಂದರೆ ನರಸಮ್ಮ ಬ್ರಹ್ಮಾಸ್ತ್ರ ಪ್ರಯೋಗಿಸುತ್ತಿದ್ದರು.

"ಸುಭದ್ರೆ ನನ್ನ ಮಗಳು ಅತ್ತಿಗೆ. ಅವಳ ವಿಷಯದಲ್ಲಿ ನೀವು ಇಲ್ಲದ 'ಕಾಷ್ಠ ವ್ಯಸನ' ಹಚ್ಚಿಕೊಳ್ಳಬೇಡಿ."

ಕಾವೇರಮ್ಮ ಮುಖ ಚಿಕ್ಕದು ಮಾಡಿಕೊಂಡು ಬಂದು ಮೂಲೆಯಲ್ಲಿ ಕುಳಿತು ಕಣ್ತುಂಬ ಅತ್ತುಬಿಡುತ್ತಿದ್ದರು.

ಶ್ರೀನಿವಾಸ ಸುಭದ್ರೆಯ ಆಹ್ವಾನವನ್ನು ಬಲವಂತಕ್ಕೆ ಒಪ್ಪಿ ಕೊಂಡಿದ್ದ. ಅವಳ ಕಣ್ಣಲ್ಲಿ ಮಿಡಿದ ಹಸಿ ಅವನ ಸ್ಥೈರ್ಯವನ್ನು ಉಡಗಿಸಿತ್ತು ಆದರೆ ಅವಳ ಮನೆಗೆ ಹೋಗಬೇಕಾದ ದಿನ ಬಂದಾಗ ಅವನ ಮನಸ್ಸು ತೀವ್ರ ವೇದನೆಗೊಳಗಾಯಿತು. 'ನಾನೆಂಥ ಅನುಚಿತ ಕೆಲಸ ಮಾಡಿದೆ. ಎಷ್ಟು ಬೇಗ ದೌರ್ಬಲ್ಯಕ್ಕೊಳಗಾದೆ' ಎಂದುಕೊಂಡ.

'ಹೋಗಲೇ ಬೇಡವೇ?' ಎಂದು ಹಲವು ಸಾರಿ ಪ್ರಶ್ನೆ ಹಾಕಿಕೊಂಡ. ಸಮಸ್ಯೆ ಬಗೆಹರಿಯಲಿಲ್ಲ, ತಾಯಿಯನ್ನು ಕರೆದು,

"ಅಮ್ಮ ಒಂದು ವಿಷಯದಲ್ಲಿ ನಿನ್ನ ಸಲಹೆ ಕೇಳಬೇಕೆಂದಿದ್ದೇನೆ. ಏನು ಹೇಳುವೆ ?"

"ಏನು ವಿಷಯವೋ ಅದು–ಮಗೂ–ಕೇಳಪ್ಪಾ."

"ನನ್ನ ಕ್ಲಾಸ್‌ಮೇಟ್ ಸುಭದ್ರೆಯನ್ನು ಬಲ್ಲೆಯಷ್ಟೆ ?"

"ನಾನು ಕಾಣೆನೇ ? –ನಮ್ಮ ವೆಂಕಪ್ಪಯ್ಯನವರ ಮಗಳು"

"ಹೂ! ಅವಳೇ"

"ಏನು ಅವಳ ಸಮಾಚಾರ"

"ಇವತ್ತು ನನ್ನ ಕಾಫೀಗೆ ಕರೆದಿದ್ದಾಳೆ"

"ಒಳ್ಳೆಯದು ಹೋಗಿ ಬಾ"

"ನನಗಿಷ್ಟವಿಲ್ಲವಲ್ಲಮ್ಮ"

"ಏಕಪ್ಪಾ !"

"ನನಗೆ ಏಕೋ ಆಕೆಯ ವರ್ತನೆ ಹಿಡಿಸುವುದಿಲ್ಲ"

"ಮಗು ನನಗೂ ಹಿಡಿಸುವುದಿಲ್ಲ. ಅದು ಶುದ್ಧ ಚೆಲ್ಲು ಹುಡುಗಿ"

"ಹಾಗಾದರೆ ಬರುವುದಕ್ಕೆ ಸಾಧ್ಯವಿಲ್ಲೆಂದು ಹೇಳಿಕಳಿಸಿಬಿಡುತ್ತೇನೆ"

"ಬರುತ್ತೇನೆಂದು ಒಪ್ಪಿಕೊಂಡಿದ್ದರೆ ಹೋಗಿ ಬಾ, ಮಾತಿಗೆ ತಪ್ಪಬಾರದು."

"ಅಮ್ಮ ನಾನು ತಪ್ಪು ಮಾಡುವುದಿಲ್ಲಾ ?"

"ನನ್ನ ಕಂದ ತಪ್ಪು ಮಾಡುವನೇ"

"ನಿನ್ನ ಆಶೀರ್ವಾದ ನನ್ನ ಕಾಪಾಡುತ್ತಿರಲಿ"

ಗೌರಮ್ಮನವರ ಬಾಯಲ್ಲಿ ಮಾತೂ ಹೊರಡಲಿಲ್ಲ. ಮಗನನ್ನು ಅಪ್ಪಿ, ಅವನ ಮುಂಗುರುಳನ್ನು ನೇವರಿಸಿದರು.

ತನ್ನ ಆತಿಥ್ಯಕ್ಕೆ ನಡೆದಿದ್ದ ಸಿದ್ಧತೆ ಕಂಡು ಶ್ರೀನಿವಾಸ ಚಕ್ಕಿತ ಬೆರಗಾದ. ಮೇಜಿನ ಮೇಲೆ ಬಗೆಬಗೆಯ ತಿನಿಸುಗಳು, ಹಣ್ಣು ಹಂಪಲು.

ನಸುನಗುತ್ತಾ ಸುಭದ್ರಾ ಶ್ರೀನಿವಾಸನಿಗೆ ಸ್ವಾಗತ ಬಯಸಿದಳು. ಶ್ರೀನಿವಾಸ ಸುತ್ತ ನೋಡಿ

"ಎಲ್ಲಿ ಮಿಕ್ಕವರು ?"

"ಇನ್ನು ಯಾರು ?"

"ನಿಮ್ಮ-ನನ್ನ ಗೆಳೆಯ ಗೆಳತಿಯರು"

"ನಾನು ಯಾರನ್ನೂ ಕರೆಯಲಿಲ್ಲ"

"ನಿಮ್ಮ ತಂದೆಯವರು ಮನೆಯಲ್ಲಿಲ್ಲವೆ ?"

"ಕೋರ್ಟಿಲ್ಲದ ದಿನ ಅಪ್ಪ ಮನೆಯಲ್ಲಿರುವುದುಂಟೇ ? ಅವರಾಯಿತು, ಇಸ್ಪೇಟಾಯಿತು"

ನರಸಮ್ಮನವರು ಕಾಫಿ ಕೆಟಲ್ ತಂದಿಟ್ಟರು. ಶ್ರೀನಿವಾಸ ಎದ್ದು ಕೈಮುಗಿದು

"ಚೆನ್ನಾಗಿದ್ದೀರಾ ತಾಯೀ"

"ಚೆನ್ನಾಗಿದ್ದೀನಪ್ಪಾ... ಇವತ್ತಾದರೂ ದೊಡ್ಡ ಮನಸ್ಸು ಮಾಡಿ ಬಂದಿರಲ್ಲಾ"

"ಬರದೇ ಏನಮ್ಮ"

"ಬಹಳ ಸಂಕೋಚಪಟ್ಟುಕೊಂಡಿರಿ" ಎಂದು ಸುಭಾ ಹೇಳಿದಳು.

"ಯಜಮಾನರು ನಿಮ್ಮ ಮನೆಗೆ ಬಂದರೆ ಬೇಕಾದಷ್ಟು ಉಪಚಾರ ಮಾಡುವಿರಂತೆ. ಬಡವರ ಮನೆಗೆ ಬರುತ್ತಿರಬೇಕಪ್ಪಾ"

"ನನ್ನ ಕಣ್ಣಿನಲ್ಲಿ ಯಾರೂ ಬಡವರಿಲ್ಲಮ್ಮ"

"ಕಾಫಿ ಬಿಸಿಯಾಗಿದೆ ತೆಗೆದುಕೊಳ್ಳಿ"

ಎಂದು ಹೊರಗೆ ಹೋದರು.

ಸುಭಾ ಕಾಫಿ ಬಗ್ಗಿಸಿ ಕೈಗಿತ್ತಳು. ಶ್ರೀನಿವಾಸ ಒಂದೊಂದು ಉಪ್ಪೇರಿ ಸವಿಯುತ್ತಾ ಕಾಫಿ ಸೇವಿಸತೊಡಗಿದ.

ಶ್ರೀನಿವಾಸನನ್ನು ಆಸೆ ಆಕಾಂಕ್ಷೆ ತುಂಬಿದ ಕಣ್ಣುಗಳಿಂದ ಸುಭದ್ರಾ ಎವೆಯಿಕ್ಕದೆ ನೋಡುತ್ತಿದ್ದಳು. ಕಣ್ಣಿಗೆ ಕಣ್ಣು ಕೂಡಿದಾಗ ಶ್ರೀನಿವಾಸ ಅಧೋವದನನಾಗುತ್ತಿದ್ದ. ಅವಳ ಮನಸ್ಸಿನಲ್ಲಿ ಮೂಡಿದ್ದ ಉದ್ವೇಗ ಅವನಿಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಎದೆಯ ಮೇಲಿದ್ದ ತೆಳು ಬೆಂಗಾಲ್ ಸಿಲ್ಕ್ ಸೀರೆ ಸೆರಗು ಅಲುಗಾಡುತ್ತಿದ್ದುದು ಕಂಡು ಬರುತಿತ್ತು. ಶ್ರೀನಿವಾಸ ವಿಚಾರ ಮಾಡತೊಡಗಿದ. ಥಟ್ಟನೆ ಅವನಿಗೆ ಏನೋ ಹೊಳೆಯಿತು.

"ಸುಭದ್ರಾ, ಡಿಗ್ರಿ ತೆಗೆದುಕೊಂಡ ಮೇಲೆ ಏನುಮಾಡುವಿರಿ?"

"ಎಂ. ಎಸ್‌ಸಿ. ಗೆ ಓದು ಎಂದು ತಂದೆ ಹೇಳುತ್ತಿದ್ದಾರೆ"

"ಎಂ.ಎಸ್‌ಸಿ. ಮಾಡಿಕೊಂಡಮೇಲೆ"

"ಪಿ. ಎಚ್ ಡಿ ಗೆ ಓದಬೇಕೆಂದಿದ್ದೇನೆ"

"ಅದೂ ಮುಗಿದ ಮೇಲೆ"

"ಇನ್‌ಸ್ಟಿಟ್ಯೂಟಿನಲ್ಲಿ ರಿಸರ್ಚ್ ಮಾಡಬೇಕೆಂದಿದ್ದೇನೆ"

"ನಿಮಗೆ ವಿವಾಹವಾಗಿದೆಯಲ್ಲವೆ?"

ಆ ಪ್ರಶ್ನೆಗೆ ಸುಭದ್ರಾ ಉತ್ತರ ಹೇಳಲಿಲ್ಲ.

"ನಿಮ್ಮ ಸಂಸಾರದ ಕಥೆಯನ್ನು ಕೆದಕುತ್ತಿದ್ದೇನೆಂದು ಭಾವಿಸಬೇಡಿ. ನನ್ನ ಕಿವಿಯ ಮೇಲೆ ಕೆಲವು ವಿಷಯಗಳು ಬಿದ್ದಿವೆ. ಅವು ಸರಿಯೋ ತಪ್ಪೋ ತಿಳಿಯುವ ಎಂದು ನಿರ್ಧರಿಸಲು ಕೇಳಿದೆ. ನಿಮಗೆ ಅಸಮಾಧಾನ ವಾಗುವ ಹಾಗಿದ್ದರೆ ಆ ಪ್ರಶ್ನೆ ಕೇಳುವುದಿಲ್ಲ."

"ಕೇಳಿ–ನಿಮಗೆ ಹೇಳದೆ ನಾನು ಮತ್ತೆ ಯಾರಿಗೆ ಹೇಳಬೇಕು"

"ನಿಮ್ಮ ಯಜಮಾನರು ಏನು ಮಾಡುತ್ತಿದ್ದಾರೆ"

"ಚನ್ನಪಟ್ಟಣದ ಹೈಸ್ಕೂಲಿನಲ್ಲಿ ಮೇಷ್ಟರು"

"ಅವರು ಗ್ರಾಜುಯೇಟ್ ಅಲ್ಲವೇ?"

"ಹೌದು"

"ಇಲ್ಲಿಗೆ ಬಂದು ಹೊಗುತ್ತಿರುತ್ತಾರೆಯೇ?"

"ಬಂದುಹೋಗುತ್ತಿರುತ್ತಾರೆ"

"ನೀವು ಅಲ್ಲಿಗೆ ಹೋಗಿ ಬರುತ್ತೀರಾ?"

"ನಾನು ಹೋಗಿಲ್ಲ. ಹೋಗುವುದೂ ಇಲ್ಲ"

"ಏಕೆ ಎಂದು ಕೇಳಬಹುದೇ?"

"ಶ್ರೀನಿವಾಸ್, ನನ್ನ ವಿವಾಹ ಒಂದು ದುರಂತ. ಆ ಗಂಡನನ್ನು ಕಂಡರೆ ನನಗೆ ತಲೆಬೇಸರ. ನನಗೆ ವಿವಾಹದ ವಯಸ್ಸು ಮೀರಿತೆಂದು ಯಾವನೋ ಒಬ್ಬನಿಗೆ ಕಟ್ಟಿಬಿಟ್ಟರು"

"ಆತ ಕುರೂಪಿಯೇ ?"

"ಅಲ್ಲ"

"ರೋಗಿಯೇ"

"ಅಲ್ಲ"

"ದರಿದ್ರನೇ"

ಸುಭದ್ರಾ ಉತ್ತರ ಕೊಡಲಿಲ್ಲ.

"ಬಡವನ ಕೈಹಿಡಿದೆನೆಂದು ನಿಮಗೆ ಅಸಮಾಧಾನವೇ ?"

"ಬಡತನದ ಪ್ರಶ್ನೆಯಲ್ಲ. ಮನೋಭಾವಗಳ ವೈಷಮ್ಯ (Disparity of temperaments)"

"ವೈಷಮ್ಯವೋ ಸಮರಸವೋ ಕಂಡುಕೊಳ್ಳುವುದಕ್ಕೆ ನೀವು ಅವಕಾಶವೇ ಕೊಟ್ಟಿಲ್ಲವಲ್ಲಾ"

"ಈಗೇಕೆ ಆ ವಿಷಯ?"

"ಕೆಲವು ದಿವಸದ ಹಿಂದೆ ನಾನು ತಂದೆಯವರ ಒಂದು ಕೆಲಸಕ್ಕಾಗಿ ಚನ್ನಪಟ್ಟಣಕ್ಕೆ ಹೋಗಬೇಕಾಯಿತು. ಅಲ್ಲಿ ಆಕಸ್ಮಿಕವಾಗಿ ನಿಮ್ಮ ಯಜಮಾನರ ಪರಿಚಯವಾಯಿತು. ಆತ ಬಹಳ ಸಂಭಾವಿತನ ಹಾಗೆ ಕಾಣುತ್ತಾನೆ"

"ಇರಬಹುದು. ಒಬ್ಬರಿಗೆ ಅಮೃತವಾದುದು ಇನ್ನೊಬ್ಬರಿಗೆ ವಿಷವಾಗಬಾರದೇಕೆ ?"

"ಸುಭದ್ರಾ, ನೀವು ಓದಿದವರು. ತಿಳಿದವರು. ನಿಮಗೆ ಉಪದೇಶ ಕೊಡುವ ಹಕ್ಕು ನನಗಿಲ್ಲ. ಆದರೂ ಒಂದು ಮಾತು ಹೇಳಬೇಕೆನಿಸುತ್ತದೆ. ನಿಮ್ಮ ದಾಂಪತ್ಯಜೀವನ ಚೆನ್ನಾಗಬೇಕೆಂದು ನನ್ನ ಬಯಕೆ."

"ಅದು ಸಾಧ್ಯವಿಲ್ಲ ಶ್ರೀನಿವಾಸ್. ದಯೆಯಿಟ್ಟು ಆ ವಿಷಯ ಮತ್ತೆ ಪ್ರಸ್ತಾಪಿಸಬೇಡಿ."

ಶ್ರೀನಿವಾಸನ ಮುಖದಲ್ಲಿ ಗೆಲುವು ಉಳಿಯಲಿಲ್ಲ. ಅವನಿಗೆ ಇನ್ನು ಅಲ್ಲಿ ಕೂಡಲು ಮನಸ್ಸಾಗಲಿಲ್ಲ. ಆದರೆ ಎದ್ದು ಹೋಗುವುದು ಅಪಚಾರವಾಗಬಹುದೆಂಬ ಶಂಕೆ ಬಾಧಿಸಿತು.

"ಹುಡುಕಿದರೆ ಗಂಡನೋ ಹೆಂಡತಿಯೋ ಇಬ್ಬರಲ್ಲಿ ಒಬ್ಬರು ಸೋತು ಹೊಂದಿಕೊಳ್ಳುವುದು ನಮ್ಮ ರೀತಿಯಲ್ಲಿ ಪರಿಹಾರ. ವಿವಾಹವಾದ ಕೂಡಲೆ ಗಂಡು ಹೆಣ್ಣಿನ ಬಾಳ್ವೆ ಸುಗಮವಾಗುವುದಿಲ್ಲ. ಪರಸ್ಪರ ಅರಿತುಕೊಂಡು, ಪ್ರೀತಿಸಿ, ಗೌರವಿಸುವುದಕ್ಕೆ ಕೆಲವು ವರ್ಷಗಳು ಬೇಕಾಗುತ್ತವೆ. ಉಭಯತರಿಗೂ ಸಂಭವಿಸುವ ದುಃಖ ಸಂಕಟಗಳು ಅವರ ಜೀವಗಳನ್ನು ಬೆಸೆಯುತ್ತವೆ."

"ಹೊಂದಿಕೊಂಡು ಹೋಗುವುದಕ್ಕೆ ತಕ್ಕ ಮನೋಭಾವ ಬೇಕಲ್ಲವೆ ?"

"ಮನೋದಾರ್ಢ್ಯ ಬೇಕು. ಮನೆಯಲ್ಲಿ ಒಬ್ಬ ಅವಿವೇಕಿ ಮಗ ಹುಟ್ಟಿದರೆ ತಂದೆ ತಾಯಿಗಳು ಬೇಸತ್ತು ಅವನ ಕೈಬಿಡುವುದಿಲ್ಲ. ಶತಾಯಗತಾಯ ಅವನನ್ನು ಸರಿಯಾದ ದಾರಿಗೆ ತರಲು ಪ್ರಯತ್ನಿಸುತ್ತಾರೆ."

"ಪ್ರಯತ್ನ ನಿಷ್ಫಲವಾಗುವುದೆಂದು ಮೊದಲೇ ತಿಳಿದಿದ್ದರೆ .. ?"

"ಪ್ರಯತ್ನ ಮಾಡದೆಯೇ ಆ ತಿಳುವಳಿಕೆ ಬರುವುದು ಹೇಗೆ ?"

"ಸರಿ-ಇನ್ನೊಂದು ಪರಿಹಾರದ ರೀತಿ ಯಾವುದು ?"

"ಆಂಗ್ಲರ ಪದ್ಧತಿ. ಡೈವೋರ್ಸ್ ಕೋರ್ಟಿಗೆ ಹೋಗುವುದು. ನಮ್ಮ ವಿವಾಹಗಳಿಗೆ ಡೈವೋರ್ಸ್ ಬಂದಿಲ್ಲ."

"ಇದು ದೊಡ್ಡ ಕುಂದಲ್ಲವೆ?"

"ಕುಂದೆಂದು ಕೆಲವರು ಭಾವಿಸುತ್ತಾರೆ."

"ನೀವು ?"

"ನಾನು ಭಾವಿಸುವುದಿಲ್ಲ. ಒಂದು ಜೀವದ ಜತೆ ಬಾಳ್ವೆ ಮಾಡಲಾಗದವನು ಜಗತ್ತಿನ ಜತೆ ಬಾಳ್ವೆ ಮಾಡಬಲ್ಲನೇ ?"

"ಜಗತ್ತಿಗೂ ಅವನಿಗೂ ನಿಕಟ ಸಂಬಂಧವಿರುವುದಿಲ್ಲ. ಆದರೆ ಆ ಜೀವಕ್ಕೂ ಅವನಿಗೂ ನಿಕಟ ಸಂಬಂಧವಿರುತ್ತದೆ."

“ಪ್ರಾಚ್ಯ ಪಾಶ್ಚಾತ್ಯ ವಿಚಾರ ತರಂಗಗಳಿಗಿರುವುದು ಇದೇ ಅಂತರ. ವ್ಯಕ್ತಿ, ಸಮಾಜ, ಜಗತ್ತು ಒಂದೇ–ಅವು ಹಾಸುಹೊಕ್ಕಾಗಿ ಹೊಂದಿಕೊಂಡಿವೆ ಎಂದು ನಾವು ಭಾವಿಸುತ್ತೇವೆ; ಅವು ಬೇರೆ ಬೇರೆ ಎಂದು ಅವರು ಭಾವಿಸುತ್ತಾರೆ. ದುರ್ಮಾರ್ಗ ಪ್ರವರ್ತಕ ಅವರಲ್ಲಿ ಬಹಳ ದೊಡ್ಡ ವೇದಾಂತಿಯೆನಿಸಿಕೊಳ್ಳಬಹುದು; ನಮ್ಮಲ್ಲಿ ಅಂಥ ಚೋದ್ಯ ಸಾಧ್ಯವೇ ಇಲ್ಲ. ವ್ಯಕ್ತಿಯ ನಡೆನುಡಿಗೆ ಅಂತರವಿರಲೇಬಾರದು.”

“ಇಂಗ್ಲೀಷ್ ಶಿಕ್ಷಣ ನಿಮ್ಮ ಮೇಲೆ ಯಾವ ಪ್ರಭಾವವನ್ನೂ ಬೀರಿದಂತೆ ಕಂಡುಬರುವುದಿಲ್ಲ,”

“ಇರಬಹುದು. ನಾನು ಇಂಗ್ಲಿಷ್ ಕಲಿಯುವ ಮುಂಚೆ ಕಲಿತದ್ದು ನಮ್ಮ ತಾಯಿ ಹೇಳಿಕೊಟ್ಟ, ಹಾಲಿಗೊಂದು ಕಾಸು, ಮೊಸರಿಗೊಂದು ಕಾಸು”

ಶ್ರೀನಿವಾಸನ ಗಂಭೀರವಾದ ಮಾತಿನ ಹಿಂದಿದ್ದ ತಿರಸ್ಕಾರ, ಅಣಕ ಕಂಡು ಸುಭದ್ರ ಅಸ್ತವ್ಯಸ್ತಳಾದಳು. ತನ್ನ ಒಳಗಣ ದುಗುಡವನ್ನು ತೋರಿಸಿಕೊಳ್ಳದಂತಿರಲು ಪ್ರಯತ್ನಿಸಿದಳು.

ಶ್ರೀನಿವಾಸ ಗಡಿಯಾರ ನೋಡಿಕೊಂಡು ಎದ್ದು ನಿಂತ.

“ನನಗೆ ಹೊತ್ತಾಯಿತು. ಪವಿಲಿಯರ್ನನಲ್ಲಿ ಎಲ್ಲರೂ ಕಾಯುತ್ತಿರುತ್ತಾರೆ”

“ಇಷ್ಟು ಬೇಗ ಹೋಗಬೇಕೇ?”

“ಹೋಗಬೇಕಾಗಿದೆ”

“ಒಳ್ಳೆಯದು–ನಮಸ್ಕಾರ–ಮತ್ತೆ ಯಾವಾಗ ಬರುವಿರಿ”

“ಹೀಗೆ–ಅನುಕೂಲವಾದಾಗ”

ಎಂದು ಹೇಳಿ ಹೊರಟುಬಿಟ್ಟ. ಅವನು ಹೊರಟುಹೋದುದೇ ಸುಭದ್ರೆಗೊಂದು ತೃಪ್ತಿ. ‘ಅವನನ್ನೇಕೆ ಕರೆದೆ’ ಎಂದು ಪ್ರಶ್ನೆ ಹಾಕಿಕೊಂಡಳು. ಅವಳ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ದುಃಖ ಉಕ್ಕೇರಿ ಬಂತು.

ಹಾಸಿಗೆಗೆ ಮುಖವಿಟ್ಟು ಗೋಳೋ ಎಂದು ಅಳಲುಪಕ್ರಮಿಸಿದಳು. ತಾಯಿಯ ಸಮಾಧಾನೋಕ್ತಿಯೂ ಸಾರ್ಥಕವಾಗಲಿಲ್ಲ.

## ೬

ಸೂರಪ್ಪನವರು ತಮ್ಮ ಮನೆಯನ್ನು ತಾವೇ ಕಟ್ಟಿಸಿದ್ದರು. ಮುಂದೆ ವಿಶಾಲವಾದ ಆವರಣ. ಆವರಣದಲ್ಲಿ ಹಲವು ತೆಂಗಿನ, ಸಂಪಿಗೆಯ ಮರಗಳು. ಮನೆ ಪ್ರವೇಶ ಮಾಡಿದೊಡನೆಯೇ ಅತ್ತಿತ್ತ ಎರಡು ಕೋಣೆಗಳು-ಒಂದು ವಿಶಾಲವಾದ ವರಾಂಡ. ಕೋಣೆಗಳಲ್ಲಿ ಒಂದನ್ನು ಶ್ರೀನಿವಾಸ ಉಪಯೋಗಿಸುತ್ತಿದ್ದ; ಇನ್ನೊಂದು ಕೋಣೆ ಸೂರಪ್ಪನವರ ಕಛೇರಿಯಾಗಿತ್ತು. ಒಳಗೆ ಪ್ರವೇಶಿಸಿದರೆ ಒಂದು ದೊಡ್ಡ ತೊಟ್ಟಿ. ತೊಟ್ಟಿಯ ಎರಡು ಪಕ್ಕಕ್ಕೂ ಎರಡು ಕೋಣೆಗಳು. ಕಛೇರಿಯ ಪಕ್ಕದಲ್ಲಿದ್ದ ಕೋಣೆಯನ್ನೇ ಸೂರಪ್ಪನವರು ತಮ್ಮ ಶಯ್ಯಾಗೃಹವಾಗಿ ಉಪಯೋಗಿಸುತ್ತಿದ್ದರು. ಅದರ ಎದುರು ಕೋಣೆ ಅವರ ಪೂಜಾಗೃಹ. ಸೂರಪ್ಪನವರ ಶ್ರೀಮಂತಿಕೆ ನೋಡಬೇಕಾಗಿದ್ದರೆ ಅವರ ಪೂಜಾಗೃಹಕ್ಕೆ ಹೋಗಬೇಕಾಗಿತ್ತು. ಬೆಳ್ಳಿಯ ಮಂದಾಸನ, ಬೆಳ್ಳಿಯ ಹಲವು ದೇವರುಗಳು. ಹಲಗೆಯಾರತಿ, ಅರ್ಘ್ಯ ಪಾತ್ರೆ, ಉದ್ಧರಣೆ. ಪಂಚಪಾತ್ರೆಗಳೂ ಬೆಳ್ಳಿಯವೇ. ದೇವರ ಪ್ರತಿಬಿಂಬ ಚೆನ್ನಾಗಿ ಕಾಣಲೆಂದು ತಮ್ಮ ಶಯ್ಯಾಗೃಹದಲ್ಲಿ ಬಾಗಿಲೆದುರಿಗೆ ಸರಿಯಾಗಿ ಒಂದು ದೊಡ್ಡ ನಿಲುಗನ್ನಡಿಯನ್ನು ತೂಗುಹಾಕಿದ್ದರು. ತೊಟ್ಟಿಯನ್ನು ಬಿಟ್ಟು ಒಳಗೆ ಹೋದರೆ ಗೌರಮ್ಮನವರ ರಾಜ್ಯ. ಒಂದತ್ತ ಉಗ್ರಾಣ, ಇನ್ನೊಂದತ್ತ ಅಡಿಗೆ, ಊಟದ ಮನೆಗಳು. ಅವುಗಳ ಪಕ್ಕಕ್ಕೆ ಸ್ನಾನಗೃಹ.

ಮನೆಯ ಹಿಂದುಗಡೆ ಮೂರು ನಾಲ್ಕು ಎಕರೆ ಭೂಮಿಯಿತ್ತು. ಅಲ್ಲಿಯೂ ಸೂರಪ್ಪನವರು ಸೊಗಸಾದ ತೋಟ ಮಾಡಿಸಿದ್ದರು. ಮನೆಗೆ ಸಾಕಾಗುವಷ್ಟು ಹೂವು, ತರಕಾರಿ ಅವರ ತೋಟದಲ್ಲಿಯೇ ಬೆಳೆಯುತ್ತಿತ್ತು. ಕಾಂಪೌಂಡಿನಲ್ಲಿದ್ದ ಭಾವಿಗೆ ಪಂಪು ಹಾಕಿಸಿದ್ದುದರಿಂದ ನೀರಿನ ಕೊರತೆಯಿರಲಿಲ್ಲ.

ಬೆಳಗಾಗೆದ್ದು ಸ್ನಾನ ಮುಗಿಸಿಕೊಂಡು, ಪೂಜೆ ತೀರಿಸಿಕೊಂಡು ತೋಟದ ಒಂದು ಕೊನೆಯಲ್ಲಿದ್ದ ಸಣ್ಣ ಮಂಟಪದಲ್ಲಿ ಸೂರಪ್ಪನವರು ಪಾರಾಯಣಕ್ಕೆ ಕೂಡುತ್ತಿದ್ದರು. ಅಲ್ಲಿಗೆ ಶ್ರೀನಿವಾಸ, ಸೂರಪ್ಪನವರ ರೈಟರ್ ರಾಮಾಶಾಸ್ತ್ರಿ ಇಬ್ಬರನ್ನುಳಿದು ಬೇರೆಯವರಿಗೆ ಪ್ರವೇಶವಿರಲಿಲ್ಲ.

ಸೂರಪ್ಪನವರು ಕೈಯಲ್ಲಿ ಭಗವದ್ಗೀತೆ ಹಿಡಿದು ಪಾರಾಯಣ ಆರಂಭಿಸುತ್ತಿದ್ದರು. ಓದಿದ ಶ್ಲೋಕವನ್ನೇ ಕೆಲವು ಸಲ ಮತ್ತೆ ಮತ್ತೆ ಓದುವರು.

**"ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ |**
**ಅವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ||**

[ಯಾವುದು ಈ ಜಗತ್ತಿನಲ್ಲೆಲ್ಲ ಹರಡಿಕೊಂಡಿದೆಯೋ ಅದು ನಾಶವಾಗತಕ್ಕದಲ್ಲವೆಂದು ತಿಳಿ. ನಾಶವಿಲ್ಲದ ಅವನ್ನು ಹೋಗಲಾಡಿಸುವುದಕ್ಕೆ ಯಾರಿಂದಲೂ ಆಗದು ]

ಸೂರಪ್ಪನವರ ಮನಸ್ಸಿನಲ್ಲಿ ಹಲವು ವಿಚಾರಗಳು ಸುಳಿದಾಡುತ್ತಿದ್ದವು. ಅವುಗಳ ಧ್ಯಾನದಲ್ಲಿ ಗಡ್ಡವನ್ನು ನೇವರಿಸಿಕೊಳ್ಳುತ್ತಿದ್ದರು.

**"ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ |**
**ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ||**

[ಎಂದೆಂದಿಗೂ ಇರುವವನಾಗಿಯೂ ಶರೀರದೊಳಗೆ ಸೇರಿಕೊಂಡಿರುವವನಾಗಿಯೂ ನಾಶವಿಲ್ಲದವನಾಗಿಯೂ ಇಂದ್ರಿಯ ಮೊದಲಾದವುಗಳಿಗೆ ಒಳಗಾಗದವನಾಗಿಯೂ ಇರುವ ಆತ್ಮನ ಈ ದೇಹಗಳು ಎಂದಾದರೂ ಇಲ್ಲವೆನಿಸತಕ್ಕವುಗಳು. ಅರ್ಜುನ, ಅದ್ದರಿಂದ ಯುದ್ಧವನ್ನು ಮಾಡು.]

ಸೂರಪ್ಪನವರಿಗೆ ತಕ್ಷಣ ಏನೋ ನೆನಪಾಗುತ್ತಿತ್ತು. ಗಂಟಲು ಹರಿದು ಹೋಗುವ ಹಾಗೆ 'ಶಾಸ್ತ್ರೀ' ಎಂದು ಕೂಗುತ್ತಿದ್ದರು. ಶಾಸ್ತ್ರಿ ಏಳುವುದನ್ನು ಬೀಳುವುದನ್ನು ನೋಡದ ಓಡಿಬರುತ್ತಿದ್ದ. ಒಮ್ಮೊಮ್ಮೆ ಅವನಿಗೆ ಕೇಳದಿದ್ದರೆ ಹತ್ತಿರದಲ್ಲಿಯೋ ತೋಟದ ಕೆಲಸಮಾಡುತ್ತಿದ್ದ ಮಾದ ಅವನಿಗೆ ಸುದ್ದಿ ಮುಟ್ಟಿಸುತ್ತಿದ್ದ.

ಪಾರಾಯಣ ಸಾಗುತ್ತಿತ್ತು. ಶಾಸ್ತ್ರಿ ಬಂದು ಎದುರು ನಿಲ್ಲುತ್ತಿದ್ದ.

"ಸ್ವಾಮಿ ಕರೆದಹಾಗಾಯಿತು"

"ಹೂ! ಕರೆದೆ. ಎಲ್ಲಿ ಹೋಗಿದ್ದೆ ಇಷ್ಟು ಹೊತ್ತು"

"ಆಫೀಸಿನಲ್ಲೇ ಇದ್ದೆ. ಗುಡೇಮಾರನಹಳ್ಳಿ ಚನ್ನಭೈರೇಗೌಡ ಬಂದಿದ್ದಾನೆ"

"ಯಾಕೆ ಬಂದಿದ್ದಾನೆ....ಮಗ. ಕಾಸಿಲ್ಲ ದುಡ್ಡಿಲ್ಲ."

"ಇನ್ನೂರು ರೂಪಾಯಿ ತಂದು ಕೊಟ್ಟಿದ್ದಾನೆ."

'ಇನ್ನೂರು ರೂಪಾಯಿ ಯಾವ ಪ ^'ಗಿಗುತೆ?"

"ಇವತ್ತು ಅವನ ಕೇಸಿಷ"

"ಹಾಳಾಗಿ ಹೋಗಲಿ–ಇನ್ನೂರು ತೆಗೆದುಕೋ. ಪುತ್ತೆ ಮುನ್ನೂರು ತಂದು ಕೊಡುವ ತನಕ ಕೋರ್ಟಿಗೆ ಬರುವುದಿಲ್ಲ ಎಂದು ಹೇಳು"

ಎಂದು ಪಾರಾಯಣ ಆರಂಭಿಸಿದರು.

**"ಕಾಮಾತ್ಮಾನಃ ಸ್ವರ್ಗಪರಾ ಜನ್ಮ ಕರ್ಮಫಲಪ್ರದಾಮ್ ।**
**ಕ್ರಿಯಾ ವಿಶೇಷ ಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ॥"**

[ಬಯಕೆಗಳಲ್ಲಿಯೇ ಮುಳುಗಿದವರಾಗಿಯೂ ಸ್ವರ್ಗವನ್ನೇ ಹೆಚ್ಚೆನ್ನುವವರಾಗಿಯೂ ಇರುವರು; ಇಂದ್ರಿಯ ಸುಖವನ್ನೂ ಭಾಗ್ಯವನ್ನೂ ಪಡೆಯುವುದಕ್ಕಾಗಿ ಹುಟ್ಟುವಿಕೆಯ ಫಲವನ್ನು ಕೊಡುವ ಅನೇಕ ಕರ್ಮಗಳ ಮಾತನ್ನು ಹೇಳುವವರು.]

ರಾಮಾಶಾಸ್ತ್ರಿ ಅಲ್ಲಿಂದ ಕದಲಿರಲಿಲ್ಲ. ಅವನನ್ನೇ ಸೂರಪ್ಪನವರು ದುರುಗುಟ್ಟಿಕೊಂಡು ನೋಡಿ

"ಏನು ನಿಂತಿದ್ದೀ"

"ಬಡವ ಕೆಟ್ಟು ಹೋಗುತ್ತಾನೆ. ಇವತ್ತು ಅವನ ಕೇಸು ನಡಸಿ ಕೊಟ್ಟರೆ ಒಳ್ಳೆಯದು"

"ನೀನೇನು ಕಕ್ಷಿಗಾರನ ಜತೆ ಷಾಮೀಲಾಗಿ ಬಿಟ್ಟಿಯೋ?"

"ಇಲ್ಲ ಸ್ವಾಮಿ-ಗೌಡ ನಮ್ಮೂರಿನವನು. ಅವನ ಕೇಸು ಕೆಟ್ಟು ಹೋದರೆ ನನಗೆ ತುಂಬ ಅಪಖ್ಯಾತಿ"

"ಹಣ"

"ಬರತ್ತೆ. ಎಲ್ಲೂ ಹೋಗಲ್ಲ. ಅವನು ತುಂಬ ಸತ್ಯವಂತ"

"ಆಗಲಿ ಹೋಗು. ವೆಂಕಪ್ಪಯ್ಯನವರು ಬಂದರೆ ತಿಳಿಸು"

ಶಾಸ್ತ್ರಿ ಹೊರಡಲು ಸೂರಪ್ಪನವರು ಮತ್ತೆ ಪಾರಾಯಣ ಆರಂಭಿಸಿದರು.

ವೆಂಕಪ್ಪಯ್ಯನವರು ಹೈಕೋರ್ಟಿಗೆ ಹೋಗುವ ಹಾಗಿರಲಿಲ್ಲ. ತಮ್ಮ ಅಪೀಲ್ ಮೊಕದ್ದಮೆಗಳನ್ನೆಲ್ಲಾ ಸೂರಪ್ಪನವರಿಗೇ ತಂದುಕೊಡುತ್ತಿದ್ದರು. ವರಮಾನದಲ್ಲಿ ಸೂರಪ್ಪನವರಿಗೆ ನಾಲ್ಕನೆಯ ಮೂರು ಅಂಶ, ವೆಂಕಪ್ಪಯ್ಯನವರಿಗೆ ಒಂದಂಶ ಸೇರುತ್ತಿತ್ತು.

ವೆಂಕಪ್ಪಯ್ಯನವರನ್ನು ಸ್ವಾಗತಿಸಿ, ಅವರಿಗೆ ಒಂದು ಗ್ಲಾಸು ಕಾಫಿ ತಂದುಕೊಟ್ಟ. ತಂದೆ ಪೂಜೆ ತೀರಿಸಿಕೊಂಡು ಬರುವವರೆಗೆ ಶ್ರೀನಿವಾಸ ಅವರೊಂದಿಗೆ ಮಾತನಾಡುತ್ತ ಕುಳಿತ.

"ನಿನ್ನೆ ನೀವು ಮನೆಗೆ ಬಂದಿದ್ದಿರಂತೆ. ನಾನು ಕ್ಲಬ್ಬಿಗೆ ಹೋಗಿದ್ದೆ"

"ಹೌದು. ಸುಭದ್ರಮ್ಮ ಕರೆದಿದ್ದರು"

"ಆಗಾಗ್ಗೆ ಬರುತ್ತಿರಿ: ನಿಮ್ಮ ಜತೆ ಓದಬೇಕೆಂದು ಅವಳು ಬಹಳ ಆಸೆಪಡುತ್ತಾಳೆ"

"ಆಗಬಹುದು. ವೆಂಕಪ್ಪಯ್ಯನವರೇ, ಸ್ವಾತಂತ್ರ್ಯ ವಹಿಸಿ ನಾನು ಒಂದು ಮಾತು ಕೇಳುತ್ತೇನೆ. ನೀವು ಮನಸ್ಸಿಗೆ ಬೇಸರಮಾಡಿಕೊಳ್ಳ ಬಾರದು"

"ಕೇಳಿ ಶ್ರೀನಿವಾಸ್. ನಿಮ್ಮ ತಂದೆ ನಾನು ಒಂದು ಮನೆಯವರ ಹಾಗಿದ್ದೇವೆ"

"ಸುಭದ್ರೆಯನ್ನು ಯಾವಾಗ ಗಂಡನ ಮನೆಗೆ ಕಳಿಸಿಕೊಡುತ್ತೀರಿ ?"

"ಅವಳ ಪರೀಕ್ಷೆ ಮುಗಿಯಲಿ"

"ಮುಂದೆ ಅವರು ಎಂ. ಎಸ್.ಸಿ.ಗೆ ಓದುತ್ತಾರಂತೆ"

"ಹಾಗೆ ಹೇಳುತ್ತಿದ್ದಾಳೆ. ನನಗೆ ಇಷ್ಟವಿಲ್ಲ. ಇಲ್ಲಿಯವರೆಗೆ ಓದಿ ಸಿದುದೇ ನನಗೆ ಸಾಕಾಗಿಹೋಗಿದೆ. ಅದರೇನು ಮಾಡಲಿ ಹೇಳಿ. ನಮ್ಮಾಕೆ ಸುಭದ್ರಂಗೆ ಬೆಂಬಲನೀಡುತ್ತಾಳೆ"

"ಮದುವೆ ಮಾಡಿಕೊಂಡ ಗಂಡನ ಗತಿಯೇನು ?"

"ಅವನನ್ನೂ ಇಲ್ಲಿಗೇ ಬಂದಿದ್ದುಬಿಡು ಎಂದು ಹೇಳಿದೆ. ಏನೋ ಮರ್ಯಾದೆಗೆ ಗಂಟುಬಿದ್ದು ಒಲ್ಲೆಯೆನ್ನುತ್ತಾನೆ"

"ಅವರು ಹೇಗೆ ಬರಲು ಸಾಧ್ಯ ವೆಂಕಪ್ಪಯ್ಯನವರೇ ? ಕೆಲಸಕ್ಕೆ ರಾಜೀನಾಮೆ ಕೊಡು ಎಂದು ಹೇಳುವಿರಾ ?"

"ಇಲ್ಲ. ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಲು ನಿಮ್ಮ ತಂದೆ ಒಪ್ಪಿದ್ದಾರೆ"

"ಮದುವೆಯಾದ ಮೇಲೆ ಮಗಳು ಗಂಡನ ಮನೆಗೆ ಹೋಗುವುದು ಪದ್ಧತಿಯೋ-ಅಳಿಯ ಮಾವನ ಮನೆಗೆ ಬರುವುದು ಪದ್ಧತಿಯೋ ?"

"ಸರಿ–ಆದರೇನು ಮಾಡುವುದು ಹೇಳಿ. ಮನೆಯಲ್ಲಿ ನನ್ನ ಮಾತು ಕೇಳುವವರು ಯಾರು ?"

ವೆಂಕಪ್ಪಯ್ಯನವರ ಅಸಹಾಯಕತೆಯನ್ನು ಕಂಡು ಶ್ರೀನಿವಾಸನಿಗೆ ಮರುಕವುಂಟಾಯಿತು. ಅಷ್ಟು ಹೊತ್ತಿಗೆ ಸೂರಪ್ಪನವರು ಪಾರಾಯಣ ಮುಗಿಸಿಕೊಂಡು ಬಂದಿದ್ದರು. ವೆಂಕಪ್ಪಯ್ಯನವರನ್ನು ತಂದೆಯ ಆಫೀಸ್ ರೂಮಿಗೆ ಕಳುಹಿಸಿಕೊಟ್ಟು ಶ್ರೀನಿವಾಸ ತನ್ನ ವ್ಯಾಸಂಗ ಕೋಣೆ ಸೇರಿದ.

## ೭

ರಂಗಣ್ಣನಿಗೂ ವೆಂಕಪ್ಪನವರಿಗೂ ಯಾವದೋ ಬಾದರಾಯಣ ಸಂಬಂಧ. ಮೊದಲಿನಿಂದ ಈ ಸಂಬಂಧದ ಬಗ್ಗೆ ನರಸಮ್ಮನವರದು ತಕರಾರೆ 'ರಂಗಣ್ಣ, ನಮ್ಮ ಸುಭದ್ರೆಗೆ ತಕ್ಕ ವರನಲ್ಲ' ಎಂದು ನರಸಮ್ಮನವರು ತಲೆ ಚಚ್ಚಿಕೊಂಡರು. ರಂಗಣ್ಣನನ್ನು ನೋಡಿ ಸುಭದ್ರೆಗೂ ಅಂಥ ವ್ಯಾಮೋಹವೇನೂ ಹುಟ್ಟಲಿಲ್ಲ. ಸುಭದ್ರೆಗೆ ವಿವಾಹ ವಯಸ್ಸಾಗಿದ್ದ ವಿಷಯ, ವೆಂಕಪ್ಪಯ್ಯನವರ ಆರ್ಥಿಕ ಸ್ಥಿತಿ ಎರಡು ರಂಗಣ್ಣಗೆ ಸಹಾಯಕವಾದವು. ವೆಂಕಪ್ಪಯ್ಯನವರ ತಂಗಿ ಕಾವೇರಮ್ಮನವರು ಈ ಮದುವೆಗೆ ತುಂಬಾ ಒತ್ತಾಸೆ ಕೊಟ್ಟರು. ಅವರ ಯಜಮಾನರ ಕಡೆ ಬಳಗಕ್ಕೆ ರಂಗಣ್ಣ ಸೇರಿದ್ದ. ಅಲ್ಲದೆ ಸುಭದ್ರೆಗೆ 'ವಿಪರೀತ' ಓದಿಸುವುದು ಅವರಿಗೆ ಸೇರುತ್ತಿರಲಿಲ್ಲ.

ನರಸಮ್ಮನವರ ಹಟ ನಡೆಯಲಿಲ್ಲ. ಸುಭದ್ರೆಯ ಕಣ್ಣೀರು ಪ್ರಯೋಜನಕ್ಕೆ ಬರಲಿಲ್ಲ. ವಿವಾಹವಾಗಿಯೇ ಹೋಯಿತು. ಅಂದಿನಿಂದ ನರಸಮ್ಮನವರು ಗಂಡನನ್ನ ಒಂದೇ ಸಮನಾಗಿ ಅರೆಯುವುದಕ್ಕಾರಂಭಿಸಿದರು. ತಮ್ಮ ಹಟ ಗೆದ್ದಿತೆಂದು ವೆಂಕಪ್ಪಯ್ಯನವರು ಸಂತೋಷಪಡುವುದಕ್ಕೆ ಅವರು ಅರೆಗಳಿಗೆ ಅವಕಾಶಕೊಡಲಿಲ್ಲ.

ನರಸಮ್ಮನವರು ಭಾವಿಸಿದಷ್ಟು ರಂಗಣ್ಣ ಚಿಕ್ಕ ವ್ಯಕ್ತಿಯಾಗಿರಲಿಲ್ಲ. ಬಡವ ಆದರೆ ಮರ್ಯಾದಸ್ಥ. ಸ್ವಭಾವತಃ ಅಂಜುಬುರುಕ, ಆದರೆ ಭಾವನಾಜೀವಿ. ತಪ್ಪು ಮಾಡಬಾರದೆಂದು ಕಾತುರನಾಗಿದ್ದ. ಆದರೆ ಸರಿಯಾದುದನ್ನು ಕಾರ್ಯರೂಪಕ್ಕೆ ತರುವ ಚೈತನ್ಯವಿಲ್ಲ.

ಒಮ್ಮೊಮ್ಮೆ ರಂಗಣ್ಣ ತಪ್ಪು ಮಾಡದಿದ್ದಗೂ ಅವನ ಹೆಡ್‌ಮಾಸ್ಟರು ಈವನನ್ನು ಗದರಿಸಿಕೊಳ್ಳುತ್ತಿದ್ದರು. ತನ್ನ ಆತ್ಮಗೌರವವನ್ನು ರಕ್ಷಿಸಿ ಕೊಳ್ಳುವುವಕ್ಕೂ ಹೆಡ್‌ಮಾಸ್ಟರಿಗೆ ಪ್ರತಿಹೇಳಲು ಧೈರ್ಯ ಮಾಡಲಾಗದ ಅಳ್ಳೆದೆ.

ಪುಸ್ತಕ ಜೀವಿಯಾಗಿದ್ದ ರಂಗಣ್ಣ ಪರೀಕ್ಷೆ ಮುಗಿಸಿ ಬಿ. ಎ. ತರಗತಿ ಯಲ್ಲಿ ಮೊದಲನೆಯ ಸಾರಿಗೇ ತೇರ್ಗಡೆಯಾದ. ಬಿ.ಎ. ಅವನು ಮಾಡಲು ವೆಂಕಪ್ಪಯ್ಯ ನೆರವಾಗಿದ್ದರು. ಮುಂದೆ ಎಂ. ಎ. ಗೆ ಹೋಗಬೇಕೆಂದು ಅವನ ಹೆಬ್ಬಯಕೆ. 'ಇನ್ನು ಧನ ಸಹಾಯ ಮಾಡಲು ಸಾಧ್ಯವಿಲ್ಲ' ಎಂದು ವೆಂಕಪ್ಪಯ್ಯ ಹೇಳಿ, ಹರತರಮೂದು ಮಾಡಿ ಅಳಿಯನಿಗೆ ಒಂದು ಕೆಲಸ ಕೊಡಿಸಿಕೊಟ್ಟರು.

ಹೈಸ್ಕೂಲ್ ಉಪಾಧ್ಯಾಯನಾಗಿ ರಂಗಣ್ಣ ವಿಶೇಷ ಕೀರ್ತಿ ಗಳಿಸ ಲಿಲ್ಲ. ಕೇವಲ ನಿಷ್ಪ್ರಯೋಜಕ ಎಂದೂ ಅನಿಸಿಕೊಳ್ಳಲಿಲ್ಲ. ಅವನಿಗೆ ಕೊಡು ತ್ತಿದ್ದ ಸಂಬಳಕ್ಕೆ ಅಪೋಹ ಬರದಂತೆ ದುಡಿಯುತ್ತಿದ್ದ. ಆದರೆ ಆ ದುಡಿಮೆ ಯಲ್ಲಿ ಹೆಚ್ಚು ಜಾಣತನವಿರಲಿಲ್ಲ. ಮುಖವಾಡ ಕಟ್ಟಿಸಿಕೊಂಡ ಕುದುರೆ ಒಂದೇ ಜಾಡಿನಲ್ಲಿ ಹೋಗುವಂತೆ, ಹೋಗುವ ಸ್ವಭಾವ.

ಮೊದಲನೆಯ ಸಲ ಹೆಣ್ಣು ನೋಡುವುದಕ್ಕೆ ರಂಗಣ್ಣ ವೆಂಕಪ್ಪಯ್ಯ ನವರ ಮನೆಗೆ ಬಂದಾಗ ಅವನನ್ನು ನೋಡಿ ಸುಭದ್ರಾ ಗಹಗಹಿಸಿ ನಕ್ಕಿದ್ದಳು. ತನ್ನ ಭಾವೀಪತಿಯನ್ನು ನೋಡಿ, ಅಭಿಪ್ರಾಯ ತಿಳಿಸಲು ಶಂಕರನನ್ನು ಆಹ್ವಾನಿಸಿದ್ದಳು.

'ವಧು ಪರೀಕ್ಷೆ'ಯಾಗಿ ವರ ಹೊರಟುಹೋಗಲು ಸುಭದ್ರಾ ಶಂಕರನ ಕಡೆ ತಿರುಗಿ

"ಏನು ಅಭಿಪ್ರಾಯ" ಎಂದು ಕೇಳಿದಳು.

"ಆದರ್ಶ ದಾಂಪತ್ಯ. ಕನ್‌ಗ್ರಾಜುಲೇಷನ್ಸ್"

"ಹಾಸ್ಯ ಸಾಕು–ಸರಿಯಾಗಿ ಹೇಳು ಶಂಕರ್"

"ನೀನು ಹೇಳು ಸುಭಾ. ಆತನನ್ನು ನೋಡಿ ನಿನಗೇನನಿಸಿತು"

"ಶುದ್ಧ ಬೂರ್ (Boor) ಅನಿಸಿತು"

"ಬೂರ್ ಅನಿಸಿಯೂ ಅವನ ವಿವಾಹವಾಗುವೆಯಾ ?"

"ಆಗುತ್ತೇನೆಂದು ಹೇಳಿದೆನೇ ?"

"ಮಾತುಕತೆಯ ಲಕ್ಷಣ ನೋಡಿದರೆ ಎಲ್ಲಾ ಮುಗಿದ ಹಾಗೆ ಎಂದು ಕಾಣುತ್ತದೆ''

"ಹೆಂಗಸಿಗೆ ವಿವಾಹ ಒಂದು ಭೂಷಣ–ಶಂಕರ್''

"ಭೂಷಣ ತಾನೇ!–ಆವಶ್ಯಕತೆಯಲ್ಲ"

ಶಂಕರನ ನಾತಿನ ಮಾರ್ಮಿಕತೆಯನ್ನು ಅದರ ಹಿಂದಿನ ಕುಚೋದ್ಯ ವನ್ನು ಕಂಡು ಸುಭದ್ರಾ ಗಹಗಹಿಸಿ ನಕ್ಕಳು.

ರಂಗಣ್ಣನ ಮನಸ್ಸಿನಲ್ಲಾದ ಪ್ರತಿಕ್ರಿಯೆ ಬೇರೆ ವಿಧವಾಗಿತ್ತು. ಸುಭ ತುಂಬಿದ ಹೆಣ್ಣು. ಅವಳ ನಿಲುವೇ ಅವಳಿಗೊಂದು ವಿಚಿತ್ರ ಚೆಲುವನ್ನಿತ್ತಿತ್ತು. ತುಂಬಿದ ಅವಳ ಬಗನೆಗಂಗಳು–ಅದರ ರಾಗ ಮಾಧುರ್ಯ–ಅದರ ಚಲನ ವಲನ ಆವನ ಹೃದಯ ಭಾವನಾತರಂಗಗಳನ್ನೆಬ್ಬಿಸಿದವು. ಅವಳ ಮಾಟ ವಾದ ದೇಹಕ್ಕೆ ಬಳುಕು-ಕುಲುಕು ಸ್ವಭಾವಜನ್ಯವಾಗಿ ಬಂದಿದ್ದವು. ಸುಭದ್ರಾ ತನ್ನ ದೈವದತ್ತವರವನ್ನು ಕುಶಲ ಕಲಾವಿದೆಯ ಹಾಗೆ ಬಳಸಿ ಕೊಳ್ಳುತ್ತಿದ್ದಳು. ಎದೆಯ ಮೇಲಣ ಸೆರಗು ಜಾರಲು ಬಿಟ್ಟು, ಒಂದೆರಡು ನಿಮಿಷಗಳ ತರುವಾಯ ಅದು ಜಾರಿದೆಯೆಂದು ಕಂಡುಕೊಂಡಂತೆ ತೋರಿ, ಬೆದರಿ, ಗಾಬರಿಯಾಗಿ ಕೂಡಲೆ ಮೈಮುಚ್ಚಿ ಕೊಳ್ಳುತ್ತಿದ್ದಳು. ನಡೆಯು ವಾಗೊಮ್ಮೊಮ್ಮೆ ನೆರಿಚಿಮ್ಮುತ್ತಿದ್ದಳು. ಅವಳ ಪ್ರತಿಯೊಂದು ನೋಟ ಚಲನವಲನದಲ್ಲಿಯೂ ಒಂದು ಬಗೆಯ ವಿದ್ಯುದಾವೇಗ ತುಂಬಿರುತ್ತಿತ್ತು.

ಸಿಡಿಲಿನ ಉಜ್ವಲ ಪ್ರಭಾವಕ್ಕೆ ಎಳೆ ತಳಿರು ಎದುರು ನಿಂತಂತೆ ಅಯಿತು ರಂಗಣ್ಣನ ಪಾಡು ಆ ವಿದ್ಯುತ್- ಸುಂದರಿಯನ್ನು ನೋಡಿ ಅವನು ಪರವಶನಾದ. ಇಡೀ ಜೀವಮಾನ ಈ ಹೆಣ್ಣಿನ ದಾಸ್ಯದಲ್ಲಿದ್ದರೂ ಚಿಂತೆಯಿಲ್ಲ. ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂಬ ಹಿರಿಯಾಸೆ ಅವನಲ್ಲಿ ಉತ್ಪನ್ನವಾಯಿತು.

ಸುಭದ್ರೆಯ ಮುಂದೆ ಅತ್ತು, ಬೇಡಿ, ಕಾಡಿ, ಗೋಗರೆದು ವೆಂಕಪ್ಪಯ್ಯ ನವರೂ, ಕಾವೇರಮ್ಮನವರೂ ಆವಳನ್ನೊಪ್ಪಿಸಿದರು. ಅವಳು ಇಲ್ಲದ ಸಲ್ಲದ ಷರತ್ತುಗಳನ್ನು ಹಾಕಿದಳು. ತನ್ನ ವಿದ್ಯೆಗೆ ಅಡ್ಡಿಯಾಗಬಾರದೆಂದಳು. ತಾನು ಗೆಳೆಯರ ಜತೆ ಓಡಿಯಾಡುವುದಕ್ಕೆ ಅಡಚಣೆ ತರಬಾರದೆಂದು– ತನ್ನ ಗೆಳೆಯರು ಮನೆಗೆ ಬಂದು ಸಲಿಗೆಯಾಗಿರುವುದಕ್ಕೆ ವಿರೋಧ ತೋರಿಸ ಬಾರದೆಂದಳು. ರಂಗಣ್ಣ ಎಲ್ಲಕ್ಕೂ ಹೂಗುಟ್ಟಿದ.

ಮದುವೆಯಾದ ಕೂಡಲೆ ಹೆಂಡತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ರಂಗಣ್ಣನಿಗೆ ಸಾಧ್ಯವಿರಲಿಲ್ಲ. ಅವಳ ಪರೀಕ್ಷೆ ಉಳಿದಿತ್ತು. ಪರೀಕ್ಷೆಯಾದ ಮೇಲೆ ಕರೆದೊಯ್ದರೆ, ಕೆಲವು ತಿಂಗಳು ಅವಳು ಸಂಸಾರ ಮಾಡಿ ತನ್ನ ಮರ್ಜಿ ಅನುಸರಿಸುವಳೆಂದು ಅವನಲ್ಲಿ ನಂಬಿಕೆ ನೆಲಸಿತ್ತು. ಅವಳ ಮನಸ್ಸು ಮುದುಡದಂತೆ, ದೇಹ ಮಾಸದಂತೆ ನೋಡಿ ಕೊಂಡು ಅವಳ ಒಲವನ್ನು ಸಂಪಾದಿಸಿಕೊಳ್ಳುತ್ತೇನೆಂದು ಅವನು ಲೆಕ್ಕಹಾಕಿಕೊಂಡ. ಆದರೆ ತನ್ನ ಲೆಕ್ಕಕ್ಕೆ ಸುಭದ್ರೆಯ ಜಾಯಮಾನ ಅನುಸರಿಸಬೇಕಾದುದಗತ್ಯ ಎಂಬ ಅಂಶವನ್ನು ಮಾತ್ರ ಅವನು ಮರೆತ.

ಮದುವೆಯಾದ ಕೆಲವು ದಿವಸಗಳಮೇಲೆ ಒಂದೆರಡು ಬಾರಿ ಮಾವನ ಮನೆಗೆ ರಂಗಣ್ಣ ಬಂದಾಗ ತನ್ನ ಹೆಂಡತಿಯೊಂದಿಗೆ ಸ್ವಲ್ಪ ಕಾಲ ಕಳೆದು, ಅವಳ ವಿಶ್ವಾಸ ದೊರಕಿಸಿಕೊಳ್ಳಬಹುದೆಂದು ಆಸೆಪಟ್ಟುಕೊಂಡಿದ್ದ. ಕಾಲೇಜು ಯೂನಿಯನ್, ಟೆನಿಸ್ ನ್ಯಾಚುಗಳ ಅವಾಂತರದಲ್ಲಿ ಸುಭದ್ರೆಯ ಮುಖ ದರ್ಶನವಾಗುವುದು ದುರ್ಘರವಾಯಿತು. ಅತ್ತೆಯ ತಿರಸ್ಕಾರವಂತೂ ಅಸಹನೀಯವಾಗಿತ್ತು. ನಾಲ್ಕು ದಿವಸ ಇರಬೇಕೆಂದು ಬರುತ್ತಿದ್ದವನು ಒಂದೆರಡು ದಿವಸಗಳಲ್ಲಿಯೇ ಏನೊ ನೆಪ ಹೇಳಿ ಊರು ಸೇರುತ್ತಿದ್ದ.

ಸುಭದ್ರೆಯ ತಾತ್ಸಾರ ಮತ್ತಷ್ಟು ಆಸೆಯನ್ನು ರಂಗಣ್ಣನಲ್ಲಿ ಕೆರಳಿಸು ತ್ತಿತ್ತು. ಅವಳೆದುರಿಗಿದ್ದಾಗ ತಲೆ ತಪ್ಪಿಸಿಕೊಂಡು ಹೋದೇನೇ ಎಂದವನು ಬಯಸುತ್ತಿದ್ದಂತೆ ಊರು ಸೇರಿದೊಡನೆಯೇ ಅವಳ ಧ್ಯಾನ, ಚಿಂತೆಯಲ್ಲಿ ವಿಲೀನನಾಗುತ್ತಿದ್ದ. ಅವಳನ್ನು ನೋಡಿಯೇನೇ ಎಂದು ಅವನ ಮನಸ್ಸು ಕಾತುರಪಡುತ್ತಿತ್ತು.

ಒಂದೆರಡು ಸಲ ಬೆಂಗಳೂರಿಗೆ ಬಂದು, ಸುಭದ್ರಾ ಟೆನಿಸ್ ಆಡುತ್ತಿ ರುವುದನ್ನೇ ದೂರದಲ್ಲಿ ನಿಂತು ನೋಡಿ ಊರಿಗೆ ಹಿಂದಿರುಗಿದ್ದ. 'ಅಯ್ಯೋ- ಅವಳನ್ನು ನೋಡಿ ಮಾತನಾಡಿಸದೆ ಹಿಂದಿರುಗುತ್ತಿರುವೆನಲ್ಲಾ' ಎಂದು ಮನಸ್ಸು ಮೊರೆಯುತ್ತಿತ್ತು. 'ಏನೆಂದು ಮಾತನಾಡಿಸಲಿ–ಅವಳು ಪ್ರತ್ಯು ತ್ತರ ಕೊಡದಿದ್ದರೆ'–'ಮುಖವನ್ನತ್ತ ತಿರುಗಿಸಿದರೆ'– ಹೀಗೆ ನೂರಾರು ಸಂಶಯ, ನೂರಾರು ಭಯ.

ರಂಗಣ್ಣನ ಜತೆ ಉಪಾಧ್ಯಾಯರು ಕೆಲವರಿಗೆ ಅವನ ಪೂರ್ವೋತ್ತರ ಗೊತ್ತಿತ್ತು. 'ಶಂಕರ' ಎನ್ನುವ ಹೆಸರು ಬಂದರೆ ಸಾಕು ಅವರು ಮುಸಿ ಮುಸಿ ನಗುತ್ತಿದ್ದರು. ರಂಗಣ್ಣ ಅದನ್ನು ಕಂಡರೂ ಕಾಣದ ಹಾಗೆ ಇರುತ್ತಿದ್ದ.

ಉಪಾಧ್ಯಾಯರಲ್ಲಿ ರಂಗಣ್ಣನ ಬಗ್ಗೆ ಸ್ವಲ್ಪ ಅಭಿಮಾನ ತಾಳಿದ್ದವನು ಹೊಂಬಾಳಯ್ಯ. ಅವನನ್ನು ಜೊತೆಯಲ್ಲಿ ಕರೆದುಕೊಂಡು ರಂಗಣ್ಣ ಆಗಾಗ್ಗೆ ಊರ ಹೊರಗೆ ಗಾಳಿ ಸಂಚಾರಕ್ಕೆ ಹೋಗುತ್ತಿದ್ದ. ತನ್ನ ಮನದಳಲನ್ನು ಉಸುರಿಕೊಳ್ಳಬೇಕೆಂದು ರಂಗಣ್ಣನಿಗೆ ಉತ್ಕಟಾಕಾಂಕ್ಷೆ. ಆದರೆ ಯಾರಲ್ಲಿ ಉಸುರಿಕೊಳ್ಳಬೇಕು?–ಯಾರ ಮುಖದ ಕಡೆ ನೋಡಿದರೂ ಭರ್ತ್ಸನೆಯ ನಗೆಯೇ ತಾಂಡವವಾಡುತ್ತಿತ್ತು. ನನ್ನವರು–ನನ್ನ ಹಿತೈಷಿಗಳು ಎನಿಸಿಕೊಳ್ಳುವವರು ಒಬ್ಬರೂ ಇಲ್ಲವಲ್ಲಾ ಎಂದು ರಂಗಣ್ಣ ಮನಸ್ಸಿನಲ್ಲಿ ಮರುಗುತ್ತಿದ್ದ.

ಹೊಂಬಾಳಯ್ಯನ ಸ್ನೇಹ ಬೆಳಸುವ ಗೋಜಿಗೂ ರಂಗಣ್ಣ ಹೋಗಲಿಲ್ಲ. ಆದರೆ ಹೊಂಬಾಳಯ್ಯನೇ ಮುಂದುವರಿದು ರಂಗಣ್ಣನ ಸ್ನೇಹ ಬೆಳಸಲೆತ್ನಿಸುತ್ತಿದ್ದ. ಅದಕ್ಕೆ ಪ್ರಬಲವಾದ ಕಾರಣಗಳೂ ಇದ್ದುವು. ತಿಂಗಳ ಮೊದಲಿಗೆ ಕೈಸೇರುತ್ತಿದ್ದ ಸಂಬಳ ಹೊಂಬಾಳಯ್ಯನಿಗೆ ಸಾಲುತ್ತಿರಲಿಲ್ಲ. ಅವನ ಸಂಸಾರವೂ ದೊಡ್ಡದು. ಸಹ ಉಪಾಧ್ಯಾಯರು ಅವನಿಗೆ ಸಾಲ ಕೊಟ್ಟು ಕೊಟ್ಟು ಬೇಸತ್ತಿದ್ದರು. ಯಾರಿಂದಲೂ ಮೂರು ಕಾಸು ಬರುವ ಆಸೆ ಉಳಿದಿರಲಿಲ್ಲ. ಒಂದೊಂದು ದಿನ ಹೊಂಬಾಳಯ್ಯ ಇಸ್ಪೀಟಿಗೆ ಕುಳಿತರೆ ಐದಾರು ರೂಪಾಯಿಗಳನ್ನು ಕಳೆದುಕೊಂಡು ಬರುತ್ತಿದ್ದ.

ರಂಗಣ್ಣ ಏಕಾಂಗಿಯಾಗಿದ್ದ. ಹೊಟೇಲಿಗೆ ಅವನು ಕೊಡುತ್ತಿದ್ದ ಹಣ ಬಿಟ್ಟು ಅವನಿಗೆ ಬೇರೆ ಖರ್ಚೇ ಇರಲಿಲ್ಲ. ಹೊಂಬಾಳಯ್ಯನಿಗೆ ರಂಗಣ್ಣ ದೊಡ್ಡ ನಿಧಿಯಾದ. ದುಡ್ಡು ಹೋದರೂ ಚಿಂತೆಯಿಲ್ಲ–ತನ್ನ ಬಗ್ಗೆ ಸಹಾನುಭೂತಿ ಉಳ್ಳವನಾಗಿದ್ದಾನಲ್ಲಾ ಎಂದು ರಂಗಣ್ಣನಿಗೂ ಸಮಾಧಾನ.

"ಎಷ್ಟು ದಿವಸ ಸ್ವಾಮಿ, ಈ ವನವಾಸ ನಿಮಗೆ. ಹೊಟೇಲ್ ಊಟ ಮಾಡಿಕೊಂಡು ಇನ್ನೆಷ್ಟು ದಿವಸ ಆರೋಗ್ಯ ಕಾಪಾಡಿಕೊಳ್ಳಬಲ್ಲಿರಿ?"

"ಏನು ಮಾಡಲಿ ಹೊಂಬಾಳಯ್ಯನವರೇ - ಹೊಟೇಲ್ ಬಿಟ್ಟರೆ

ಸ್ವಯಂಪಾಕಮಾಡಿಕೊಳ್ಳಬೇಕು. ಬೆಳಗಾಗೆದ್ದು ಒಲೆಯ ಮುಂದೆ ಕೂಡುವುದು ಯಾರಿಗೆ ಸಾಧ್ಯ ಹೇಳಿ?"

"ಇದೇಕೆ ಸ್ವಾಮಿ ಹೀಗೆ ಹೇಳುವಿರಿ. ನಿಮ್ಮ ಕುಟುಂಬ ಕರೆಸಿಕೊಳ್ಳಬಾರದೇ?"

ರಂಗಣ್ಣ ನಿಟ್ಟುಸಿರುಬಿಟ್ಟ.

"ಏಕೆ–ಅವರು ಬರುವುದಕ್ಕೆ ಏನು ಅಡಚಣೆ. ನಾನು ಮನೆ ಮಾಡಿಕೊಡುತ್ತೇನೆ."

"ಅದೆಲ್ಲಾ ಆಗತ್ತೆ ಹೊಂಬಾಳಯ್ಯನವರೇ. ನನ್ನ ಕುಟುಂಬ ಕಾಲೇಜಿನಲ್ಲಿ ಓದುತ್ತಿದ್ದಾರೆ. ಅವರ ಓದು ಮುಗಿಯುವ ತನಕ ಅವರು ಬರುವ ಹಾಗಿಲ್ಲ."

"ಅನಂತರವಾದರೂ ಬರುತ್ತಾರೆ ತಾನೆ?"

"ಬರಬಹುದು."

"ಅನುಮಾನವಾಗಿಯೇ ಹೇಳುತ್ತಿರುವಿರಿ."

"ತೌರು ಮನೆಯಲ್ಲಿ ಆಕೆಯನ್ನು ತುಂಬ ಮುದ್ದಿನಿಂದ ಬೆಳೆಸಿದ್ದಾರೆ...."

"ಬೆಳಸಿದ್ದರೆ?....ನಮ್ಮ ಮನೆಯಲ್ಲೆಲ್ಲಾ ಹೆಣ್ಣು ಮಕ್ಕಳನ್ನು ಕಸದ ಹಾಗೆ ಬೆಳಸಿದ್ದಾರೇನು?"

"ಹಾಗಲ್ಲ-ಮ[illegible]ಗೆ [illegible]ವಳೊಬ್ಬಳೇ ಮಗಳು-ಮಗ, ಮಗಳು ಎಲ್ಲಾ ಅವಳೇ."

"ಇರಲಿ–ನೀ[illegible] [illegible]ುವುದು ನನಗೆ ಅರ್ಥವಾಗುತ್ತಿಲ್ಲ."

"ಅರ್ಥ ಇಷ್ಟ[illegible]... ಏನು ಹೋಗಿ ಅಲ್ಲೇ ಇರಬೇಕೆಂದು ನನ್ನ ಅತ್ತೆ ಮಾವಂದಿರ ಇಚ್ [illegible] ಇಲ್ಲಿಗೆ ಬಂದು ಸಂಸಾರ ಮಾ[illegible]ವುದಕ್ಕೆ ಇಷ್ಟ ಪಡುವುದಿ[illegible]."

ಹೊಂಬಾಳ[illegible] ಅವಾಕ್ಕಾದ. ರಂಗಣ್ಣನ ಪರಿಸ್ಥಿತಿ ಕಂಡು ಅವನಿಗೆ ತುಂಬ ಮರುಕವಾಯಿ[illegible].

"ಇದಕ್ಕೇನು ಮಾಡುವಿರಿ–ರಂಗಣ್ಣನವರೇ?"

"ಏನು ಮಾಡುವುದು? ನಾನೇ ಬೆಂಗಳೂರಿಗೆ ಟ್ರಾನ್ಸ್‌ಫರ್ ಕೇಳೋಣ ಎಂತಾ ಇದ್ದೀನಿ."

"ಇದು ಸ್ವಲ್ಪವೂ ಚೆನ್ನಾಗಿಲ್ಲಪ್ಪ."

"ನಿಜ—ಚೆನ್ನಾಗಿಲ್ಲ. ದಾಂಪತ್ಯದಲ್ಲಿ ಯಾರಾದರೂ ಒಬ್ಬರು ಸೋಲಬೇಕು. ನಾನೇ ಸೋತರೆ ಅವಮಾನವೇನು?"

"ಇದೆಂಥ ಸೋಲಾಟ ಸ್ವಾಮಿ—ತೀರ ನಾಚಿಕೆಗೇಡು."

"ನೀವು ಏನು ಮಾಡು ಎನ್ನುವಿರಿ?"

"ಬಂದು ಜತೆಯಲ್ಲಿ ಸಂಸಾರ ಮಾಡು ಎಂದು ಒಂದು ನೋಟೀಸ್ ಕೊಡುವುದು—ಬಂದರೆ ಸರಿಹೋಯಿತು."

"ಬರದಿದ್ದರೆ?"

"ಮದುವೆ ಮುರಿಯುವುದು; ಬೇರೆ ಮದುವೆ ಮಾಡಿಕೊಳ್ಳುವುದು."

"ನೀವು ಹೇಳುವುದು ನಿಜ. ಅದೇ ಲೋಕದ ದಾರಿ—ಆದರೆ....?"

"ಏನು ಆದರೆ?"

"ನನಗೆ ಆಕೆಯ ಮೇಲಣ ಮಮತೆ ಹೋಗಿಲ್ಲ ಹೊಂಬಾಳಯ್ಯನವರೇ. ಏನು ಮಾಡಲಿ ಹೇಳಿ."

ತಿರಸ್ಕಾರ ತುಂಬಿದ ಕರುಣೆಯಿಂದ ಹೊಂಬಾಳಯ್ಯ ರಂಗಣ್ಣನನ್ನೊಮ್ಮೆ ದಿಟ್ಟಿಸಿ ನೋಡಿದ.

೮

ಶ್ರೀನಿವಾಸನ ಸ್ವಭಾವ ಯಾರಿಗೂ ಅರ್ಥವಾಗಿರಲಿಲ್ಲ, ಅರ್ಥವಾಗುವ ಹಾಗೂ ಇರಲಿಲ್ಲ. ಒಬ್ಬನೇ ಮಗನೆಂದು ತಂದೆಗೆ ಅಚ್ಚುಮೆಚ್ಚು. ಆದರೆ ಸೂರಪ್ಪನವರಲ್ಲಿ ಭಾವನಾವೇಶ ಕಡಿಮೆ—ಇಲ್ಲವೇ ಇಲ್ಲವೆಂದರೂ ತಪ್ಪಾಗುವುದಿಲ್ಲ. ಮಗನಮೇಲೆ ತಮಗಿದ್ದ ಪ್ರೇಮವನ್ನು ವ್ಯಕ್ತಮಾಡುವುದೇ ದೌರ್ಬಲ್ಯದ ಲಕ್ಷಣವೆಂದು ಅವರು ಭಾವಿಸಿದ್ದರು. ಅವರ ಜೀವಮಾನವೆಲ್ಲಾ ಕಕ್ಷಿಗಾರರೊಂದಿಗೆ ಕಳೆದುಹೋಗಿದ್ದುದರಿಂದ ಇಡಿಯ ವಿಶ್ವವೇ ತಮ್ಮ ಕಕ್ಷಿಗಾರರ ತಂಡ ಎಂದು ಅವರು ಭಾವಿಸುವುದೂ ಸ್ವಾಭಾವಿಕವಾಗಿಯೇ ಇತ್ತು.

ಒಮ್ಮೊಮ್ಮೆ ಬಳಿಯಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದ ಮಗನನ್ನು ಗೌರವ ...ವನು ಆಸೆ, ಆದರ, ಹೆಮ್ಮೆ, ಅಂತಃಕರಣದಿಂದ ನೋಡುತ್ತಿದ್ದರು. ...ನು ಓದುತ್ತಿದ್ದ ಯಾವದಾದರೂ ಗ್ರಂಥದ ಭಾಗ ರಮ್ಯವಾಗಿ

ಕಂಡು ಬಂದರೆ, ಗಾಂಧಿ, ನೆಹ್ರೂ ಅವರಂಥ ಹಿರಿಯರು ಒಂದು ಒಳ್ಳೆಯ ವಿಚಾರ ಪ್ರತಿಪಾದಿಸಿದ್ದರೆ ಅದನ್ನು ಯಾರಲ್ಲಿಯಾದರೂ ಹೇಳಿಕೊಂಡ ಹೊರತೂ ಶ್ರೀನಿವಾಸನಿಗೆ ತೃಪ್ತಿಯಿಲ್ಲ. ಮನೆಯಲ್ಲಿ ಅವನ ಕೈಗೆ ಗೌರಮ್ಮನವರಲ್ಲದೆ ಯಾರೂ ಸಿಕ್ಕುತ್ತಿರಲಿಲ್ಲ. ಅವರಿಗೆ ತನ್ನ ವಿಚಾರಗಳನ್ನೊಪ್ಪಿಸಿಬಿಡುತ್ತಿದ್ದ.

ಶ್ರೀನಿವಾಸ ಹೇಳುತ್ತಿದ್ದುದನ್ನು ಅರ್ಥಮಾಡಿಕೊಳ್ಳುವಷ್ಟು ಬುದ್ಧಿ ಗೌರಮ್ಮನವರಲ್ಲಿ ಜಾಗ್ರತವಾಗಿರಲಿಲ್ಲ. ಅವನು ಮಾತಿನ ಭರದಲ್ಲಿ 'ಲೀಗ್ ಆಫ್ ನೇಷನ್ಸ್' – 'ಲೆನಿನ್' – 'ಕೋಮಿನ್‌ಟಂಗ್' ಎಂದರೆ 'ಹಾಗಂದರೇನೋ ಮಗೂ ?' ಎಂದು ಮುಗ್ಧರಾಗಿ ಕೇಳುತ್ತಿದ್ದರು. ಶ್ರೀನಿವಾಸನಿಗೆ ಗಂಟಲು ಹಿಡಿದಂತಾಗುತ್ತದೆ. ನಗುತ್ತಾ ತಾಯಿಯನ್ನು ನೋಡಿ

"ಎಷ್ಟು ದಡ್ಡೀಯೇ ಅಮ್ಮಾ....ಈ ಕಾಲದ ಮಿಡ್ಲ್‌ಸ್ಕೂಲ್ ಹುಡುಗಿಯರು ಕೂಡ ನಿನಗಿಂತ ಜಾಣೆಯರಾಗಿರುತ್ತಾರಲ್ಲೇ."

"ನೀನು ನನ್ನ ಹೊಟ್ಟೆಯಲ್ಲಿ ಹುಟ್ಟುತ್ತೀಯೆಂದು ತಿಳಿದಿದ್ದರೆ ಸ್ವಲ್ಪ ಜಾಣೆಯಾಗಲು ಪ್ರಯತ್ನಿಸುತ್ತಿದ್ದೆ....ಮುಂದಿನ ಜನ್ಮಕ್ಕೆ ನೀನು ಒಳ್ಳೆ ಜಾಣೆಯಾದ ತಾಯಿ ಹೊಟ್ಟೆಯಲ್ಲಿ ಹುಟ್ಟು."

"ಆ ಮಾತು ಮಾತ್ರ ಹೇಳಬೇಡ. ಜಾಣೆಯಾಗಲಿ, ದಡ್ಡಿಯಾಗಲಿ ನೀನೇ ನನ್ನ ತಾಯಿ--ನನ್ನ ದೇವರು."

ಗಂಭೀರವಾಗುತ್ತಿದ್ದ ಮಗನ ಮುಖ ದಿಟ್ಟಿಸಿ ನೋಡಿ

"ನೀನೂ-ಯಾವಾಗಲೂ ಯೋಚನೆ ಮಾಡುತ್ತೀಯಲ್ಲಾ. ಏನು ಯೋಚನೆ ಮಾಡಬಾರದೇ ?"

"ಒಂದೇ ಎರಡೇ-ನೂರಾರು."

"ಆದೇನಪ್ಪಾ-ಈ ವಯಸ್ಸಿಗೇ ಇಷ್ಟೊಂದು ಯೋಚನೆಗಳು ?"

"ಅದನ್ನೆಲ್ಲಾ ನಿನಗೆ ಇನ್ನೊಂದು ದಿವಸ ನಿಧಾನವಾಗಿ ಹೇಳುತ್ತೀನಮ್ಮಾ — ನನ್ನ ವಿಚಾರಗಳು-ಯೋಚನೆಗಳು ಇನ್ನೂ ಪಕ್ವವಾಗಿಲ್ಲ."

"ಹಿರಿಯರು ಹೇಳುವ ಮಾತು ಸುಳ್ಳಲ್ಲ."

"ಏನು ಮಾತು ಹೇಳುತ್ತಾರೆ."

"ವಯಸ್ಸಾದ ಕೂಡಲೆ ಮಕ್ಕಳಿಗೆ ಮದುವೆ ಮಾಡಿಬಿಡಬೇಕೂಂತ.... ಅವರೋ ಇದೊಂದನ್ನೂ ಕಿವಿಯ ಮೇಲೆ ಹಾಕಿಕೊಳ್ಳಲ್ಲ....ಅವರ ಹತ್ತಿರ ಪ್ರಸ್ತಾಪ ಮಾಡೋಕೆ ನನಗೆ ಭಯ."

ಶ್ರೀನಿವಾಸನಿಗೆ ಭಯವಾಯಿತು. ಮುಖ ಬೆವರಿತು. ಅವನ ಧ್ವನಿಯಲ್ಲಿ ಕರುಣಾರ್ದ್ರತೆ ಮೂಡಿತು.

"ಅಮ್ಮಾ.....ನನಗೊಂದು ದೊಡ್ಡ ಉಪಕಾರ ನೀನು ಮಾಡಬೇಕು."

"ಏನೊ ಅದು ಮಗೂ."

"ಇನ್ನು ಕೆಲವು ವರ್ಷ ನನ್ನ ಮದುವೆ ಪ್ರಸ್ತಾಪ ಮಾಡಬೇಡ."

"ಏಕೆ ?"

"ನಾನು ಬಯಸುವಂತೆ ನನ್ನ ಜೀವನ ಒಂದು ನಿಲುಗಡೆಗೆ ಬಂದ ಹೊರತೂ ಮದುವೆಯಾಗಲು ನನಗಿಚ್ಛೆಯಿಲ್ಲ."

"ಅದು ಆಗುವುದು ಯಾವಾಗ ?"

"ಈಶ್ವರ ಕೃಪೆಯಾದಾಗ ?"

"ನಾಸ್ತಿಕನೆಯೆಂದು ಹೇಳಿಕೊಳ್ಳುತ್ತೀ. ಈಶ್ವರನ ಹೆಸರೇಕೆ ತೆಗೆದು ಕೊಳ್ಳುವೇ ?"

"ನಾಸ್ತಿಕನೂ ಸತ್ಯಧರ್ಮದ ಆರಾಧಕ. ಅವನ ಈಶ್ವರ ಒಂದು ವ್ಯಕ್ತಿಯಲ್ಲ-ಶಕ್ತಿ."

"ನನ್ನ ಸೊಸೆ ಮನೆಗೆ ಬಂದದ್ದು ನಾನು ನೋಡಬೇಡವೇ ?"

"ಬೇಡವೆಂದು ನಾನೆಂದೆನೇ ?"

"ಹಾಗಾದರೆ....?"

"ಸಧ್ಯಕ್ಕೆ ಬೇಡವೆಂದೆ ?"

"ಸಧ್ಯ ಎಂದರೆ ಎಷ್ಟು ವರ್ಷ ಬೇಕಾದರೂ ಆಗಬಹುದು."

"ನೋಡು, ಅಣ್ಣನ ಕಿವಿಯ ಮೇಲೆ ನೀನು ಮದುವೆ ಸುದ್ದಿ ಹಾಕಿದರೆ ಅವರು ಹದಿನೈದು ದಿವಸದಲ್ಲಿ ಎಲ್ಲಾ ಆಯಿತು ಅನ್ನಿಸಿಯೇ ಬಿಡುತ್ತಾರೆ. ಅದಕ್ಕಾಗಿ ನಾನಿಷ್ಟು ಕಳವಳಪಡುತ್ತಿರುವುದು."

"ಆಗಲಿ-ಅವರ ಹತ್ತಿರ ನಾನು ಪ್ರಸ್ತಾಪ ಮಾಡಲ್ಲ. ಆದರೆ ಪರೀಕ್ಷೆ ಮುಗಿದ ಮೇಲೆ ನೀನು ಮದುವೆಗೆ ಒಪ್ಪಿಕೊಳ್ಳಬೇಕು-"

"ಪರೀಕ್ಷೆ ಮುಗಿಯಲಿ"

ಎಂದು ಎದ್ದು ಹೋದ.

ಮದುವೆ ವಿಷಯ ತಾಯಿ ಹೇಳಿದ್ದು ಶ್ರೀನಿವಾಸನಿಗೆ ತಳಮಳವನ್ನುಂಟುಮಾಡಿತು. ತನ್ನ ಮನಸ್ಸಿಗೆ ವಿರುದ್ಧವಾಗಿ ಆಕೆ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದು ಚೆನ್ನಾಗಿ ಬಲ್ಲ. ಆದರೆ 'ಮದುವೆ' ಶಬ್ದವೇ ಅವನಿಗೆ ಶಿಡಿಲಧ್ವನಿಯಾಗಿತ್ತು.

ಶ್ರೀನಿವಾಸ ಯೋಚಿಸುತ್ತ ಕುಳಿತಂತೆ ತೊಟ್ಟಿಯ ದೊಡ್ಡ ಗಡಿಯಾರ ಏಳು ಗಂಟೆ ಹೊಡೆದದ್ದು ಕೇಳಿ ಬಂತು. ಎದ್ದು ಅವಸರವಸರದಲ್ಲಿ ಕೋಟು ತಗುಲಿಸಿಕೊಂಡು ಬೈಸಿಕಲ್ ಹತ್ತಿ ಹೊರಟ.

ಮಿನ್ನಿ ಮಿಲ್ ಹಿಂಭಾಗ ದಾಟಿ ಅರ್ಧ ಮೈಲಿ ಹೋದರೆ ಬಡ ಕಾರ್ಮಿಕರ ವಸತಿಗಳು. ರಸ್ತೆಯಲ್ಲಿ ದೀಪಕ್ಕೂ ಅಭಾವ. ಆರೆಂಟು ಸಾಲು ಮನೆಗಳು ಮಿಲ್ಲಿನವರು ಕಟ್ಟಿಸಿಕೊಟ್ಟಿದ್ದ ವಸತಿಗಳು. ಅವುಗಳು ಇದ್ದುದರಲ್ಲಿ ನೇರವಾಗಿದ್ದವು. ದೀಪ, ನಳದ ವ್ಯವಸ್ಥೆಗಳೂ ಇದ್ದುವು. ಅದರಾಚೆ ನೂರಾರು ಗುಡಿಸಲುಗಳು, ನೂರಾರು ಜಿಂಕ್ ತಗಡು ಹೊದೆಸಿದ ಮನೆಗಳು, ಮಳೆ ಬಂದರೆ ಒಳಗೂ ಹೊರಗೂ ಒಂದೇ ಬಗೆಯ ಜಿನುಗು. ಅಂತಹ ಮನೆಗಳಲ್ಲಿ ಕೂಲಿಗಾರರ ಸಂಸಾರಗಳು ವಾಸಿಸುತ್ತಿದ್ದವು. ಮಳೆ ಬಂದಾಗ ತೋಯುವುದು, ಬಿಸಿಲೇರಿದಾಗ ಒಣಗುವುದೂ ಅವರಿಗೆ ರೂಢಿಯಾಗಿತ್ತು.

ಅಂತಹ ಮನೆಗಳಲ್ಲಿಯೂ ಸಂಸಾರಗಳು ಬೆಳೆಯುತ್ತಿದ್ದವು. ಶುಭಶೋಭನಾದಿ ಮಂಗಳಗೆಲಸಗಳೂ, ಶ್ರಾದ್ಧಾದಿ ಅಮಂಗಳ ಕೆಲಸಗಳೂ ಆಗುತ್ತಿದ್ದವು.

ಮನೆಗಳ ಮುಂದಣ ಕೊಚ್ಚೆ, ಮುಳ್ಳು ತುಂಬಿದ ಬಯಲೇ ಮಕ್ಕಳ 'ಕಿಂಡರ್ ಗಾರ್ಟನ್.' ಅಲ್ಲಿ ಆಡಿ ರೋಗರುಜಿನಾದಿಗಳನ್ನು ಶೇಖರಿಸಿಕೊಂಡು ಬೆಳೆದ ಮಕ್ಕಳು ೭–೮ ವಯಸ್ಸಿಗೆ ಸಂಪಾದನೆಗೆ ಹೋಗುತ್ತಿದ್ದುವು.

ಮನೆಯಲ್ಲಿ ಹತ್ತು ಜನರಿದ್ದರೆ ಹತ್ತು ಜನವೂ ಸಂಪಾದಿಸುತ್ತಿದ್ದರು. ಮೊತ್ತದಲ್ಲಿ ಸಾಕಷ್ಟು ಸಂಪಾದನೆಯಾದರೂ ಸಂಸಾರ ಸುಖವಾಗಿ ಸಾಗುತ್ತಿರಲಿಲ್ಲ. ಕೂಲಿಯ ಮಗುವಿನಿಂದ ಮನೆಯ ಯಜಮಾನನವರೆಗೆ ಸಂಜೆಯಾದರೆ ಕಳ್ಳು ಕುಡಿಯಬೇಕು, ಬಡಿದಾಡಬೇಕು. ಒಬ್ಬರ ಮೇಲೊಬ್ಬರು ಕಳ್ಳು ಚೆಲ್ಲಬೇಕು. ಕುಡಿಯುವುದಕ್ಕೆ ಕಳ್ಳು ಸಾಕಾಗಲಿಲ್ಲವೆಂದು ಮತ್ತೆ ತಂದು ಕುಡಿಯಬೇಕು.

ಕುಡಿತ ನಿಂತರೆ ಸಂಸಾರ ಸುಖವಾಗುವುದು–ಉಳಿಯುತ್ತಿದ್ದ ಹಣ ಹೊಟ್ಟೆಬಟ್ಟೆಗೆ ಸಾಕಾಗುತ್ತಿತ್ತು ಎಂಬುದನ್ನು ಕೂಲಿಗಾರರೂ ಬಲ್ಲರು. ಹಲವು ಹನ್ನೊಂದು ಜನ ಈ ಮಾತನ್ನು ಒತ್ತಿಯೊತ್ತಿ ಅವರ ಕಿವಿಯಮೇಲೆ ಕೂರಿದ್ದರು.

ಬೆಳಿಗ್ಗೆ ೭||ಗೆ ಎದ್ದು ಗಂಜಿಯೂಟ ಮುಗಿಸಿ ಸಂಸಾರ ಮಿಲ್ ದುಡಿತಕ್ಕೆ ಹೋದರೆ ಮಧ್ಯಾಹ್ನ ೧೨||ಗೆ ಮನೆಗೆ ಹಿಂದಿರುಗುತ್ತಿದ್ದರು. ಪುನಃ ೧||ಗೆ ಹೋದರೆ ಸಂಜೆ ೬||ಗೆ ಮನೆಗೆ ಹಿಂದಿರುಗುತ್ತಿದ್ದರು. ದಿನಕ್ಕೆ ೧೧ ಗಂಟೆ ದುಡಿಮೆ ಮಾಡಿ ಮನೆಗೆ ಬಂದಮೇಲೆ ಕೂಲಿಗಾರರ ಮೈಯಲ್ಲಾಗಲಿ ಮನಸ್ಸಿನಲ್ಲಾಗಲಿ ಕಸುವುಳಿಯುತ್ತಿರಲಿಲ್ಲ. ದುಡಿದು ದೇಹದ ಮೇಲೆ ಸ್ಮೃತಿಯಿಲ್ಲದೆ ಬೀಳುವುದೊಂದೇ ಉಪಾಯ. ಮತ್ತೆ ಮಾರನೆಯ ದಿನ ಇದೇ ಕತೆ–ಅದರ ಮಾರನೆಯ ದಿನವೂ ಇದೇ ಕತೆ–ಅವ್ಯಾಹತವಾಗಿ ಸಾಗಿತ್ತು ವಿಷಚಕ್ರ.

ಸಾಮಾನ್ಯ ಕೂಲಿಯಾಗಿದ್ದ ಮುನಿಸ್ವಾಮಿ ಕೆಲವು ವರ್ಷಗಳಿಂದ ಸ್ಪಿಂಡಲ್ ಸೆಕ್ಷನ್ ಮೇಸ್ತ್ರಿಯಾಗಿದ್ದ. ಐದನೆಯ ಫಾರಮ್‌ನವರೆಗೆ ಅವನು ಶಾಲೆಗೂ ಮಣ್ಣು ಹೊತ್ತಿದ್ದ. ಅವನ ಶಿಕ್ಷಣ, ಕಾರ್ಯದಕ್ಷತೆ ನೋಡಿ ಕಾರ್ಯನಿರ್ವಾಹಕರು ಅವನನ್ನು ಕೂಲಿಸ್ಥಿತಿಯಿಂದ ಮೇಸ್ತ್ರಿ ಪಟ್ಟಕ್ಕೇರಿಸಿದ್ದರು.

ಮೇಸ್ತ್ರಿಯಾದ ಮೇಲೂ ಮುನಿಸ್ವಾಮಿ ತಾನು ಕೂಲಿಯಾಗಿದ್ದಾಗ ವಾಸಿಸುತ್ತಿದ್ದ ಜಿಂಕ್ ಮನೆಯಲ್ಲಿಯೇ ವಾಸಿಸುತ್ತಿದ್ದ. ಮನೆ ಸಾಲದೆಂದು ಅಂಥಹದೇ ಇನ್ನೊಂದು ಜಿಂಕ್ ತಗಡಿನ ಕೋಣೆಯನ್ನು ಪಕ್ಕದಲ್ಲಿ ಕಟ್ಟಿಕೊಂಡಿದ್ದ.

ಹೊಸದಾಗಿ ಕಟ್ಟಿದ್ದ ಕೋಣೆಯೇ ಶ್ರೀನಿವಾಸ ಮತ್ತು ಅವನ ಗೆಳೆಯರ ಕಾರ್ಯಕ್ಷೇತ್ರವಾಯಿತು.

ಕೋಣೆಯಲ್ಲೊಂದು ಮುರುಕು ಕಪಾಟು, ಅದರ ಮುಂದೊಂದು ಮುರುಕು ಬೆಂಚು. ಕೋಣೆಯ ಮಧ್ಯೆ ಒಂದು ಮುರುಕು ಮೇಜು, ಮೇಜಿನ ಅತ್ತಿತ್ತ ಒಂದೆರಡು ಬೆಂಚುಗಳು. ಮೇಜಿನ ಮೇಲೆ ಇಂಗ್ಲಿಷ್, ಕನ್ನಡ, ತಮಿಳು ವೃತ್ತ ಪತ್ರಿಕೆಗಳು–ಒಂದು ಕಂದೀಲು.

ಶ್ರೀನಿವಾಸ ಬರುವ ವೇಳೆಗೆ ರಾಮಸ್ವಾಮಿ, ಲೋಕನಾಥನ್, ಮುನಿಸ್ವಾಮಿ ಸೇರಿದ್ದರು. ಅವರು ಆಗಾಗ್ಗೆ ಪತ್ರಿಕೆ ಓದಿ ಅದರ ಕೆಲಭಾಗ ಗಟ್ಟಿಯಾಗಿ ಇತರರಿಗೆ ಓದಿ ಹೇಳಿ ಚರ್ಚೆ ಸಾಗಿಸಿದ್ದರು.

ಶ್ರೀನಿವಾಸ ಬಂದುದನ್ನು ಕಂಡು ರಾಮಸ್ವಾಮಿ "ಇವತ್ತು ಲೇಟಾಯಿತು" ಎಂದ.

"ಹೂ! ಸ್ಕೂಲು ಹುಡುಗರು ಹೇಳುವ ಹಾಗೆ ಲೇಟಾಯಿತು ಎಂದು ಹೇಳಿ ಸುಮ್ಮನಾಗಬೇಕಾಗಿದೆ. ತಾಯಿಯವರ ಜತೆ ಹರಟೆಗೆ ಕುಳಿತೆ. ಹೊತ್ತು ತಿಳಿಯಲಿಲ್ಲ."

"ಚಿಂತೆಯಿಲ್ಲ ಬನ್ನಿ."

ರಾಮಸ್ವಾಮಿ ಮಿಲ್ಲಿನವರು ಕೂಲಿಗಾರರ ಮಕ್ಕಳಿಗೆ ನಡೆಸುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯ. ಒಂದಾನೊಂದು ಕಾಲದಲ್ಲಿ ಹೈಸ್ಕೂಲಿನಲ್ಲಿ ಅವನು ವಿಧ್ಯಾರ್ಥಿಯಾಗಿದ್ದಾಗ ಶ್ರೀನಿವಾಸ ಅವನ ಸಹ- ವಿಧ್ಯಾರ್ಥಿಯಾಗಿದ್ದ. ಮಿಲ್ಲಿನ ಈ ವಿಚಿತ್ರ ಪ್ರಪಂಚಕ್ಕೆ ಶ್ರೀನಿವಾಸನನ್ನು ಎಳೆದವನೇ ರಾಮಸ್ವಾಮಿ.

ಶ್ರೀನಿವಾಸನಿಗೆ ಮಿಲ್ಲಿನವರು ಮಾಡುತ್ತಿದ್ದ ಅನ್ಯಾಯದ ಪರಿಚಯ ಮಾಡಿಕೊಟ್ಟು ಪತ್ರಿಕೆಗಳಿಗೆ ಅವನಿಂದ ಕೆಲವು ಲೇಖನಗಳನ್ನು ಬರೆಸಬೇಕೆಂದು ರಾಮಸ್ವಾಮಿಯ ಉದ್ದೇಶವಾಗಿತ್ತು. ಮಿಲ್ಲಿನ ಸ್ಥಿತಿಗತಿ, ಕೂಲಿಗಾರರ ಸ್ಥಿತಿಗತಿಯನ್ನು ಪರೀಕ್ಷಿಸಿ ಇದರ ಬುಡ ಶೋಧಿಸುವುದು ಒಳ್ಳೆಯದೆಂಗು ಶ್ರೀನಿವಾಸ ಸೂಚಿಸಿದ. ಶೋಧನೆಯ ಕೆಲಸ ಮುಂದುವರಿದಂತೆ ಲೋಕನಾರ್ಥ ಪರಿಚಯವಾಯಿತು.

ಲೋಕನಾರ್ಥ ಫೋರ್ಮ್ಯ ಆಗಿದ್ದವನು ಕೆಲಸ ಕಳೆದುಕೊಂಡು ನಿರುದ್ಯೋಗಿಯಾಗಿದ್ದ. ಕಾರಣ ಬಹಳ ಮಹತ್ವದ್ದೇನಲ್ಲ. ಹೊಸದಾಗಿ ಒಬ್ಬ ಐರೋಪ್ಯ ಅಧಿಕಾರಿ ಪಟ್ಟಕ್ಕೆ ಬಂದ. ಅವನು ಇಂಗ್ಲೆಂಡ್ ಬಿಟ್ಟು ಹೊರಡುವಾಗ, ಅಲ್ಲಿದ್ದ ಕಂಪೆನಿಯ ಡೈರಕ್ಟರುಗಳು ಅವನಿಗೆ ಸಂದೇಶವಿತ್ತಿದ್ದರು.

"ನೀನು ಹೋಗುತ್ತಿರುವುದು ಕೂಲಿಯವರ ದೇಶಕ್ಕೆ. ಅವರಿಗೆ ಸಲಿಗೆ ತೋರಿಸಿದರೆ, ಅವರ ಬಗ್ಗೆ ಸಹಾನುಭೂತಿಯಿಂದ ನಡೆದುಕೊಂಡರೆ ನಾವು ದಿವಾಳಿ ತೆಗೆಯಬೇಕಾಗುತ್ತದೆ. ಜಬರ್‌ದಸ್ತಿನಿಂದ ನಡೆದುಕೊಳ್ಳಬೇಕು.

ಕೂಲಿಗಳನ್ನು ಅವರ ಸ್ಥಾನದಲ್ಲಿಯೇ ಇಟ್ಟಿರಬೇಕು (Put the niggers where they belong.)"

ಅಧಿಕಾರಿ ಧಣಿಗಳ ಮಾತನ್ನು ಅಕ್ಷರಶಃ ಪಾಲಿಸುತ್ತ ಬಂದ. 'ಬ್ಲಡಿ-ಡನ್ಸ್, ಡಾಂಕಿ, ನಿಗ್ಗರ್' ಶಬ್ದಗಳನ್ನುಪಯೋಗಿಸದೆ ಯಾರನ್ನೂ ಮಾತನಾಡಿಸುವುಕ್ಕೇ ಅವನಿಗೆ ಬರುತ್ತಿರಲಿಲ್ಲ.

ಒಂದು ದಿನ ಅವನು ಲೋಕನಾರ್ಥ ಇದ್ದ ಭಾಗದ ಪರೀಕ್ಷಾರ್ಥವಾಗಿ ಬಂದ. ಹರಿದುಹೋದ ನೂಲನ್ನು ಕೂಡಿಸುತ್ತ ಒಬ್ಬ ಹೆಣ್ಣುಮಗಳು ಕುಳಿತಿದ್ದಳು. ಅವಳ ಕಡೆ ತನ್ನ ಮೆರಮೊಂಗು ಬೂಡ್ಸ್ ಕಾಲು ತೋರುತ್ತಾ

"ಈ ಹೆಣ್ಣು ನಾಯಿ (Bitch) ಹೀಗೇಕೆ ಕಾಲ ಕಳೆಯುತ್ತಿದೆ?" ಎಂದು ಕೇಳಿದ. ಸಮೀಪದಲ್ಲಿದ್ದ ಫೋರ್ಮೆನ್ ಲೋಕನಾರ್ಥ

"ಕಾಲ ಕಳೆಯುತ್ತಿಲ್ಲ ಸರ್. ಆಕೆ ನಮ್ಮ ಕೆಲಸಗಾರರಲ್ಲಿ ಬಹಳ ದಕ್ಷಳು. ಹರಿದ ನೂಲನ್ನು ಕೂಡಿಸುತ್ತಿದ್ದಾಳೆ."

"ನನಗೆ ಎದುರುತ್ತರ ಹೇಳುವ ನೀನು ಯಾರು?"

"ಈ ಸೆಕ್ಷನ್ ಫೋರ್ಮೆನ್."

"ಇವಳನ್ನೇಕೆ ವಹಿಸಿಕೊಂಡು ಮಾತನಾಡುತ್ತಿ- ಇವಳು ನಿನ್ನ ಸೂಳೆಯೇನು?"

ಲೋಕನಾರ್ಥನ ಆಪಾದಮಸ್ತಕ ಜೆವರೇರಿತು. ಅವನಿಗೆ ದೇಹದ ಪರವೇ ಮರೆತುಹೋಯಿತು- ಕೈಯಲ್ಲಿದ್ದ ಸ್ಪ್ಯಾನರ್ ಎತ್ತಿ ಸಾಹೇಬನ ತಲೆಗೆ ಬಡಿದ. ಸಾಹೇಬನ ತಲೆಯಿಂದ ರಕ್ತ ಚಿಮ್ಮಿತು. ಅವನು ಅಲ್ಲಿ ನಿಂತು ಜಗಳ ಮುಂದುವರಿಸಲು ಧೈರ್ಯವಾಗಲಿಲ್ಲ. ಸರಸರನೆ ಕಛೇರಿಗೆ ಬಂದು ಕುಳಿತ.

ಅಂದೇ ಸಂಜೆ ಲೋಕನಾರ್ಥಗೂ, ಕೂಲಿ ಹೆಣ್ಣುಮಗಳಿಗೂ ನೋಟೀಸ್ ಜಾರಿಯಾಯಿತು. ಅವರ ಸಂಬಳ ಬಾಕಿ ಹರಿಸಿ ಅವರನ್ನು ಮನೆಗೆ ಕಳಿಸಿದ್ದೂ ಆಯಿತು.

ಇತರ ಕೂಲಿಗಾರರು ಈ ಅನ್ಯಾಯಕ್ಕೆ ತುಟಿಪಿಟಕ್ಕೆನ್ನಲಿಲ್ಲ. ನಿರಪರಾಧಿಗಳಿಗೆ ಆದ ಘೋರಶಿಕ್ಷೆ ಕಂಡು ಅವರ ಮನದಲ್ಲಿ ತಲ್ಲಣವಾಗಿತ್ತು. ಆದರೆ ಅಧಿಕಾರವರ್ಗ ಅವರನ್ನು ವಜ್ರಮುಷ್ಟಿಯಲ್ಲಿ ಹಿಡಿದಿತ್ತು. ಕೂಲಿಗಾ

ರರು ಸಂಘಟಿತರಾಗಿರಲಿಲ್ಲ. ಅವರ ಕಷ್ಟ ಸುಖಗಳಿಗಾಗಿ ಹೊಡೆದಾಡುವ ಸಂಸ್ಥೆ, ವ್ಯಕ್ತಿಯಿರಲಿಲ್ಲ. ಅಧಿಕಾರವರ್ಗದ ದಬ್ಬಾಳಿಕೆಯನ್ನು ನಿರ್ಜೀವ ಪಶುಗಳಂತೆ ಸಹಿಸಿಕೊಂಡು ಕೂಲಿಗಾರರು ಸುಮ್ಮನಾಗಿದ್ದರು.

ಶ್ರೀನಿವಾಸ ನಿಯೋಜಿಸಿಕೊಂಡಿದ್ದ ಕೆಲಸಕ್ಕೆ ಲೋಕನಾಥನಿಂದ ತುಂಬ ನೆರವು ದೊರೆಯಿತು. ಆತನ ಅನುಭವ, ವ್ಯಾಸಂಗ, ತಂತ್ರ ನೈಪುಣ್ಯಗಳಿಂದ ಶ್ರೀನಿವಾಸ ತುಂಬ ಪ್ರಯೋಜನ ಪಡೆಯುತ್ತಿದ್ದ.

ಕಾರ್ಮಿಕರನ್ನು ಒಟ್ಟುಗೂಡಿಸಿ, ಅವರಿಗೆ ಅವರ ಜವಾಬ್ದಾರಿಯ ಅರಿವು ಮಾಡಿಕೊಟ್ಟು, ಕಾರ್ಮಿಕರ ಒಂದು ಬಲಿಷ್ಠ ಸಂಸ್ಥೆಯನ್ನು ಕಟ್ಟಬೇಕೆಂದು ಲೋಕನಾಥನ ಉತ್ಕಟಾಕಾಂಕ್ಷೆಯಾಗಿತ್ತು.

"ಸದ್ಯಕ್ಕೆ ಎಲ್ಲ ಮಿಲ್ಲುಗಳ ಫೋರ್ಮನ್‌ಗಳು, ಮೇಸ್ತ್ರಿಗಳನ್ನು ಬರಮಾಡಿಕೊಂಡು ಒಂದು ಸಂಘವನ್ನೇತಕ್ಕೆ ಸ್ಥಾಪಿಸಬಾರದು ?"

ಎಂದು ಕೇಳಿದ. ಸಂಘ ಸ್ಥಾಪನೆಯ ವಿಷಯ ಲೋಕನಾಥ ಈ ಮೊದಲೇ ಮುನಿಸ್ವಾಮಿಯೊಂದಿಗೆ ಚರ್ಚಿಸಿ ಅವನ ಸಹಾನುಭೂತಿಯನ್ನು ದೊರಕಿಸಿಕೊಂಡಿದ್ದ. ರಾಮಸ್ವಾಮಿಯ ಅಭಿಪ್ರಾಯ ಕೇಳಿದಾಗ ಅವನು

"ಶ್ರೀನಿವಾಸರನ್ನು ಕೇಳಿ. ಅವರು ಹೇಗೆ ಹೇಳಿದರೆ ಹಾಗೆ ಮಾಡೋಣ"

ಎಂದ. ನಿರ್ಣಯ ಕೊಡುವ ಭಾರ ಶ್ರೀನಿವಾಸನ ಮೇಲೆ ಬಿತ್ತು. ಆವನು ಕೂಲಂಕಷವಾಗಿ ಈ ವಿಷಯ ಯೋಚನೆಮಾಡಿ ಹೇಳಿದ.

"ಸಂಘದ ಅವಶ್ಯಕತೆ ದಿನದಿನಕ್ಕೆ ಹೆಚ್ಚುತ್ತಿದೆ. ಕಾರ್ಮಿಕರ ಒಂದು ಸುಸಂಘಟಿತ, ಸುಸಜ್ಜಿತ ಸಂಸ್ಥೆಯಿದ್ದರೆ ಲೋಕನಾಥ ಪ್ರಕರಣದಂಥ ಪ್ರಕರಣವಾಗುವುದು ದುಸ್ಸಾಧ್ಯ. ಆದರೆ ಕಾರ್ಮಿಕರು ಸಂಘಟಿತರಾಗಲು ಸಿದ್ಧರಾಗಿದ್ದಾರೆಯೇ ?"

"ಅದನ್ನು ಈಗಲೇ ಹೇಗೆ ನಿಶ್ಚಯಿಸುವುದು. ಅವರನ್ನು ಕೂಡಿಸಿ, ಬಲಪಡಿಸಿದ ಮೇಲಲ್ಲವೇ ಈ ವಿಷಯ ವ್ಯಕ್ತವಾಗುವುದು."

"ಸರಿ, ಲೋಕನಾಥ. ಸಂಘ ನಾವು ಸ್ಥಾಪಿಸುವುದಕ್ಕೆ ಮಾಲಿಕರ ಕಡೆಯಿಂದ ಎಷ್ಟು ಅಡ್ಡಿ ಆತಂಕ ಬರುವುದೆಂಬುದನ್ನು ಯೋಚಿಸಿರುವಿರಾ?"

"ಯೋಚಿಸಿರುವೆ. ಅವರು ಈ ಪ್ರಯತ್ನ ಕೈಗೂಡದಿರಲು ಎಲ್ಲಾ ಅಸ್ತ್ರಗಳನ್ನೂ ಪ್ರಯೋಗಿಸುವರು."

"ಅವರ ಅಸ್ತ್ರಗಳನ್ನು ತಡೆಗಟ್ಟಲು ನಾವು ಮೊದಲು ಒಂದು ಗುರಾಣಿ ಸಿದ್ಧಪಡಿಸಿಕೊಳ್ಳಬೇಕಲ್ಲವೇ ?"

"ಸಿದ್ಧಪಡಿಸಿಕೊಳ್ಳದೇ ಉಂಟೇ?" ಎಂದು ರಾಮುಸ್ವಾಮಿ ಸೇರಿಸಿದ.

"ನಾಳೆ ನಾವು ಸಂಘ ಸ್ಥಾಪಿಸಿ ಮಾಡುವುದಾದರೂ ಏನು ? ಅದರ ಕೆಲಸ ಕಾರ್ಯಗಳನ್ನು ನಿರ್ವಹಿಸುವವರು ಯಾರು? ನಿರ್ವಹಿಸುವವರ ದಕ್ಷತೆ ಯೇನು? ಅವರು ಕೈಗೊಂಡ ಕೆಲಸವನ್ನು ಆತ್ಮಾರ್ಪಣ ಭಾವದಿಂದ ಮುಂದು ವರಿಸಬಲ್ಲರೇ ?"

"ಆ ಕೆಲಸ ನಾವು ಮಾಡಬಹುದೆಂದು ಕಾಣುತ್ತದೆ."

"ನೀವು ಮಾಡಲಾರಿರಿ ಎಂದು ನಾನು ಸೂಚಿಸುತ್ತಿಲ್ಲ. ಆದರೆ ನಿಮ್ಮಂಥ ನೂರಾರು ಜನ ಬೇಕು ಈ ಕೆಲಸಕ್ಕೆ. ಇನ್ನೊಂದು ಆಲೋಚಿಸತಕ್ಕ ವಿಷಯವಿದೆ. ಈಗ ನಾವು ಸಂಘ ಸ್ಥಾಪನೆಯ ಪ್ರಯತ್ನಮಾಡಿ ವಿಫಲ ರಾದರೆ ನಾಳೆ ಇತರರು ಪ್ರಯತ್ನಪಡದಂತಾಗುತ್ತದೆ. ಮುಂದೆ ಆಗುವ ಕೆಲಸಕ್ಕೂ ನಾವು ಅಡ್ಡಿ ತಂದ ಹಾಗಾಗುತ್ತದೆ."

"ಹಾಗಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ" ಎಂದು ಮುನಿಸ್ವಾಮಿ ಹೇಳಿದ. ಶ್ರೀನಿವಾಸನ ವಾದದ ಧೋರಣೆಯನ್ನರಿತ ಲೋಕ ನಾಥ

"ನಿಮ್ಮ ಸಲಹೆಯೇನು ?"

"ನನ್ನ ಸಲಹೆ ನಿಮ್ಮ ಮುಂದಿಡುತ್ತೇನೆ. ಸೂಕ್ತ ಕಂಡರೆ ನಾನು ಸೂಚಿಸುವಂತೆ ಆಚರಿಸಿರಿ. ಸೂಕ್ತ ಕಾಣಬರದಿದ್ದರೆ ನೀವು ಹೇಳಿದಂತೆ ನಡೆಯಲು ನಾವು ಸಿದ್ಧ. ಯಾವ ಕಾರಣಕ್ಕೂ ನಮ್ಮಲ್ಲಿ ಭಿನ್ನಾಭಿಪ್ರಾಯ ಬರಬಾರದು"

"ಒಪ್ಪಿಗೆ - ಹೇಳಿ"

"ಸದ್ಯ ನಾವು ನಾಲ್ವರು ಕಾರ್ಮಿಕ ಸಮಸ್ಯೆಗಳು, ಜಗತ್ತಿನ ಕಾರ್ಮಿ ಕರ ಚಟುವಟಿಕೆಗಳು, ಸಂಘಟನೆ, ಕಾರ್ಮಿಕ ಸಿದ್ಧಾಂತದ ಆಗುಹೋಗು ಗಳನ್ನು ಅಭ್ಯಾಸಮಾಡುತ್ತಿದ್ದೇವೆ. ಅಭ್ಯಾಸವನ್ನೇ ಇನ್ನೂ ಕೆಲವು ದಿವಸ ಮುಂದುವರಿಸೋಣ. ಬೆಂಗಳೂರಿನಲ್ಲಿ ಎಷ್ಟು ಕಾರ್ಖಾನೆಗಳು, ಮಿಲ್ಲುಗಳು, ಫ್ಯಾಕ್ಟರಿಗಳಿವೆ ಲೆಕ್ಕ ಹಾಕುವ. ಅವುಗಳಿಂದ ಇಬ್ಬಿಬ್ಬರು ಪ್ರತಿನಿಧಿಗಳನ್ನು ಖಾಸಗಿಯಾಗಿ ಬರಮಾಡಿಕೊಂಡು ಅವರಿಗೂ ಕಾರ್ಮಿಕ ಸಿದ್ಧಾಂತದ ಪರಿ

ಚಯ ಮಾಡಿಕೊಡೋಣ. ಪ್ರಾಯಶಃ ಇನ್ನು ಒಂದು ವರ್ಷದಲ್ಲಿ ನಮ್ಮ ಬಲ ನೂರಕ್ಕೆ ಮಿರುವುದು. ನಾವು ನೂರು ಜನ, ಒಂದು ಮನವಾಗಿ ಒಂದು ಪ್ಯೈಯಾಗಿ ಸಂಘದ ಕೆಲಸವನ್ನಾರಂಭಿಸೋಣ"

"ಯೋಚನೆ ಚೆನ್ನಾಗಿದೆ. ಆದರೆ ಮಾಲಿಕರು ಇನ್ನೊಂದು ವರ್ಷ ತೆಪ್ಪಗೆ ಕೂಡುವರೆಂದು ಭಾವಿಸುವಿರಾ. ಆ ವೇಳೆಗೆ ಅವರೇ ಒಂದು ಸಂಸೆ ಹುಟ್ಟಿ ಹಾಕಿದರೆ ?"

"ಅವರು ಒಂದು ಸಂಸ್ಥೆ ಹುಟ್ಟಿ ಹಾಕುವುದಂತೂ ಖಂಡಿತ. ನಮ್ಮ ಸಂಸ್ಥೆ ಹುಟ್ಟುವುದಕ್ಕೆ ಮೊದಲೋ, ಹುಟ್ಟಿದ ಮೇಲೋ ಅವರ ಸಂಸ್ಥೆ ಜನ್ಮ ತಾಳೇ ತಾಳುತ್ತದೆ. ಅದರ ಬಲದಿಂದ ನಮ್ಮನ್ನು ಮುರಿಯಲು ಅವರು ಯತ್ನಿಸುತ್ತಾರೆ. ಆ ಗಂಡಾಂತರಕ್ಕೆ ನಾವು ಸಿದ್ಧವಾಗಿರಬೇಕು. ಅದಕ್ಕೇ ನಾನು ಹೇಳಿದ್ದು, ಸಂಘಕ್ಕಿಂತ ಮೊದಲು ಸಾಂಘಿಕರ ಸಂಘಟನೆ ?"

"ಇನ್ನೊಂದು ಕೆಲಸ ಈ ಮಧ್ಯೆ ಏಕೆ ಮಾಡಬಾರದು ?" ಎಂದು ರ್‍ಹಾಮಸ್ವಾಮಿ ಕೇಳಿದ.

"ಹೇಳಿ—ಏನದು ?"

"ಕೂಲಿಗಾರರು ತಮ್ಮ ತಮ್ಮ ಕೇರಿಗಳಲ್ಲಿ ಭಜನೆ ಮನೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಪ್ರತಿ ಶನಿವಾರ ಸೇರಿ ಭಜನೆ, ಪುರಾಣ, ಹರಿಕಥೆ ಮಾಡಿಸುತ್ತಾರೆ. ಈ ಕೂಟಗಳನ್ನು ನಾವೇಕೆ ಉಪಯೋಗಿಸಿಕೊಳ್ಳ ಬಾರದು."

"ಬಹಳ ಒಳ್ಳೆಯ ಯೋಚನೆ. ಸದ್ಯಕ್ಕೆ ಮಾಲಿಕರಿಗಾಗಲಿ ಕೂಲಿ ಗಾರರಿಗಾಗಲಿ ಅನುಮಾನ ಬರದಂತೆ ಉಪಯೋಗಿಸಿಕೊಳ್ಳಬೇಕು. ಅವರಿಗೆ ಅನುಮಾನ ಬಂದರೆ ನಮ್ಮ ಕೆಲಸ ಕೆಡುತ್ತದೆ"

"ಅದಕ್ಕೊಂದೇ ಉಪಾಯ. ರಾಮಾಯಣ, ಭಾರತ ಕಥೆ ಹೇಳು ವಾಗ ಮಧ್ಯೆ ಮಧ್ಯೆ ನಮ್ಮ ತತ್ವ ಸೇರಿಸಿ ಉಪದೇಶ ಮಾಡುವುದು"

"ಹಾಗೇ ಮಾಡಬೇಕು. ರಾಮಾಯಣ, ಭಾರತ ಬಿಟ್ಟು ಮಾತ ನಾಡಿದರೆ ನಮ್ಮ ಜನಕ್ಕೆ ಅರ್ಥವಾಗುವುದಿಲ್ಲ"

ಭಜನೆ ಮನೆಗಳನ್ನು ಸದ್ಯಕ್ಕೆ ಪ್ರಚಾರ ಕ್ಷೇತ್ರವನ್ನಾಗಿ ಉಪಯೋಗಿಸಿ ಕೊಳ್ಳಬೇಕೆಂಬ ನಿರ್ಧಾರಕ್ಕೆ ಎಲ್ಲರೂ ಬಂದರು. ಶ್ರೀನಿವಾಸ ಜಗತ್ತಿನ ಕಾರ್ಮಿಕ ಸಂಸ್ಥೆಗಳ ಇತಿಹಾಸವನ್ನು ಮುಂದಿಟ್ಟುಕೊಂಡು ತಮ್ಮ ಸ್ಥಿತಿ ಗನುಗುಣವಾಗುವ ಕಾರ್ಯ ವಿಧಾನವನ್ನು ರಚಿಸುವುದರಲ್ಲಿ ಉದ್ಯುಕ್ತನಾದ.

# ೯

ಸುಭದ್ರೆಯ ಕನಸನ್ನು, ಆಸೆ–ಬಯಕೆಗಳನ್ನು, ನಿರ್ದಾಕ್ಷಿಣ್ಯವಾಗಿ, ನಿರ್ಮಮತೆಯಿಂದ ಶ್ರೀನಿವಾಸ ಒಡೆದುಬಿಟ್ಟಿದ್ದ. ಅವಳು ಅವನನ್ನು ಕೇವಲ ಸಹಾಧ್ಯಾಯಿಯೆಂದು ನೋಡುತ್ತಿರಲಿಲ್ಲ. ಆ ಬಾಂಧವ್ಯಕ್ಕೂ ಹೆಚ್ಚಿನ ಹಾರ್ದಿಕವಾದ ಬಾಂಧವ್ಯವನ್ನು ಮಾನಸಿಕವಾಗಿ ಬೆಳಸಿಕೊಂಡಿದ್ದಳು.

ಅವಳು ನಿಂತರೆ, ಕುಳಿತರೆ, ಮಲಗಿದರೆ, ಓದಲು ಕುಳಿತರೆ ಶ್ರೀನಿವಾಸ ಎದುರು ನಿಲ್ಲುತ್ತಿದ್ದ. ಅವನ ಗಂಭೀರವದನ, ತೂಕವಾದ ಮಾತುಗಾರಿಕೆ, ಅಂತಃಕರಣಪೂರಿತ ಕಣ್ಣಿನ ನೋಟ, ತೀಕ್ಷ್ಣವಾದ ಸತ್ಯಪ್ರೇಮ ಅವಳನ್ನು ಎಡೆಬಿಡದೆ ಕಾಡಿಸುತ್ತಿತ್ತು.

ಆದರೆ ಅವನ ಕಲ್ಲು ಮನಸ್ಸು ಅವಳನ್ನು ಅಧೀರಳನ್ನಾಗಿ ಮಾಡಿತ್ತು. ಅವನ ಧರ್ಮದೃಷ್ಟಿ ಕಂಡು ತಿರಸ್ಕಾರ ಹುಟ್ಟಿತ್ತು. 'ಅವನೆಂಥ ಮೂರ್ಖ' ಎಂದು ಉಪೇಕ್ಷೆ ತೋರಲೆತ್ನಿಸುತ್ತಿದ್ದಳು. ಮರುಕ್ಷಣವೇ ಒಳಗೆ ಹುದುಗಿದ್ದ ಭಾವನೆ ಪುಂಖಾನುಪುಂಖವಾಗಿ ಹೊರಟು ಅವಳ ಚಿತ್ತವನ್ನು ದಹಿಸುತ್ತಿತ್ತು. 'ಅವನು ಮೂರ್ಖನಾದರೇನು, ಕಡುಜಾಣನಾದರೇನು–ನನ್ನಿಂದ ದೂರವಾಗಿದ್ದಾನೆ–ನನ್ನ ಬಳಿ ಸುಳಿಯಲೊಲ್ಲ' ಎಂಬ ಸತ್ಯ ಹೊಳೆದು ಅವಳನ್ನು ಬಹು ಖಿನ್ನಳಾಗಿ ಮಾಡುತ್ತಿತ್ತು.

ಸೂರಪ್ಪನವರ ಮನೆಗೆ ವೆಂಕಪ್ಪಯ್ಯ ನಿತ್ಯ ಹೋಗಿ ಬರಲೇಬೇಕಾಗಿತ್ತು. ಯಾವದಾದರೂ ಒಂದು ಕೇಸು ಅವರನ್ನು ಬೆಸೆಯುತ್ತಿತ್ತು. ಸೂರಪ್ಪನವರ ಮನೆಯಿಂದ ಹಿಂದಿರುಗಿದ ಮೇಲೆ ಮಗಳಿಗೆ ಅಲ್ಲಿ ನಡೆದುದೆಲ್ಲವನ್ನೂ ನಾದ್ಯಂತ ವರ್ಣಿಸಿದ ಹೊರತೂ ವೆಂಕಪ್ಪಯ್ಯನವರಿಗೆ ಸಮಾಧಾನವಿಲ್ಲ. ಮಧ್ಯೆ ಮಧ್ಯೆ ಯಾವದಾದರೂ 'ಲಾ ಪಾಯಿಂಟಿ'ನ ಮೇಲೆ ಸೂರಪ್ಪನವರಿಗೆ 'ಬೆಸ್ತು' ಕೊಟ್ಟಿದ್ದರೆ ಅದನ್ನು ಬೆಳಸಿ ಹೇಳಿ ಮಗಳಿಂದ ಶಹಭಾಸಗಿರಿ ಪಡೆಯದೆ ಅವರ ಮನಸ್ಸಿಗೆ ತೃಪ್ತಿಯಿಲ್ಲ.

ಸುಭದ್ರಾ ತಂದೆಯ ಆತ್ಮಪ್ರಶಂಸೆಯನ್ನು ಶಾಂತಳಾಗಿ ಲಾಲಿಸುತ್ತಿದ್ದಳು. ಅನವಶ್ಯಕ ವಿಷಯಗಳನ್ನು ಹೇಳಿ ಹೇಳಿ ತನ್ನ ಬೇಸರಿಸುತ್ತಾರಲ್ಲಾ ಎಂದು ತಂದೆಯ ಮೇಲೆ ಕೋಪ. ಅವರು ಹೇಳಿದುದೆಲ್ಲಾ ಮುಗಿಯುತ್ತ ಬಂದಿರಲು

"ಶ್ರೀನಿವಾಸ ಏನು ಮಾಡುತ್ತಿದ್ದರು ?" ಎಂದು ಕೇಳುತ್ತಿದ್ದಳು.

"ಮನೆಗೇ ಬಂದಿರಲಿಲ್ಲಮ್ಮ."

"೯ ಗಂಟೆಯಾದರೂ......"

"'ಅವನು ಯಾವಾಗ ಬರುವನೋ ಯಾವಾಗ ಹೋಗುವನೋ ದೇವರೇ ಬಲ್ಲ' ಎಂದು ಅವನ ತಾಯಿ ಉದ್ಗಾರ ತೆಗೆಯುತ್ತಾರೆ."

ಸಂಜೆ ೭॥–೮ ಗಂಟೆಯಾದರೆ ಸಾಕು–ಶ್ರೀನಿವಾಸ ಯೂನಿಯನ್ನಿನಲ್ಲಿರಲಿ, ಗೆಳೆಯರ ಮಧ್ಯೆಯಿರಲಿ, ಕೂಡಲೆ ಬೈಸಿಕಲ್ ಹತ್ತಿ ಹೊರಟುಬಿಡುತ್ತಿದ್ದುದನ್ನು ಸುಭದ್ರೆಯೇ ಕಣ್ಣಾರೆ ಕಂಡಿದ್ದಳು.

ಮೊದಲೇ ಅಸ್ತವ್ಯಸ್ತವಾಗಿದ್ದ ಅವಳ ಮನಸ್ಸು ಮತ್ತಷ್ಟು ಅಶಾಂತವಾಗುತ್ತಿತ್ತು.

ಅವಳ ಮನಸ್ಸಿಗೆ ಒಂದು ಸಂಶಯ ತಟ್ಟಿತು.

'ಅವನು, ಇನ್ನು ಯಾವದಾದರೂ ಸಂಬಂಧ ಬೆಳೆಸಿಕೊಂಡಿರಬಹುದೇ ?'

'ಇಲ್ಲ ಇಲ್ಲ'ವೆಂದು ತಾನೇ ಸಮಾಧಾನ ಹೇಳಿಕೊಳ್ಳುವಳು. 'ಇಲ್ಲದಿದ್ದರೆ ಏಕೆ ಈ ಆತುರ–ಈ ಚಂಚಲತೆ–ಈ ಗಾಬರಿ–ಈ ಗೋಪ್ಯತೆ' ಎಂದು ಪ್ರಶ್ನೆ ಹಾಕಿಕೊಳ್ಳುವಳು.

ತಲೆಯಲ್ಲಿ ವಿಚಾರ ಸುಳಿದೊಡನೆಯೇ ಅದರ ಬುಡಶೋಧನೆ ಮಾಡದೆ ಬಿಡುವುದು ಸುಭದ್ರೆಯ ಜಾಯಮಾನಕ್ಕೆ ಬಂದುದಲ್ಲ. ಸಂಜೆಯವರೆಗೂ ಇದೇ ವಿಚಾರ ಅವಳ ತಲೆಯಲ್ಲಿ ಸುಳಿದಾಡಿತು.

ಸಂಜೆ ಟೆನಿಸ್ಸಿಗ ಕರೆದೊಯ್ಯುವುದಕ್ಕೆ ಶಂಕರ್ ಬಂದ. ಸುಭದ್ರಾ ವಸ್ತ್ರಭೂಷಿತಳಾಗಿ ಹೊರಡಲು ಸಿದ್ಧಳಾಗಿರಲಿಲ್ಲ.

"ಏಕೆ ಸುಭಾ–ಟೆನಿಸ್ಸಿಗೆ ಬರುವುದಿಲ್ಲವೆ ?"

"ಏಕೋ ತಲೆನೋವು. ಇವತ್ತು ಬರಲಾರೆ."

"ಮ್ಯಾಚ್ ಹತ್ತಿರ ಬಂತಲ್ಲ."

"ಬರಲಿ ಭಯವೇನು. ನಾಳೆ ಇನ್ನೆರಡು ಸೆಟ್ ಹೆಚ್ಚಾಗಿ ಆಡಿದರಾಯಿತು. ನೀವು ಇವತ್ತು ಟೆನಿಸ್ಸಿಗೆ ಹೋಗಲೇಬೇಕೇ ?"

"ಅಂಥ ಕಡ್ಡಾಯವೇನೂ ಇಲ್ಲ. ಹೋಗದಿದ್ದರೂ ನಡೆಯುತ್ತದೆ."

"ಒಳಗೆ ಬಂದು ಕೂಡಿ–ಹರಟೆಯಾದರೂ ಹೊಡೆಯುವಾ"

"ಆಗಬಹುದು."

ಶಂಕರನಿಗೆ ಬೇಕಾಗಿದ್ದುದು ಅಷ್ಟೇ. ಸುಭದ್ರಾ ಮಾತನಾಡಿಸಿದರೇ ಸಾಕಾಗಿತ್ತು. ಅವಳೇ 'ಒಳಗೆ ಬಾ' ಎಂದ ಮೇಲಂತೂ ಅವನಿಗೆ ಸ್ವರ್ಗ ಕೈಹಿಡಿಯಲ್ಲಿ ಅಡಕವಾದಂತಾಯಿತು.

ಶಂಕರ ಸುಭದ್ರೆಯ ಕೋಣೆಯಲ್ಲಿ ಕುಳಿತು ಅವಳ ಮೇಜಿನ ಮೇಲಿದ್ದ ಪುಸ್ತಕಗಳ ಮೇಲೆ ಕೈಯಾಡತೊಡಗಿದ. ಕಾಫಿ ತೆಗೆದುಕೊಂಡು ಬಂದ ಸುಭದ್ರಾ ಅದನ್ನು ಕಂಡು

"ಇನ್ನೊಬ್ಬರ ಮೇಜು ಕೆದಕುವುದು ಕೆಟ್ಟ ಅಭ್ಯಾಸ ಶಂಕರ್. ನನ್ನ ಅರೇಂಜ್‌ಮೆಂಟ್ಸ್ (arrangements) ಎಲ್ಲಾ ಕೆಡಿಸುತ್ತಿದ್ದೀರಿ."

"ಸಾರಿ—ಕ್ಷಮಿಸಿ"

ಎಂದು ಶಂಕರ ಕೈಗೆ ಕಾಫಿ ಕಪ್ ತೆಗೆದುಕೊಂಡ. ಸ್ವಲ್ಪ ಹೊತ್ತು ಲೋಕಾಭಿರಾಮವಾಗಿ ಹರಟೆ ಸಾಗಿತು. ವೃತ್ತಪತ್ರಿಕೆಗಳಲ್ಲಿ ಬರುವ ರಾಜಕೀಯವಾಯಿತು. ಟೆನಿಸ್ ಮಾತಾಯಿತು. ಕಾಲೇಜ್ ರಾಜಕೀಯಕ್ಕೆ ಇಬ್ಬರೂ ಬಂದಿಳಿದರು. ಪ್ರೊಫೆಸರುಗಳ ಚಾಳಿಗಳು, ವಿಧ್ಯಾರ್ಥಿಗಳ ರೀತಿ ನೀತಿಗಳ ಬಗ್ಗೆ ಟೀಕೆ ಟಿಪ್ಪಣಿಗಳಾದವು. ಅವುಗಳ ಮಧ್ಯೆ ಸುಭದ್ರಾ ಕೇಳಿದಳು

"ಈ ಸಾರಿ ಶ್ರೀನಿವಾಸರಿಗೆ ಪಾಸ್ ಆಗಬಹುದೇ ಶಂಕರ್."

"ಏಕೆ ಹಾಗೆ ಕೇಳುವಿರಿ?"

"ಅವರು ಮನೆಯಲ್ಲಿ ಸ್ಟಡಿ ಮಾಡುವುದೇ ಇಲ್ಲವಂತೆ

"ಬ್ರಿಲಿಯಂಟ್ ಸ್ಟೂಡೆಂಟ್ (Brilliant Student)—ಏಕೆ ಸ್ಟಡಿ ಮಾಡಬೇಕು?"

"ಪರೀಕ್ಷೆಗಳಿಗೆ ಬೇಕಾದದ್ದು ಬ್ರಿಲಿಯನ್ಸ್ ಅಲ್ಲ – ಕಡ್ಡಾಯದ ಓದು."

"ಅವರು ಪಾಸ್ ಮಾಡಿಯೇ ಮಾಡುತ್ತಾರೆಂದು ನನಗೆ ಧೈರ್ಯ. ಕ್ಲಾಸ್ ಬರುತ್ತದೋ ಇಲ್ಲವೋ ಹೇಳಲಾರೆ."

"ಸಂಜೆ ೭-೭॥ ಹೊಡೆಯುವುದಕ್ಕಿಲ್ಲ ಅವರು ಓಡುತ್ತಾರಲ್ಲಾ ಎಲ್ಲಿಗೆ? [illegible]ಲ್ಲಾದರೂ ಹೋಗಿ ಜಾಯಿಂಟ್ ಸ್ಟಡಿ ಮಾಡುತ್ತಿರ ಬಹುದೇ?"

"ಶ್ರೀನಿವಾಸರಿಗೂ ಜಾಯಿಂಟ್ ಸ್ಟಡೀಗೂ ಬದ್ಧ..."

"ಹಾಗಾದರೆ ಎಲ್ಲಿಗೆ ಅಷ್ಟು ಅವಸರದಲ್ಲಿ ಹೋಗುತ್ತಾರೆ?"

"ಅದನ್ನು ನಾನೇನು ಬಲ್ಲೆ."

"ಎಂಥ ಕ್ಲಾಸ್‌ಮೇಟ್‌ರೀ ನೀವು—ನಿಮ್ಮ ಫ್ರೆಂಡ್ ಎಲ್ಲಿಗೆ ಹೋಗುತ್ತಾರೆ—ಏನು ಮಾಡುತ್ತಾರೆ ಅಷ್ಟು ಕೂಡ ನಿಮಗೆ ಗೊತ್ತಿ..."

"ಕಂಡವರ ವ್ಯವಹಾರದಲ್ಲಿ ನಾನೇಕೆ ಕೈಹಾಕಲಿ. ... ವಿಷಯದಲ್ಲಿ ನಿಮಗೇಕಿಷ್ಟು ಆಸಕ್ತಿ."

"ನನ್ನ ಆಸಕ್ತಿ ವಿಷಯ ಬೇಡ. ನೀವು ನನ...ಂದು ಸರ್ವಿಸ್ (Service) ಮಾಡಬೇಕು ?"

"ಹೇಳಿ. ಸಂತೋಷವಾಗಿ ಮಾಡುತ್ತೇನೆ."

"ಖಂಡಿತವಾಗಿ ಮಾಡುವಿರಾ ?"

"ನಿಮಗೆ ಇಲ್ಲವೆನ್ನುವೆನೇ ಸುಭಾ."

"ಸಂಜೆಯಾದ ಮೇಲೆ ಶ್ರೀನಿವಾಸ ಎಲ್ಲಿಗೆ ಹೋಗುತ್ತಾರೆ ಪತ್ತೆಮಾಡಿ ನನಗೆ ತಿಳಿಸಬೇಕು—ಸಾಧ್ಯವೇ ?"

"ಅಂಥ ಅಸಾಧ್ಯವಾದ ವಿಷಯವಲ್ಲ—ಆದರೆ......?"

"ಏನು ಆದರೆ ?"

"ಹಾಗೆ ನಾನು ಸಿ. ಐ. ಡಿ. ಕೆಲಸ ಮಾಡುವುದು ಯುಕ್ತವೇ ?"

"...ವು ಮಾಡುವಿರೋ ಇಲ್ಲವೋ ಹೇಳಿಬಿಡಿ. ನನಗೆ ಪಂಚಾಯಿತಿ ಬೇಕಿಲ್ಲ."

"ಕೋಪಿಸಿಕೊಳ್ಳಬೇಡಿ ಸುಭಾ—ನೀವು ಹೇಳಿದ ಸೇವೆ ಮಾಡುವುದಕ್ಕೆ ನಾನು ಸಿದ್ಧ—ಆದರೆ ಇದು ಶ್ರೀನಿವಾಸರಿಗೆ ಗೊತ್ತಾದರೆ ನನ್ನ ಸ್ನೇಹಕ್ಕೆ ಕಲ್ಲು ಬೀಳುತ್ತದೆ."

"ನಿಮಗೆ ಅವರ ಸ್ನೇಹ ಬೇಕೋ ನನ್ನ ಸ್ನೇಹ ಬೇಕೋ ?"

ಶಂಕರ ನಿರುತ್ತರನಾದ. ಮುಂದೇನು ಮಾಡಬೇಕೆಂದು ಅವನ ಮನಸ್ಸು ನಿರ್ಧರಿಸಿತು.

"ಒಳ್ಳೆಯದು—ನಿಮಗೆ ಹೊತ್ತಾಯಿತೇನೋ ?"

ಎಂದು ಸುಭದ್ರಾ ಸೂಚನೆ ಕೊಟ್ಟಳು. ಶಂಕರ ...ಲ್ಲಿಂದ ಎದ್ದು ಹೊರಟುಬಿಟ್ಟ. ಅವಳಿಗೆ 'ಬಯ್-ಬಯ್' ಹೇಳುವುದನ್ನೂ ಮರೆತುಬಿಟ್ಟ.

ಅವನು ಹೋದ ಹಾದಿ ನೋಡಿ ಸುಭದ್ರಾ ಮುಖ ಸಿಂಡರಿಸಿಕೊಂಡು 'ಹೇಡಿ' ಎಂದಳು.

ದೂರದಲ್ಲಿ ತಂದೆ ಬರುತ್ತಿರುವುದನ್ನು ಕಂಡು ತಲೆಬಾಗಿಲಿನಲ್ಲಿ ನಿಲ್ಲದೆ ಒಳಗೆ ಬಂದಳು.

## ೧೦

ವೆಂಕಪ್ಪಯ್ಯನವರ ಮುಖದಲ್ಲಿ ಗೆಲುವಿರಲಿಲ್ಲ. ಏನೋ ಚಿಂತೆ ಅವರನ್ನು ಕಾಡುತ್ತಿತ್ತು. ಒಳಗೆ ಬಂದವರೇ ಅಂಗಿ ಕಳಚಿ ತೊಟ್ಟಿಯಲ್ಲಿದ್ದ ಬೆತ್ತದ ಆರಾಮಾಸನದ ಮೇಲೆ ಮಲಗಿದರು. ಯೋಚನೆ ಅವ್ಯಾಹತವಾಗಿ ಸಾಗಿತ್ತು.

ಒಮ್ಮೆ ಎದ್ದು ನಶ್ಯದ ಭರಣಿ ತೆಗೆದು ಮೂಗಿಗೆ ಎರಡು ಚಿಟಕಿ ಏರಿಸಿ

"ಅಮ್ಮಯ್ಯ" ಎಂದು ಕೂಗಿದರು.

"ಏನು ಅಣ್ಣಾ" ಎನ್ನುತ್ತಾ ಒಳಗಿನಿಂದ ಸುಭದ್ರಾ ಬಂದಳು.

"ನಿಮ್ಮಮ್ಮನನ್ನೂ ಕರೀ ತಾಯಿ" ಎಂದರು.

ನರಸಮ್ಮನವರು ಒಂದು ಕೈಯಲ್ಲಿದ್ದ ಕೊತ್ತುಂಬರಿ ಕಡ್ಡಿಗಳಿಂದ ಎಲೆಗಳನ್ನು ಬಿಡಿಸುತ್ತಾ ಒಂದು ಪಕ್ಕದಲ್ಲಿ ನಿಂತರು.

"ಕಾವೇರೂ ಎಲ್ಲಿ"

"ಯಾರದೋ ಹರಿಕಥೆಯಂತೆ–ಹೋಗಿದ್ದಾರೆ" ಎಂದು ನರಸಮ್ಮ ಉತ್ತರ ಹೇಳಿದರು.

"ಇದೇನು ವಿನೋದ–ಮಾಡುತ್ತಿದ್ದ ಕೆಲಸ ಬಿಡಿಸಿ ಕರೆಸಿದಿರಿ. ಏನು ಹೇಳೋದಿದೆ ಬೇಗ ಹೇಳಿ ಮುಗಿಸಿ. ನಿಮ್ಮ ಮುಂದೆ ನಿಂತುಕೊಂಡು ಉರುಟಣೆ ಮಾಡುವುದಕ್ಕೆ ನನಗೆ ಪುರಸತ್ತಿಲ್ಲ. ಒಲೆಮೇಲೆ ತರಕಾರಿ ಬೇಯು ಹಾಕಿ ಬಂದಿದ್ದೇನೆ."

ವೆಂಕಪ್ಪಯ್ಯ ಕೋಟಿನ ಕಿಸೆಯಿಂದ ಸಾವಕಾಶವಾಗಿ ಒಂದು ಕಾಗದ ತೆಗೆದು ಸುಭದ್ರನ ಕೈಗಿತ್ತು

"ಇದನ್ನು ನೀನೇ ನಿಮ್ಮ ತಾಯಿಗೆ ಓದಿ ಹೇಳು."

ಎಂದರು. ಸುಭದ್ರಾ ಕಾಗದ ಓದಿಕೊಂಡು ಅದನ್ನು ಮತ್ತೆ ತಂದೆ ಕೈಗಿತ್ತಳು.

"ಯಾರದು ಕಾಗದ" ಎಂದು ನರಸಮ್ಮ ಸಿಡುಕಿನಿಂದಲೇ ಕೇಳಿದರು.

"ನಿನ್ನ ಅಳಿಯನದು."

"ಏನಂತೆ ! ಅವನ ಗೋಳು !"

"ಹೆಂಡತಿಯನ್ನು ಕಳುಹಿಸಿಕೊಡದಿದ್ದರೆ ಕೋರ್ಟಿಗೆ ಹೋಗುತ್ತಾನಂತೆ !"

"ಕೋರ್ಟಿಗೆ ಹೋಗೋ ಮುಖವೇ ಅದು—ಹೋಗು ಎಂದು ಬರೆಯಿರಿ."

"ತಡೆಯೇ ದುಡುಕಬೇಡ–ಅಮ್ಮಯ್ಯನ ಒಂದು ಮಾತು ಕೇಳೋಣ. ಇಷ್ಟು ಹಗುರವಾಗಿ ಮಾತನಾಡಿ ಹಾರಿಸೋ ವಿಷಯವಲ್ಲ ಇದು."

"ನೀನೇನು ಹೇಳುತ್ತೀಯೆ ತಾಯೀ ?"

"ನಾನು ಅವನ ಜನ್ನಪಟ್ಟಣಕ್ಕೋ ಕ್ಲೋಸ್‌ಪೇಟೆಗೋ ಹೋಗಿ ಹೇಗೆ ಸಂಸಾರ ಮಾಡಲಿ ಅಣ್ಣಾ ...ಅಲ್ಲದೆ ನನ್ನ ಪರೀಕ್ಷೆ ಮುಂದೆ ಇಟ್ಟುಕೊಂಡು."

"ಪರೀಕ್ಷೆ ಮುಗಿದಮೇಲೆ."

"ಆಮೇಲೂ ಸಾಧ್ಯವಿಲ್ಲ."

ಎಂದು ನರಸಮ್ಮ ನುಡಿದರು. ವೆಂಕಪ್ಪಯ್ಯ ಹೆಂಡತಿಯ ಕಡೆ ಒಂದು ತೀಕ್ಷ್ಣ ನೋಟ ಬೀರಿದರು.

"ಏನು–ನನ್ನ ತಿಂದುಬಿಡೋ ಹಾಗೆ ನೋಡುತ್ತೀರಿ–ಕೇಳಿ ನಿಮ್ಮ ಮಗಳನ್ನೇ–ಅವಳು ಹೋಗೋದಿಕ್ಕೆ ಸಿದ್ಧವಾಗಿದ್ದಾಳೆಯೇಂತ."

"ನಾನು ಹೋಗಲ್ಲ ಅಣ್ಣಾ"

ಎಂದು ಸುಭದ್ರಾ ತಾಯಿಯ ಜತೆ ದನಿಗೂಡಿಸಿದಳು.

"ಹೋಗಲಿ–ಅವನಿಗೊಂದು ಟ್ರಾನ್ಸ್‌ಫರ್ ಮಾಡಿಸುತ್ತೇನೆ. ಇಲ್ಲೇ ಬಂದಿರಲಿ. ಪರೀಕ್ಷೆ ಮುಗಿದಮೇಲೆ ಪ್ರಸ್ಥದ ಶಾಸ್ತ್ರ ಮುಗಿಸಿಬಿಡೋಣ."

ಸುಭದ್ರೆ ಅಲ್ಲಿ ನಿಲ್ಲದೆ ತನ್ನ ಕೋಣೆಗೆ ಓಡಿಹೋದಳು. ನರಸಮ್ಮ ಬುಸುಗುಟ್ಟುತ್ತಾ

"ಏನು ಬೇಕಾದರೂ ಮಾಡಿಕೊಳ್ಳಿ—ಈ ಮನೆಯಲ್ಲಿ ನಾನು ಯಾರು? ನಿಮ್ಮ ತಂಗಿಯಿದ್ದಾರಲ್ಲಾ—ಅವರನ್ನ ಕೇಳಿಬಿಟ್ಟಿದ್ದರೆ ಎಲ್ಲಾ ಇತ್ಯರ್ಥ ವಾಗುತ್ತಿತ್ತು."

"ನೀನು ವಿನಾ ಕಾರಣ ಅವಳ ಹೆಸರು ಎಳೆಯಬೇಡ. ಈ ಗೋಜಿಗೆ ಕೈಹಾಕುವ ಪಾಪಕ್ಕೆ ಅವಳು ಹೋಗಿಲ್ಲ."

"ಅಯ್ಯೋ ಪಾಪ! ಈ ಮೂದೇವೀನ ಸುಭದ್ರಂಗೆ ಗಂಟು ಹಾಕಿದವರು ಇನ್ನು ಯಾರೋ ?"

"ಋಣಾನುಬಂಧ."

"ಹೂ. ಋಣಾನುಬಂಧ—ಅಣ್ಣ ತಂಗಿ ಮಸಲತ್ತು ಮಾಡಿದರೆ ಅದೇ ಋಣಾನುಬಂಧವಾಗುತ್ತದೆ."

"ಹಳೇ ವ್ಯಾಜ್ಯ ಮತ್ತೇಕೆ ಹುಟ್ಟಿಹಾಕುತ್ತೀ—ಸುಭದ್ರಾ ಅವನಿದ್ದಲ್ಲಿ ಹೋಗಲ್ಲ ಅನ್ನುತ್ತಾಳೆ—ಅವನನ್ನೇ ಇಲ್ಲಿ ಬರಮಾಡಿಕೊಳ್ಳುವುದಕ್ಕೆ ನಿನ್ನ ಅಭ್ಯಂತರವೇನೂ ಇಲ್ಲವಷ್ಟೇ ?"

"ನಿಮ್ಮ ತಂಗಿ ಒಬ್ಬಳಿಗೆ ನಾನು ಜೀವ ತೇಯುವುದು ಸಾಲದು—ಇವನನ್ನೂ ಗಂಟು ಹಾಕಿಕೊಳ್ಳಿ."

"ಹಾಗಾದರೆ ನನ್ನ ಏನು ಮಾಡೂಂತೀಯೇ—ನೇಣು ಹಾಕಿಕೋ ಎಂದರೂ ಹೇಳಿಬಿಡು."

ಎಂದು ವೆಂಕಪ್ಪಯ್ಯ ಸಿಟ್ಟಿನಿಂದ ಚೀರಿದರು.

"ನೀವು ಯಾಕೆ ನೇಣು ಹಾಕಿಕೊಳ್ಳುತ್ತೀರಂದ್ರೆ—ಮೊದಲು ನನಗೆ ನೇಣು ಹಾಕಿದ ಮೇಲೆ ನಿಮಗೆ ತೃಪ್ತಿ."

ಎಂದು ನುಡಿದು ಸರಸಮ್ಮ ಬಿರುಗಾಳಿಯಂತೆ ಅಡಿಗೆಯ ಮನೆ ಹೊಕ್ಕರು.

ವೆಂಕಪ್ಪಯ್ಯ ತಲೆಯಮೇಲೆ ಕೈಹೊತ್ತು ಕುಳಿತರು. ತಮ್ಮ ಅವಿವೇಕ ಅಪರಾಧದ ನೆನಪಾಯಿತು. ಕಾವೇರಮ್ಮ ಬರುವುದನ್ನೇ ಕಾಯುತ್ತಾ ಕುಳಿತರು.

ಕೈಯಲ್ಲಿ ಒಂದು ಒಡೆದ ತೆಂಗಿನಕಾಯಿ ಹೋಳು, ದೇವರ ಪ್ರಸಾದ ಹಿಡಿದು ಸ್ವಲ್ಪ ಹೊತ್ತಿನಲ್ಲಿ ಕಾವೇರಮ್ಮ ಒಳಗೆ ಬಂದರು. ತಂಗಿಗೆ ಕಾಗದದ

ವಿಷಯ, ಅವರ ಮೇಲಾದ ಚರ್ಚೆಯನ್ನು ತಿಳಿಸಿ ಆಕೆಯ ಉತ್ತರವನ್ನು ಎದುರು ನೋಡುತ್ತ ಕುಳಿತರು.

"ಸುಭದ್ರಾ ಹೋಗದಿದ್ದ ಮೇಲೆ ಅವರನ್ನು ಕರೆಸಿಕೊಳ್ಳುವುದೇ ಒಳ್ಳೆಯದು ಅಣ್ಣಯ್ಯ. ದಿನ ಕಳೆದಷ್ಟೂ ಸುಭದ್ರೆಯನ್ನು ಹೀಗೆ ಬಿಟ್ಟು ಕೊಂಡಿರುವುದು ಗೌರವವಲ್ಲ."

"ನಿಮ್ಮ ಅತ್ತಿಗೆ ಒಪ್ಪಬೇಕಲ್ಲಮ್ಮ."

"ಒಪ್ಪುತ್ತಾರೆ. ಅವರದು ಸ್ವಲ್ಪ ಮುಂಗೋಪ. ನಾನು ಅವರಿಗೆ ಹೇಳಿ ಒಪ್ಪಿಸುತ್ತೇನೆ."

"ನೀನೊಂದರೆ ಅವಳಿಗೆ ಮೊದಲೇ ಎಣ್ಣೇ ಸೀಗೇಕಾಯಿ."

"ಇರಲಿ–ಅವರೆಷ್ಟಾದರೂ ದೊಡ್ಡವರು–ಒಂದು ಕೋಪದ ಮಾತಾಡಿದರೆ ನಾನೇಕೆ ಮನಸ್ಸಿಗೆ ಹಚ್ಚಿಕೊಳ್ಳಲಿ. ನೀನು ನಿಶ್ಚಿಂತನಾಗಿ ಟ್ರಾನ್ಸ್‌ಫರ್ ಪ್ರಯತ್ನ ನಡೆಸು–ಮನೆ ವಿಷಯ ನಂಗೆ ಬಿಟ್ಟುಬಿಡು."

ಕಾವೇರಮ್ಮನ ಮಾತು ಕೇಳಿ ವೆಂಕಪ್ಪಯ್ಯನವರಿಗೆ ಸ್ವಲ್ಪ ಸಮಾಧಾನವಾಯಿತು. ಅದೇ ಕ್ಷಣ ಆಕೆಯ ಶುಷ್ಕ, ದುಃಖ ಪೂರ್ಣ, ಗಂಭೀರ ಮುಖವನ್ನು ನೋಡಿದರು. ಅವರ ನೋಟದ ಹಿಂದಿದ್ದ ಭಾವನೆಯನ್ನರಿತ ಕಾವೇರಮ್ಮ ಅಲ್ಲಿ ನಿಲ್ಲದೆ ಅತ್ತಿಗೆಯ ಬಳಿ ಸಾಗಿದಳು.

## ೧೧

ಶ್ರೀನಿವಾಸ ಗೋಷ್ಠಿಗೆ ಮೂರು ನಾಲ್ಕು ದಿವಸ ಒಂದೇ ಸಮನಾಗಿ ತಡವಾಗಿ ಬಂದ. ಬಂದವನೇ ತಾನೇ ಪರಿಹಾಸ್ಯದಿಂದ, 'ಇದೋ–ನಿಮ್ಮ ಲೇಟ್ ಕಮರ್' ಎನ್ನುತ್ತಿದ್ದ. ಒಂದು ದಿನ ಹೆಚ್ಚು ಧಾವಂತದಿಂದ ಕೋಣೆಯೊಳಗೆ ಬಂದು, ಕೂಡಲೆ ಕಿಟಕಿ ಹಾಕಿದ. ಮುನಿಸ್ವಾಮಿ ಮಾತನಾಡಲು ಹೊರಟಾಗ 'ಶುಶ್' ಮಾಡಿ ಅವನ ಬಾಯಿ ಮುಚ್ಚಿಸಿದ. ಮೇಜಿನ ಮೇಲಿದ್ದ ದೀಪವನ್ನು ಆರಿಸಿ–ಮೆಲ್ಲನೆ ಹೊರ ಹೊರಟು ನೆರಳಲ್ಲಿ ನಿಂತ. ಸ್ವಲ್ಪ ದೂರದಲ್ಲಿ ಯಾರೋ ಬೈಸಿಕಲ್ ಹತ್ತಿ ಹೋದುದನ್ನು ಕಂಡು ಒಳಗೆ ಬಂದು ಕುಳಿತ.

ಮುನಿಸ್ವಾಮಿ ದೀಪ ಹಚ್ಚಿದ. ಶ್ರೀನಿವಾಸನ ಮುಖ ಕಂಗೆಟ್ಟಿತ್ತು. ಅವನ ಸಮೀಪಕ್ಕೆ ಬಂದು

"ಏಕೆ ಶ್ರೀನಿವಾಸ್ ಏನಾಯಿತು ?"

ಶ್ರೀನಿವಾಸ ಸುಧಾರಿಸಿಕೊಳ್ಳುತ್ತ

"ಮೂರು ನಾಲ್ಕು ದಿವಸದಿಂದ ಒಂದು ವಿಶೇಷ ನಡೆಯುತ್ತಿದೆ."

"ನಮ್ಮಲ್ಲಿ ಏಕೆ ಹೇಳಬಾರದಾಗಿತ್ತು."

"ಅದನ್ನು ನಾನು ಖಚಿತಪಡಿಸಿಕೊಂಡು ನಿಮಗೆ ತಿಳಿಸೋಣ ವೆಂದಿದ್ದೆ."

"ಏನದು–ಹೇಳಿ" ಎಂದು ರಾಮಸ್ವಾಮಿ ಕೇಳಿದ.

"ಕಾಲೇಜಿನಿಂದ ಯಾರೋ ನನ್ನ ಹಿಂಬಾಲಿಸುತ್ತಿದ್ದಾರೆ. ನನಗೂ ಅವರಿಗೂ ಸುಮಾರು ಒಂದು ಫರ್ಲಾಂಗ್ ಅಂತರವಿರುತ್ತದೆ. ನಾನು ನಿಂತರೆ ಅವರೂ ನಿಲ್ಲುತ್ತಾರೆ–ನಾನು ಬೈಸಿಕಲ್ ಹತ್ತಿದರೆ ಅವರೂ ಬೈಸಿಕಲ್ ಹತ್ತುತ್ತಾರೆ. ಯಾರು ಎಂದು ಪತ್ತೆಮಾಡಲು ಆತನ ಕಡೆಗೊಂದು ದಿನ ಬೈಸಿಕಲ್ ತಿರುಗಿಸಿದೆ–ಆತ ತುಂಬ ಜಾಣ–ನನ್ನ ಇಂಗಿತ ತಿಳಿದು ಪಕ್ಕದ ಸಂದಿಯಲ್ಲಿ ಹೊರಟುಹೋದ."

"ಈ ವಿಷಯ ಗಹನವಾದುದು–ಇದನ್ನು ಚೆನ್ನಾಗಿ ಶೋಧಿಸಬೇಕು. ಇಲ್ಲಿಗೆ ಬಿಡಬಾರದು"

ಎಂದು ಲೋಕನಾಥ ಗಂಭೀರವಾಗಿ ಹೇಳಿದ.

"ನಿಮಗೆ ಯಾರ ಮೇಲಾದರೂ ಅನುಮಾನವಿದೆಯೇ–ಶ್ರೀನಿವಾಸ್."

"ನಾನಿಲ್ಲಿ ಬರುವುದು ಯಾರಿಗೂ ಗೊತ್ತಿಲ್ಲ. ನನ್ನ ಕಾಲೇಜಿನಿಂದ ಹಿಂಬಾಲಿಸಬೇಕಾದರೆ ಯಾರೋ ಕಾಲೇಜಿನವರೇ ಇರಬೇಕು."

"ಈ ವಿಷಯ ನೀವು ಶೋಧಿಸಬೇಕು ಶ್ರೀನಿವಾಸ್."

"ಖಂಡಿತವಾಗಿ"

"ಅವರು ಶೋಧಿಸಲು ಸಾಧ್ಯವಿಲ್ಲ ರಾಮಸ್ವಾಮಿ, ನನಗೆ ಬಿಡಿ. ಈ ವಿಷಯ ನಾನು ಶೋಧಿಸುತ್ತೇನೆ" ಎಂದು ಮುನಿಸ್ವಾಮಿ ಹೇಳಿದ.

"ಹೇಗೆ?"

"ನೀವು ಒಂದು ಕೆಲಸಮಾಡಿ ಶ್ರೀನಿವಾಸ್. ನಾಳೆ ಹಿಂಬಾಲಕನನ್ನು ಕಂಡರೂ ಕಾಣದಂತೆ ಇಲ್ಲಿಗೆ ಬಂದು ಬಿಡಿ- ನಾವು ಒಳಗೆ ಏನು ಮಾಡು

ತ್ತಿರುವೆವೆಂಬುದನ್ನು ಪತ್ತೆ ಹಚ್ಚುವುದಕ್ಕೇ ಅವನು ಹಿಂಬಾಲಿಸುತ್ತಿರಬೇಕು. ಕೈಗೆ ಸಿಕ್ಕಲಿ ಮೂಳೆ ಮುರಿದು ಕಳುಹಿಸುತ್ತೇನೆ."

"ನಿಮ್ಮ ದಮ್ಮಯ್ಯ–ಸದ್ಯ ಆ ಕೆಲಸ ಮಾತ್ರ ಮಾಡಬೇಡಿ–ನಮ್ಮ ಎಲ್ಲ ಕಾರ್ಯಕ್ರಮಕ್ಕೂ ದುಡುಕು ಮೃತ್ಯುಪ್ರಾಯವಾಗುತ್ತದೆ–ಬೇಕಾದರೆ ಅವನನ್ನು ಕರೆದು ನಾಲ್ಕು ಬುದ್ಧಿಯ ಮಾತು ಹೇಳಿ ಕಳಿಸೋಣ."

"ಅವನು ಸಿ. ಐ. ಡಿ. ಆಗಿದ್ದರೆ" ಎಂದು ಲೋಕನಾಥ ಕೇಳಿದ.

"ಸಿ.ಐ.ಡಿ. ಆಗಿದ್ದರೆ ನಾವು ಬೇರೆ ರೂಮು ಹುಡುಕುವುದೊಳ್ಳೆಯದು" ಎಂದು ಶ್ರೀನಿವಾಸ ಸಮಾದಾನ ಹೇಳಿದ.

ಕೆಲವು ದಿವಸ ಹಿಂಬಾಲಕನ ಕಾಟ ಇದ್ದಕ್ಕಿದ್ದಂತೆ ನಿಂತುಹೋಯಿತು. ತನ್ನ ಗಮನ ಅವನ ಮೇಲೆ ಬಿದ್ದುದರಿಂದ ಅವನು ಹೆದರಿ ಹಿಂಬಾಲಿಸುವುದನ್ನು ನಿಲ್ಲಿಸಿದ್ದಾನೆಂದು ಶ್ರೀನಿವಾಸ ಭಾವಿಸಿದ.

ಗೋಷ್ಠಿಯಲ್ಲಿ ಶ್ರೀನಿವಾಸ ಕಾರ್ಲ್ ಮಾರ್ಕ್ಸ್‌ನ ಕೃತಿಗಳನ್ನೋದಿ ಅವುಗಳ ಅರ್ಥ ವಿವರಿಸುತ್ತಿದ್ದ. ಸಮಾಜವಾದವನ್ನು ಪೂರ್ಣವಾಗಿ ಒಳಗೊಂಡಿದ್ದ ಕಾರ್ಮಿಕರ ಸಮಸ್ಯೆ ಚೆನ್ನಾಗಿ ಮನವರಿಕೆಯಾಗಬೇಕಾದರೆ ಮಾರ್ಕ್ಸ್‌ವಾದದ ಸಮಗ್ರ ಪರಿಚಯ ಬೇಕೆನ್ನುವುದು ಶ್ರೀನಿವಾಸನ ಮತವಾಗಿತ್ತು.

ಒಂದು ದಿನ ವ್ಯಾಸಂಗ ನಡೆದಿತ್ತು. ರಾತ್ರಿ ಸುಮಾರು ಒಂಭತ್ತು ಗಂಟೆ. ಕೃಷ್ಣ ಪಕ್ಷದ ರಾತ್ರಿ, ಮೊಬ್ಬುಗತ್ತಲೆ. ಕಿಟಕಿಯ ಬಳಿ ಕಾಲಸಪ್ಪಳವಾಯಿತು–ಕಿಟಕಿಗೆ ಎದುರಾಗಿ ಕುಳಿತಿದ್ದ ಶ್ರೀನಿವಾಸ ಕತ್ತೆತ್ತಿ ನೋಡಿದ. ಮೆಲ್ಲನೆದ್ದು ಬಾಗಿಲು ತೆಗೆದ–ದೂರದಲ್ಲಿ ಯಾರೋ ಓಡುತ್ತಿದ್ದಂತಿತ್ತು. ಅವನನ್ನನುಸರಿಸಿ ತಾನೂ ಓಡಿದ. ಮುನಿಸ್ವಾಮಿ, ಲೋಕನಾಥ, ರಾಮಸ್ವಾಮಿ ಮೂವರೂ ಶ್ರೀನಿವಾಸನ ಹಿಂದೆ ಓಡಿದರು.

ಮುನಿಸ್ವಾಮಿಯ ಮನೆಗೆ ಸ್ವಲ್ಪ ದೂರದಲ್ಲಿ ಒಂದು ಸುಣ್ಣದ ಗೂಡು. ಅದರ ಮಗ್ಗುಲಿಗೆ ಒರಗಿಸಿ ನಿಲ್ಲಿಸಿದ್ದ ಬೈಸಿಕಲ್ ಹತ್ತಿ ಆಗಂತುಕ ರಭಸದಿಂದ ತುಳಿಯತೊಡಗಿದ. ಶ್ರೀನಿವಾಸನಿಗೂ ಅವನಿಗೂ ಸ್ವಲ್ಪ ಅಂತರ ಉಳಿಯಿತು.

ವ್ಯಕ್ತಿ ಕೈಗೆ ಸಿಕ್ಕದಿದ್ದರೂ ಅವನ ಪತ್ತೆ ಶ್ರೀನಿವಾಸನಿಗ ಚೆನ್ನಾಗಿ ಸಿಕ್ಕಿತು. ಜತೆಗಾರರೊಡಗೂಡಿ ಕೋಣೆಗೆ ಬಂದು ಕುಳಿತು

"ಅವನು ನನ್ನ ಸಹಾಧ್ಯಾಯಿ–ನನ್ನ ಹೀಗೇಕೆ ಅನುಸರಿಸುತ್ತಿರುವನೋ ಕಾಣೆ–ವಿಚಾರಮಾಡುತ್ತೇನೆ–ಹೇಗಾದರೂ ಇರಲಿ– ನಾಳೆ ನಾಳಿದ್ದರಲ್ಲಿ ನಾವು ರೂಮು ಬದಲಾಯಿಸುವುದೊಳ್ಳೆಯದು--ರೂಮು ಸಿಕ್ಕುವವರೆಗೆ ನಾವು ಸೇರುವುದೇ ಬೇಡ"

ಎಂದು ಹೇಳಿದ.

ಮಾರನೆಯ ದಿನ ಶಂಕರ ಕಾಲೇಜಿಗೆ ಕಾಲಿಡಲಿಲ್ಲ. ಅವನು ಕಾಲೇಜಿಗೆ ಬಾರದಿದ್ದುದನ್ನು ಕಂಡು ಶ್ರೀನಿವಾಸ ಕಾಲೇಜ್ ಹಾಸ್ಟೆಲ್ಲಿಗೆ ಅವನನ್ನರಸುತ್ತ ಹೋದ. ಅಲ್ಲಿಯೂ ಅವನು ಸಿಕ್ಕಲಿಲ್ಲ. ನಾಲ್ಕಾರುಸಾರಿ ಹಾಸ್ಟೆಲ್ಲಿಗೆ ಬಂದು ಹೋದರೂ ಶಂಕರ ಸಿಕ್ಕಲಿಲ್ಲ. ರಾತ್ರಿ ಹತ್ತು ಗಂಟೆಯ ತನಕ ಮನೆಯಲ್ಲಿದ್ದು ಶಂಕರನ ಕೋಣೆಗೆ ಹೋಗಿ ಮಲಗಿ ನಿದ್ರಿಸುತ್ತಿದ್ದ ಶಂಕರನನ್ನೆಬ್ಬಿಸಿದ.

ಶ್ರೀನಿವಾಸನ ಧ್ವನಿ ಕೇಳಿದೊಡನೆಯೇ ಶಂಕರನ ಜಂಘಾಬಲವೇ ಉಡುಗಿ ಹೋಯಿತು–ಶ್ರೀನಿವಾಸನ ಗಲಭೆಗೆ ಎಚ್ಚೆತ್ತ ಶಂಕರನ ರೂಮ್ ಮೇಟ್ ಬಾಗಿಲು ತೆಗೆದು ಅವನನ್ನು ಒಳಗೆ ಬಿಟ್ಟ.

ನಿದ್ರೆ ಬಂದವನಂತೆ ನಟಿಸುತ್ತ ಮಲಗಿದ್ದ ಶಂಕರನನ್ನು ಶ್ರೀನಿವಾಸ ಎಬ್ಬಿಸಿ ಹೊರಗೆ ಕರೆತಂದ. ಅವನ ಹಿಡಿತದಿಂದ ಬಿಡಿಸಿಕೊಳ್ಳಬೇಕೆಂದು ಶಂಕರ ಮಾಡಿದ ಪ್ರಯತ್ನ ಸಫಲವಾಗಲಿಲ್ಲ.

"ನನ್ನ ಹಿಂದೇಕೆ ಬಿದ್ದಿದ್ದೀರಿ ಶಂಕರ್?" ಎಂದು ಶ್ರೀನಿವಾಸ ಕೇಳಿದ

"ಇಲ್ಲವಲ್ಲಾ. ನಿಮ್ಮ ಸುದ್ದಿ ನನಗೇಕೆ?"

"ಅದನ್ನೇ ನಾನೂ ಕೇಳುತ್ತಿರುವುದು. ಮೊನ್ನೆ ನಾನೇ ಕಣ್ಣಾರೆ ಕಂಡೆ. ಅಲ್ಲಿಗೇಕೆ ನನ್ನನ್ನು ಹುಡುಕಿಕೊಂಡು ಬರುತ್ತಿದ್ದಿರಿ. ಸಿಕ್ಕಿಬಿದ್ದಿದ್ದರೆ ನಿಮ್ಮ ಪಾಡು ಏನಾಗುತ್ತಿತ್ತು ಬಲ್ಲಿರಾ?"

"ಏನಾಗುತ್ತಿತ್ತು."

"ಮೂಳೆಯೆಲ್ಲಾ ಪುಡಿಪುಡಿಯಾಗುತ್ತಿತ್ತು. ಈ ಕೆಲಸಕ್ಕೆ ನಿಮ್ಮನ್ನು ನೇಮಿಸಿದವರು ಯಾರು?"

"ಯಾರೂ ಇಲ್ಲ-ಶ್ರೀನಿವಾಸ್. ನಾನೇ ಕುತೂಹಲದಿಂದ ಬಂದೆ. ತಪ್ಪಾಯಿತು ಕ್ಷಮಿಸಿ."

"ಕ್ಷಮಿಸುವ ಮಾತು ಹಾಗಿರಲಿ. ನಿಜ ಹೇಳುವಿರೋ ದಂಡ ಪ್ರಯೋಗ ಮಾಡಬೇಕೋ? ಈ ಪುಂಡಾಟಿಕೆ ನನ್ನ ಹತ್ತಿರ ನಡೆಯುವುದಿಲ್ಲ."

ಈ ಬಿಕ್ಕಟ್ಟಿನಿಂದ ಬಿಡಿಸಿಕೊಳ್ಳಲು ಶಂಕರ ಸಾಹಸಮಾಡಿದ. ಶ್ರೀನಿವಾಸನನ್ನು ನಂಬಿಸಲು ಸುಳ್ಳಿನ ಮಾಲೆ ಪೋಣಿಸಿದ. ಶ್ರೀನಿವಾಸ ಜಪ್ಪಯ್ಯ ಎನ್ನಲಿಲ್ಲ. ವಿಧಿಯಿಲ್ಲದೆ ನಿಜಸ್ಥಿತಿಯನ್ನರುಹಿ ಶಂಕರ ಪಾರಾದ.

ಶಂಕರ ತಿಳಿಸಿದ ವಿಷಯ ಕೇಳಿ ಶ್ರೀನಿವಾಸನಿಗೆ ಮತ್ತಷ್ಟು ಯೋಚನೆಗೆ ಕಾರಣವಾಯಿತು. 'ನನ್ನ ಚಲನವಲನ ಕಟ್ಟಿಕೊಂಡು ಇವರಿಗೆ ಆಗಬೇಕಾದುದೇನು. ಅವಳೇಕೆ ಶಂಕರನನ್ನು ಈ ಹೊಲಸು ಕೆಲಸಕ್ಕೆ ನೇಮಿಸಿದಳು' ಎಂದು ವಿಚಾರಮಾಡಿದ. ಅದೊಂದು ಬಗೆಹರಿಯದ ಸಮಸ್ಯೆಯಾಗಿಯೇ ಉಳಿಯಿತು.

## ೧೨

'ಸ್ವರಾಜ್ಯ ಪಾರ್ಟಿ' ಆಫೀಸಿಗೆ ಸ್ವಂತ ಕಟ್ಟಡವಿರಲಿಲ್ಲ. ಯಾರೋ ಅಭಿಮಾನಿಗಳು ಅಕ್ಕೀಪೇಟೆಯಲ್ಲಿದ್ದ ತಮ್ಮ ಹಳೆಯ ಮನೆಯೊಂದನ್ನು ಪಾರ್ಟಿಕಛೇರಿಗೆ ಬಿಟ್ಟುಕೊಟ್ಟಿದ್ದರು. ಪಾರ್ಟಿಯವರು ಅದನ್ನೇ ಸಾರಣೆ ಕಾರಣೆ ಮಾಡಿಸಿ ಉಪಯೋಗಿಸುತ್ತಿದ್ದರು.

ಪಾರ್ಟಿ ಸಭೆಗಳು ಕಛೇರಿಯ ಕಟ್ಟಡದಲ್ಲಿ ಆಗುತ್ತಿದ್ದುದಲ್ಲದೆ ಸಂಸ್ಥಾನದ ಬೇರೆಬೇರೆ ಕಡೆಗಳಿಂದ ಸಭೆಗಳಿಗೆ ಬರುತ್ತಿದ್ದ ಪ್ರತಿನಿಧಿಗಳು ಅಲ್ಲಿಯೇ ಉಳಿದುಕೊಳ್ಳುತ್ತಿದ್ದರು.

ಪಾರ್ಟಿ ಕಛೇರಿಯಲ್ಲಿ ನಿತ್ಯಕ್ಕಿಂತ ಹೆಚ್ಚಿನ ಉತ್ಸಾಹ-ಗೊಂದಲ. ಸಂಸ್ಥಾನದ ನಾನಾಭಾಗಗಳಿಂದ, ಪ್ರತಿನಿಧಿಗಳು, ಪಾರ್ಟಿಯ ತಾಲ್ಲೂಕು, ಡಿಸ್ಟ್ರಿಕ್ಟ್ ಕಛೇರಿಗಳ ಅಧಿಕಾರಿಗಳು, ಅವರ ಅಭಿಮಾನಿಗಳು ನೂರಾರು ಜನ ಬಂದು ಸೇರಿದ್ದರು.

ಕ್ಷಿಪ್ರದಲ್ಲಿಯೇ ಬರಲಿದ್ದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳ ಚುನಾವಣೆಗಳಿಗೆ ಪಾರ್ಟಿ ತನ್ನ ಪ್ರತಿನಿಧಿಗಳನ್ನು ನಿಲ್ಲಿ

ಸಲು ನಿರ್ಧರಿಸಿತ್ತು. ಪಾರ್ಟಿ ಬಹುದಿವಸಗಳಿಂದ ಗಾಂಧೀತ್ತ್ವವನ್ನು ಪರಿಪಾಲಿಸಿಕೊಂಡು ಬಂದು ಚುನಾವಣೆಗಳಲ್ಲಿ ಭಾಗವ ... ದೆ ಹೊರಗೆ ನಿಂತಿತ್ತು. ಪಾರ್ಟಿಯ ನಿರ್ಧಾರ ಕೇಳಿ ಸ್ವತಂತ್ರ ಉಮೇದುವಾರರಿಗೂ, ಇತರ ರಾಜಕೀಯ ಪಕ್ಷಗಳಿಗೂ ಸ್ವಲ್ಪ ಭಯವೇ ಆಯಿತು.

ಸ್ವರಾಜ್ಯಪಾರ್ಟಿ ತನ್ನ ಉಮೇದುವಾರರ ಒಂದು ಪಟ್ಟಿಯನ್ನು ಸಿದ್ಧಗೊಳಿಸಿತ್ತು. ಅದರಲ್ಲಿ ಮೊದಲಿನಿಂದ ಪಾರ್ಟಿಯಲ್ಲಿದ್ದು ಕೆಲಸ ಮಾಡಿದ್ದ ಕೆಲವರಿಗೆ ಸ್ಥಾನನಿರ್ದೇಶ ಮಾಡಿದುದಲ್ಲದೆ, ಪಾರ್ಟಿಯಲ್ಲಿಲ್ಲದಿದ್ದರೂ ಅದರ ಆಶ್ರಯದಲ್ಲಿ ಉಮೇದುವಾರರಾಗಿ ನಿಲ್ಲಲೊಪ್ಪಿದ್ದ ಕೆಲವರ ಹೆಸರುಗಳೂ ಇದ್ದವು.

ಉಮೇದುವಾರರ ಪಟ್ಟಿಯನ್ನೊಪ್ಪಲು ಪಾರ್ಟಿಯ ಸರ್ವ ಸದಸ್ಯರ ಸಭೆ ಕರೆಯಲಾಯಿತು. ಅದಕ್ಕೆ ಕೆಲವರಿಗೆ ವಿಶೇಷ ಆಮಂತ್ರಣ ಹೋಗಿತ್ತು.

ವಿಶೇಷ ಆಮಂತ್ರಣ ಪಡೆದಿದ್ದ ಸೂರಪ್ಪನವರೂ ಅಂದಿನ ಸಭೆಯಲ್ಲಿ ಹಾಜರಿದ್ದರು.

ಒಂದೊಂದು ಜಿಲ್ಲೆಯನ್ನು ತೆಗೆದುಕೊಂಡು, ಅದರ ಉಮೇದುವಾರರ ನಾಮಕರಣಕ್ಕೆ ಒಪ್ಪಿಗೆಯ ಕೆಲಸವಾರಂಭವಾಯಿತು. ಸೂರಪ್ಪನವರನ್ನು ಪಾರ್ಟಿಯವರು ನಿಲ್ಲಿಸಲೊಪ್ಪಿದುದಕ್ಕೆ ಕೆಲವು ಜನ ತೀವ್ರವಾಗಿ ವಿರೋಧಿಸಿ ತಮ್ಮ ಪ್ರತಿಭಟನೆ ವ್ಯಕ್ತಮಾಡಿದರು. ಸೂರಪ್ಪನವರ ಅಭಿಮಾನಿಗಳು ಅಷ್ಟೇ ಉದ್ರೇಕದಿಂದ ಮಾತನಾಡಿ ಸೂರಪ್ಪನವರ ಉಮೇದುವಾರಿಕೆಯನ್ನು ಸಮರ್ಥಿಸಿದರು. ಚರ್ಚೆ ಕೊನೆಗಾಣುವ ಸಂಭವ ಕಂಡು ಬರಲಿಲ್ಲ. ಮೇಜಿನ ಮೇಲಿದ್ದ ಗಂಟೆ ಬಾರಿಸಿ ಬಾರಿಸಿ ಅಧ್ಯಕ್ಷರು ಬೇಸತ್ತರು.

ಗಲಭೆ ನಡೆದಿದ್ದಂತೆ ಸೂರಪ್ಪನವರು ಗಂಭೀರವಾಗೆದ್ದು ನಿಂತು

"ಮಾನ್ಯ ಅಧ್ಯಕ್ಷರಲ್ಲಿ ವಿನಂತಿ! ಈಗ ಚರ್ಚೆ ನಡೆಯುತ್ತಿರುವುದು ನನ್ನ ವಿಷಯವಾಗಿ. ಆ ಬಗ್ಗೆ ಕೆಲವು ಮಾನ್ಯ ಸದಸ್ಯರ ಮನಸ್ಸಿನಲ್ಲಿ ತಪ್ಪು ಗ್ರಹಿಕೆಯಾದಂತೆ ಕಂಡುಬರುತ್ತದೆ. ತಾವು ಅಪ್ಪಣೆ ಕೊಟ್ಟರೆ ನಾಲ್ಕು ಮಾತು ಹೇಳಿ ನಾನು ಸಂದೇಹ ಪರಿಹಾರ ಮಾಡುತ್ತೇನೆ"

ಎಂದರು. ಅಧ್ಯಕ್ಷರು ಸದಸ್ಯರ ಮುಖ ನೋಡಿದರು. ಸೂರಪ್ಪನವರ ಅಭಿಮಾನಿಗಳು 'ಅವಕಾಶ ಕೊಡಿ' ಎಂದು ಕೂಗಿದರು. ಅಧ್ಯಕ್ಷರು

ಸೂರಪ್ಪನವರಿಗೆ ಮಾತನಾಡಲು ಅವಕಾಶವಿತ್ತರು. ಸೂರಪ್ಪನವರು ತಮ್ಮ ಭಾಷಣ ಆರಂಭಿಸಿದರು.

"ನಾನು ಸ್ವರಾಜ್ಯ ಪಾರ್ಟಿ ಸದಸ್ಯನಲ್ಲ. ಏಕಾಗಿಲ್ಲವೆಂದು ಕೇಳಿದರೆ ಆ ತಪ್ಪನ್ನು ನಾನು ಪಾರ್ಟಿಯ ಕಾರ್ಯದರ್ಶಿಗಳ ಮೇಲೇ ಹಾಕಬೇಕಾಗುತ್ತದೆ. ಆದರೆ ಪಾರ್ಟಿಯವರು ಯಾವಾಗ ಬಂದು ನನ್ನ ಸಲಹೆ, ಸಹಾಯ, ಧನ ಕೇಳಿದರೂ ನಾನು ಇಲ್ಲವೆಂದಿಲ್ಲ. ಪಾರ್ಟಿ ಒಳಗೆ ಇದುವರಿಗೆ ಬಾರದಿದ್ದರೂ ನಾನು ಅದರ ಸೇವೆಯನ್ನು ದಕ್ಷತೆಯಿಂದ ಮಾಡಿಕೊಂಡು ಬಂದಿದ್ದೇನೆ.

"ಪ್ರಾಯಶಃ ಇದನ್ನು ಕಂಡೇ ಪಾರ್ಟಿಯ ಕೆಲವು ಪ್ರಧಾನವ್ಯಕ್ತಿಗಳು ನನ್ನಲ್ಲಿ ಬಂದು ನನ್ನನ್ನು ನಗರದ ಪರವಾಗಿ ನ್ಯಾಯವಿಧಾಯಕ ಸಭೆಗೆ ಉಮೇದುವಾರನನ್ನಾಗಿ ನಿಲ್ಲಿಸುವುದಾಗಿ ಹೇಳಿದರು. ನಾನೂ ಆ ಸನ್ಮಿತ್ರರ ಸಲಹೆಯನ್ನು ಆದರದಿಂದ ಸ್ವೀಕರಿಸಿದೆ. ಆಗಲೂ ಎಚ್ಚರಕೊಟ್ಟೆ. ನಾನು ಪಾರ್ಟಿ ಸದಸ್ಯನಲ್ಲವೆಂದು ಹೇಳಿದೆ, ಚಿಂತೆಯಿಲ್ಲ ಅದು ಕೇವಲ ಟೆಕ್ನಿಕಲ್ ಪಾಯಿಂಟ್, ಅದನ್ನು ನಾವು ನೋಡಿಕೊಳ್ಳುತ್ತೇವೆ ಎಂದು ಆಶ್ವಾಸನ ಕೊಟ್ಟರು.

"ಪಾರ್ಟಿಯ ಕೆಲವು ಮಾನ್ಯಸದಸ್ಯರ ಅಭಿಮತಕ್ಕೆ ವಿರೋಧವಾಗಿ ನನ್ನಂಥ ಹೊರಗಿನವರನ್ನೇತಕ್ಕೆ ನಿಲ್ಲಿಸಬೇಕು? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಪಾರ್ಟಿ ಇನ್ನೂ ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಬಲಿಷ್ಠವಾಗಿಲ್ಲ. ಈಗ ಅದಕ್ಕಿರುವ ಸದಸ್ಯ ಹಾಗೂ ಮುಖಂಡ ಸಂಪತ್ತಿನಿಂದ ಅದು ಚುನಾವಣೆಗಳಲ್ಲಿ ಪೂರ್ಣ ಯಶಗಳಿಸುತ್ತದೆಂಬ ಮಾತು ಒಪ್ಪತಕ್ಕುದ್ದಲ್ಲ. ಈಗ ಚುನಾವಣೆಗಳಲ್ಲಿ ಗೆದ್ದು ಬರುವವರನ್ನೂ ಕೂಡಿಸಿಕೊಂಡು, ಚುನಾವಣೆಗಳನ್ನು ಗೆದ್ದು ಅಸೆಂಬ್ಲಿ, ಕೌನ್ಸಿಲ್‌ಗಳಲ್ಲಿ ಪಾರ್ಟಿಯ ಬಲ ಬೆಳಸಿಕೊಳ್ಳುವುದು ಜಾಣತನದ ಲಕ್ಷಣ. ಅಂಥ ದೂರದರ್ಶಿತ್ವವನ್ನು ನಾಯಕರು ತೋರಿದ್ದಾರೆ.

"ನನ್ನ ಸಹಕಾರದಿಂದ ಪಾರ್ಟಿ ತುಂಬ ಬಲಿಷ್ಠವಾಗುವುದೆಂಬುದನ್ನು ಎಲ್ಲರೂ ಬಲ್ಲಿರಿ. ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ಮರೆತು ನಾವೆಲ್ಲ ಏಕಮನಸ್ಕರಾಗಿ ದುಡಿದು ಪಾರ್ಟಿಯ ಬಲವನ್ನು ಬೆಳಸೋಣ."

ಸೂರಪ್ಪನವರ ಭಾಷಣ, ಅದರ ವಾದಸರಣಿ ವಿರೋಧಿಗಳ ಮೇಲೂ ಸತ್ಪರಿಣಾಮವನ್ನುಂಟುಮಾಡಿತು. ಬಹುಮತದಿಂದ ಅವರ ಉಮೇದುವಾರಿಕೆಗೆ ಸಭೆಯ ಒಪ್ಪಿಗೆಯ ಮುದ್ರೆ ಬಿತ್ತು.

ಸದ್ಯಕ್ಕೆ ದೊರೆತ ವಿಜಯ ಅಷ್ಟು ಮಹತ್ತ್ವದ್ದಲ್ಲದಿದ್ದರೂ ಮಹತ್ತ್ವದ ವಿಜಯಗಳಿಗೆ ಇದು ಹೆಬ್ಬಾಗಿಲಾಗುವುದೆಂಬುದನ್ನು ಸೂರಪ್ಪನವರು ಚೆನ್ನಾಗಿ ಬಲ್ಲರು. ಚುನಾವಣೆಗೆ ನೀರಿನ ಹಾಗೆ ಹಣ ಖರ್ಚು ಮಾಡಲು ಸಿದ್ಧರಾದರು. ತಿಂಗಳುಗಟ್ಟಲೆ ಕಕ್ಷಿಗಾರರ ತಂಡಕ್ಕೆ ಉಪದೇಶಕೊಟ್ಟು ನೂರಾರು ಜನಗಳನ್ನು ತಮಗೆ ಮತ ದೊರಕಿಸಲು ಒಪ್ಪಿಸಿಕೊಂಡರು.

ತಂದೆ ಚುನಾವಣೆಗೆ ಉಮೇದುವಾರಿಕೆ ಸಲ್ಲಿಸಿದ ಸುದ್ದಿ ಕೇಳಿ ಶ್ರೀನಿವಾಸ ಚಕಿತನಾದ. ಅವನ ಮನಸ್ಸಿನಲ್ಲಿ ಪ್ರಬಲ ಹೋರಾಟ ಆರಂಭವಾಯಿತು.

ಕಾರ್ಮಿಕರ ಬಗ್ಗೆ ಸಹಾನುಭೂತಿ ತೋರುತ್ತಿದ್ದ ಮತ್ತೊಂದು ರಾಜಕೀಯ ಪಕ್ಷವಾದ ಡೆಮೋಕ್ರ್ಯಾಟಿಕ್ ಪಾರ್ಟಿಯವರು ಲೋಕನಾಥ್ ಅವರನ್ನು ನಿಲ್ಲಿಸಲು ನಿರ್ಧರಿಸಿದ್ದರು. ಅವರಿಗೆ ಎಲ್ಲರೂ ಸಹಕಾರ ಕೊಡತಕ್ಕುದೆಂದು ವ್ಯಾಸಂಗ ಗೋಷ್ಠಿಯಲ್ಲಿಯೂ ನಿರ್ಧಾರವಾಗಿತ್ತು.

ಇತ್ತ ತಂದೆ–ಅತ್ತ ತತ್ತ್ವಬಂಧು–ಇವರಿಬ್ಬರಲ್ಲಿ ಯಾರಿಗೆ ನೆರವು ನೀಡಬೇಕೆಂಬುದರ ಬಗ್ಗೆ ಶ್ರೀನಿವಾಸ ಆಳವಾಗಿ ವಿಚಾರ ಮಾಡ ತೊಡಗಿದ.

ಚುನಾವಣೆಯ ಸಿದ್ಧತೆ ನಡೆದಿದ್ದಂತೆ ಒಂದು ದಿನ ಸೂರಪ್ಪನವರು ಮಗನನ್ನು ತಮ್ಮ ಆಫೀಸ್ ರೂಮಿಗೆ ಬರಮಾಡಿಕೊಂಡು

"ಶೀನೂ-ನಾನು ಎಲೆಕ್ಷನಿಗೆ ನಿಂತಿರುವ ವಿಷಯ ನಿನಗೆ ಗೊತ್ತಿರಬಹುದು."

"ಗೊತ್ತಿದೆ."

"ನನಗೇ ಎಲೆಕ್ಷನ್ ಆಗುವುದು ಸ್ವತಃಸಿದ್ಧ. ಸುಮ್ಮಸುಮ್ಮನೆ ಡೆಮೋಕ್ರ್ಯಾಟಿಕ್ ಪಾರ್ಟಿಯವರು ಆ ಲೋಕನಾಥನ್‌ನನ್ನು ನಿಲ್ಲಿಸಿ ಡಿಪಾಸಿಟ್ ಹಣ ಕಳೆದುಕೊಳ್ಳುತ್ತಾರೆ."

"ಹಾಗೇ ಕಾಣುತ್ತದೆ."

"ಡೆಮೋಕ್ರ್ಯಾಟಿಕ್ ಪಾರ್ಟಿಯಲ್ಲಿ ನಿನ್ನ ಸ್ನೇಹಿತರು ಕೆಲವರಿದ್ದಾರೆಂದು ಕೇಳಿದೆ."

"ಹೌದು-ಇದ್ದಾರೆ."

"ಅವರಿಗೆ ಹೇಳಿ ಲೋಕನಾಥ್ರ ಅರ್ಜಿಯನ್ನು ಹಿಂದಕ್ಕೆ ತೆಗೆದು ಕೊಳ್ಳುವಂತೆ ಮಾಡುವುದು ಸಾಧ್ಯವಿಲ್ಲವೆ."

"ಅವರು ನನ್ನ ಮಾತು ಕೇಳುತ್ತಾರೆಂದು ಹೇಗೆ ಹೇಳಲಿ."

"ಪ್ರಯತ್ನ ಮಾಡಿನೋಡು. ಬೇಕಾದರೆ ಲೋಕನಾಥನ್ನನಿಗೆ ೫೦೦ ರೂಪಾಯಿ ಸಂಭಾವನೆ ಕೊಟ್ಟುಬಿಡೋಣ."

"ಆತ ಹಣದಾಸೆಗೆ ತತ್ತ್ವವನ್ನು ಬಿಡುವ ಮನುಷ್ಯನಲ್ಲ."

"ನೀನು ಅವನನ್ನೂ ಬಲ್ಲೆಯೇನು ?"

"ಅಲ್ಪ ಸ್ವಲ್ಪ."

"ಅವನನ್ನು ಇಲ್ಲಿಗೆ ಒಂದು ದಿನ ಕರೆದುಕೊಂಡು ಬರುವೆಯಾ ?"

"ನನಗೆ ಅಷ್ಟೊಂದು ಆತನ ಪರಿಚಯವಿಲ್ಲ. ಅಲ್ಲದೆ ಅಣ್ಣಾ, ನನಗೆ ಎಕ್ಸಾಮಿನೇಷರ್ನ ಹತ್ತಿರವಾಯಿತು. ರಾಜಕೀಯ ಗೊಂದಲ ಹಚ್ಚಿಕೊಂಡರೆ ನನಗೆ ಫೇಲಾಗಬಹುದು."

"ಹೌದಪ್ಪಾ-ನೀನೇನೂ ಮಾಡಬೇಡ. ಚೆನ್ನಾಗಿ ಓದಿ ರ್‍ಯಾಂಕ್ ತೆಗೆದುಕೋ"

ಎಂದು ಹೇಳಿದರು. ಎಲೆಕ್ಷನ್ನಿನಲ್ಲಿ ಗೆಲುವು ದೊರಕಿಸಲು ತಂದೆ ಏನು ಬೇಕಾದರೂ ಮಾಡಲು ಸಿದ್ಧರಾಗಿದ್ದಾರೆಂಬ ವಿಷಯ ಶ್ರೀನಿವಾಸನಿಗೆ ಹೊಸದಾಗಿ ತಿಳಿದ ಹಾಗಾಯಿತು.

## ೧೩

ಸ್ವರಾಜ್ಯ ಪಕ್ಷದವರು ಸೂರಪ್ಪನವರ ಉಮೇದುವಾರಿಕೆಯನ್ನು ಅಂಗೀಕರಿಸಿದ ಸುದ್ದಿ ದೇಶಾದ್ಯಂತ ವ್ಯಾಪಿಸಿತು. ಡೆಮೋಕ್ರ್ಯಾಟಿಕ್ ಪಾರ್ಟಿಯವರು ಈ ಸುದ್ದಿ ಕೇಳಿ ಅವಾಕ್ಕಾದರು.

ಶ್ರೀನಿವಾಸನ ವ್ಯಾಸಂಗ ಗೋಷ್ಠಿ ಮುನಿಸ್ವಾಮಿ ಮನೆಯಲ್ಲಿ ಸೇರುವುದನ್ನು ಬಿಟ್ಟು ಬೇರೊಂದು ಮನೆಯ ಮಹಡಿ ಗೊತ್ತುಮಾಡಿ ಕೊಂಡಿತ್ತು. ಹತ್ತು ರೂಪಾಯಿ ಬಾಡಿಗೆ ಕೊಡುವುದೆಂದು ನಿಶ್ಚಯ

ವಾಗಿತ್ತು. ಮಹಡಿ ಮೇಲೆ ಸಾಕಷ್ಟು ಗಾಳಿ ಬೆಳಕುಗಳ ಓಡಾಟವೂ ಇತ್ತು. ಮೇಲೆ ನಿಂತು ನೋಡಿದರೆ ಸುತ್ತ ಮುತ್ತ ಓಡಾಡುತ್ತಿದ್ದವರೂ ಕಣ್ಣಿಗೆ ಬೀಳುತ್ತಿದ್ದರು. ಅದು ಮಿಕ್ಕೆಲ್ಲರಿಗಿಂತ ಮುನಿಸ್ವಾಮಿಗೆ ಸಮೀಪ ವಾಗಿದ್ದುದರಿಂದ ಬೀಗದಕ್ಕೈ ಅವನಲ್ಲಿಯೇ ಇರುತ್ತಿತ್ತು.

ಶ್ರೀನಿವಾಸ ಬರುವುದಕ್ಕೆ ಮುಂಚೆ ಸೂರಪ್ಪನವರ ಉಮೇದುವಾರಿ ಕೆಯ ಪ್ರಶ್ನೆ ಬಂದು ಸಾಕಷ್ಟು ಚರ್ಚೆಯಾಗಿತ್ತು. ಶ್ರೀನಿವಾಸ ಬಂದ ಮೇಲೂ ಮತ್ತೆ ಅದೇ ಮಾತು ಹೊರಟಿತು. ತಮ್ಮ ಪಾರ್ಟಿಯಲ್ಲಿ ಆದ ಮಾತುಕತೆಯನ್ನು ಲೋಕನಾಥ ವರ್ಣಿಸಿದರು.

"ನಿಮಗೆ ಇದು ದೊಡ್ಡ ಸಮಸ್ಯೆಯಲ್ಲವೇ ಶ್ರೀನಿವಾಸ್?" ಎಂದು ಕೇಳಿದರು.

"ಖಂಡಿತವಾಗಿ ಸಮಸ್ಯೆಯಾಗಿದೆ. ಅತ್ತ ತಂದೆ–ಇತ್ತ ನೀವು."

"ಈಗೇನು ಮಾಡುವಿರಿ ?"

"ಎಲೆಕ್ಷನ್ ಗೊಂದಲಕ್ಕೆ ಕೈಹಾಕುವುದಿಲ್ಲವೆಂದು ತದೆಯವರಿಗೆ ತಿಳಿಸಿದ್ದೇನೆ."

"ಹಾಗಾದರೆ ನನಗೇಕೆ ಸಹಾಯ ಮಾಡಬಾರದು?"

"ನೀವೆ ಗೆದ್ದು ಬರಬೇಕೆಂದು ನನ್ನ ಆಕಾಂಕ್ಷೆ. ಆದರೆ ಹೊರಗೆ ಬಂದು ನಿಮಗೆ ಸಹಾಯಮಾಡಲು ಕೇಳಬೇಡಿ. ಮಗನೇ ತಂದೆಯ ವಿರುದ್ಧ ಪ್ರಚಾರ ಮಾಡುವುದು ನಾಚಿಕೆಗೇಡಾದೀತು. ಅದೇ ಕಾರಣಕ್ಕೆ ನಿಮಗೆ ಬರಬೇಕಾದ ಓಟುಗಳೂ ಬಾರದೆ ಹೋದಾವು."

"ಇದು ತತ್ತ್ವದ ಹೋರಾಟ–ವ್ಯಕ್ತಿಯ ಹೋರಾಟವಲ್ಲವಲ್ಲ."

"ನಿಜ ಅದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಮ್ಮ ತಂದೆ ಹಾಗೆ ತಿಳಿಯುವುದಿಲ್ಲ. ಇದೇ ಪ್ರಬಲ ಕಾರಣವಾಗಿ ಅವರಿಗೂ ನನಗೂ ವೈಮನಸ್ಯ ಬರಬಹುದು."

"ಸತ್ಯ ದೃಷ್ಟಿಯುಳ್ಳವರು ಇವುಗಳನ್ನೆಲ್ಲಾ ನೋಡುವುದಕ್ಕಾಗುತ್ತ ದೆಯೇ ?"

"ಸತ್ಯ ಅಪ್ರಿಯವಾದುದನ್ನು ಮಾಡು ಎಂದು ಹೇಳುವುದಿಲ್ಲ. ತಂದೆ ಎನ್ನುವ ಅಭಿಮಾನವೇ ಇಲ್ಲದವನು ಗೆಳೆಯನೆಂಬ ಅಭಿಮಾನ ತಳೆಯ

ಬಲ್ಲನೇ ? ಈ ಸಂದರ್ಭದಲ್ಲಿ ನಾನು ತಟಸ್ಥನಾಗಿರಲು ಅವಕಾಶ ಕೊಡಿ. ಈಗಾಗಲಿ ಮುಂದಾಗಲಿ ನನ್ನ ತಪ್ಪು ತಿಳಿದುಕೊಳ್ಳಬೇಡಿ-"

"ಮುಂದೆ ತಪ್ಪು ತಿದುಕೊಳ್ಳುವುದೆಂದರೇನು" ಎಂದು ರಾಮಸ್ವಾಮಿ ಕೇಳಿದ.

"ನಾನು ಎಲೆಕ್ಷನ್ ಪೂರ್ವರಂಗವನ್ನು ಪರೀಕ್ಷಿಸಿರುವುದರಲ್ಲಿ ಕೆಲವು ನಿರ್ಧಾರಗಳಿಗೆ ಬಂದಿದ್ದೇನೆ. ಹೇಳೆಂದರೆ ಹೇಳುತ್ತೇನೆ."

"ಹೇಳಿ."

"ಸದ್ಯಕ್ಕೆ ಡೆಮೋಕ್ರ್ಯಾಟಿಕ್ ಪಾರ್ಟಿಗಿಂತ ಸ್ವರಾಜ್ಯ ಪಕ್ಷ ಹೆಚ್ಚು ಪ್ರಬಲವಾಗಿದೆ– ಇದಕ್ಕೆ ಹೆಚ್ಚು ಜನಬಲವಿದೆ. ನಿಜ ತಾನೇ ?"

"ನಿಜ."

"ನನ್ನ ತಂದೆ ಸ್ವಪ್ರಭಾವದಿಂದ ಪ್ರಬಲರಾಗಿದ್ದಾರೆ. ಪಾರ್ಟಿಯ ಹಂಗಿಲ್ಲದೆ ಅವರೇ ಸ್ವತಂತ್ರರಾಗಿ ನಿಂತಿದ್ದರೂ ಈ ಎಲೆಕ್ಷನ್ನಿನಲ್ಲಿ ಅವರಿಗೆ ವಿಜಯ ದೊರೆಕುವ ಸಂಭವ ಹೆಚ್ಚು. ಈಗ ಅವರ ಬಲ, ಪಾರ್ಟಿಯ ಬಲ–ಜತೆಗೆ ನನ್ನ ತಂದೆ ಖರ್ಚುಮಾಡಲು ಸಿದ್ಧವಾಗಿರುವ ಹಣದ ಬಲ' ಅವರ ಕಕ್ಷಿಗಾರರು ಖರ್ಚುಮಾಡಲು ಸಿದ್ಧರಾಗಿರುವ ಹಣದ ಬಲ ಇವುಗಳ ಎದುರು ನಿಮ್ಮ ಜಯ ಬಹಳ ದೂರದ ಮಾತು ಎಂದೆನಿಸುತ್ತದೆ. ನಾಳೆ ಅವರು ಜಯಶಾಲಿಗಳಾಗಿ ಬಂದರೆ, ನಾನು ಅವರಿಗೆ ಸಹಾಯಮಾಡಿದೆ ಎಂದು ನೀವು ಭಾವಿಸಬಾರದು. ನಾನು ಯಾರಿಗೂ ಸಹಾಯ ಮಾಡಲು ಹೋಗುವುದಿಲ್ಲ. ಈ ತಪ್ಪುಗ್ರಹಿಕೆಯಿಂದ ನಮ್ಮ ಐಕಮತ್ಯ ಭಂಗವಾಗಿ ನಮ್ಮ ಮುಂದಿನ ಕೆಲಸ ಹಾಳಾಗಬಾರದು."

ಮೂವರು ಗೆಳೆಯರೂ ಯೋಚನೆ ಮಾಡತೊಡಗಿದರು. ಶ್ರೀನಿವಾಸನ ಸರಳ ಸ್ಪಷ್ಟವಾದ ಅಭಿಪ್ರಾಯ ಅವರ ಮನಸ್ಸಿನ ಮೇಲೆ ಪರಿಣಾಮ ಮಾಡದಿರಲಿಲ್ಲ.

"ಇನ್ನೊಂದು ಮಾತು. ಸಾಧ್ಯವಾದಲ್ಲಿ ಎಲೆಕ್ಷನ್ನಿಗೆ ಮುಂಚೆಯೇ ನಮ್ಮ 'ಕಾರ್ಮಿಕರ ಸಂಘ' ರೂಪುಗೊಳಿಸೋಣ. ಅದು ನಿಮ್ಮ ಉಮೇದುವಾರಿಕೆಯನ್ನು ಎತ್ತಿಹಿಡಿಯಲಿ."

ಶ್ರೀನಿವಾಸನ ಸಲಹೆಯಲ್ಲಿದ್ದ ನಿಷ್ಪಕ್ಷತೆ, ಸತ್ಯಪ್ರೇಮ ಲೋಕನಾಥನನ್ನು ಚಕಿತನನ್ನಾಗಿ ಮಾಡಿತು.

"ಕ್ಷಮಿಸಿ–ಶ್ರೀನಿವಾಸ್. ನಾನು ನಿಜವಾಗಿಯೂ ನಿಮ್ಮ ವಿಷಯ ತಪ್ಪು ಗ್ರಹಿಕೆ ಮಾಡಿಕೊಂಡಿದ್ದೆ"

ಎಂದು ಹೇಳಿದ. .

## ೧೪

ಶಂಕರ ತಡಮಾಡದೆ ಶ್ರೀನಿವಾಸನ ವ್ಯಾಸಂಗ ಗೋಷ್ಠಿಯ ವಿವರವನ್ನು ಸುಭದ್ರೆಗೆ ವರದಿ ಒಪ್ಪಿಸಿದ್ದ. ಸುಭದ್ರೆಗೆ ಅವನು ಹೇಳಿದುದರ ಸಂಪೂರ್ಣ ವಿಷಯ ಅರ್ಥವಾಗಲಿಲ್ಲ. 'ಇದಕ್ಕೇಕಿಷ್ಟು ಗೋಪ್ಯ' ಎಂದುಕೊಂಡಳು. ಆದರೆ ನೀರಸವಾಗಿ ಕಾಣುತ್ತಿರುವ ವ್ಯಾಸಂಗ ಗೋಷ್ಠಿಯ ಹಿಂದೆ ಹೆಚ್ಚಿನ ರಾಜಕಾರಣವಿರಬೇಕೆಂದು ಊಹಿಸಿಕೊಂಡಳು.

ಸಾಮ್ಯವಾದದ ಬಗ್ಗೆ ಶ್ರೀನಿವಾಸನಿಗಿದ್ದ ಅಭಿಮಾನ, ಗೌರವ ಸುಭದ್ರೆಗೆ ಚೆನ್ನಾಗಿ ತಿಳಿದಿತ್ತು. ಕಾಲೇಜ್ ಯೂನಿಯನ್ನಿನಲ್ಲಿ ಮಾತನಾಡುವಾಗಲೂ ಅವನು ಪ್ರಾಸಂಗಿಕವಾಗಿಯೋ ಅಪ್ರಾಸಂಗಿಕವಾಗಿಯೋ ಸಾಮ್ಯವಾದವನ್ನು ತರುತ್ತಿದ್ದ.

ಸುಭದ್ರೆಯ ಮನಸ್ಸಿಗೆ ತಟ್ಟನೆ ಒಂದು ಯೋಚನೆ ಹೊಳೆಯಿತು.

"ವ್ಯಾಸಂಗ ಗೋಷ್ಠಿಯ ಸುದ್ದಿಯನ್ನು ಸೂರಪ್ಪನವರ ಕಿವಿಯ ಮೇಲೆ ಹಾಕಿದರೆ!" ಶ್ರೀನಿವಾಸನ ಪರಿಣಾಮವಂತೂ ನೆಟ್ಟಗಾಗಲು ಸಾಧ್ಯವಿರಲಿಲ್ಲ. ತಂದೆ ಮಗನಿಗೆ ಜಗಳವಾಗಿ ಶ್ರೀನಿವಾಸ ಮನೆಬಿಟ್ಟು ಹೋಗುವ ಪ್ರಮೇಯ ಒದಗಿದರೂ ಒದಗಬಹುದು. ಅಂಥ ಬಿಕ್ಕಟ್ಟು ತಲೆದೋರಿದಾಗ ಇದಕ್ಕೆ ಕಾರಣಳು ಸುಭದ್ರೆಯೋ ಎಂದು ಶ್ರೀನಿವಾಸನಿಗೆ ಗೊತ್ತಾಗಿಯೇ ಗೊತ್ತಾಗುತ್ತದೆ. 'ಶ್ರೀನಿವಾಸ ತನ್ನ ಬದ್ಧದ್ವೇಷಿಯಾಗುತ್ತಾನೆ' ಎಂದು ಯೋಚಿಸಿ ಗಡಗಡನೆ ನಡುಗಿದಳು.

ಶ್ರೀನಿವಾಸನ ವಿಶ್ವಾಸ, ಗೌರವ ದೊರಕಿಸಿಕೊಳ್ಳುವ ಆಸೆಯನ್ನು ಅವಳು ಪೂರ್ಣವಾಗಿ ವರ್ಜಿಸಿರಲಿಲ್ಲ. ತಾನೀಗ ದುಡಿಕಿದರೆ ಆ ಆಸೆಗೆ ತಿಲತರ್ಪಣ ಕೊಟ್ಟುಬಿಡಬೇಕಾಗುತ್ತದೆಂಬುದನ್ನು ಗ್ರಹಿಸಿದಳು

ಅವಳ ಮನಸ್ಸಿಗೆ ಶಾಂತಿಯಿಲ್ಲ-ತೃಪ್ತಿಯಿಲ್ಲ. ಶಂಕರ ಬಂದವನು ತನಗೂ ಶ್ರೀನಿವಾಸನಿಗೂ ಆದ ವಾದ ವಿವಾದವನ್ನೂ ತಿಳಿಸಿದ. ಅದರಿಂದ

'ವ್ಯಾಸಂಗ ಗೋಷ್ಠಿ' ಶ್ರೀನಿವಾಸನ ಜೀವನದಲ್ಲಿ ಬಹಳ ಮುಖ್ಯ ವಿಷಯ ವಾಗಿತ್ತೆಂಬುದನ್ನು ಗ್ರಹಿಸಿದಳು.

ಅಂದು ಮನೆಗೆ ಬಂದ ವೆಂಕಪ್ಪಯ್ಯನವರು ಮಗಳನ್ನು ಕರೆದು ಕೇಳಿದರು.

"ಅಮ್ಮಯ್ಯಾ–ಪರೀಕ್ಷೆಗೆ ಅಭ್ಯಾಸ ಹೇಗೆ ಸಾಗಿದೆಯಮ್ಮಾ."

"ಚೆನ್ನಾಗಿ ಸಾಗಿದೆ ಅಣ್ಣಾ-ಏಕೆ?"

"ಮಧ್ಯೆ ಸ್ವಲ್ಪ ಪುರಸತ್ತು ಸಿಕ್ಕುತ್ತದೆಯೇ?"

"ಏಕೆ? ನನ್ನಿಂದೇನಾಗಬೇಕಾಗಿತ್ತು."

"ನಮ್ಮ ಸೂರಪ್ಪನವರು ನ್ಯಾಯವಿಧಾಯಕ ಸಭೆಗೆ ನಿಂತಿರುವುದು ಗೊತ್ತಷ್ಟೇ?"

"ಯಾಂಗೆ ಗೊತ್ತಿಲ್ಲ."

"ನಿನಗೆ ಅವಕಾಶವಾದರೆ ಅವರಿಗೆ ಸ್ವಲ್ಪ ಸಹಾಯ ಮಾಡಬೇಕಾಗುತ್ತದೆ. ಹೆಂಗಸರು ಕೆಲವರಿಗೆ ಓಟುಗಳಿವೆಯಂತೆ. ಅವರ ಬಳಿಗೆ ಯಾರಾದರೂ ಹೆಂಗಸರೇ ಹೋಗಿ ಕೇಳಿದರೆ ಒಳ್ಳೆಯದು ಎಂದು ಸೂರಪ್ಪನವರು ಅಭಿಪ್ರಾಯಪಡುತ್ತಾರೆ. ನೀನು ಓಡಿಯಾಡುವುದಕ್ಕೆ ಕಾರ್ ಕಳಿಸಿಕೊಡುತ್ತಾರೆ."

ಅನಿರೀಕ್ಷಿತವಾಗಿ ಒದಗಿದ ದೈವಸಹಾಯ ಕಂಡು ಸುಭದ್ರೆಗೆ ಅತ್ಯಾನಂದವಾಯಿತು. ಅದನ್ನು ತೋರಗೊಡದೆ

"ಈ ವಿಷಯ ಅವರ ಮಗನೇ ನನ್ನ ಹತ್ತಿರ ಹೇಳಲಿಲ್ಲ."

"ಅವರು ಎಲೆಕ್ಷನ್ ಗಲಭೆಗೆ ಕೈಹಾಕುವುದಿಲ್ಲ ಎಂದು ಹೇಳಿದನಂತೆ!"

"ಇದೇನನ್ಯಾಯ ಅಣ್ಣಾ–ತಂದೆಯ ಚುನಾವಣೆಗೆ ಮಗ ದುಡಿಯಬೇಡವೇ?"

"ದುಡಿಯಬೇಕು. ಈ ಕಾಲದಲ್ಲಿ ತಂದೆತಾಯಿಗಳ ಮಾತು ಮಕ್ಕಳು ಕೇಳುವ ಅಭ್ಯಾಸವಿಲ್ಲವಲ್ಲ."

"ನಾನು ಕೇಳುತ್ತಿಲ್ಲವೆ?"

"ನಿನ್ನ ಹಾಗೆ ಎಲ್ಲಾರೂ ಇರುವುದಕ್ಕೆ ಸಾಧ್ಯವೇಮ್ಮ."

"ಹೋಗಿ ಅಣ್ಣಾ–ನೀವು ಸುಮ್ಮನೆ ಹೊಗಳುವಿರಿ?"

"ಅದಿರಲಿ-ನಾನು ಸೂರಪ್ಪನವರಿಗೇನು ಹೇಳಲಿ?"

"ನನಗೆ ಈ ಎಲೆಕ್ಷನ್ ವಿಷಯ ಏನೂ ತಿಳಿಯದಲ್ಲಾ."

"ಅವರು ಎಲ್ಲಾ ತಿಳಿಸಿಕೊಡುತ್ತಾರೆ."

"ನಾನು ಯೋಚನೆಮಾಡಿ ಹೇಳುತ್ತೇನೆ."

"ಯೋಚನೆಗೇನಿದೆಯಮ್ಮ-ನಿನಗೆ ಕಾಲಾವಕಾಶವಿದೆಯೇ ಅಷ್ಟು ಹೇಳು."

"ಅವಕಾಶ ಮಾಡಿಕೊಳ್ಳಬೇಕು. ಟೆನ್ನೀಸ್ ಬಿಟ್ಟು ಬಿಡಬೇಕಾಗುತ್ತದೆ. ಅಲ್ಲದೆ-ಸೂರಪ್ಪನವರಿಗೆ ಎಲೆಕ್ಷನ್ ಆದರೇನು, ಬಿಟ್ಟರೇನು-ನನಗೇನು ಇದರ ಸಂಬಂಧ."

"ಹುಚ್ಚೀ-ನಿನಗೆ ಗೊತ್ತಿಲ್ಲ. ಆ ಮನುಷ್ಯ ಕೈಯಲ್ಲಿರಬೇಕು. ಇಂದಲ್ಲ ನಾಳೆ ಬಹಳ ದೊಡ್ಡ ಪದವಿಗೇರುವ ಮನುಷ್ಯ. ಹಣವಂತ-ಪ್ರಭಾವಶಾಲಿ. ನಾಳೆ ನಿನಗೇನಾದರೂ ಕೆಲಸವಾಗಬೇಕಾದರೆ ಆತನ ಕೈಯಿಂದ ಸುಲಭವಾಗಿ ಮಾಡಿಸಬಹುದು."

"ನನಗೇನು ಕೆಲಸವಾಗಬೇಕಾಗಿದೆ ಅವರಿಂದ?"

"ಏನೂ ಇಲ್ಲವೇ? ಫಾರಿನ್ ಸ್ಕಾಲರ್‌ಷಿಪ್ ಬೇಕು ಎಂತಾ ನೀನು ಹೇಳುತ್ತಿಲ್ಲವೇ? ಈಗ ಎಲೆಕ್ಷನ್ನಿಗೆ ಓಡಿಯಾಡಿದ್ದಕ್ಕೂ ಸೂರಪ್ಪನವರು ನಿನ್ನ ಬರಿಗೈಯಲ್ಲಿ ಮನೆಗೆ ಕಳುಹಿಸುವುದಿಲ್ಲ."

"ಹಾಗೇ ಆಗಲಪ್ಪಾ-ನೀವು ಹೇಳಿದ ಮೇಲೆ ಬೇಡವೆನ್ನುತ್ತೇನೆಯೇ?" ಎಂದು ಸುಭದ್ರಾ ತಂದೆಗೆ ಆಶ್ವಾಸನ ಕೊಟ್ಟಳು.

ಸುಭದ್ರೆಯ ನೆರವನ್ನು ತಂದೆ ದೊರಕಿಸಿಕೊಂಡ ಸುದ್ದಿಯನ್ನು ವೆಂಕಪ್ಪಯ್ಯನವರ ಬಾಯಿಂದಲೇ ಶ್ರೀನಿವಾಸ ಕೇಳಿದ. ತಂದೆಯ ಚಾಣಾಕ್ಷತನಕ್ಕೆ ಬೆರಗಾದ. ಆದರೆ ಇಂಥ ಅಪ್ರಿಯ ಕೆಲಸಮಾಡುವುದಕ್ಕೆ ಸುಭದ್ರೆ ಒಪ್ಪಿಕೊಂಡ ವಿಷಯ ಶ್ರೀನಿವಾಸನ ಕುತೂಹಲ ಕೆರಳಿಸಿತು. ಶಂಕರ ಹೇಳಿದ್ದು ನೆನಪಾಯಿತು. ಅವಳೇ ಅಲ್ಲವೇ ಶಂಕರನನ್ನು ಸಿ.ಐ.ಡಿ.ಯಾಗಿ ನೇಮಿಸಿದ್ದು. ರಾಜಕಾರಣದಲ್ಲಿಯೂ ಕೈಹಾಕಿ ತನ್ನ ತಂದೆಯ ಸಹಾಯದಿಂದ ತನ್ನನ್ನು ಎದುರಿಸಬೇಕೆಂದು ಅವಳು ಯೋಚಿಸುತ್ತಿದ್ದಾಳೆಂದು ಭಾವಿಸಿದ.

ಹೊಸದಾಗಿ ಹುಟ್ಟಿಕೊಂಡ ಈ ಪ್ರಚ್ಛನ್ನ ಶತ್ರುವಿನ ಬಲಾಬಲಗಳನ್ನು ಶ್ರೀನಿವಾಸ ಚೆನ್ನಾಗಿ ಬಲ್ಲ. ಅವನ ಮನಸ್ಸಿಗೆ ದಾರುಣ ವೇದನೆಯಾಯಿತ್ತು

ಮುಂದಿನ ಜೀವನದ ನೂರಾರು ಚಿತ್ರಗಳು ಅವನ ಕಣ್ಣು ಮುಂದೆ ಸುಳಿದು ಹೋದುವು.

ಪ್ರಮಾಣವನಿಗೆ ಸುಖಶ್ರೀಯನ್ನು ಕಂಡರೆ ವಿರಸವಿರಲಿಲ್ಲ. ಆದರೆ ಲಕ್ಷ್ಯ ಕಾಣುತ್ತಿದ್ದಂತ ಸನ್ಯಾಸ ತ್ಯಜಿಸಲು ಅವನು ಸಿದ್ಧನಾಗಿರಲಿಲ್ಲ. ಜೀವನದಲ್ಲಿ ತಾನು ಕಾಣಲಿಚ್ಛಿಸುತ್ತಿರುವ ಬೆಳಕಿಗೆ ಯಾವದೂ ಅಡ್ಡಿಯಾಗದಂತೆ ಎಚ್ಚರವಾಗಿರಲು ಸದಾ ಪ್ರಯತ್ನಿಸುತ್ತಿದ್ದ.

ಆದರೊಮ್ಮೊಮ್ಮೆ ಮನಸ್ಸು ದುರ್ಬಲವಾಗುತ್ತಿತ್ತು. ರಸವಂತಿಗಳ ಹೊಯ್ಲಾಟಕ್ಕೆ ಸಿಕ್ಕು ಬುದ್ಧಿ ಮಂಕಾಗುತ್ತಿತ್ತು. ಗುರಿಯನ್ನು ಕಿತ್ತು ಕಾಲ ಕೆಳಗೆ ಯಾವದೋ ಮಹಾಶಕ್ತಿ–ರುದ್ರಶಕ್ತಿ ಹೊಸಕಿ ಹಾಕಿದಂತಾಗುತ್ತಿತ್ತು. ಕಾಳಶಕ್ತಿಯೊಂದರ ಜತೆ ಅವನ ಮನಸ್ಸಿನ ಮಹಾಬೆಳಕು ನಿರಂತರ ಹೋರಾಟ ಸಾಗಿಸಿತ್ತು.

## ೧೫

ಮೈಸೂರು ರಾಜಕೀಯ ಇತಿಹಾಸದಲ್ಲಿ ಚುನಾವಣೆ ಬಹಳ ಮುಖ್ಯ ಸ್ಥಾನವನ್ನಾಕ್ರಮಿಸಿತ್ತು. ಸುಮಾರು ಇಪ್ಪತ್ತು ವರ್ಷಗಳಿಂದ ‘ಸ್ವತಂತ್ರ ಪಕ್ಷ’ ಮೈಸೂರಿನ ರಾಜಕಾರಣದ ಏಕಮಾತ್ರ ಪಕ್ಷವಾಗಿತ್ತು. ಭಾರತ ವರ್ಷ ಒಂದಲ್ಲ ಒಂದು ದಿನ ಬ್ರಿಟಿಷರ ವಜ್ರಮುಷ್ಟಿಯಿಂದ ಬಿಡುಗಡೆ ಹೊಂದಬೇಕು. ಭಾರತೀಯರು ಸ್ವತಂತ್ರರಾದಲ್ಲದೆ ಅವರ ರಾಜಕೀಯ, ಆರ್ಥಿಕ, ಸಾಮಾಜಿಕ, ನೈತಿಕ ಮಟ್ಟ ಮೇಲಕ್ಕೇಳುವುದಿಲ್ಲ ಎನ್ನುವ ತತ್ತ್ವವನ್ನು ದಾದಾಭಾಯ್, ತಿಲಕ್, ಗಾಂಧೀಜಿ, ಲಾಲಾ ಲಜಪತರಾಯ್, ಮೋತಿಲಾಲ ನೆಹ್ರೂ ಮೊದಲಾದ ಮಹಾನಾಯಕರು ಸಾರುತ್ತ ಬಂದಿದ್ದರು.

ಮೈಸೂರ ಹೊರಗಡೆ ಯಾವ ಚಟುವಟಿಕೆಯಾದರೂ ಮೈಸೂರು ಕೂಡಲೆ ಪ್ರತಿಧ್ವನಿಸುತ್ತಿತ್ತು. ತಿಲಕರು ಗಣಪತಿ ಉತ್ಸವಕ್ಕೆ ರಾಷ್ಟ್ರೀಯ ಸ್ವರೂಪವನ್ನಿತ್ತರೆ ಮೈಸೂರಿನಲ್ಲಿ ಅದೇ ದೃಷ್ಟಿಯಿಂದ ಗಣಪತಿಯುತ್ಸವ ಆರಂಭವಾಗುತ್ತಿತ್ತು. ದುಗ್ಗಿರಾಲಾ ಗೋಪಾಲಕೃಷ್ಣಯ್ಯನವರು ‘ರಾಮದಂಡು’ ಸ್ಥಾಪಿಸಿದರೆ ಮೈಸೂರಿನಲ್ಲಿ ಒಂದು ರಾಮದಂಡು ಆರಂಭವಾಗು

ತ್ತಿತ್ತು- ಗಾಂಧೀಜಿ ಖಾದಿ ಪ್ರಸಾರ ಮಾಡಿದರೆ ಮೈಸೂರಿನಲ್ಲಿಯೂ ಖಾದಿ ಕೇಂದ್ರಗಳು ಹುಟ್ಟಿಕೊಳ್ಳುತ್ತಿದ್ದುವು.

ಮೈಸೂರಿನ ಎಲೆಕ್ಷನ್ ವೇಳೆಗೆ ಭಾರತೀಯ ರಾಜಕಾರಣದಲ್ಲಿಯೂ ಪ್ರಬಲ ಮಾರ್ಪಾಟಾಗಿತ್ತು. ಗಾಂಧೀಯುಗ ಆರಂಭವಾಗುವ ಸೂಚನೆ. ಭಾರತದ ರಾಜಕೀಯ ಧುರೀಣರು ಬರೀ ಮಾತುಗಾರರೆಂದು ಭಾವಿಸಿದ್ದ ಸಾರ್ವಭೌಮ ಸರ್ಕಾರ ಗಾಂಧೀಜಿಯವರಲ್ಲಿ ಒಬ್ಬ ನಿಷ್ಠ ಕರ್ತೃತ್ವಶಾಲಿಯನ್ನು ಕಂಡಿತು. ಆತನ ನಿರಾಡಂಬರ ನುಡಿಗೆ ಭಾರತದ ಕೋಟ್ಯಾಂತರ ಪ್ರಜೆ ತಲೆದೂಗುತ್ತಿದ್ದುದನ್ನು ಕಂಡು ಅವರ ಮನಸದಲ್ಲಿ ಭಯ ಸಂಕುರಿಸಿತ್ತು. ರಾಜಕಾರಣವನ್ನು ಹತ್ತು ಜನ ಇಂಗ್ಲೀಷ್ ಕಲಿತ ವಿದ್ಯಾವಂತರ ಹಿಡಿತದಿಂದ ಬಿಡುಗಡೆಮಾಡಿ ಜನ ಸಮುದಾಯಕ್ಕೆ ಒಪ್ಪಿಸುವ ಕೆಲಸವನ್ನು. ಗಾಂಧೀಜಿ ಕೈಗೊಂಡಿದ್ದರು.

ಗಾಂಧೀಜಿಯ ಪ್ರಭಾವ ಕಂಡ ದೂರದರ್ಶಿಗಳಾದ ಆಳರಸರು ಭಾರತೀಯರಿಗೆ ಸ್ವಲ್ಪ ಸ್ಥಾನಮಾನ ಕೊಡಲಾರಂಭಿಸಿದರು. ಅಲ್ಲಿ ಇಲ್ಲಿ ಕೆಲವು ಹುದ್ದೆಗಳನ್ನು ಭಾರತೀಯರಿಗೆ ಕೊಟ್ಟುಬಿಟ್ಟರೆ ಅವರು ತೃಪ್ತರಾಗಿ ಶಾಂತರಾಗುತ್ತಾರೆಂದು ಭಾವಿಸಿದರು. ಕೆಲವು ವಿಶೇಷ ರಾಜಕೀಯ ಸುಧಾರಣೆಗಳನ್ನು ಅನುಗ್ರಹಿಸಿ ಭಾರತ ರಾಜ್ಯಸೂತ್ರ ನಿರ್ವಹಣದಲ್ಲಿ ಭಾರತೀಯರಿಗೂ ಸ್ವಲ್ಪ ಭಾಗ ಕೊಡುವುದಾಗಿ ವಚನವಿತ್ತರು. ಬ್ರಿಟಿಷರ ಚಾಣಾಕ್ಷತನವನ್ನು ಕಂಡ ಗಾಂಧೀಜಿ ಈ ಸುಧಾರಣೆಗಳೂ ಸ್ಥಾನಮಾನಗಳೂ ಕ್ಷುಲ್ಲವಾದುವೆಂದು ಸಾರಿ ನಿರಾಕರಿಸಿದ್ದರು. ಗಾಂಧೀಜಿಗೆ ಬೇಕಾಗಿದ್ದುದು ಪೂರ್ಣಸ್ವಾತಂತ್ರ್ಯ. ಆದರೆ ಮಿತವಾದೀ ಪಕ್ಷದ ರಾಜಕಾರಣಿಗಳು ಬ್ರಿಟಿಷರಿಗೆ ಸಹಕಾರ ನೀಡಿ ಅವರ ಸಂಬಂಧವನ್ನು ಚಿರಕಾಲ ಉಳಿಸಿಕೊಳ್ಳುವುದರಲ್ಲಿ ಆಸಕ್ತರಾಗಿದ್ದರು.

ಭಾರತದ ಕೇಂದ್ರ ಸರ್ಕಾರದ ಸೂಚನೆಯಂತೆ ಸಂಸ್ಥಾನಗಳ ಸರ್ಕಾರಗಳೂ, ಪ್ರಾಂತ್ಯ ಸರ್ಕಾರಗಳೂ ಕೆಲವು ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತಂದು ಜನರಿಗೆ ಕೆಲವು ಸ್ಥಾನಮಾನಗಳನ್ನು ಕೊಡಲು ಆತುರರಾಗಿದ್ದುವು.

ಈ ಪರಿಸ್ಥಿತಿಯನ್ನು ಚೆನ್ನಾಗಿ ಗ್ರಹಿಸಿದ್ದವರೆಂದರೆ ಮೈಸೂರಿನಲ್ಲಿ ಸೂರಪ್ಪನವರೊಬ್ಬರೇ. ಸ್ವರಾಜ್ಯ ಪಕ್ಷದಲ್ಲಿದ್ದ ರಾಜಕಾರಣಿಗಳನ್ನು ಕಂಡರೆ ಸೂರಪ್ಪನವರಿಗೆ ತಿರಸ್ಕಾರ: ಅವರ ರಾಜಕಾರಣವನ್ನು ಪರಿಹಾಸ್ಯ ಮಾಡು

ವುದೆಂದರೆ ಸೂರಪ್ಪನವರಿಗೆ ನಿತ್ಯ ಉತ್ಸಾಹ. ಪಕ್ಷ ಮತ್ತು ಅದರ ಜನರ ಬಗ್ಗೆ ಇಷ್ಟೊಂದು ಆಳವಾದ ತಿರಸ್ಕಾರವಿದ್ದರೂ ಪರಿಸ್ಥಿತಿಯ ಪ್ರಭಾವವನ್ನು ಗ್ರಹಿಸಿ ಅವರು ಸ್ವರಾಜ್ಯ ಪಕ್ಷದ ಆಶ್ರಯದಲ್ಲಿ ಚುನಾವಣೆಗೆ ನಿಲ್ಲಲು ದೊಡ್ಡ ಮನಸ್ಸು ಮಾಡಿದರು.

ಸ್ವರಾಜ್ಯ ಪಕ್ಷವನ್ನು ಕಟ್ಟಿ ಬೆಳಸಿದವರು ಮೂರು ನಾಲ್ಕು ಜನ ನಿಸ್ವಾರ್ಥ ನಾಯಕರು. ಅವರ ನಿರವಿಗೆ ಬಂದ ತರುವಾಯದ ನಾಯಕರು ಹಲವು ರೀತಿಗಳಲ್ಲಿ ತಮ್ಮ ಪ್ರಭಾವ ಬೆಳಸಿಕೊಂಡು ಸ್ಥಾಪಕ ನಾಯಕರನ್ನು ಸ್ಥಾನಭ್ರಷ್ಟರನ್ನಾಗಿ ಮಾಡಿದ್ದರು. ಜಾತ್ಯಾತೀತವಾಗಿದ್ದ ಪಕ್ಷ ಕ್ರಮ ಕ್ರಮೇಣ ಜಾತ್ಯಂಧರ ಕೈವಶವಾಯಿತು. ಸ್ಥಾಪಕ ನಾಯಕರಲ್ಲಿ ಒಬ್ಬಿಬ್ಬರೂ ಅವರ ಅನುಯಾಯಿಗಳೂ ಆ ಪಕ್ಷಕ್ಕೆ ತರ್ಪಣ ಕೊಟ್ಟು ಡೆಮೋಕ್ರ್ಯಾಟಿಕ್ ಪಾರ್ಟಿಯನ್ನು ಸ್ಥಾಪಿಸಿ ದೀನ, ದಲಿತರ ಉದ್ಧಾರಕ್ಕೆ ದುಡಿಯಲಾರಂಭಿಸಿದ್ದರು.

ಮೊದಲಿದ್ದಂತೆ ಈಗ ಸ್ವರಾಜ್ಯ ಪಕ್ಷ ನಿರ್ಧನರ ಪಕ್ಷವಾಗಿರಲಿಲ್ಲ. ಅದಕ್ಕೆ ಲಕ್ಷಾಧೀಶ್ವರರು, ಮಿಲ್ ಮಾಲಿಕರು, ಧನ ಪಿಶಾಚಿಗಳೂ ನೆರವು ನೀಡುತ್ತಿದ್ದರು. ಡೆಮೋಕ್ರ್ಯಾಟಿಕ್ ಪಕ್ಷ ಭಿಕ್ಷುವೆತ್ತಿ ಪಾರ್ಟಿಯ ಕಾರ್ಯಕ್ರಮ ಸಾಗಿಸಿತ್ತು.

ಚುನಾವಣೆಯಲ್ಲಿ ಸೂರಪ್ಪನವರ ಎದುರು ನಿಂತಿದ್ದ ಲೋಕನಾರ್ಥರಿಗೆ ಸೋಲು ಸಿದ್ಧವೆಂಬುದು ಎಲ್ಲರ ಬಾಯಲ್ಲಿಯೂ ಇದ್ದ ಮಾತು. ಆದರೆ ಈ ಉತ್ಸಾಹದಲ್ಲಿ ಅತಿಯಾದ ಆತ್ಮಶ್ರದ್ಧೆಯಲ್ಲಿ ಸೂರಪ್ಪನವರಿಗೆ ನಂಬಿಕೆಯಿಲ್ಲ. ಚುನಾವಣೆಗಳೆಂದರೆ ಹುಚ್ಚು ವ್ಯಾಪಾರ. ಯಾವ ಹೊತ್ತಿನಲ್ಲಿ ಏನಾಗುತ್ತದೋ ಹೇಳಲು ಸಾಧ್ಯವಿಲ್ಲ. ಒಬ್ಬ ಉಮೇದುವಾರನಿಗೇ ಮತ ಕೊಡಬೇಕೆಂದು ಚುನಾವಣೆಯ ಕಟ್ಟೆಗೆ ಹೋದವನು ಕೊನೆ ಗಳಿಗೆಯಲ್ಲಿ ಮನಸ್ಸು ಬದಲಾಯಿಸಿ ಎದುರು ಪಕ್ಷದವನಿಗೆ ಮತ ಕೊಟ್ಟು ಬರುತ್ತಿದ್ದುದೂ ಉಂಟು.

ಸ್ವರಾಜ್ಯ ಪಕ್ಷದ ಕುಂದುಕೊರತೆಗಳನ್ನು ಚೆನ್ನಾಗಿ ಅರಿತಿದ್ದ ಸೂರಪ್ಪನವರು ಲೋಕನಾರ್ಥ ಮತ್ತು ಅವರ ಪಕ್ಷದ ಬಲವನ್ನು ಅಲ್ಲಗಳೆಯಲಿಲ್ಲ. ಜನ ಅಕಸ್ಮಾತ್ತಾಗಿ ಲೋಕನಾರ್ಥ ಕಡೆ ಒಲಿದರೆ ಏನು ಮಾಡಬೇಕೆಂಬು ವಿಚಾರ ಮಾಡಿದರು.

ಚುನಾವಣೆಯ ಪ್ರಸಾರಕ್ಕೆ ಸುಭದ್ರೆಯಂಥ ಕೆಲವು ಹೆಣ್ಣು ಮಕ್ಕಳ ಸಹಾಯವಿದ್ದರೆ ಒಳ್ಳೆಯದೆಂದು ಭಾವಿಸಿದರು. ವೆಂಕಪ್ಪಯ್ಯನವರು ಬಂದು ತಮ್ಮ ಮಗಳು ಪ್ರಸಾರ ಕಾರ್ಯ ಮಾಡಲೊಪ್ಪಿರುವ ಸುದ್ದಿ ತಿಳಿಸಿದ ಮೇಲೆ ಸೂರಪ್ಪನವರಿಗೆ ಸ್ವಲ್ಪ ಸಮಾಧಾನವಾಯಿತು

ಒಂದು ಸಂಜೆ ತಮ್ಮ ವಾಕಿಂಗ್ ಮುಗಿಸಿಕೊಂಡು ಸೂರಪ್ಪನವರು ವೆಂಕಪ್ಪಯ್ಯನವರ ಮನೆಯ ಮುಂದೆ ಬಂದರು. ಒಳಗೆ ಹೋಗಿ ವೆಂಕಪ್ಪಯ್ಯನವರಿದ್ದರೆ ಕಂಡು ಬರೋಣ ಎಂದು ಭಾವಿಸಿ ಕಾಲಿಟ್ಟರು.

ಸೂರಪ್ಪನವರನ್ನು ಕಂಡು ನರಸಮ್ಮ ಆಶ್ಚರ್ಯಚಕಿತರಾದರು. ಅವರಿಗೆ ಹಿಡಿಸಲಾರದಷ್ಟು ಆನಂದವಾಯಿತು.

"ಯಜಮಾನರು ಇದ್ದಾರೆಯೇನಮ್ಮ" ಎಂದರು ಸೂರಪ್ಪ.

"ಇಲ್ಲ–ಕ್ಲಬ್ಬಿಗೆ ಹೋದರು."

"ಸರಿ–ನಾನು ಬಂದಿದ್ದೆ ಎಂದು ತಿಳಿಸಿಬಿಡಿ" ಎಂದು ಹೇಳಿ ಹೊರಡಲನುವಾದರು. ನರಸಮ್ಮ ಔಪಚಾರಿಕವಾಗಿ

"ಕುಳಿತುಕೊಳ್ಳಿ. ಸುಭದ್ರಾ ಇದ್ದಾಳೆ. ಸ್ವಲ್ಪ ಕಾಫಿ ತೆಗೆದುಕೊಂಡು ಹೋಗಿ. ನೀವು ಬರುವುದೇ ಅಪರೂಪ"

ಎಂದರು. ಸೂರಪ್ಪನವರು ತೊಟ್ಟಿಯಲ್ಲಿ ಕುಳಿತರು. ಅಲಂಕಾರ ಮಾಡಿಕೊಳ್ಳುತ್ತಿದ್ದ ಸುಭದ್ರೆಗೆ ನರಸಮ್ಮನವರು ಸುದ್ದಿ ಮುಟ್ಟಿಸಿ ಕಾಫಿ ತಿಂಡಿ ಮಾಡಲು ಒಳಗೆ ಹೋದರು.

ಸುಭದ್ರಾ ನಿತ್ಯಕ್ಕಿಂತ ಹೆಚ್ಚು ಲಕ್ಷ್ಯಕೊಟ್ಟು ಅಲಂಕಾರ ಮಾಡಿಕೊಂಡು ತೊಟ್ಟಿಗೆ ಬಂದು ಸೂರಪ್ಪನವರಿಗೆ ಕೈಮುಗಿದಳು. ಸೂರಪ್ಪನವರು ಸಲಿಗೆ ಆಶ್ಚರ್ಯಗಳಿಂದ

"ಸುಭದ್ರಾ ಅಲ್ಲವೇ"

"ಹೌದು."

"ಎಷ್ಟು ಬೆಳೆದುಬಿಟ್ಟೆಯಮ್ಮಾ. ನಿನ್ನ ನೋಡಿ ಬಹಳ ದಿವಸವಾಯಿತು. ನನಗೆ ಗುರುತೇ ಸಿಕ್ಕಲಿಲ್ಲ."

ಸುಭದ್ರಾ ನಸುನಾಚಿ

"ನೀವು ಬರುವುದು ಅಣ್ಣನಿಗೆ ಗೊತ್ತಿರಲಿಲ್ಲವೆಂದು ಕಾಣುತ್ತದೆ."

“ಇಲ್ಲ–ನಾನು ವಾಕಿಂಗ್ ಮುಗಿಸಿಕೊಂಡು ಮನೆಗೆ ಹೊರಟಿದ್ದೆ. ಅವರು ಮನೆಯಲ್ಲಿದ್ದರೆ ಜತೆಯಲ್ಲಿ ಕರೆದುಕೊಂಡು ಹೋಗುವ ಎಂದು ಬಂದೆ.”

“ಬಹಳ ಸಂತೋಷ. ದೊಡ್ಡವರು ಬಡವರ ಮನೆಗೆ ಬರುವುದೇ ಒಂದು ಭಾಗ್ಯ.”

“ಸುಭದ್ರಾ, ನನ್ನ ಎಲೆಕ್ಷನ್ನಿಗೆ ನೀನು ಸಹಾಯ ಮಾಡಲೊಪ್ಪಿದ್ದು ತುಂಬ ಸಂತೋಷ. ಹೆಂಗಸು ಮತದಾರರ ಪಟ್ಟಿ ಸಿದ್ಧಪಡಿಸಲು ಹೇಳಿದ್ದೇನೆ. ಅದನ್ನು ಕಳಿಸಿಕೊಡುತ್ತೇನೆ. ನೀನು ಅವರನ್ನು ಕಂಡು ಅವರ ಮತ ದೊರಕಿಸುವ ಪ್ರಯತ್ನ ಮಾಡಬೇಕು.”

“ಅಗತ್ಯವಾಗಿ ಆಗಲಿ.”

“ನಿನಗಿರೋ ವಿವೇಕ ನಮ್ಮ ಶ್ರೀನಿವಾಸೂಗೆ ಇಲ್ಲ. ಅವನೊಬ್ಬ ನನ್ನ ಜತೆಯಲ್ಲಿ ನಿಂತಿದ್ದರೆ ಚೆನ್ನಾಗಿತ್ತು.”

“ಏಕೆ? ಅವರೇನು ಹೇಳಿದರು.”

“ಪರೀಕ್ಷೆಯಂತೆ! ಪುರಸತ್ತಾಗಲ್ಲವಂತೆ!!”

“ನಿಮಗೆ ಚುನಾವಣೆಯಾದರೆ ಅವರಿಗೆ ಸಂತೋಷವಷ್ಟೆ!”

“ಖಂಡಿತವಾಗಿ—ಏಕೆ ಹಾಗೆ ಕೇಳುವೆ?”

“ಅವರೂ ಲೋಕನಾರ್ಥ ಬಹಳ ಸ್ನೇಹಿತರೆಂದು ಕೇಳಿದ್ದೇನೆ.”

“ತಂದೆಗಿಂತ ಸ್ನೇಹಿತರು ಹೆಚ್ಚೇ?”

“ಅಲ್ಲ—ಆದರೆ ಶ್ರೀನಿವಾಸ್ ಹೇಗೆ ಭಾವಿಸಿದ್ದಾರೆಯೋ?”

“ನನ್ನ ವಿರುದ್ಧ ನನ್ನ ಮಗ ಪ್ರಚಾರ ಮಾಡುತ್ತಿರುವನೇ?”

“ನಾನು ಹಾಗೆ ಹೇಳುವುದಿಲ್ಲ—ಯಾರೋ ಅಂದ ಮಾತು ನಿಮ್ಮ ಕಿವಿಯಮೇಲೆ ಹಾಕಿದೆ.”

ನರಸಮ್ಮ ಮಗಳನ್ನು ಕೂಗಿ ಅವಳ ಕೈಗೆ ಎರಡು ಲೋಟಾ ಕಾಫಿ, ಎರಡು ತಟ್ಟೆಗಳಲ್ಲಿ ಚಕ್ಕುಲಿ, ಹಣ್ಣು ಕೊಟ್ಟರು.

ಸೂರಪ್ಪನವರು ಚಕ್ಕುಲಿಯ ಬಳ್ಳಿಯನ್ನು ಮುರಿದು ಬಾಯಿಗಿಟ್ಟು ಕೊಂಡು ಕಾಫಿ ರುಚಿ ನೋಡಿದರು. ಅವರ ಮನಸ್ಸು ಎತ್ತಲೋ ಹಾರಾಡುತ್ತಿತ್ತು.

ಶಿಷ್ಟತೆಗಾಗಿ ಸುಭದ್ರೆಯೂ ಕಾಫಿ ಸೇವಿಸತೊಡಗಿದಳು. ಸೂರಪ್ಪನವರು ಬಾಯಿಗೆ ಕಾಫಿ ಲೋಟ ಹಚ್ಚಿ ಅರೆಗಣ್ಣಿನಿಂದ ಸುಭದ್ರೆಯನ್ನು ನೋಡಿದರು.

'ಇವಳು ನಾನು ನೋಡಿದ್ದ ಹುಡುಗಿಯೇ–ನಾನು ಎತ್ತಿ ಆಡಿಸಿದ ಮಗುವೇ–ನನ್ನನ್ನು ಕಾಡುತ್ತಿದ್ದ ಕುಮಾರಿಯೇ?'

ಎಂಬ ವಿಚಾರಪರಂಪರೆ ಸೂರಪ್ಪನವರ ತಲೆಯಲ್ಲಿ ಸುಳಿದಾಡಿತು.

ಸುಭದ್ರೆ ಮುಗ್ಧವಯಸ್ಸಿನ ಗಡಿ ದಾಟಿರಲಿಲ್ಲ. ಅವಳಿಗದೇ ಹತ್ತೊಂಭತ್ತನೆಯ ವರ್ಷ ನಡೆಯುತ್ತಿತ್ತು. ಮನೆಯಲ್ಲಿ ಅಕ್ಕರೆಯಿಂದ ಬೆಳೆದ ಮಗು ಕಾಲೇಜ್ ಶಿಕ್ಷಣದಿಂದ ಅತ್ಯಲ್ಪ ಕಾಲದಲ್ಲಿ ವಿಶೇಷ ಲೋಕಾನುಭವವನ್ನು ದೊರಕಿಸಿಗೊಂಡ ಪ್ರೌಢೆ. ಪ್ರೌಢತ್ವಕ್ಕೊಪ್ಪುವ ಗಾಂಭೀರ್ಯ. ಯೌವನ, ಗಾಂಭೀರ್ಯ, ಸೌಂದರ್ಯ ಮುಪ್ಪುರಿಗೊಂಡು ಸುಭದ್ರೆಗೆ ವಿಶೇಷ ಶೋಭೆಯನ್ನಿತ್ತಿದ್ದವು.

ಸುಭದ್ರೆಯದು ಒಟ್ಟಿಮುಖ. ಪೌರ್ಣಿಮಾ ಚಂದ್ರನ ಶುಭ್ರಶ್ವೇತ ಶೀತಲ ಸೌಂದರ್ಯವಲ್ಲ ಅವಳದು. ಹುಣ್ಣಿಮೆ ಕಳೆದ ಎರಡು ದಿನದ ಮೇಲೆ ಅರೆಗತ್ತಲೆ ಬೆರತ ಬೆಳಕು ಮಾಸಲು ಮಾಸಲಾಗಿ ಬಿತ್ತರಿಸುವ ಪ್ರಕೃತಿಯಲೀಲಾ ವಿಲಾಸ ಅವಳ ಪ್ರತಿಚ್ಛಾಯೆಯಾಗಿತ್ತು. ನಕ್ಕರೆ ತುಂಬಿದ ಕೆನ್ನೆಗುಳಿ. ಕಪ್ಪು ಕೆಂಪು ಬೆರತ ಕಣ್ಮನ ತಣಿಸುವ ವರ್ಣವೈಭವ. ತಲೆತುಂಬ ಕೂದಲು, ಬಿಲ್ಲಿನಂತೆ ಬಾಗಿ ಅಂಚಿನಲ್ಲಿ ಮೊನೆಯಾಗಿ ಕಾಣುತ್ತಿದ್ದ ವಿಶಾಲವಾದ ಕಣ್ಣುಗಳು. ನುರಿತ ಐಂದ್ರಜಾಲಿಕನ ಕೈಗೆ ಸಿಕ್ಕಿದ ಚೆಂಡುಗಳಂತಾಡುತ್ತಿದ್ದ ಕಪ್ಪನೆಯ ಕಣ್ಣು ಗುಡ್ಡೆಗಳು.

ಸಾವಿರ ಹೆಣ್ಣುಮಕ್ಕಳು ಮಧ್ಯೆಯಿದ್ದರೂ ಸುಭದ್ರೆಯ ಚೆಲುವು ಎದ್ದು ಕಾಣುತ್ತಿತ್ತು. ಚೆಲುವಿಗೆ ತಕ್ಕ ನಿಲುವು. ಸ್ವಲ್ಪ ಪ್ರಮಾಣ ಮೀರಿದೆಯೇನೋ ಎನಿಸುತ್ತಿದ್ದ ತುಂಬಿದ ಸ್ತನದ್ವಯ. ಅದರ ಬಳ್ಕೆ, ವಿದ್ಯುದಾಕರ್ಷಣೆಯನ್ನು ಬಲ್ಲ ಪ್ರಾವೀಣ್ಯತೆ. ತೆಳ್ಳನೆಯ ಒಳಕುಪ್ಪಸವನ್ನು ಬಿಗಿಯಾಗಿ ತೊಡುತ್ತಿದ್ದಳು. ಅದರ ಮೇಲೆ ಗಾಜಿನಂತಹ ಕುಪ್ಪಸ. ಸ್ತನಗಳು ಮಹಾವೃಕ್ಷಗಳಂತೆ ಎದ್ದು ನಿಲ್ಲುತ್ತಿದ್ದವು. ಅವಕ್ಕೆ ಸಮತೋಲನವಾದ ತುಂಬಿದ್ದ ನಿತಂಬಗಳು.

ಅವಳು ಎಂತಹ ಸೀರೆಯುಟ್ಟರೂ ಅವಳ ಮಾಟವಾದ ತೊಡೆಗಳ ಭಾವ ಕಾಣುತ್ತಿತ್ತು. ಅವಳು ಧರಿಸುತ್ತಿದ್ದ ತೆಳು ಜಾರ್ಜೆಟ್, ಬೆಂಗಾಲ್ ಸಿಲ್ಕ್ ಸೀರೆಗಳ ಸಹಾಯದಿಂದ ತೊಡೆಗಳ ರೇಖಾ ವಿನ್ಯಾಸ ಒಡೆದು ಕಾಣುತ್ತಿದ್ದವು.

ಸುಭದ್ರೆಯ ಮುಂಗೈ, ನೀಳವಾದ ಬೆರಳುಗಳು ಶಿಲ್ಪಿಯ ಈರ್ಷೆಯುದಿಸುತ್ತಿದ್ದವು. ಬಳೆ ತುಂಬಿದ ಬಲಗೈಯ ಚಲನವಲನ ಅವಳ ಕಲಾವಂತಿಕೆಯ ಕುರುಹುಗಳಾಗಿದ್ದವು.

ರೂಕ್ಷನನ್ನು ರಸಿಕನನ್ನಾಗಿಸುವ ಸುಭದ್ರೆಯ ರೂಪ ವಿಲಾಸ ಕಂಡು ಸ್ವಯಂರಸಿಕರಾದ ಸೂರಪ್ಪನವರು ಚಕಿತರಾದರು. ಹೆಣ್ಣಿನ ಸೌಂದರ್ಯದ ಸೆಳೆಮಿಂಚಿನಾವೇಗಕ್ಕೆ ಪ್ರಗಲ್ಭ ಬುದ್ಧಿಶಾಲಿಯಾದ ಸೂರಪ್ಪನವರೂ ಬಾಗಬೇಕಾಯಿತು.

ಕಾಫಿ ಮುಗಿದಿದ್ದು ಸೂರಪ್ಪನವರಿಗೆ ಭಾಸವಾಗಲೇ ಇಲ್ಲ. ಕೈಯಲ್ಲಿ ಲೋಟ ಹಿಡಿದು ಕುಳಿತಿದ್ದರು. ಸುಭದ್ರೆ ನಸುನಗುತ್ತಾ

"ಕಾಫಿ ಕುಡಿದಿದ್ದರೆ ಲೋಟ ಕೊಡಬಹುದು" ಎಂದಳು.

ಸೂರಪ್ಪನವರು ಬಹಿರ್ಮುಖರಾದಂತೆ

"ಹೊ! ಮರೆತಿದ್ದೆ!" ಎಂದು ಅವಳ ಕೈಗೆ ಲೋಟವನ್ನಿತ್ತರು.

ಇನ್ನು ಹೆಚ್ಚು ಕಾಲ ಕುಳಿತರೆ ಅಲೌಕಿಕವಾಗುವುದೆಂದು ಸೂರಪ್ಪನವರಿಗೆ ಗೊತ್ತು. ಆದರೆ ಅಲ್ಲಿಂದ ಕಾಲು ಕೀಳಲು ಮನಸ್ಸಿಲ್ಲ. ಹೊರಡಲು ಎದ್ದು ನಿಂತರು. ತಟ್ಟನೇ ಏನೋ ನೆನಪು ಮಾಡಿಕೊಂಡು ಕಿಸೆಯಿಂದ ಪರ್ಸ್ ತೆಗೆದು ಒಂದು ಕಂತೆ ನೋಟುಗಳನ್ನು ಹೊರಗೆಳೆದು

"ಖರ್ಚಿಗೆ ಹತ್ತಿರವಿರಲಿ" ಎಂದು ಸುಭದ್ರೆಯ ಕೈಗಿತ್ತರು.

ಸುಭದ್ರೆ ಕಟ್ಟನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಹಣ ಎಷ್ಟಿರಬಹುದೆಂದು ಊಹಿಸಿ.

"ಇಷ್ಟೊಂದು ಹಣವೇಕೆ?"

"ಎಲೆಕ್ಷನ್ ಒಂದು ಜೂಜಮ್ಮ. ಹತ್ತಿರ ನಾಲ್ಕು ಕಾಸು ಹೆಚ್ಚು ಇರಬೇಕು. ಕೆಲವು ಮತದಾರರಿಗೆ ನೀನು ಹಣ ಕೊಡಬೇಕಾಗಿ ಬರಬಹುದು. ಸಂಕೋಚಪಟ್ಟುಕೊಳ್ಳಬೇಡ-ಧಾರಾಳವಾಗಿ ಖರ್ಚುಮಾಡು."

"ಹಾಗೇ ಆಗಲಿ."

"ಇನ್ನೊಂದು ವಿಷಯ–ಇವರಲ್ಲಿ ನಿನ್ನ ಸಂಭಾವನೆ ಸೇರಿಸಿಲ್ಲ–ಇದು ಖರ್ಚಿಗೆ ಕೊಟ್ಟಿರುವ ಹಣ–ನಿನ್ನ ಸಂಭಾವನೆ ವಿಷಯ ನನಗಿರಲಿ."

"ನನ್ನ ತಂದೆ ಸ್ನೇಹಿತರ ಸೇವೆ ಮಾಡುವುದು ನನ್ನ ಕರ್ತವ್ಯ. ಇದಕ್ಕೆ ಸಂಭಾವನೆಯೇಕೆ ?"

"ನಿನ್ನ ಕೈಯಲ್ಲಿ ವೃಥಾ ಸೇವೆ ಮಾಡಿಸಿಕೊಳ್ಳುವುದು ನಿನ್ನ ತಂದೆ ಸ್ನೇಹಿತರಿಗೆ ಧರ್ಮವಲ್ಲ. ಯಾವ ರೀತಿಯಲ್ಲಿ ನೋಡಿದರೂ ನಿನಗೆ ಉಡುಗೊರೆ ಕೊಡಬೇಕಾದನ್ನು ನನ್ನ ಕರ್ತವ್ಯ."

"ಕರ್ತವ್ಯ ಹೇಗೆ ?"

"ನನ್ನ ಎಲೆಕ್ಷನ್ನಿಗೆ ಸಹಾಯ ಮಾಡಿದವರಿಗೆ ಪ್ರತಿಫಲ ಕೊಡುವುದು ನನ್ನ ಅಭ್ಯಾಸ. ಅಲ್ಲದೆ ನೀನು ನಮ್ಮ ಮನೆಯ ಹುಡುಗಿ–ನನ್ನ ಸ್ನೇಹಿತನ ಮಗಳು....ನನ್ನ "

ಮುಂದೇನು ಹೇಳಬೇಕೆಂದು ಸೂರಪ್ಪನವರಿಗೆ ತೋರಲಿಲ್ಲ.

"ನಿಮ್ಮ ತಾಯಿಯವರಿಗೆ ಹೇಳಮ್ಮ ಹೋಗಿಬರುತ್ತೇನೆ."

ನರಸಮ್ಮನವರು ಒಳಗಿನಿಂದಲೇ

"ಆಗಾಗ್ಗೆ ಬರುತ್ತಿರಬೇಕಪ್ಪ. ಇದೂ ನಿಮ್ಮ ಮನೆಯೇ ?"

"ಬರದೇ ಉಂಟೇ ? ನಿಮ್ಮ ಮಗಳು ನನ್ನ ಎಲೆಕ್ಷನ್ ಅಸಿಸ್ಟೆಂಟ್. ನಾನು ಬರುತ್ತಿರಬೇಕಾಗೇ ಆಗುತ್ತದೆ. ನಾಳೆ ಅವಳೇನಾದರೂ ಲಾ ಪರೀಕ್ಷೆ ಮಾಡಿಬಂದರೆ ನನ್ನ ಆಫೀಸಿನಲ್ಲಿಯೇ ಅವಳಿಗೆ ಸ್ಥಾನ."

"ನಿಮ್ಮ ಅಭಿಮಾನ ದೊಡ್ಡದು."

ಎಂದು ನರಸಮ್ಮನವರು ಉಪಚಾರ ಹೇಳಿದರು. ಸುಭದ್ರೆ ಬಾಗಿಲು ವರೆಗೆ ಹೋಗಿ ಸೂರಪ್ಪನವರನ್ನು ಕಳುಹಿಸಿಬಂದಳು.

## ೧೬

ಮನೆಗೆ ಬಂದ ಸೂರಪ್ಪನವರಿಗೆ ಸ್ವಲ್ಪವೂ ಮನಃಶಾಂತಿಯಿರಲಿಲ್ಲ. ಎಲೆಕ್ಷನ್ ಬಗ್ಗೆ ಹೊರಗೆಷ್ಟು ಧೈರ್ಯ ತೋರುತ್ತಿದ್ದರೂ ಅವರಿಗೆ ನಿಶ್ಚಿಂತೆ ಯಾಗಿರಲಿಲ್ಲ. ಲೋಕನಾಥ್ ಅವರ ಉಮೇದುವಾರಿಕೆಗೆ ಶ್ರೀನಿವಾಸ ಸಹಾಯ ನೀಡುತ್ತಿರಬಹುದೆಂದು ಸುಭದ್ರೆ ಮಾರ್ಮಿಕವಾಗಿ ಸೂಚಿಸಿ ಸೂರಪ್ಪನವರ ಮನಸ್ಸನ್ನು ಕದಡಿಬಿಟ್ಟಿದ್ದಳು.

ಮನೆಗೆ ಬಂದವರೇ ಕಛೇರಿಯಲ್ಲಿ ಕುಳಿತು ರಾಮಾಶಾಸ್ತ್ರಿ ಮೇಲೆ ವಿನಾಕಾರಣ ರೇಗಿರೇಗಿಬಿದ್ದರು. ಲಾಯರವರ ಸ್ವಭಾವ ಚೆನ್ನಾಗಿ ಅರಿತ ಅವನು ಮುನಿಯುವ ಸಂಭವವೇ ಇರಲಿಲ್ಲ.

"ಶ್ರೀನಿವಾಸ ಮನೆಗೆ ಬಂದಿದ್ದಾನೇನಯ್ಯಾ" ಎಂದು ಗದರಿಕೊಂಡೇ ರಾಮಾಶಾಸ್ತ್ರಿಯನ್ನು ಕೇಳಿದರು. ಶಾಸ್ತ್ರಿ ಗಡಗಡ ನಡುಗುತ್ತ

"ಇಲ್ಲ ಸ್ವಾಮಿ" ಎಂದ. ಲಾಯರು ಹೂಂಕರಿಸಿ ಸುಮ್ಮನಾದರು.

ಸೂರಪ್ಪನವರ ಮನಸ್ಸನ್ನು ದುಂಬಿಯಂತೆ ಕೊರೆಯುತ್ತಿದ್ದುದು ಲೋಕನಾಥನನ ಸ್ಪರ್ಧೆಯ ವಿಷಯವೊಂದೇ ಅಲ್ಲ; ಅದಕ್ಕೂ ಮಹತ್ವವಾದ ಹಾರ್ದಿಕವಾದ ವಿಷಯ ಅವರ ಕರುಳು ಕತ್ತರಿಸುತ್ತಿತ್ತು. ಮೇಜಿನ ಮೇಲಿದ್ದ ಯಾವುದೋ ಕೇಸಿನ ಕಂತೆಯನ್ನು ವಿಮನಸ್ಕರಾಗಿ ನೋಡುತ್ತ ಸೂರಪ್ಪನವರು ಕುಳಿತರು. ಯಾವದೋ ಕಾರು ಬಂದು ನಿಂತು ಶಬ್ದವಾಯಿತು. ರಾಮಾಶಾಸ್ತ್ರಿ ಓಡಿಬಂದು 'ಜಾನ್‌ಸ್ಟನ್ ಸಾಹೇಬರು ಬಂದಿದ್ದಾರೆ' ಎಂದು ತಿಳಿಸಿದ. ಸೂರಪ್ಪನವರೆದ್ದು ಜಾನ್‌ಸ್ಟನ್ ಸಾಹೇಬರಿಗೆ ಸ್ವಾಗತ ಬಯಸಿದರು.

"ಏನು ಮಿ. ಜಾನ್‌ಸ್ಟನ್. ಇಷ್ಟು ಅಪರೂಪವಾಗಿ ದಯಮಾಡಿಸಿದಿರಿ ?"

"ನಿಮ್ಮಲ್ಲಿ ಮಾತನಾಡುವ ಮುಖ್ಯ ವಿಷಯಗಳಿದ್ದವು. ನಿಮ್ಮ ಎಲೆಕ್ಷನ್ ಪ್ರಾಸ್ಪೆಕ್ಟ್ಸ್ (Prospects) ಹೇಗಿದೆ ?"

"ಭಯವಿಲ್ಲವೆಂದು ಕಾಣುತ್ತದೆ."

"ಲೋಕನಾಥ ಎಲ್ಲ ಕೂಲಿಗಾರರನ್ನು ಸೇರಿಸಿ ಸಂಘ ಕಟ್ಟಲು ಪ್ರಯತ್ನಿಸಿದ್ದಾನೆಂಬುದು ಗೊತ್ತೇ ?"

"ಕೇಳಿ ಬಲ್ಲೆ. ಅವನನ್ನು ಬೊಕ್ಕೆಗೆ ಹಾಕುವ ಪ್ರಯತ್ನಮಾಡಿದೆ, ಸಾರ್ಥವಾಗಲಿಲ್ಲ."

"ಅದೇನಂಥ ಅಸಾಧ್ಯವಾದ ಕೆಲಸವಲ್ಲ ಸಾರ್."

"ಆ ದಾರಿಯಲ್ಲಿ ನೀವೇನಾದರೂ ನಡೆಸಿರುವಿರಾ ?"

"ನಡೆಸಿ—ಕೃತಕೃತ್ಯನಾಗಿರುವೆ."

ಸೂರಪ್ಪನವರ ಮುಖ ಅರಳಿತು. ಜಾನ್‌ಸ್ಟನ್ ದೊರೆಯನ್ನು ಅಪ್ಪಿ ಮುದ್ದಾಡುವಷ್ಟು ಮನಸ್ಸಿಗೆ ಸಂತೋಷವಾಯಿತು.

"ಹೇಳಿ ಜಾನ್‌ಸ್ಟನ್—ಏನು ಮಾಡುವಿರಿ ಹೇಳಿ ?"

"ಹಿಂದಿನ ಮ್ಯಾನೇಜರು ಲೋಕನಾಥನ್ನನ್ನು ಡಿಸ್‌ಮಿಸ್ ಮಾಡಿದ ವಿಷಯ ನಿಮಗೆ ಗೊತ್ತೇ ಇದೆ. ಇದೇ ಮಧ್ಯಾಹ್ನ ನಾನು ಲೋಕನಾಥನ್‌ಗೆ ಹೇಳಿಕಳಿಸಿದೆ."

"ಬಂದನೇ ?"

"ಬರದೆಯೇನು ? ಆತನ ಕೆಲಸ ಬಡ್ತಿ ಸಂಬಳದ ಮೇಲೆ ಹಿಂದಕ್ಕೆ ಕೊಡುವುದಾಗಿ ತಿಳಿಸಿದೆ."

"ಏತಕ್ಕೆಂದು ಲೋಕನಾಥನ್ ಕೇಳಲಿಲ್ಲವೇ?"

"ಕೇಳಿದ. ನೀನು ಎಲೆಕ್ಷನ್ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಿಕ್ಕೆ ಎಂದು ಹೇಳಿದೆ."

"ಅದಕ್ಕೇನು ಹೇಳಿದ."

"ಸದ್ಯಕ್ಕೆ ಹೇಗೆ ಸಾಧ್ಯವೆಂದು ಕೇಳಿದ. ಅದಕ್ಕೆ ನಾನು ಹೇಳಿದೆ, ನಿನಗೆ ಮಿಲ್ಸ್‌ನ 'ಗುಪ್ತಧನ' (Secret Fund) ದಿಂದ ತಿಂಗಳಿಗೆ ರೂ. ೪೦೦ ಕೊಡುತ್ತ ಹೋಗುತ್ತೇನೆ. ಉಮೇದುವಾರಿಕೆ ಸದ್ಯಕ್ಕೆ ಇರಲಿ ಎಲೆಕ್ಷನ್ನಿಗೆ ಒಂದು ವಾರಕ್ಕೆ ಮುಂಚೆ ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡು. ಎಲೆಕ್ಷನ್ ಮುಗಿದ ಮೇಲೆ ಕೆಲಸ ಖಾಯಂ ಮಾಡುತ್ತೇನೆ ಎಂದು ಹೇಳಿದೆ."

"ಆತ ಒಪ್ಪಿದನೇ ?"

"ಒಪ್ಪಿದನೋ ಇಲ್ಲವೋ ನೋಡಿ."

ಎಂದು ಜಾನ್‌ಸ್ಟನ್ ಲೋಕನಾಥನ್ ಕೈಯಲ್ಲಿ ಬರೆಸಿಕೊಂಡಿದ್ದ ಕಾಗದವನ್ನು ಸೂರಪ್ಪನವರ ಕೈಗಿತ್ತರು. ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿರುವುದಾಗಿ ಲೋಕನಾಥನ್ ಬರೆದುಕೊಟ್ಟಿದ್ದರು. ಕಾಗದದ ಮೇಲೆ ತಾರೀಖು ಸೂಚಿತವಾಗಿರಲಿಲ್ಲ.

"ಜಾನ್‌ಸ್ಟನ್–ನೀವು ಸೈತಾನನ ಅವತಾರ."

ಎಂದು ಸೂರಪ್ಪನವರು ಶಹಭಾಸ್‌ಗಿರಿ ಕೊಟ್ಟರು.

"ನೀವೇನೋ ಈ ಕೆಲಸ ಸಾಧಿಸಿದಿರಿ ಜಾನ್‌ಸ್ಟನ್ ನಾಳೆ ಕೂಲಿಗಾರರು, ಡೆಮೋಕ್ರ್ಯಾಟಿಕ್ ಪಕ್ಷದವರು ಲೋಕನಾಥನ್ ಮೇಲೆ ಬಿದ್ದು ಅವನನ್ನು ಇಲ್ಲವೆನಿಸಿದರೆ ?"

"ಅದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದೇನೆ. ಆತ್ಮರಕ್ಷಣೆಗಾಗಿ ನನ್ನ ರಿವಾಲ್ವರನ್ನೇ ಲೋಕನಾರ್ಥ್‌ಗೆ ಕೊಟ್ಟಿದ್ದೇನೆ. ಬೇಕಾದ್ದು ಬರಲಿ ಮಿ. ಸೂರಪ್ಪ. ಈ ಚುನಾವಣೆಯಲ್ಲಿ ನೀವು ಜಯಶಾಲಿಗಳಾಗಬೇಕು. ಈ ಲೇಬರ್ ಯೂನಿಯರ್ಕ್ ತಲೆಯೆತ್ತದಂತೆ ಮಾಡಬೇಕು"

"ನನಗೆ ಚುನಾವಣೆಯಾಗಲಿ, ಅದರ ಯೋಗಕ್ಷೇಮ ನಾನು ಮುಂದೆ ವಿಚಾರಿಸಿಕೊಳ್ಳುತ್ತೇನೆ. ನಾವೇ ಒಂದು ಲೇಬರ್ ಯೂನಿಯರ್ಕ್ ಹುಟ್ಟಿಹಾಕಿ ಎಲ್ಲರನ್ನೂ ಸೆಳೆದುಕೊಂಡು ಬಿಡೋಣ. ಅಧಿಕಾರ, ಹಣ, ಮಾತುಗಾರಿಕೆ ಆಶಿಸುವ ಕೆಲವು ಕೂಲಿಗಾರರ ಚಪಲ ತೀರಿಹೋಗಲಿ."

"ಅದೂ ಒಳ್ಳೆಯ ಸಲಹೆ."

ಎಂದು ಜಾನ್‌ಸ್ಟರ್ಕ್ ಎದ್ದರು. ಅನಪೇಕ್ಷಿತವಾಗಿ ಒದಗಿದ ದೈವ ಸಹಾಯ ಕಂಡು ಸೂರಪ್ಪನವರಿಗೆ ಆನಂದವಾಯಿತು. ಮನಸ್ಸಿನಿಂದ ಒಂದು ದೊಡ್ಡ ಭಾರ ಇಳುಹಿದಂತಾಯಿತು. ಆದರೆ ಇನ್ನೊಂದು ಭಾರ ಅವರನ್ನು ಹಿಡಿದು ಜಗ್ಗುತ್ತಿತ್ತು.

## ೧೭

ಲೋಕನಾರ್ಥ್‌ರನ್ನು ಕರೆಸಿಕೊಂಡು ಮಾತನಾಡುವ ಕೆಲಸವನ್ನು ಜಾನ್‌ಸ್ಟರ್ಕ್ ಬಹಳ ಎಚ್ಚರಿಕೆಯಿಂದಲೇ ಮಾಡಿದ್ದರು. ಮಿಲ್ಲಿನ ಕಛೇರಿಗೆ ಕರೆಸಿಕೊಂಡರೆ ಗುಲ್ಲಾಗುವುದೆಂದು ತಮ್ಮ ಬಂಗಲೆಗೇ ಕರೆಸಿಕೊಂಡು ಮಾತನಾಡಿ ಕಳಿಸಿದ್ದರು. ಲೋಕನಾರ್ಥ್ ಜಾನ್‌ಸ್ಟರ್ಕ್ ಸಾಹೇಬರ ಬಂಗಲೆಯಿಂದ ಹೊರಬೀಳುವುದನ್ನು ಅಕಸ್ಮಾತ್ತಾಗಿ ರಾಮಸ್ವಾಮಿ ಕಂಡು ಬಿಟ್ಟ. ಮಾರನೆಯ ಬೆಳಿಗ್ಗೆ ಶ್ರೀನಿವಾಸನನ್ನೂ, ಮುನಿಸ್ವಾಮಿಯನ್ನೂ ಹುಡುಕಿ ಈ ಸುದ್ದಿ ಕೊಟ್ಟ. ಶ್ರೀನಿವಾಸ

"ಈಗ ಸುಮ್ಮನಿದ್ದು ಬಿಡಿ – ನಿಮಗೆ ಈ ವಿಷಯ ಗೊತ್ತಿದೆಯೆಂದು ತೋರಿಸಿಕೊಳ್ಳುವುದಕ್ಕೂ ಹೋಗಬೇಡಿ. ಸಂಜೆ ಸೇರುತ್ತೇವಲ್ಲಾ ನೋಡೋಣ."

ಎಂದು ಎಚ್ಚರಿಕೆ ಕೊಟ್ಟಿದ್ದ.

ಸಂಜೆ ಯಥಾಪ್ರಕಾರ ವ್ಯಾಸಂಗಗೋಷ್ಠಿ ಸೇರಿತು. ಅಭ್ಯಾಸ ಆರಂಭವಾಗುವ ಮುನ್ನ ಲೋಕನಾರ್ಥ್ ಬಾಯಿಹಾಕಿ

"ನಿಮ್ಮಲ್ಲಿ ಒಂದು ಮುಖ್ಯ ವಿಷಯ ಹೇಳಬೇಕಾದದ್ದಿದೆ. ಹೇಳು ಎಂದರೆ ಹೇಳುತ್ತೇನೆ."

"ಅವಶ್ಯಕವಾಗಿ ಹೇಳಿ ಲೋಕನಾಥ್, ನಮ್ಮ ನಮ್ಮಲ್ಲಿ ಈ ಉಪ ಚಾರೋಕ್ತಿಗಳೇಕೆ" ಎಂದು ಶ್ರೀನಿವಾದ ಹೇಳಿದ.

ಲೋಕನಾಥ್ ಸಾವಕಾಶವಾಗಿ ಆರಂಭಿಸಿದರು. ಕುತ್ತಿಗೆಯಲ್ಲಿಯೇ ಮಾತುಗಳು ನಿಂತು ಹೋಗುತ್ತಿದ್ದವು. ತಡೆ ತಡೆದು ನುಡಿದರು.

"ನಿನ್ನೆ ರಾತ್ರಿ ಮಿನ್ನಿಮಿಲ್ಸ್ ಮ್ಯಾನೇಜರ್ ಜಾನ್‌ಸ್ಟ್ರ್ ಬಹಳ ತರಾ ತುರಿಯಲ್ಲಿ ಹೇಳಿ ಕಳಿಸಿದರು. ನಿಮಗೆ ತಿಳಿಸಿ ಹೋಗುವುದಕ್ಕೂ ಅವಕಾಶ ವಿರಲಿಲ್ಲ."

"ಅದಕ್ಕೇನಂತೆ. ನಮ್ಮಷ್ಟೇ ನೀವೂ ಸ್ವತಂತ್ರರಲ್ಲವೇ?" ಎಂದ ಶ್ರೀನಿ ವಾಸ.

"ಏತಕ್ಕೆ ಹೇಳಿಕಳಿಸಿದ್ದರು?" ಎಂದು ಮುನಿಸ್ವಾಮಿ ಕೇಳಿದ.

"ನನ್ನ ಕೆಲಸ ನನಗೆ ಹಿಂದಕ್ಕೆ ಕೊಡಲು ಮ್ಯಾನೇಜ್‌ಮೆಂಟನವರು ನಿರ್ಧರಿಸಿದ್ದಾರಂತೆ."

"ಬಹಳ ಸಂತೋಷ"

"ಅದಕ್ಕೆ ನಾನು ಸಾರ್ವಜನಿಕ ಕೆಲಸಗಳಲ್ಲಿ ಭಾಗವಹಿಸಕೂಡದೆಂದು ಕರಾರು ಹಾಕಿದ್ದಾರೆ."

"ನೀವೇನು ಉತ್ತರ ಹೇಳಿದಿರಿ?"

"ವಿಚಾರಮಾಡಿ ಒಂದೆರಡು ದಿವಸಗಳಲ್ಲಿ ತಿಳಿಸುವುದಾಗಿ ಹೇಳಿದೆ."

"ಏನು ವಿಚಾರ ಮಾಡಿರುವಿರಿ?"

"ನೀವುಗಳು ಹೇಗೆ ಹೇಳುವಿರೋ ಹಾಗೆ ಮಾಡಲು ಸಿದ್ಧನಾಗಿ ದ್ದೇನೆ."

"ಇದು ನಾವು ಹೇಳಿ ಮಾಡಿಸುವ ಕೆಲಸವಲ್ಲ ಲೋಕನಾಥ್ ಅವರೇ. ನೀವೂ ಸಂಸಾರವಂದಿಗರು-ಎಷ್ಟು ದಿವಸ ಕೆಲಸ ಕಾರ್ಯವಿಲ್ಲದೆ ಮನೆ ಯಲ್ಲಿ ಕುಳಿತಿರುವಿರಿ. ನಿಮ್ಮ ಸಂಸಾರ ನಿರ್ವಹಿಸುವ ಜವಾಬ್ದಾರಿ ನಾವು ಹೊರಲು ಸಿದ್ಧರಾಗುವವರೆಗೆ ನಿಮಗೆ ಒಣ ಉಪದೇಶ ಮಾಡಿಯೇನು ಸಾರ್ಥಕ?"

ಎಂದು ಶ್ರೀನಿವಾಸ ಹೇಳಿದ.

"ನಾನು ಸಾಧ್ಯವಿಲ್ಲವೆಂದು ಹೇಳಿ ಬಂದೆ ಸರ್. ನನ್ನೊಬ್ಬನ ಹಿತದ ಸಲುವಾಗಿ ಎಲ್ಲ ಕೂಲಿಗಾರರ ಹಿತವನ್ನು ಆಹುತಿಕೊಡುವುದು ನ್ಯಾಯವಲ್ಲ ವೆನಿಸಿತು."

ಲೋಕನಾಥ್ ಅವರ ಸರಳತೆ, ತ್ಯಾಗಬುದ್ಧಿ, ವಿಶುದ್ಧಾಂತಃಕರಣ ಕಂಡು ಶ್ರೀನಿವಾಸ ಬೆರಗಾದ. ಅವರನ್ನು ಮನಸಾರೆ ಹೊಗಳಿದ. ಆ ಸ್ತುತಿಯ ಬಗ್ಗೆ ರಾಮುಸ್ವಾಮಿ,ಮುನಿಸ್ವಾಮಿ ಅಷ್ಟು ಉತ್ಸಾಹ ತೋರಲಿಲ್ಲ.

"ಇನ್ನು ಮುಂದೆ ಯೂನಿಯನ್ ವ್ಯವಸ್ಥೆ" ಎಂದು ಲೋಕನಾಥನ್ ಕೇಳಿದ. ಶ್ರೀನಿವಾಸ ಮಿಲ್ಲುಗಳು, ಕಾರ್ಖಾನೆಗಳ ಪಟ್ಟಿಯನ್ನು ಮುಂದಿಟ್ಟು ಕೊಂಡು, ಅವುಗಳಲ್ಲಿ ವ್ಯವಸ್ಥಿತವಾಗಿರುವ ರಾಮ ಮಂದಿರಗಳ, ಭಜನೆ ಮನೆಗಳ ಹೆಸರುಗಳನ್ನು ಓದಿದ.

"ಈಗ ಪಟ್ಟಿಯಲ್ಲಿ ಅರವತ್ತು ಮೂರು ಸಂಘಗಳಿವೆ. ಅವುಗಳಲ್ಲಿ ಮೂವತ್ತು ಸಂಘಗಳು ಸದ್ಯಕ್ಕೆ ಯೂನಿಯನ್ ಸೇರಬಹುದು. ಒಂದೊಂದು ಸಂಘದಿಂದ ಇಬ್ಬಿಬ್ಬರು ಪ್ರತಿನಿಧಿಗಳನ್ನಾಯ್ದುಕೊಂಡು ಯೂನಿಯನ್ ರಚನೆ ಮಾಡಬೇಕು."

"ಈ ಪ್ರತಿನಿಧಿಗಳನ್ನು ಯಾರು ಆಯಬೇಕು." ಎಂದು ಮುನಿಸ್ವಾಮಿ ಕೇಳಿದ.

"ನೀವು ಮೂವ್ವರೂ ಎಲ್ಲ ಸಂಘಗಳನ್ನೂ ಸಂದರ್ಶಿಸಿ ಯೋಗ್ಯರಾದ ವರನ್ನು ಆಯ್ದು ಕಳಿಸಲು ಅವರಿಗೆ ನೆರವಾದರೆ ಒಳ್ಳೆಯದು."

"ಈ ಕೆಲಸ ತಡಮಾಡುವ ಹಾಗಿಲ್ಲ, ಎಲೆಕ್ಷನ್ ಬರುವುದರೊಳಗಾಗಿ ಸಂಘ ಕಾರ್ಯೋನ್ಮುಖವಾಗಬೇಕು" ಎಂದು ರಾಮುಸ್ವಾಮಿ ಹೇಳಿದ.

"ಹೌದು-ಹೌದು" ಎಂದು ಉಳಿದವರು ಅವನ ಮಾತಿಗೆ ಒಪ್ಪಿಗೆ ಯಿತ್ತರು.

## ೧೮

ಮೂರು ನಾಲ್ಕು ದಿವಸ ಒಂದು ಚಿಂತೆ ಸೂರಪ್ಪನವರನ್ನು ಏಕ ಪ್ರಕಾರವಾಗಿ ಕಾಡತೊಡಗಿತು. ಏನು ಮಾಡಿದರೂ ಅವರಿಗೆ ಸಮಾಧಾನ ವಿಲ್ಲ. ಎಲೆಕ್ಷನ್ನಿನ ಉದ್ವೇಗದಲ್ಲಿ ಚಿಂತೆಯನ್ನು ಮರೆಯಲೆತ್ನಿಸಿದರು.

ಕ್ಷಣಕಾಲ ಮನಸ್ಸು ಬೇರೆ ವಿಚಾರದಲ್ಲಿ ಲೀನವಾಗುತ್ತಿತ್ತು. ಮತ್ತೆ ಮರು ಕ್ಷಣವೇ ಹಳೆಯ ಚಿಂತೆ ಬಂದು ಮುತ್ತಿ ಕಾಡುತ್ತಿತ್ತು.

ಇಂತು ಮನಸ್ಸಿನಲ್ಲಿಯೇ ಕೊರಗುವುದು ಸರಿಯಲ್ಲವೆಂದು ಸೂರಪ್ಪ ನವರಿಗೆ ಕಂಡು ಬಂತು. ಇದಕ್ಕೆ ಪರಿಹಾರವನ್ನು ಯೋಚಿಸಿ ವೆಂಕಪ್ಪಯ್ಯ ನವರ ದಾರಿ ಕಾಯುತ್ತ ಕುಳಿತರು.

ವೆಂಕಪ್ಪಯ್ಯ ಬಂದವರು ತಮ್ಮ ಕೇಸಿನ ವಿಷಯ ಚರ್ಚೆಮಾಡಿ ಹೊರಡಲನುವಾದರು. ಸೂರಪ್ಪನವರು ಅವರನ್ನು ಕೂಡ ಹೇಳಿ ರಾಮಾ ಶಾಸ್ತ್ರಿಯನ್ನು ಹೊರಗೆ ಕಳುಹಿಸಿ,

"ವೆಂಕಪ್ಪಯ್ಯನವರೇ, ನಾನು ನಿಮ್ಮ ಮನೆಯವನೇ ತಾನೇ ?"

"ಸಂದೇಹವೇನು ಸ್ವಾಮಿ. ಇದೇನು ಹೀಗೆ ಕೇಳುವಿರಿ. ನನ್ನಿಂದೇ ನಾದರೂ ಅಪಚಾರವಾಯಿತೇ ?"

"ಛೆ! ಛೆ! ಅಂಥ ಮಾತು ಹೇಳಬೇಡಿ. ನಿಮ್ಮ ಮನೆಯ ವಿಷಯ– ನಾನು ಕೈಹಾಕಬಹುದೋ ಬಾರದೋ ಎಂದು ಯೋಚಿಸುತ್ತಿದ್ದೆ. ನಾನೂ ನೀವೂ ತುಂಬ ಸ್ನೇಹಿತರು. ಆದರೆ ಮನೆಯ ವಿಷಯಗಳಲ್ಲಿ ಸ್ವಲ್ಪ ಜಾಗರೂಕರಾಗಿರುವುದು ಒಳ್ಳೆಯದು."

"ನೀವು ಸಂಕೋಚಪಟ್ಟುಕೊಂಡರೆ ನನಗೆ ತುಂಬ ನೋವುಂಟು ಮಾಡುವಿರಿ. ನಿಮ್ಮನ್ನು ನಾನು ಹೊರಗಿನವರೆಂದು ಭಾವಿಸಿಯೇ ಇಲ್ಲ."

"ಚನ್ನಪಟ್ಟಣದ ಲಾಯರು ಕೃಷ್ಣಮೂರ್ತಿಗಳು ನಿಮಗೆ ಗೊತ್ತು ತಾನೇ ?"

"ಅಲ್ಪ ಸ್ವಲ್ಪ ಪರಿಚಯವಿದೆ."

"ಅವರ ಕೈಯಲ್ಲಿ ನಿಮ್ಮ ಅಳಿಯ ರಂಗಣ್ಣ ಹೇಳಿ ಕಳಿಸಿದ್ದ. ಬೇಗ ತನ್ನ ಹೆಂಡತಿಯನ್ನು ಮನೆಗೆ ಕಳಿಸಿಕೊಡದಿದ್ದರೆ ನಿಮ್ಮ ಮೇಲೆ Restitution of Conjugal rightsಗೆ ಕೇಸ್ ಹಾಕಲು ಹೇಳಿದ್ದಾನಂತೆ."

ವೆಂಕಪ್ಪಯ್ಯನವರು ತಲೆಯ ಮೇಲೆ ಕೈಹೊತ್ತು ಕುಳಿತರು. ಅವರಿಗೆ ದಿಕ್ಕೇ ತೋಚದಂತಾಯಿತು.

"ಆ ವಿಷಯ ಏನುಯೋಚನೆ ಮಾಡಿರುವಿರಿ ವೆಂಕಪ್ಪಯ್ಯನವರೇ ?"

"ಸುಭದ್ರೆಯನ್ನು ಕಳಿಸಿಕೊಡಲು ನಾನೂ ನನ್ನ ತಂಗಿ ಕಾವೇರಮ್ಮ ಸಿದ್ಧವಾಗಿದ್ದೇವೆ. ಆದರೆ ನಮ್ಮ ಮನೆಯವಳು, ಸುಭದ್ರಾ ಇದಕ್ಕೆ ಸುತರಾಂ ಒಪ್ಪುವುದಿಲ್ಲ. ಕೊನೆಗೆ ಅವನನ್ನೇ ಇಲ್ಲಿಗೆ ಬರಮಾಡಿಕೊಂಡು ಮನೆಯಲ್ಲಿಟ್ಟುಕೊಳ್ಳುವುದಕ್ಕೆ ಒಪ್ಪಿರೆಂದು ಹೇಳಿದೆ. ಅದಕ್ಕೆ ಸುಭದ್ರಾ ಅರೆಮನಸ್ಸಿನಿಂದ ಒಪ್ಪಿದಳು—ನಮ್ಮ ಮನೆಯವಳಿಗಂತೂ ಅದು ಖಂಡಿತ ಬೇಕಿಲ್ಲ. ಈ ಉಭಯ ಸಂಕಟದಿಂದ ನಾನು ಪಾರಾಗುವುದು ಹೇಗೆ ಸ್ವಾಮಿ. ಅಲ್ಲದೆ ರಂಗಣ್ಣ ಬಂದು ನಮ್ಮ ಮನೆಯಲ್ಲಿರುವುದಕ್ಕೆ ಒಪ್ಪ ಬೇಕಲ್ಲಾ."

"ಅವನನ್ನು ಒಪ್ಪಿಸೋಣ ಬಿಡಿ. ಅದೇನು ದೊಡ್ಡ ಮಾತಲ್ಲ. ಆದರೆ ಮನೆ ಯಜಮಾನಿತಿಗೆ ಬೇಕಿಲ್ಲದಿರುವಾಗ ಅವನನ್ನು ಮನೆಯಲ್ಲಿಟ್ಟು ಕೊಂಡರೆ ಮನೆ ಕುರುಕ್ಷೇತ್ರವಾಗುತ್ತದೆ."

"ಹೌದು- ಅದನ್ನೇ ನಾನು ಯೋಚಿಸುತ್ತಿರುವುದು."

"ಬೇರೆ ಮನೆಮಾಡಿ ಅವರ ಸಂಸಾರ ಏಕೆ ನಿಲ್ಲಿಸಬಾರದು."

"ರಂಗಣ್ಣನಿಗೆ ಒಳ್ಳೇ ವರಮಾನವಲ್ಲಿ ಅವನು ಬೇರೆ ಸಂಸಾರ ಹೂಡಬಲ್ಲನೇ ? ಮೊದಲಿನಿಂದ ನಾವು ಸುಭದ್ರೆಯನ್ನು ಅಕ್ಕರೆಯಿಂದ ಬೆಳಸಿದ್ದೇವೆ. ಅವಳು ಕೇಳಿದ್ದು ಇಲ್ಲವೆಂದಿಲ್ಲ. ಅವಳ ಖರ್ಚು ಪೂರೈಸುವುದು ರಂಗಣ್ಣನಿಗೆ ದೊಡ್ಡ ಸಮಸ್ಯೆಯಾಗುತ್ತದೆ."

"ಅದಕ್ಕೆ ಮಾರ್ಗ ಹುಡುಕೋಣ ವೆಂಕಪ್ಪಯ್ಯನವರೇ. ಅವನು ಬೇರೆ ಸಂಸಾರ ಈ ಊರಿನಲ್ಲಿ ಹೂಡುವುದು ನಿಶ್ಚಯವಾದರೆ ಮುಂದಿನ ವಿಚಾರ ನನಗೆ ಬಿಡಿ."

"ನಿಮ್ಮ ಮೇಲೆ ಅಷ್ಟೊಂದು ಭಾರ ಹೇರುವುದು ಯಾವ ನ್ಯಾಯ ?"

"ಸ್ನೇಹಕ್ಕೋಸ್ಕರ ಇಷ್ಟು ನಾನು ಮಾಡದಿದ್ದರೆ ಸ್ನೇಹವಿದ್ದೂ ಏನು ಸಾರ್ಥಕ ?–ಈಗ ರಂಗಣ್ಣನಿಗೆ ಎಷ್ಟು ಸಂಬಳ ಬರುತ್ತಿದೆ ?"

"ಅರವತ್ತೋ ಎಪ್ಪತ್ತೋ"

"ಬೆಂಗಳೂರಿನಲ್ಲಿ ಅರವತ್ತು ಎಪ್ಪತ್ತಕ್ಕೆ ಸಂಸಾರ ಸಾಗಲ್ಲ. ಅವನು ಕೆಲಸಕ್ಕೆ ರಾಜೀನಾಮೆ ಕೊಟ್ಟು ಇಲ್ಲಿ ಬರಲಿ. ನಾನು ನ್ಯೂ ಇಂಡಿಯಾ ಹೈಸ್ಕೂಲ್ ಅಧ್ಯಕ್ಷ. ನಮ್ಮ ಹೈಸ್ಕೂಲಿನಲ್ಲಿ ಅವನಿಗೆ ನೂರು ರೂಪಾಯಿ ಕೊಡಿಸುತ್ತೇನೆ ಸ್ಕೂಲಿನಲ್ಲಿ ಒಂದು 'ಪೂರ್ ಬಾಯ್ಸ್‌ಹೋಮ್' ಇದೆ.

ಆದರ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಮೂವತ್ತು ರೂಪಾಯಿ ಕೊಡಿಸುತ್ತೇನೆ. ಮೂವತ್ತು ರೂಪಾಯಿಗಳ ಎರಡು ಸಲ ಕೊಡಿಸುತ್ತೇನೆ. ಒಟ್ಟು ನೂರುತೊಂಭತ್ತು ರೂಪಾಯಿ ಬಂದ ಹಾಗಾಯಿತು. ಅವನಿಗೆ ಪುರಸತ್ತು ಆದಾಗ ನಮ್ಮ ಆಫೀಸಿಗೆ ಬಂದು ಅಲ್ಪಸ್ವಲ್ಪ ಕೆಲಸ ಮಾಡಿ ಕೊಡಲಿ. ನೂರೆಂಟು ಸಾರ್ವಜನಿಕ ಸಂಸ್ಥೆಗಳು ನನಗೆ ಗಂಟು ಬಿದ್ದಿವೆ. ನನಗೂ ಒಬ್ಬ ದಕ್ಷನಾದ ಅಸಿಸ್ಟೆಂಟ್ ಬೇಕು. ನಾನು ತಿಂಗಳಿಗೆ ಐವತ್ತು ರೂಪಾಯಿ ಕೊಡುತ್ತೇನೆ. ಒಟ್ಟು ಇನ್ನೂರ ನಲವತ್ತು ರೂಪಾಯಿ ಯಾಯಿತು. ಇಷ್ಟು ಸಾಕಾಗಬಹುದಲ್ಲವೇ ?"

ಸೂರಪ್ಪನವರ ಔದಾರ್ಯಕ್ಕೆ ಏನು ಹೇಳಬೇಕೆಂದು ವೆಂಕಪ್ಪಯ್ಯ ನವರಿಗೆ ತೋರಲಿಲ್ಲ. ಅವರ ಕಣ್ಣಿನಿಂದ ಆನಂದ ಭಾಷ್ಪ ಸುರಿದವು. ತಮ್ಮ ಉದ್ವೇಗವನ್ನು ತಡೆದುಕೊಂಡು

"ಸ್ವಾಮಿ—ನೀವೇ ನಮ್ಮ ಭಾಗದ ದೇವರು" ಎಂದರು.

"ನೀವು ನಿಮ್ಮ ಮನೆಯವರನ್ನೊಪ್ಪಿಸಿ. ನಾನು ರಂಗಣ್ಣನಿಗೆ ಹೇಳಿ ಕಳುಹಿಸಿ ಅವನನ್ನೊಪ್ಪಿಸುತ್ತೇನೆ."

"ಸ್ವಾಮಿ ಚಿತ್ತ."

ಎಂದು ವೆಂಕಪ್ಪಯ್ಯ ಒಪ್ಪಿಕೊಂಡರು.

ವೆಂಕಪ್ಪಯ್ಯನವರು ಹೊರಟು ಹೋದಮೇಲೆ ತಮ್ಮ ಮಾತುಕತೆ ಯನ್ನೇ ಸೂರಪ್ಪನವರು ನೆನಪಿಗೆ ತಂದುಕೊಂಡರು. ಅವರ ಮನಸ್ಸು ಉಲ್ಲಸಿತವಾಗಿತ್ತು. ಮುಖದ ಮೇಲೆ ಸುಮ್ಮಾನದ ನಗೆ ತೇಲಿತು.

## ೧೯

ಸೂರಪ್ಪನವರು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಸಹಕಾರ ಸುಭದ್ರೆ ಯಿಂದ ಅವರಿಗೆ ದೊರೆಯಿತು. ಅವಳ ಚಾಕಚಕ್ಯ, ನಯವಿನಯ, ಮೃದು ಮಾತುಗಾರಿಕೆಗೆ ಎಂಥವರೂ ಮರುಳಾಗುತ್ತಿದ್ದರು. ಹೆಣ್ಣುಮಕ್ಕಳ ಮತ ಗಳನ್ನು ಅವಳು ದೊರಕಿಸುವುದು ಮಾತ್ರವೇ ಅಲ್ಲದೆ ಇತರ ಮತದಾರರ ಮತಗಳನ್ನೂ ದೊರಕಿಸಲು ನೆರವಾದಳು.

ಸುಭದ್ರೆ ಚುನಾವಣೆಯಲ್ಲಿ ಇಷ್ಟೊಂದು ಉತ್ಸಾಹ ತೋರಿಸುವುದಕ್ಕೆ ಕಾರಣವಿಲ್ಲದಿರಲಿಲ್ಲ. ಎರಡು ಮೂರು ತಿಂಗಳು ಅವಧಿಯಲ್ಲಿ ಸೂರಪ್ಪನವರು

ಅವಳಿಗೆ ಹತ್ತಾರು ಸೀರೆಗಳು, ವಜ್ರದ ಬೆಂಡೋಲೆ, ಕೈಗೆ ಎರಡು ಜತೆ ಚಿನ್ನದಬಳೆ ಉಡುಗೊರೆ ಕೊಟ್ಟಿದ್ದರು. ಅವಳ ಪರ್ಸಿನಲ್ಲಿ ಸದಾ ೨೦೦-೩೦೦ ರೂಪಾಯಿಗಳಿಗೆ ಕಡಿಮೆಯಿಲ್ಲದಿರುತ್ತಿತ್ತು.

ಸಂಭಾಷಣೆಯ ಪ್ರಯೋಜನವಲ್ಲದೆ ಸೂರಪ್ಪನವರಿಂದ ಹೆಚ್ಚಿನ ಪ್ರಯೋಜನ ಸುಭದ್ರೆಗಾಗಿತ್ತು. ರಾಜಕೀಯ ವರ್ತುಲದಲ್ಲಿ ಅವಳ ಹೆಸರು ಸಾಕಷ್ಟು ಪ್ರಸಾರವಾಗಿತ್ತು. ಸ್ವರಾಜ್ಯ ಪಕ್ಷದ ಮಹಾ ನಾಯಕರು ಅವಳನ್ನು ಗೌರವಾದರಗಳಿಂದ ಕಾಣುತ್ತಿದ್ದರು. ಸ್ವರಾಜ್ಯ ಪಕ್ಷದ ಯಾವ ನಾಯಕ, ಯಾವ ಸದಸ್ಯನಿಂದ ಏನು ಕೆಲಸವಾಗಬೇಕಾದರೂ ಜನ ಸುಭದ್ರೆಯ ಮರೆಹೋಗುತ್ತಿದ್ದರು.

ಕೆಲವು ತಿಂಗಳಲ್ಲಿ ತನ್ನ ಪ್ರಭಾವ ಇಷ್ಟೊಂದು ಉಜ್ಜ್ವಲವಾಗಿ ಬೆಳೆಯುವುದೆಂದು ಸುಭದ್ರೆ ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ತನ್ನ ಪ್ರಭಾವದ ಮಾದಕತೆಯಲ್ಲಿ ಅವಳು ಮೈಮರೆತ್ತಿದ್ದರೂ ಮುಂದೆ ಬರಲಿದ್ದ ನೈಸರ್ಗಿಕ ಘಟನೆಯನ್ನು ಸದಾ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದಳು. ಅದು ಅವಳ ಸಹಜ ಹರ್ಷಕ್ಕೆ ಭಂಗ ತಂದಿತ್ತು.

ಒಂದು ದಿನ ಎಲೆಕ್ಷನ್ ಕೆಲಸ ಮುಗಿಸಿಕೊಂಡು ಕಾರಿನಲ್ಲಿ ಸೂರಪ್ಪ, ಸುಭದ್ರೆ ಹೊರಟರು.

"ಕಬ್ಬನ್ ಹೊಟೇಲಿಗೆ ಹೋಗಿ ಸ್ವಲ್ಪ ಟೀ ತೆಗೆದುಕೊಂಡು ಹೋಗೋಣ" ಎಂದು ಸೂರಪ್ಪನವರಂದರು. ಹೊಟೇಲಿನಲ್ಲಿ ಟೀ, ಕೇಕ್ಸ್, ಟೋಸ್ಟ್ ಮುಗಿದಮೇಲೆ ಡ್ರೈವರಿಗೆ ಗಾಡಿಯನ್ನು ಅರಮನೆಯ ತೋಟದ ಮುಂದಿನ ರಸ್ತೆಯಲ್ಲಿ ಬಿಡು ಎಂದರು.

ಗಾಡಿ ತೋಟದ ಮುಂದೆ ಬಂದಾಗ ಅದನ್ನು ನಿಲ್ಲಿಸಿ ತಾವು ಇಳಿದು, ಸುಭದ್ರೆ ಗಾಡಿಯಿಂದ ಇಳಿಯಲು ಸಹಕರಿಸಿ ಸಮೀಪದಲ್ಲಿ ಮರದ ಕೆಳಗಿದ್ದ ಕಲ್ಲು ಬೆಂಚಿನ ಮೇಲೆ ಕುಳಿತರು. ಅವರು ಕುಳಿತ ಬೆಂಚಿನ ಒಂದು ತುದಿಯಲ್ಲಿ ಸುಭದ್ರೆಯೂ ಕುಳಿತಳು.

ಮುಸುಕು ಕತ್ತಲೆ ಕವಿದಿತ್ತು, ಡ್ರೈವರ್ ಸ್ವಲ್ಪದೂರ ಹೋಗಿ ಮರಗಳ ಹಿಂದೆ ನಿಂತು ಬೀಡಿ ಹಚ್ಚಿ ಸೇವಿಸುತ್ತಿದ್ದ.

ಸೂರಪ್ಪನವರು ಕ್ಷಣಕಾಲ ಸುಭದ್ರೆಯನ್ನು ದಿಟ್ಟಿಸಿ ನೋಡಿ

"ಸುಭಾ–ಏನು ಯೋಚನೆ ಮಾಡುತ್ತಿರುವೆ" ಎಂದು ಕೇಳಿದರು.

"ಏನೂ ಇಲ್ಲವಲ್ಲಾ, ಯೋಚನೆಯೇನು ಬಂತು ?"

"ನೀನು ಮರೆಮಾಚಿದರೆ ನಾನು ಒಪ್ಪುವುದಿಲ್ಲ, ಹೇಳು ಮನಸ್ಸಿನಲ್ಲಿ ಏನಿದೆಯೋ ಬಿಡಿಸಿ ಹೇಳು, ನಿಮ್ಮ ಮನೆಯ ವಿಷಯವೆಲ್ಲಾ ನನಗೆ ಗೊತ್ತೇ ಇದೆಯೆಲ್ಲಾ."

ಸುಭದ್ರೆಗೆ ದುಃಖ ತಡೆಯಲಾಗಲಿಲ್ಲ. ಅವಳ ಕಣ್ಣು ತುಂಬಿ ಬಂತು. ಬಿಕ್ಕಿ ಬಿಕ್ಕಿ ಅತ್ತಳು, ಸೂರಪ್ಪನವರು ಅವಳ ಬಳಿ ಸರಿದು ತಮ್ಮ ಪಿರಿಮಿಡ್ ಕರವಸ್ತ್ರದಿಂದ ಅವಳ ಕಣ್ಣೀರು ತೊಡೆಯಲೆತ್ನಿಸಿದರು. ಸುಭದ್ರೆ ಅವರ ಕೈಯಿಂದ ಕರವಸ್ತ್ರವನ್ನು ತೆಗೆದುಕೊಂಡು ತಾನೇ ಕಣ್ಣೀರು ಒರಸಿಕೊಂಡಳು.

"ದುಃಖಪಟ್ಟರೇನು ಸಾರ್ಥಕ. ಇರುವ ವಿಷಯ ಹೇಳು–ಪರಿಹಾರ ನಾನು ಮಾಡುತ್ತೇನೆ."

"ರಜಾ ಬರುವುದರೊಳಗಾಗಿ ಅವರು ಈ ಊರಿಗೇ ಬರುವರಂತೆ. ಬೇರೆ ಮನೆ ಮಾಡುವರಂತೆ. ನಾನು ಅವರ ಜತೆ ಸಂಸಾರ ಮಾಡಬೇಕಂತೆ. ತಂದೆಯವರು ಹೇಳಿದರು."

"ನನಗೂ ಹೇಳಿದರು. ಇದರಲ್ಲೇನು ತಪ್ಪು. ರಂಗಣ್ಣ ಯೋಗ್ಯ. ಮೆದುಗಷ್ಟ. ನಿನಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಾನೆ. ಮುಖ್ಯ–ಗಂಡ ಹೆಂಡತಿ ನೀವು ಚೆನ್ನಾಗಿರುವುದು ತಾನೆ ನಮಗೆಲ್ಲಾ ಬೇಕಾದದ್ದು."

"ನಾವು ಚೆನ್ನಾಗಿರುವುದು!" ಎಂದು ವ್ಯಂಗ್ಯವಾಗಿ ಸುಭದ್ರಾ ನುಡಿದಳು.

"ಏಕೆ? ರಂಗಣ್ಣನ ಜತೆ ಬಾಳುವೆ ಮಾಡಲು ಏನು ಕಷ್ಟ?"

"ನಿಮ್ಮಲ್ಲೇಕೆ ಮುಚ್ಚುಮರೆ-ನಾನು ಒಪ್ಪಿ ಅವರ ಕೈಹಿಡಿಯಲಿಲ್ಲ. ಇದು ನನ್ನ ಭಾಗಕ್ಕೆ ಬಲವಂತದ ಮಾಘಸ್ನಾನ."

"ಹಾಗೇನು? ಈ ವಿಷಯ ವೆಂಕಪ್ಪಯನವರು ನನ್ನಲ್ಲಿ ಹೇಳಲೇ ಇಲ್ಲವಲ್ಲ."

"ಮದುವೆಯಾದ ದಿನದಿಂದಲೂ ನನ್ನನ್ನು ಕರೆದುಕೊಂಡು ಹೋಗಬೇಕೆಂದು ಅವರು ಪ್ರಯತ್ನಿಸುತ್ತಿದ್ದಾರೆ. ನನಗೆ ಹೋಗುವುದಕ್ಕೆ ಸ್ವಲ್ಪವೂ ಮನಸ್ಸಿಲ್ಲ."

ಸೂರಪ್ಪನವರ ಮನಸ್ಸಿಗೆ ಅತ್ಯಾನಂದವಾಯಿತು. ಹೊಸ ಚೈತನ್ಯ, ಧೈರ್ಯ ಬಂದಿತು. ಸುಭದ್ರೆಯ ಹತ್ತಿರ ಸರಿದು,

"ಆ ಶುಂಭನ ಜತೆ ನೀನು ಬಾಳುವೆ ಮಾಡುವುದು ನನಗೂ ಇಷ್ಟವಿಲ್ಲ ಸುಭಾ. ಅವನು ನಿನಗೆ ತಕ್ಕ ಪತಿಯಲ್ಲ. ಅವನು ಸಂಪಾದನೆ ಮಾಡುವ ಗೋಪಾಳದಲ್ಲಿ ನಿನಗೆ ಎರಡು ಹೊತ್ತು ಸರಿಯಾಗಿ ಊಟವನ್ನೂ ಹಾಕಲಾರ. ಇನ್ನು ನಿನ್ನ ಭವಿಷ್ಯ ನೋಡಿಕೊಳ್ಳುವುದು ಅವನಿಗೆ ಹೇಗೆ ಸಾಧ್ಯ?"

"ನನ್ನ ಭವಿಷ್ಯ !"

"ಹೌದು ! ಅದನ್ನು ನಾನು ಮೊದಲೇ ಲೆಕ್ಕ ಹಾಕಿದ್ದೇನೆ. ನಾನು ಈ ಸಾರೆ ಚುನಾವಣೆಯಾಗಿ ಬಂದರೆ ಈ ಸ್ವರಾಜ್ಯಪಕ್ಷ ನನ್ನ ಕೈಗೂಸೆಂಬುದನ್ನು ಬಲ್ಲೆಯಷ್ಟೆ ?"

"ಚೆನ್ನಾಗಿ ಬಲ್ಲೆ."

"ಮುಂದೆ ಯಾವದಾದರೂ ಉಪ-ಚುನಾವಣೆ ಸಂದರ್ಭವೊದಗಿದರೆ ನಿನ್ನನ್ನು ನಿಲ್ಲಿಸಬೇಕೆಂದು ನನ್ನ ಮಹದಾಕಾಂಕ್ಷೆ."

"ನಿಜವೇ !"

"ಬರೆದು ಕೊಡಲೇನು ? ಎಲ್ಲರ ಹಾಗೆ ಯಾವನೋ ಶುಂಭನಿಗೆ ನಿನ್ನ ಜೀವ ಸವೆಯಬಾರದು. ಸಾರ್ವಜನಿಕ ಕ್ಷೇತ್ರದಲ್ಲಿ ನಿನ್ನ ಯೋಗ್ಯತೆ ಇರುವ ಬಬ್ಬ ಹೆಣ್ಣು ಮಗಳೂ ಇಲ್ಲ. ಈಗ ನೀನು ದೊರೆತಿರುವ ಅವಕಾಶವನ್ನು ಸದುಪಯೋಗ ಮಾಡಿಕೊಂಡರೆ ನಾಳೆ ನೀನು ಎಲೆಕ್ಷನ್‌ನಲ್ಲಿ ಬರುವುದೇನು ದೊಡ್ಡ ಮಾತು—ಅದಕ್ಕೂ ಹೆಚ್ಚಿನ ಸ್ಥಾನ ಕಾದಿದೆ. ಮುಂದಿನ ರಾಜ್ಯಾಂಗ ರಚನೆಯಲ್ಲಿ ಕೆಲವು ಜನರನ್ನಾದರೂ ಖಾಸಗಿ ಮಂತ್ರಿಗಳನ್ನಾಗಿ ತೆಗೆದುಕೊಳ್ಳಬೇಕು. ಅದರಲ್ಲಿ ಹೆಣ್ಣುಮಕ್ಕಳಿಗೆ ಒಂದು ಸ್ಥಾನ ಮೀಸಲು. ಆ ಸ್ಥಾನ ನಿನ್ನದೇಕಾಗಬಾರದು ?"

ಸುಭದ್ರೆಯ ತಲೆ ಸುತ್ತಿಬಂತು- ಸೂರಪ್ಪನವರು ಅವಳ ಮುಂದೆ ಹಿಡಿದ ಚಿತ್ರ ಅವಳಿಗೆ ರೋಮಾಂಚವನ್ನುಂಟುಮಾಡಿತು. ಏನು ಹೇಳಬೇಕೋ ತೋರದೆ,

"ಇದು ಸತ್ಯವೇ ?"

"ನೀನು ಅವಿದ್ಯಾವಂತಳಲ್ಲ. ರಾಜಕಾರಣ ಬಲ್ಲವಳು-ವೃತ್ತ ಪತ್ರಿಕೆಗಳನ್ನು ಓದುತ್ತಿರುವೆ-ನೀನೇ ಯೋಚನೆಮಾಡು. ನಾನು ಹೇಳಿರುವುದರಲ್ಲಿ

ಸತ್ಯವಿದೆಯೋ ಇಲ್ಲವೇ ಎನ್ನುವುದನ್ನು."

"ಸಾರ್ವಜನಿಕ ಜೀವನಕ್ಕೆ ಬಹಳ ಹಣಬೇಕು."

"ಹಣಕ್ಕೇಕೆ ಯೋಚನೆ ಮಾಡುವೆ. ಸಹಿಮಾಡಿ ಒಂದು ಚೆಕ್ ಪುಸ್ತಕ ನಿನ್ನ ಕೈಗೆ ಕೊಡುತ್ತೇನೆ. ಬೇಕಾದ ಹಾಗೆ ಖರ್ಚು ಮಾಡು."

"ಗಂಡ ಒಂದು ಕುತ್ತಿಗೆಯ ಮೇಲೆ ಕುಳಿತರೆ ನನಗೆ ಸ್ವಾತಂತ್ರ್ಯವೆಲ್ಲಿಂದ ಬರುತ್ತದೆ."

"ರಂಗಣ್ಣನಿಗೆ ಹೆದರುವೆಯಲ್ಲಾ! ನೀನು ಕುಳಿತುಕೋ ಎಂದರೆ ಕುಳಿತುಕೊಳ್ಳುತ್ತೆ–ನಿಂತುಕೋ ಎಂದರೆ ನಿಂತುಕೊಳ್ಳುತ್ತೆ ಆ ಪ್ರಾಣಿ."

"ಹಾಗಾದರೆ ಬೇರೆ ಮನೆಮಾಡಿ ಇರುವುದೇ ಕ್ಷೇಮ."

"ನಿಸ್ಸಂದೇಹವಾಗಿ. ಜತೆಯಲ್ಲಿ ಗಂಡ ಇದ್ದರೆ ಹೆಚ್ಚಿನ ಉಪಕಾರ. ಲೋಕವೂ ಆಕ್ಷೇಪವೆತ್ತುವುದಕ್ಕೆ ಸಾಧ್ಯವಾಗುವುದಿಲ್ಲ."

ಎಂದೆನ್ನುತ್ತಾ ಸೂರಪ್ಪನವರು ಅವಳ ಕೈಹಿಡಿದು ತಮ್ಮ ಬೆರಳಲ್ಲಿದ್ದ ವಜ್ರದುಂಗುರವನ್ನು ಅವಳ ಬೆರಳಿಗೆ ತೊಡಿಸಿದರು. ಸೂರಪ್ಪನವರ ತೋಳು ಸುಭದ್ರೆಯನ್ನು ಬಳಸಿದಾಗೊಮ್ಮೆ ಅವಳು ಕತ್ತೆತ್ತಿ ನೋಡಿ ಮುಗುಳ್ನಗೆ ನಕ್ಕಳು.

## ೨೦

ಲೇಬರ್ ಯೂನಿಯನ್ ವ್ಯವಸ್ಥೆಯನ್ನು ರಾಮಸ್ವಾಮಿ, ಮುನಿಸ್ವಾಮಿ ಲೋಕನಾಥರಿಗೆ ಒಪ್ಪಿಸಲಿಲ್ಲ. ಆಗಾಗ್ಗೆ ಅವರ ಸಲಹೆ ಕೇಳುತ್ತಿದ್ದರೂ ಅವರನ್ನು ಹೆಚ್ಚು ಹತ್ತಿರ ಬಿಟ್ಟುಕೊಳ್ಳಲಿಲ್ಲ. ಎಲೆಕ್ಷನ್ ಮುಗಿಯುವವರೆಗೆ ಶ್ರೀನಿವಾಸ ಈ ವ್ಯವಹಾರದಲ್ಲಿ ಕೈಹಾಕಬಾರದೆಂದು ನಿಷ್ಕರ್ಷೆಯಾಗಿತ್ತು. ಅವನಿಗೆ ಪರೀಕ್ಷೆ ಸಮೀಪವಾದುದರಿಂದ ವ್ಯಾಸಂಗ ಗೋಷ್ಠಿ ತಾತ್ಕಾಲಿಕವಾಗಿ ನಿಲ್ಲಬೇಕಾಗಿ ಬಂತು.

ಆದರೆ ರಾಮಸ್ವಾಮಿ ಯೂನಿಯನ್ನಿನ ಪ್ರತಿನಿಧಿಗಳನ್ನು ಆಗಾಗ್ಗೆ ಕೂಡಿಸಿ ಶಿಸ್ತು, ಸಂಯಮ, ಮುಷ್ಕರದ ಚರಿತ್ರೆ, ಮುಷ್ಕರ ಕಾಲದಲ್ಲಿ ಆಚರಿಸಬೇಕಾದ ನಿಯಮಗಳು ಮೊದಲಾದ ವಿಷಯಗಳ ಮೇಲೆ ಶಿಕ್ಷಣ ಕೊಡುತ್ತಿದ್ದ. ಕೂಲಿಗಾರರ ವಸತಿಗಳಲ್ಲಿ ಆಗುತ್ತಿದ್ದ ಸಣ್ಣಪುಟ್ಟ ಜಗಳ

ಗಳನ್ನು ಮುನಿಸ್ವಾಮಿ ನಿವಾರಿಸಿ ಅವರವರಲ್ಲಿ ಐಕಮತ್ಯ ಬೆಳೆಯುವಂತೆ ಪ್ರಯತ್ನಿಸುತ್ತಿದ್ದ.

ಪರೀಕ್ಷೆ ಒಂದೇ ವಾರ ಉಳಿಯಿತು. ಒಂದು ಸಂಜೆ ಪತ್ರಿಕಾ ಪ್ರತಿನಿಧಿಯೊಬ್ಬ ಶ್ರೀನಿವಾಸನಿಗೆ ಒಂದು ವಿಚಿತ್ರ ಸುದ್ದಿ ಮುಟ್ಟಿಸಿದ. ಸಂಜೆಯಾದ ಮೇಲೆ ಹೊರಬಿದ್ದ ಪತ್ರಿಕೆಗಳಲ್ಲಿ ಆ ಸುದ್ದಿ ಪ್ರಕಟವಾಗಿತ್ತು. ಶ್ರೀನಿವಾಸ ಪತ್ರಿಕೆಗಳನ್ನು ಕೈಯಲ್ಲಿ ಹಿಡಿದು ತನ್ನ ಸಹಕಾರ್ಯಕರ್ತರನ್ನರಸುತ್ತ ಓಡಿದ.

ರಾಮಸ್ವಾಮಿ, ಮುನಿಸ್ವಾಮಿಯವರಿಗೂ ಆ ಸುದ್ದಿ ಮುಟ್ಟಿತ್ತು. ಅವರೂ ಪತ್ರಿಕೆಗಳನ್ನು ಕೈಯಲ್ಲಿ ಹಿಡಿದು ಕುಳಿತಿದ್ದರು. ಮೂರು ಜನರೂ ಒಬ್ಬರ ಮುಖವನ್ನೊಬ್ಬರು ನೋಡಿದರು.

"ನಾನು ಲೋಕನಾಥರ ಬಗ್ಗೆ ಅನುಮಾನಪಟ್ಟಿದ್ದಕ್ಕೆ ನೀವು ಅಸಮಾಧಾನಗೊಂಡಿರಿ" ಎಂದು ಮುನಿಸ್ವಾಮಿ ಹೇಳಿದ

"ಹೌದು, ನಮ್ಮನಮ್ಮಲ್ಲಿ ಈ ಒಡಕು ಬರಬಾರದೆಂದು ನನ್ನ ಆಸೆಯಾಗಿತ್ತು."

"ಈಗ ಈ ದ್ರೋಹಿಯನ್ನೇನು ಮಾಡೋಣ" ಎಂದು ಮುನಿಸ್ವಾಮಿ ಕೆರಳಿ ಕೇಳಿದ.

"ಏನು ಮಾಡಲಿಚ್ಛಿಸುವಿರಿ ?"

"ಬಲಿ ಹಾಕಿಸಲಿಚ್ಛಿಸುತ್ತೇನೆ. ಇವನು ಮುಂದೆ ಕೂಲಿಗಾರರ ವಂಶಕ್ಕೇ ನೀರು ತಿದ್ದುತ್ತಾನೆ."

"ಲೋಕನಾಥ ಸತ್ತರೆ ಲೋಕನಾಥನ್ನನ ಮನೋಭಾವ ಸಾಯುವುದೇ ?"

"ನೀವು ಹೇಳುವುದು ಅರ್ಥವಾಗಲಿಲ್ಲ."

"ನೋಡಿ ಮುನಿಸ್ವಾಮಿ. ನಾನು ಲೋಕನಾಥರಿಗೆ ವಕೀಲಿ ವಹಿಸುತ್ತಿಲ್ಲ. ಎಲೆಕ್ಷನ್ನಿಗೆ ಮೊದಲು ಆತ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡು ತನ್ನ ಡೆಮೋಕ್ರ್ಯಾಟಿಕ್ ಪಾರ್ಟಿಗೂ, ಕೂಲಿಗಾರರ ತಂಡಕ್ಕೂ ಪರಮದ್ರೋಹ ಮಾಡಿದ್ದಾನೆ. ಅದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಆದರೆ ಅವನನ್ನು ದಂಡಿಸಿ ಪ್ರಯೋಜನವೇನು ? ಸ್ವಾರ್ಥಕ್ಕಾಗಿ ಇಡೀ ಕೂಲಿಗಾರರ-ನಿರಾಪರಾಧಿಗಳೂ ನಿರಾಶ್ರಿತರೂ ಆದ ಕೂಲಿಗಾರರ-ಹಿತವನ್ನು ಬಲಿಯಾಗಿ ಒಪ್ಪಿಸಬಾರದೆಂಬ ದಾರ್ಢ್ಯ ನಮ್ಮ ಜನರಲ್ಲಿ ಬೆಳೆಯ

ಬೇಕು. ಆ ಭಾವನೆ ನಾವು ಬೆಳೆಸಬೇಕು. ನಾನು ಹೆಚ್ಚೋ, ಜನತೆ ಹೆಚ್ಚೋ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬ ಹಾಕಿಕೊಂಡು ಉತ್ತರ ಕಂಡು ಕೊಳ್ಳಬೇಕು."

"ಇದು ವೇದಾಂತವಾಯಿತು. ಆದರೆ ಈಗಾಗಿರುವ ಅನ್ಯಾಯಕ್ಕೆ ಪರಿಹಾರವೇನು ?"

"ನಾವು ಹೆಚ್ಚು ಗೋಪ್ಯವಾಗಿ ಹೆಚ್ಚು ದಕ್ಷತೆಯಿಂದ ಕೆಲಸ ಮಾಡ ಬೇಕು."

"ಇನ್ನು ನಾವು ಯಾವ ಕೆಲಸವನ್ನು ಲೋಕನಾಥನಿಂದ ಮುಚ್ಚಿ ಡಲು ಸಾಧ್ಯ ? ಅವನಿಗೆ ತಿಳಿದ ಮೇಲೆ ಮಿಲ್ ಮಾಲಿಕರಿಗೆ ತಿಳಿದೇ ತಿಳಿಯುತ್ತದೆ. ಅವರಿಗೆ ತಿಳಿದರೂ ಒಂದೇ ಪೋಲೀಸಿನವರಿಗೆ ತಿಳಿದರೂ ಒಂದೇ."

"ಇನ್ನೊಂದು ವಿಷಯ ಕೇಳಿದಿರಾ" ಎಂದು ರಾಮಸ್ವಾಮಿ ಕೇಳಿದ.

"ಏನು ಹೇಳಿ."

"ಮಾಲಿಕರ ಪರವಾಗಿ ಲೋಕನಾಥ ಒಂದು ಲೇಬರ್ ಯೂನಿಯನ್ ವ್ಯವಸ್ಥೆ ಮಾಡುತ್ತಿದ್ದಾನೆ. ಅವನ ಕಡೆಯವರು ನಮ್ಮ ಯೂನಿಯನ್ನಿನ ಸದಸ್ಯರನ್ನು ಆಸೆ, ಭಯವಿಟ್ಟು ಎಳೆದುಕೊಳ್ಳುತ್ತಿದ್ದಾರೆ."

"ಮಾಲಿಕರು ತಮ್ಮ ಕೈಗೊಂಬೆಯಾಗಿರುವ ಯೂನಿಯನ್ ವ್ಯವಸ್ಥೆ ಮಾಡುತ್ತಾರೆಂದು ನನಗೆ ಮೊದಲೇ ಗೊತ್ತಿತ್ತು. ಆದರೆ ಆ ಕೊಳಕು ಕೆಲಸವನ್ನು ಲೋಕನಾಥ ಕೈಯಿಂದ ಮಾಡಿಸುತ್ತಾರೆಂಬುದು ಹೊಸ ಸುದ್ದಿ."

"ಈಗೇನು ಮಾಡಬೇಕು ಹೇಳಿ."

"ಬಾಪು ತೋರಿರುವ ದಾರಿಯೇ ದಾರಿ. ನಮ್ಮ ಕೆಲಸವನ್ನು ನಾವು ತ್ರಿಕರಣಪೂರ್ವಕವಾಗಿ ಮಾಡಿಕೊಂಡು ಹೋಗೋಣ. ಫಲಾಫಲಗಳ ಚಿಂತೆ ಬೇಡ. ಲೋಕನಾಥ ಮಾಲಿಕರ 'ಔರಸಪುತ್ರನಾಗಿ ಬೇಕಾದದ್ದು ಮಾಡಲಿ. ಸತ್ಯ ನಮ್ಮದಾಗಿದ್ದರೆ ಅಂತಿಮ ಜಯವೂ ನಮ್ಮದೇ. ಆದರೆ ನಮ್ಮನಮ್ಮಲ್ಲಿ ಒಡಕು ಹುಟ್ಟದಂತೆ ನಾವು ಎಚ್ಚರರಾಗಿರಬೇಕು."

"ಇಷ್ಟು ದುರ್ಬಲಮಾರ್ಗ ನಾವು ಅನುಸರಿಸಿದರೆ ಲೋಕನಾಥ ಕೇಕೆ ಹಾಕಿಕೊಂಡು ನಗುತ್ತಾನೆ."

"ಏನು ! ಬಾಪು ಮಾರ್ಗ ದುರ್ಬಲಮಾರ್ಗವೇ ? ನಿಮ್ಮ ಬಲ ನಿಮಗೇ ತಿಳಿದಿಲ್ಲ ಮುನಿಸ್ವಾಮಿ. ಅದಕ್ಕೇ ಈ ಮಾತಾಡುತ್ತಿರುವಿರಿ. ಧ್ಯೇಯಕ್ಕಾಗಿ ಪ್ರಾಣ ಕೊಡಲು ಸಿದ್ಧರಾದ ನೂರು ಜನ ನಮ್ಮವರಾಗಿದ್ದರೆ ಸಾಕು. ಲೋಕನಾಥ ಆಟಬುರುಕರ, ದ್ರೋಹಿಗಳ, ಮಾಲಿಕರ ಅನುಯಾಯಿಗಳ ಪಡೆ ಪಡೆ ತರಲಿ ಭಯವಿಲ್ಲ. ನನ್ನಲ್ಲಿ ನನ್ನ ಮಾರ್ಗದಲ್ಲಿ ನಿಮಗೆ ನಂಬಿಕೆಯಿದೆಯೋ ಇಲ್ಲವೋ ಹೇಳಿಬಿಡಿ. ಹಿಂಸಾಮಾರ್ಗ ಅನುಸರಿಸುವುದು ನನಗೆ ಸುತರಾಂ ಒಪ್ಪಿಗೆಯಿಲ್ಲ."

"ನಾಳೆ ನೀವೇ ಒಪ್ಪಿ ಅದನ್ನೇ ಬೋಧಿಸುವಿರಿ"

"ಆಗಬಹುದು. ಶ್ರೀಕೃಷ್ಣ ಕೂಡ ತನ್ನ ಸಂಯಮವನ್ನು ಮರೆತು ಭೀಷ್ಮನ ಮೇಲೆ ಯುದ್ಧಕ್ಕೆ ಹೊರಟನಂತೆ. ಅಂಥ ಸಮಯ ಬಂದರೆ ನೀವು ನನಗೆ ಬುದ್ಧಿ ಹೇಳಿ ದಾರಿಗೆ ತನ್ನಿ. ನಾನು ನಿಮ್ಮನ್ನು ಅಂಗಲಾಚಿ ಬೇಡಿಕೊಳ್ಳುತ್ತೇನೆ–ಲೋಕನಾಥನ್‌ನನ್ನು ಮರೆತುಬಿಡಿ. ಆತನ ಮೇಲೆ ಕೈ ಮಾಡಬೇಡಿ."

ಶ್ರೀನಿವಾಸನ ವಾದವೈಖರಿಗೆ ರಾಮಸ್ವಾಮಿ ಅರೆವಾಲಿಸ್ದ. ಆದರೆ ಮುನಿಸ್ವಾಮಿಯ ಹೃದಯದ ಆವೇಗ ಕಡಿಮೆಯಾಗಿರಲಿಲ್ಲ. ಅವನ ಮುಖ ಕೆಂಪೇರಿತ್ತು. ಕಣ್ಣುಗಳಲ್ಲಿ ರಕ್ತ ಮಿಡಿಯುತ್ತಿತ್ತು. ಅವನತದೃಷ್ಟನಾಗಿ ಕುಳಿತು ನೆಲವನ್ನು ದಿಟ್ಟಿಸಿ ನೋಡುತ್ತಿದ್ದ ಮುನಿಸ್ವಾಮಿಯ ಬಳಿಗೆ ಬಂದು ಕುಳಿತು ಶ್ರೀನಿವಾಸ ಅವನ ಹೆಗಲಮೇಲೆ ಕೈಹಾಕಿ. ಆದರದಿಂದ ಗಲ್ಲ ಹಿಡಿದು

"ಅಣ್ಣಾ–ನಿಮ್ಮ ದುಃಖ, ಕಳವಳ ನಾನು ಬಲ್ಲೆ. ನೀವು ನನಗಿಂತ ವಯಸ್ಸಾದವರು, ಅನುಭವಿಕರು, ಕಷ್ಟ ಉಂಡವರು. ನನ್ನ ಮಾತು ಕೇಳಿ. ಇದು ನನ್ನ ಮಾತಲ್ಲ, ನಮ್ಮ ನಾಡಿನ ಮಹಾಶಿಲ್ಪಿ, ಮಹಾತಪಸ್ವಿಯ ಮಾತು. ಬಾಪೂ ಮಾರ್ಗವನ್ನನುಸರಿಸಿದರೆ ನಾವು ಕೆಡುವುದಿಲ್ಲವೆಂದು ನನ್ನ ಅಂತರಂಗ ಮೊರೆಯುತ್ತಿದೆ. ಕೂಲಿಗಾರರ ಸಂಘಟನೆಯ ಕೆಲಸವನ್ನು ನಾವು ಬಹಳ ಎಚ್ಚರಿಕೆಯಿಂದ ಮಾಡಬೇಕು. ಈ ಸಂಸ್ಥೆಯನ್ನು ಮಗುವಿನಂತೆ ಲಾಲಿಸಿ ಪಾಲಿಸಬೇಕು. ಇದಕ್ಕೆ ನೀವೇ ಕೈಯಾರ ವಿಷವುಣ್ಣಿಸಬೇಡಿ. ಪ್ರತೀಕಾರ ಮನೋಭಾವವನ್ನು ತೊರೆದುಬಿಡಿ. ಲೋಕನಾಥನನ್ನೂ

ದಯೆ, ಕನಿಕರದಿಂದ ನೋಡಿ. ಇದರಿಂದ ನಿಮಗೆ ಶಾಂತಿ, ಧ್ಯೇಯಕ್ಕೆ ಜಯ ದೊರೆಯುತ್ತದೆ"

ಎಂದು ಹೇಳಿದ. ಮುನಿಸ್ವಾಮಿ ಶ್ರೀನಿವಾಸನನ್ನಪ್ಪಿ ಮಕ್ಕಳಂತೆ ಅತ್ತುಬಿಟ್ಟ.

## ೨೧

ರಂಗಣ್ಣನ ಕಿವಿಗೆ ಚನ್ನಪಟ್ಟಣಕ್ಕೇ ಸುಭದ್ರೆಯ ಚಲನವಲನ, ಚಟುವಟಿಕೆಗಳ ಸುದ್ದಿ ಮುಟ್ಟುತ್ತಿತ್ತು. ಅವುಗಳಲ್ಲಿ ಸತ್ಯ ಯಾವದು, ಅಸತ್ಯ ಯಾವದು ಎಂದು ನಿಶ್ಚಯಿಸುವುದು ಅವನಿಗೆ ದುಸ್ಸಾಧ್ಯವಾಗಿತ್ತು. ಬೆಂಗಳೂರಿಗೆ ಹೋಗಲೇ ಬೇಡವೇ ಎಂದು ಅವನು ಯೋಚಿಸುತ್ತಿರುವಲ್ಲಿ ಲಾಯರ್ ಕೃಷ್ಣಮೂರ್ತಿಗಳು ಬಂದು ಸೂರಪ್ಪನವರ ಸಂದೇಶವನ್ನಿತ್ತರು. ಒಂದು ದಿನ ರಜಾ ತೆಗೆದುಕೊಂಡು ರಂಗಣ್ಣ ಬೆಂಗಳೂರಿಗೆ ಪ್ರಯಾಣ ಬೆಳಸಿದ.

ಬೆಂಗಳೂರಿಗೆ ಬಂದವನು ನೇರವಾಗಿ ಮಾವನ ಮನೆಗೆ ಹೋಗದೆ ಗೆಳೆಯನ ರೂಮಿನಲ್ಲಿ ಇಳಿದುಕೊಂಡು ರಾತ್ರಿ ಎಂಟು ಗಂಟೆ ಸುಮಾರಿಗೆ ಸೂರಪ್ಪನವರನ್ನು ಕಾಣಲು ಹೋದ. ಅವನನ್ನು ಅತ್ಯಾದರದಿಂದ ಬರಮಾಡಿಕೊಂಡು ಸೂರಪ್ಪನವರು ಸ್ವಾಗತ ಬಯಸಿದರು. ಒಳಗಿನಿಂದ ಕಾಫಿ ತಿಂಡಿ ತರಿಸಿ ಬಲವಂತವಾಗಿ ರಂಗಣ್ಣನಿಗೆ ತಿನ್ನಿಸಿದರು.

"ಏನು ಸರ್, ಹೇಳಿ ಕಳಿಸಿದ್ದರಂತೆ!"

"ಹೌದು ರಂಗಣ್ಣ. ನಿನ್ನ ಹಿತಾಹಿತವನ್ನು ಯೋಚನೆ ಮಾಡುವುದಕ್ಕೆ ನಿನ್ನ ಬರಮಾಡಿಕೊಂಡೆ. ನೀನು ಬಂದದ್ದು ಬಹಳ ಸಂತೋಷ. ನೀನು ಕಾಗದ ಬರೆದಿದ್ದ ವಿಷಯ ವೆಂಕಪ್ಪಯ್ಯನವರು ನನಗೆ ಹೇಳಿದ್ದಾರೆ. ಉಭಯರ ಹಿತೈಷಿಯಾದ ನಾನು ಈ ಸಮಸ್ಯೆ ಬಿಡಿಸಿ ನಿಮ್ಮ ನಿಮ್ಮಲ್ಲಿ ವೈಮನಸ್ಯ ಹುಟ್ಟದಂತೆ ನೋಡಿಕೊಳ್ಳಬೇಕಾಗಿದೆ—ನಿಮ್ಮ ಮಾವನವರು ತಮ್ಮ 'ಪವರ್ ಆಫ್ ಅಟಾರ್ನಿ' ನನಗೊಪ್ಪಿಸಿದ್ದಾರೆ—ನೀನು ಒಪ್ಪಿಸಲು ಸಿದ್ಧನಾಗಿರುವೆಯೋ ?"

"ನಿಮ್ಮ ಮಾತಿಗೆ ನಾನು ಎದುರು ಹೇಳುತ್ತೇನೆಯೇ ಸರ್. ನೀವು ಹೇಗೆ ಹೇಳಿದರೆ ಹಾಗೆ ಮಾಡಲು ಸಿದ್ಧನಾಗಿದ್ದೇನೆ."

"ಮೊದಲು ನಿನ್ನ ಸ್ಕೂಲಿಗೆ ರಾಜೀನಾಮೆ ಕೊಡು. ಕೆಲಸದ ಗತಿ ಯೇನು ಎಂದು ಯೋಚಿಸಬೇಡ. ನಾಳೆಯೇ ನಿನಗೆ 'ನ್ಯೂ ಇಂಡಿಯಾ ಹೈಸ್ಕೂಲಿನಲ್ಲಿ' ನೂರು ರೂಪಾಯಿ ಕೆಲಸ ಕೊಡಿಸುವುದು, ನನ್ನ ಭಾರ. ಜತೆಗೆ ಪೂರ್ ಬಾಯ್ಸ್ ಹೋಮಿನ ವಾರ್ಡನ್ನೂ ನೀನೇ.—ಅದಕ್ಕೊಂದು ೩೦ ರೂಪಾಯಿ ಕೊಡಿಸುತ್ತೇನೆ. ಮೂವತ್ತರ ಎರಡು ಪಾಠ ಗೊತ್ತು ಮಾಡಿದ್ದೇನೆ. ನೀನು ನಿನ್ನ ಹೆಂಡತಿ ಸುಖವಾಗಿರುವುದಕ್ಕೆ ಒಂದು ಮನೆ ಯನ್ನೂ ಗೊತ್ತುಮಾಡಿದ್ದೇನೆ. ಇವುಗಳ ಜತೆಗೆ ಆಗಾಗ್ಗೆ ನನ್ನ ಕೆಲಸ ಸ್ವಲ್ಪ ಮಾಡಿಕೊಡುತ್ತಿರು—ನಾನು ತಿಂಗಳಿಗೆ ನಿನಗೆ ೫೦ ರೂಪಾಯಿ ಕೊಡುತ್ತ ಬರುತ್ತೇನೆ. ಇಷ್ಟಾದರೆ ಬೆಂಗಳೂರಿನಲ್ಲಿ ಸುಖಜೀವನ ಸಾಗಿಸಬಹುದು ತಾನೆ ?"

"ಸರ್, ನನ್ನ ಪರಿಹಾಸ್ಯ ಮಾಡುತ್ತಿರುವಿರಾ ?"

"ಇಲ್ಲಯ್ಯ ಪುಣ್ಯಾತ್ಮ-ಎಲ್ಲಾ ಲೆಕ್ಕಹಾಕಿ ಈ ವ್ಯವಸ್ಥೆ ಮಾಡಿದ್ದೇನೆ. ಸುಭದ್ರಾ ಬೆಂಗಳೂರು ಬಿಡಲು ಸಿದ್ಧವಾಗಿಲ್ಲ, ನೀನೇ ಇಲ್ಲಿ ಬಂದಿದ್ದು ಸುಖವಾಗಿ ಸಂಸಾರ ಮಾಡಿಕೊಂಡಿರು. ಅವಳೀಗ ನನ್ನ ಎಲೆಕ್ಷನ್ ಸಕ್ರೆಟರಿ ಯಾಗಿ ಕೆಲಸಮಾಡುತ್ತಿರುವ ಸುದ್ದಿ ಗೊತ್ತಷ್ಟೆ ?"

"ಗೊತ್ತು ಸರ್."

"ಅದಕ್ಕೆ ನಿನ್ನ ಅಭ್ಯಂತರವೇನೂ ಇಲ್ಲವಷ್ಟೆ !"

"ನಿಮ್ಮ ಸೇವೆಮಾಡಿದರೆ ಆಭ್ಯಂತರವೇಕೆ ಸರ್."

"ಈಗ ನಿನಗೆ ಸಮಾಧಾನವಾಯಿತೋ ? ನಾಳೆ ನೀನು ಚನ್ನಪಟ್ಟ ಣಕ್ಕೆ ಹೋಗಿ ರಾಜೀನಾಮೆ ಒಗೆದು ನಿನ್ನ ಸಾಮಾನು ಸರಂಜಾಮು ಏನಿದೆ ತೆಗೆದುಕೊಂಡು ಬಂದುಬಿಡು. ಸ್ಕೂಲಿಗೆ ರಜಾ ಬರುವ ಮುನ್ನವೇ ನೀನು ಡ್ಯೂಟಿ ಮೇಲೆ ಬಂದ ಶಾಸ್ತ್ರ ಮಾಡಿದರೆ ರಜಾ ಕಾಲದ ಸಂಬಳವೂ ಕಟ್ಟೆ ಬರುತ್ತದೆ. ನಾಳೆ ರಾಮಾಶಾಸ್ತ್ರೀನ ಕರೆದುಕೊಂಡು ಹೋಗಿ ನಿನಗೆ ಗೊತ್ತು ಮಾಡಿರುವ ಮನೆ ನೋಡಿಕೊಂಡು ಅವನ ಹತ್ತಿರ ಬೀಗದಕೈಯಿದೆ ತೆಗೆದು ಕೊಂಡು ಹೋಗು."

ರಂಗಣ್ಣನಿಗೆ ಏನು ಹೇಳಬೇಕೋ ತೋರಲಿಲ್ಲ. ಅವನ ಹೃದಯ ಕೃತಜ್ಞತೆಯಿಂದ ತುಂಬಿ ಹೋಯಿತು. ಸೂರಪ್ಪನವರ ಎರಡು ಕಾಲುಗಳನ್ನೂ ಹಿಡಿದು ನಮಸ್ಕಾರ ಮಾಡಿದ.

"ಹುಚ್ಚು ಹುಡುಗ-" ಎಂದು ಸೂರಪ್ಪನವರಂದರು.

"ರಾಜಿನಾಮೆಯಿತ್ತ ಕೂಡಲೆ ಹೆಡ್‌ಮಾಸ್ಟರು ರಿಲೀವ್ ಮಾಡದಿದ್ದರೆ ಏನು ಮಾಡಲಿ ಸರ್."

"ನಿನಗೇಕೆ ಅದರ ಚಿಂತೆ. ಇವತ್ತು ಇಲ್ಲಿಂದಲೇ ರಾಜೀನಾಮೇ ಕಾಗದ ಟಪಾಲಿನಲ್ಲಿ ಕಳಿಸಿಬಿಡು. ನಾಳೆ ಊರಿಗೆ ಹೋಗಿ ನಿನ್ನ ಸಾಮಾನು ತೆಗೆದುಕೊಂಡು ಬಾ. ಏನಾದರೂ ತೊಂದರೆ ಬಂದರೆ ನಾನು ನೋಡಿಕೊಳ್ಳುತ್ತೇನೆ."

ಎಂದು ಧೈರ್ಯ ಹೇಳಿದರು. ರಂಗಣ್ಣ ಹಿಗ್ಗುತ್ತ ರಾಮಾಶಾಸ್ತ್ರಿಯನ್ನು ಹುಡುಕಿಕೊಂಡು ಹೊರಟ.

ಮಾರನೆಯ ಬೆಳಿಗ್ಗೆ ರಾಮಾಶಾಸ್ತ್ರಿ ರಂಗಣ್ಣನನ್ನು ಕರೆದುಕೊಂಡು ಚಾಮರಾಜಪೇಟೆ ನಾಲ್ಕನೆಯ ರಸ್ತೆಯಲ್ಲಿ ಅವನಿಗಾಗಿ ಗೊತ್ತುಮಾಡಿದ್ದ ಮನೆಗೆ ಕರೆದುಕೊಂಡು ಹೋದ.

ಸಣ್ಣ ಕಾಂಪೌಂಡಿನ ಮನೆ. ಮನೆಯ ಮುಂದೆ ನಾಲ್ಕು ತೆಂಗಿನಮರಗಳಿದ್ದವು. ಪುಟ್ಟ ಕೈದೋಟ. ಪ್ರವೇಶ ಮಾಡಿದೊಡನೆಯೇ ಎಡಗಡೆ ಒಂದು ರೂಮು. ಬಲಗಡೆ ವೆರಾಂಡ; ವೆರಾಂಡದಿಂದ ಒಳಗೆ ತೊಟ್ಟಿಗೆ ಹೋಗಬೇಕಾಗಿತ್ತು. ತೊಟ್ಟಿಗೆದುರಾಗಿ ಒಂದು ವಿಶಾಲವಾದ ರೂಮು. ತೊಟ್ಟಿಯಿಂದ ಒಳಗೆ ಹೋದರೆ ಬಲಗಡೆ ಅಡಿಗೆಯ ಮನೆ, ಎಡಗಡೆ ಸ್ನಾನಗೃಹ. ಅಲ್ಲಿಂದ ಹಿತ್ತಲಿಗೆ ಪ್ರವೇಶ. ಒಗೆಯುವ ಕಲ್ಲು, ಭಾವಿ, ಶೌಚ ಎಲ್ಲಾ ವ್ಯವಸ್ಥಿತವಾಗಿದ್ದವು. ಮನೆಗೆ ನೀರು, ದೀಪದ ಸೌಕರ್ಯವೂ ಇದ್ದುವು.

ಮನೆ, ಅದರ ಅಂದ ಚೆಂದ ನೋಡಿ ರಂಗಣ್ಣ ಬೆರಗಾದ. ವೆರಾಂಡದಲ್ಲಿ ನಾಲ್ಕು ಬೆತ್ತದುಕುರ್ಚಿಗಳು, ಒಂದು ಸಣ್ಣ ಟೀಪಾಯ್. ವೆರಾಂಡದ ಎದುರು ರೂಮಿನಲ್ಲಿ ಒಂದು ಸೋಪಾ ಸೆಟ್ ಮತ್ತು ಟೀಪಾಯಿಗಳಿದ್ದವು. ಅದರ ಒಂದು ಮೂಲೆಯಲ್ಲಿ ಹೆಚ್.ಎಂ.ವಿ. ಕಂಪನಿಯ ೬ ವ್ಯಾಲ್ವಿನ ರೇಡಿಯೋ ಸೆಟ್. ತೊಟ್ಟಿಯಲ್ಲಿ ಒಂದು ಮೇಜು, ಕೆಲವು ಕುರ್ಚಿಗಳು. ತೊಟ್ಟಿಗೆದುರಿದ್ದ ರೂಮಿನಲ್ಲಿ ಒಂದು ಡ್ರೆಸ್ಸಿಂಗ್ ಟೇಬಲ್, ಒಂದು ಡಬ್ಬಲ್

ಕಾಟ್, ಅದರ ಎದುರು ಒಂದು ಸಿಂಗಲ್ ಕಾಟ್. ಬಟ್ಟೆಯ ಸ್ಟ್ಯಾಂಡ್. ಅಡಿಗೆ ಮನೆ ಪಾತ್ರೆ ಪದಾರ್ಥಗಳಿಂದ ಸುಸಜ್ಜಿತವಾಗಿತ್ತು. ಕಿಟಕಿ, ಬಾಗಿಲುಗಳಿಗೆ ತೆರೆಗಳು.

ಮನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾ ರಂಗಣ್ಣ ಬೆಕ್ಕಸದಿಂದ

"ಶಾಸ್ತ್ರಿಗಳೇ, ಅಪ್ಪಿತಪ್ಪಿ ನೀವು ಬೇರೆ ಮನೆಗೆ ನನ್ನ ಕರೆದುಕೊಂಡು ಬಂದಿರುವಿರೇನೋ ?"

"ಏಕೆ ಹಾಗೆ ಕೇಳುವಿರಿ ಸ್ವಾಮಿ."

"ಇದು ಒಬ್ಬ ಬಡಸ್ಕೂಲ್ ಮೇಷ್ಟ್ರ ಮನೆಯೇ ?"

"ಅಲ್ಲ ಸ್ವಾಮಿ, ಇದು ನಗರದ ಗಣ್ಯವಕೀಲರಾದ ಸೂರಪ್ಪನವರ ಸೆಕ್ರೆಟರಿಯವರ ಮನೆ."

"ಅಡಿಗೆಯ ಮನೆಯ ವ್ಯವಸ್ಥೆಯೂ ಆಗಿದೆ."

"ಹೂ! ನಿಮ್ಮ ಮಾವನವರು ಎಂಟು ದಿವಸ ಇದಕ್ಕಾಗಿ ದುಡಿದಿದ್ದಾರೆ."

"ಮನೆ ಬಾಡಿಗೆಯೆಷ್ಟು."

"ನಲವತ್ತೇ!"

"ಮನೆಯವನಿಗೆ ಅಡ್ವಾನ್ಸ್ ಕೊಡಬೇಡವೇ ?"

"ಕೊಟ್ಟದ್ದಾಗಿದೆ. ನಿಮ್ಮ ಮಾವನವರು ಯಾವ ವಿಷಯವನ್ನೂ ಮರೆತಿಲ್ಲ."

ರಾಮಾಶಾಸ್ತ್ರಿಯ ಲೆಕ್ಕಾಚಾರದ ಮಾತು ಕೇಳಿ ಏನರ್ಥ ಮಾಡಬೇಕೋ ರಂಗಣ್ಣನಿಗೆ ತಿಳಿಯಲಿಲ್ಲ. ತನಗೆ ಶುಕ್ರ ಮಹಾದೆಸೆ ಪ್ರಾಪ್ತವಾದುದಕ್ಕೆ ಮನಸ್ಸಿನಲ್ಲಿ ಹಿರಿಹಿಗ್ಗು. ಆದರೆ ಈ ವೈಭವ, ಇವರ ಹಿನ್ನಲೆಯಲ್ಲಿ ತನ್ನ ಪರಿಸ್ಥಿತಿ ನೆನೆದು ಅವನ ಮನಸ್ಸಿನಲ್ಲಿ ಕಳವಳವುತ್ಪನ್ನವಾಯಿತು. ರಾಮಾಶಾಸ್ತ್ರಿ ಅವನ ಸ್ಥಿತಿಯನ್ನರ್ಥಮಾಡಿಕೊಂಡು

"ಏಕೆ ಸ್ವಾಮಿ, ವಿಚಾರಮಾಡುತ್ತ ನಿಂತಿರಿ ?"

"ಸೂರಪ್ಪನವರು ಹ್ಯಾಗೆ [illegible]? ನಿಮ್ಮ ಮಾವನ ಸ್ನೇಹಿತರು, ನಾನು ನ್ಯಾಯವಾಗಿ ಈ ಪ್ರಶ್ನೆ ಕೇಳಲಾರೆನು. ಆದರೆ ನಿಮ್ಮನ್ನು ನನ್ನ ಹಿತೈಷಿಗಳೆಂದು ಭಾವಿಸಿಕೊಂಡು ಕೇಳುತ್ತಿದ್ದೇನೆ."

"ಯಜಮಾನರ ವಿಷಯ ಏನು ಹೇಳಲಿ ಸ್ವಾಮಿ, ಅವರ ಔದಾ ರ್ಯಕ್ಕೆ ಮಿಗಿಲೇ ಇಲ್ಲ. ಅವರ ಕಟಾಕ್ಷ ಬೀಳುವುದೂ ಒಂದೇ, ದೇವರ ಕಟಾಕ್ಷ ಬೀಳುವುದೂ ಒಂದೇ."

"ಅವರ ಬಗ್ಗೆ ನಾನು ಏನು ಏನೋ ಕೇಳಿರುವೆನಲ್ಲಾ."

"ಕೇಳಿರಬಹುದು. ಯಾರ ಬಗ್ಗೆ ಒಡಕು ಧ್ವನಿಯಿಲ್ಲ ಹೇಳಿ. ಜನ ಗಾಂಧೀಜಿಯವರ ನೀತಿಯನ್ನೇ ಶಂಕಿಸುತ್ತಾರೆ, ಇನ್ನು ಸೂರಪ್ಪನವರ ವಿಷಯ ಆಡಿಕೊಳ್ಳದೆ ಬಿಡುತ್ತಾರೆಯೇ?"

"ಅವರ ಔದಾರ್ಯಕ್ಕೆ ಕೃತಜ್ಞನಾಗಿರದಿದ್ದರೆ ನಾನು ಮಹಾ ಪಾಪಿ ಯಾಗುತ್ತೇನೆ. ಆದರೆ ಇಷ್ಟೊಂದು ಉಪಕಾರವನ್ನು ನಾನು ಸ್ವೀಕರಿಸುವುದು ಯಾವ ನ್ಯಾಯ?"

"ನೋಡಿ ಸ್ವಾಮಿ. ಈ ಸಾರಿಯ ಎಲೆಕ್ಷನ್ನಿನಲ್ಲಿ ಸುಭದ್ರಮ್ಮ ನಮ್ಮ ಯಜಮಾನರಿಗೆ ಮಾಡಿರುವ ಉಪಕಾರ ಸಾಮಾನ್ಯವಾದುದಲ್ಲ. ಸುಭದ್ರಮ್ಮ ಅವರಿಗೆ ಸಹಕಾರ ಕೊಡದಿದ್ದರೆ, ಅವರಿಗೆ ಜಯ ದೊರಕುವುದು ದುರ್ಲಭ ವಾಗಿತ್ತು. ಅದಕ್ಕೆ ಪ್ರತ್ಯುಪಕಾರವಾಗಿ ಅವರು ಏನೋ ಅಲ್ಪ ಸ್ವಲ್ಪ ಸೇವೆ ಸಲ್ಲಿಸಿದ್ದಾರೆ. ಇಷ್ಟಕ್ಕೂ ಸೂರಪ್ಪನವರು ಮಾಡಿದ್ದೇನು? ಎಲ್ಲಾ ನಿಮ್ಮ ಮಾವನವರು ನಿಂತುಕೊಂಡು, ದುಡ್ಡಿನ ಮುಖ ನೋಡದೆ ವ್ಯವಸ್ಥೆ ಮಾಡಿ ದರು. ನಿಮ್ಮ ಮಾವನವರ ಔದಾರ್ಯಕ್ಕೆ ನೀವಲ್ಲದೆ ಇನ್ನು ಯಾರು ಹಕ್ಕುದಾರರು?"

"ನಿಜ ನಿಜ" ಎಂದು ರಂಗಣ್ಣ ಹೇಳಿದ.

ರಾಮಾಶಾಸ್ತ್ರಿಯ ಮಾತಿನಲ್ಲಿ ಕಾಪಟ್ಯವಾಗಲಿ ವಂಚನೆಯಾಗಲಿ ಇರಲಿಲ್ಲ. ಅವನು ಎಲ್ಲದಕ್ಕೂ ಸಮಂಜಸವಾಗಿ ಉತ್ತರವಿತ್ತಿದ್ದ. ರಂಗಣ್ಣ ನಿಗೆ ಅವನ ಮಾತಿನಲ್ಲಿ ಸಂಶಯ ತೆಗೆದುಕೊಳ್ಳುವ ಕಾರಣವಿರಲಿಲ್ಲ. ಆದರೂ ಮನಸ್ಸಿನಲ್ಲಿ ಒಂದು ವಿಚಿತ್ರ ವೇದನೆ, ಕಳವಳ.

ಶಾಸ್ತ್ರಿಯಿಂದ ಮನೆಯ ಬೀಗಪಕ್ಕೆ ತೆಗೆದುಕೊಂಡು ಸ್ಕೂಲಿನ ಪ್ರಕರಣ ಮುಗಿಸಿ ಬರಲು ಚನ್ನಪಟ್ಟಣಕ್ಕೆ ರಂಗಣ್ಣ ಪ್ರಯಾಣ ಬೆಳಸಿದ.

## ೨೨

ಸೂರಪ್ಪನವರ ಎಲೆಕ್ಷನ್ ಮತ್ತು ಸುಭದ್ರೆಯ ಪರೀಕ್ಷೆ ಎರಡೂ ಹೆಚ್ಚು ಕಡಿಮೆ ಒಂದೇ ಕಾಲಕ್ಕೆ ಒದಗಿ ಬಂದವು. ಪರೀಕ್ಷೆ ಮುಗಿದ ಹದಿನೈದು ದಿವಸಕ್ಕೇ ಎಲೆಕ್ಷನ್. ಎಲೆಕ್ಷನ್ನಿಗೆ ಕೆಲವು ದಿವಸ ಮುಂಚೆ ಸುಭದ್ರೆ ನೋಟೀಸ್ ಕೊಟ್ಟುಬಿಟ್ಟಳು. 'ಪರೀಕ್ಷೆ ಮುಗಿಯುವ ತನಕ ನಾನು ಯಾವದಕ್ಕೂ ಬರಲು ಸಾಧ್ಯವಿಲ್ಲ'ವೆಂದು. ಅವಳು ಮಾಡಬೇಕಾಗಿದ್ದ ಕೆಲಸ ಮುಗಿದಿತ್ತು. ಅವಳಿಗೆ ಪುರಸತ್ತು ಕೊಡಲು ಸೂರಪ್ಪನವರು ಸಮ್ಮತಿಸಿದರು.

ಲೋಕನಾಥನ್ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡದ್ದು ಡೆಮೋಕ್ರ್ಯಾಟಿಕ್ ಪಕ್ಷಕ್ಕೆ ಭಾರಿ ಹೊಡೆತ ಬಿದ್ದಿತ್ತು. ಅವರು ವಿಧಿಯಿಲ್ಲದೆ ಇತರ ಉಮೇದುವಾರರಿಗೆ ಸಹಾಯನೀಡಲು ಮುಂದಾದರು. ಡೆಮೋಕ್ರ್ಯಾಟಿಕ್ ಪಕ್ಷದಿಂದ ಯಾರೂ ಬರದಿದ್ದರೂ ಚಿಂತೆಯಿಲ್ಲ, ಸೂರಪ್ಪನವರಿಗೆ ಸ್ಥಾನ ಸಿಕ್ಕಬಾರದು ಎಂಬುದು ಅವರ ಅಭಿಮತವಾಗಿತ್ತು. ಹೊಸದಾಗಿ ಸ್ಥಾಪಿತವಾಗಿದ್ದ ಕೂಲಿಗಾರರ ಯೂನಿಯನ್ ಸೂರಪ್ಪನವರ ವಿರುದ್ಧ ಪ್ರಚಾರ ಕೈಗೊಂಡಿತು.

ಸೂರಪ್ಪನವರು ತಮ್ಮ ಬಲಾಬಲಗಳನ್ನು ಚೆನ್ನಾಗಿ ಅಳೆದು ನೋಡಿದ್ದರು. ಉಪದೇಶ, ಅನುನಯ, ಬೇಡಿಕೆಗಳಿಗೆ ಮಣಿಯದಿದ್ದ ಮತದಾರರಿಗೆ ತಲೆಗೆ ಹತ್ತು ರೂಪಾಯಿ ಕೊಡಲು ಸಿದ್ಧರಾದರು. ಬಚ್ಚಲು ನೀರಿನಂತೆ ಹಣ ಹರಿಯಲಾರಂಭವಾಯಿತು.

ಎಲೆಕ್ಷನ್ ಸಮೀಪಿಸಿದಂತೆ ಊರಿನಲ್ಲಿ ಉದ್ವೇಗ, ಉತ್ಸಾಹ ಉಕ್ಕಿ ಹರಿಯಿತು. ಸೂರಪ್ಪನವರ ಪಕ್ಷಪಾತಿಗಳು ಪ್ರಚಾರದ ಎಲ್ಲ ಸಾಧನಗಳನ್ನೂ ಬಳಸಿಕೊಂಡರು. ಗೋಡೆಗಳು, ಸಿನೀಮಾ ಸ್ಲೈಡುಗಳು, ರಾತ್ರಿ ಮೆರವಣಿಗೆ ವಾಲ್‌ಪೋಸ್ಟರುಗಳು, ಬ್ಯಾನರುಗಳು ಸೂರಪ್ಪನವರ ಹೆಸರನ್ನು ಡಂಗುರ ಸಾರಿದವು. ಹೊಟೇಲಿಗೆ ಹೋಗಿ ತಿಂಡಿ ತಿಂದು ಕೈಯಾರಸಿ ಕೊಳ್ಳಲು ಕಾಗದ ಕೇಳಿದರೆ ಮಾಣಿ ಕೊಡುತ್ತಿದ್ದುದು 'ಸೂರಪ್ಪನವರಿಗೇ ಓಟು ಕೊಡಿ' ಎಂದು ಸಾರುತ್ತಿದ್ದ ಚೀಟಿ. ಎಲೆಕ್ಷನ್ ಗಲಭೆ ಮುಗಿದರೆ ಸಾಕಲ್ಲಾ ಎನ್ನುವ ಮಟ್ಟಿನ ಗಲಭೆ, ಕೋಲಾಹಲ.

ಪರೀಕ್ಷೆಯೂ ಆರಂಭವಾಯಿತು. ಸುಭದ್ರಾ, ಶ್ರೀನಿವಾಸ, ಶಂಕರ ಸ್ಪರ್ಧೆಯಿಂದ ಉತ್ತರ ಬರೆದಿದ್ದರು. ಶಂಕರ ಮಾತ್ರ ಫಸ್ಟ್‌ಕ್ಲಾಸ್ ದೊರೆಯುವುದೆಂದು ಧೈರ್ಯವಾಗಿದ್ದ. ಸುಭದ್ರೆ ಪಾಸು ಆದರೆ ಸಾಕು ಎಂದುಕೊಂಡಳು. ತನ್ನ ಪರೀಕ್ಷೆಯ ಫಲಿತಾಂಶವೇನಾಗುವುದೆಂಬುದರ ಬಗ್ಗೆ ಶ್ರೀನಿವಾಸ ಸಂಶಯ ತಾಳಿದ್ದ.

ಎಲೆಕ್ಷನ್ ದಿನವೂ ಬಂದೇಬಿಟ್ಟಿತು. ಸೂರಪ್ಪನವರಿಗೆ ಪುರಸತ್ತೇ ಇಲ್ಲ. ಅದೊಂದೇ ದಿವಸ ಅವರು ನೂರು ಗ್ಯಾಲನ್ ಪೆಟ್ರೋಲ್ ಉಪಯೋಗಿಸಿರಬಹುದು. ಪ್ರತಿಯೊಂದು ಪೋಲಿಂಗ್ ಬೂತಿನ ಮುಂದೆಯೂ ಅವರ ಅನುಯಾಯಿಗಳ ತಂಡ. ಸೂರಪ್ಪನವರು ಬಂದರೆಂದರೆ ಜಯಘೋಷ. ಬೆಳಿಗ್ಗೆಯಿಂದ ಸಂಜೆಯವರೆಗೂ ಸೂರಪ್ಪನವರು ಪೋಲಿಂಗ್ ಬೂತುಗಳ ಪ್ರದಕ್ಷಿಣೆ ಮಾಡಿಬಂದರು.

ಫಲಿತಾಂಶವೇನಾಗುವುದೆಂದು ಯಾರೂ ಅರಿಯರು. ಡೆಮೋಕ್ರ್ಯಾಟಿಕ್ ಪಕ್ಷದವರ ಪ್ರಚಾರವೂ ಸಾಕಷ್ಟು ಆಡಂಬರಯುತವಾಗಿತ್ತು. ಕೂಲಿಗಾರರು ಮೆರವಣಿಗೆ ಹೊರಟು ಸೂರಪ್ಪನವರ ವಿರುದ್ಧ ನಿಂತಿದ್ದ ಉಮೇದುವಾರರಿಗೆ ಬೆಂಬಲವಿತ್ತಿದ್ದರು.

ಮಾರನೆಯ ಸಂಜೆಗೆ ಚುನಾವಣೆಯ ಫಲಿತಾಂಶ ಹೊರಬಿತ್ತು. ಸೂರಪ್ಪನವರಿಗೆ ಪ್ರಚಂಡ ವಿಜಯ ಲಭಿಸಿತ್ತು. ವಿರೋಧಿ ಉಮೇದುವಾರರಲ್ಲಿ ಒಬ್ಬನಿಗೆ ಡಿಪಾಸಿಟ್ ಹಣ ಹೋಗಿತ್ತು. ಇನ್ನೊಬ್ಬ ಹಾಗೂ ಹೇಗೂ ಪಾರಾಗಿದ್ದ.

ಸೂರಪ್ಪನವರ ಸಂತೋಷ, ಸಡಗರ, ಸಂಭ್ರಮ ಹೇಳತೀರದು. ಅವರ ಕೊರಳಿಗೆ ನೂರಾರು ಮಾಲೆಗಳು ಬಿದ್ದವು. ವಂದನೆಯರ್ಪಿಸಲು ಬಂದವರೊಡನೆ ಕೈಕುಲಿಕಿ ಕುಲಿಕಿ ಸೂರಪ್ಪನವರ ಕೈ ನೋಯಲಾರಂಭಿಸಿತ್ತು.

ಪರೀಕ್ಷೆ ಮುಗಿದು ಆಯಾಸವಾಗಿದ್ದರೂ ತಪ್ಪದೆ ಸುಭದ್ರೆ ಬಂದು ಸೂರಪ್ಪನವರಿಗೆ 'ಕನ್‌ಗ್ರಾಜುಲೇಷನ್ಸ್' ಹೇಳಿದರು. ಸೂರಪ್ಪನವರು ನಸುನಗುತ್ತಾ 'ಎಲ್ಲಾ ನಿನ್ನ ದಯೆ' ಎಂದರು. ಸೂರಪ್ಪನವರಿಗೆ ಶ್ರೀನಿವಾಸ ಮಾತ್ರ 'ಕನ್‌ಗ್ರಾಜುಲೇಷನ್ಸ್' ಹೇಳುವ ಹವ್ಯಾಸಕ್ಕೆ ಬೀಳಲಿಲ್ಲ.

## ೨೩

ಮಗಳ ಜೀವನ ಒಂದು ಸ್ವರೂಪಕ್ಕೆ ಬಂದು ಕೋರ್ಟು ಕಛೇರಿ ಹತ್ತುವ ಪ್ರಮೇಯ ತಪ್ಪಿತಲ್ಲಾ ಎಂದು ವೆಂಕಪ್ಪಯ್ಯನವರು ಸಂತೋಷ ಪಟ್ಟುಕೊಂಡರು. ವೆಂಕಪ್ಪಯ್ಯನವರು ಮಾಡಿದ ವ್ಯವಸ್ಥೆ ನರಸಮ್ಮನವರಿಗೆ ಸ್ವಲ್ಪವೂ ಸಮಾಧಾನವಿಲ್ಲ.

"ಇನ್ನೇನು ಮಾಡಬೇಕಾಗಿತ್ತು ಹೇಳು" ಎಂದರು ವೆಂಕಪ್ಪಯ್ಯ.

"ಹೇಳೂ ಹೇಳೂಂದ್ರೆ ನಾನೇನು ಹೇಳಲೀಂದ್ರೆ."

"ನಾನು ಮಾಡಿದ್ದು ನಿನಗೆ ಸರಿಬೀಳಲ್ಲ. ಏನು ಮಾಡಬೇಕೂಂತ ಹೇಳೋ ಸ್ವಬುದ್ಧಿ ನಿನಗಿಲ್ಲ."

"ಹೌದು! ನಾನು ದಡ್ಡಿಯೆನ್ನುವುದು ಪ್ರಪಂಚಕ್ಕೇ ಗೊತ್ತಿದೆ."

"ಬರೀ ಒರಟು ಉತ್ತರದಲ್ಲಿಯೇ ಆಗಿಹೋಯಿತು ನಿನ್ನ ಹಣೆಯ ಬರೆಹ. ವಿಚಾರ ಮಾಡು. ರಂಗಣ್ಣನ್ನ ಮನೆಯಲ್ಲಿಟ್ಟುಕೊಳ್ಳುವುದಕ್ಕೆ ನಿನಗೆ ಒಪ್ಪಿಗೆಯಿಲ್ಲ. ಹೋಗಲಿಯೆಂದು ನಾನು ಬೇರೆ ಮನೆ ವ್ಯವಸ್ಥೆ ಮಾಡಿದೆ-ಅದಕ್ಕೂ ನಿನ್ನ ಅಭ್ಯಂತರ. ಅವನ ಜತೆ ಚನ್ನಪಟ್ಟಣಕ್ಕೆ ಹೋಗೋದಕ್ಕೆ ಅವಳಿಗೆ ಬೇಕಿಲ್ಲ. ನಾನು ಏನು ಮಾಡಬೇಕು ಹೇಳು?"

"ಎಲ್ಲಾ ವಿಚಾರಮಾಡಿದಿರಲ್ಲಾ, ಅರೀದ ಹುಡುಗಿ ಬೇರೆ ಮನೆಯಲ್ಲಿ ಒಬ್ಬಂಟಿಗಳಾಗಿ ಸಂಸಾರ ಮಾಡುವುದು ಹೇಗೆ?"

"ಕಾವೇರೂ ಅವಳ ಜತೆ ಇರುತ್ತಾಳೆ."

"ಕಾವೇರಮ್ಮ ಜತೆಯಲ್ಲಿರುವುದು ಸುಭದ್ರೆಗೆ ಬೇಕಿಲ್ಲ."

"ನೀನೇ ಹೋಗಿದ್ದು ಬಿಡು."

"ನಾನು ತೊಲಗಿಹೋದರೆ ಸಾಕು ಎಂದಿದ್ದೀರೇನೋ? ನೀವೂ ನಿಮ್ಮ ತಂಗಿಯೂ ಸುಖವಾಗಿರಬಹುದು."

"ಹೋಗಲಿ ಏನು ಮಾಡಬೇಕು ಅದಾದರೂ ಹೇಳು."

"ದೊಡ್ಡ ಲಾಯರು ನೀವೇ ಹೇಳಿ."

"ನನ್ನ ಲಾಯರ್‌ತನ ನಿನ್ನ ಮುಂದೆ ಎಂದೋ ಮುದುರಿಕೊಂಡಿತು. ಆದಿರಲಿ. ಸದ್ಯಕ್ಕೆ ಸುಭದ್ರಾ ಎಲ್ಲಾ ತಿಳಿದುಕೊಳ್ಳುವವರೆಗೆ ಒಬ್ಬಳು ಅಡಿಗೆಯವಳನ್ನು ಗೊತ್ತುಮಾಡೋಣ."

"ಅವಳಿಗೆ ಸಂಬಳ."

"ರಂಗಣ್ಣ ಕೊಡುತ್ತಾನೆ. ಇನ್ನು ಮೇಲೆ ಇವನಿಗೆ ತುಂಬ ಹಣ ಬರುತ್ತಲ್ಲಾ."

"ನಾನು ಗುಂಡಮ್ಮನ್ನ ಕೇಳಿ ನೋಡುತ್ತೀನಿ."

"ಕೇಳೋದೇನು-ಗೊತ್ತೇ ಮಾಡಿಬಿಡು. ಎಂಟು ಹತ್ತಕ್ಕೆ ಆಕೆ ಒಪ್ಪಬಹುದಲ್ಲವೇ ?"

"ಒಪ್ಪಬಹುದೆಂದು ಕಾಣುತ್ತದೆ. ಈಗ ಆಕೆಗೆ ಊಟಕ್ಕೇ ಲೊಟಪಟಿಯಾಗಿದೆ."

"ಒಂದು ಒಳ್ಳೆಯ ದಿನ ನೋಡಿ ಪ್ರಸ್ತದ ಶಾಸ್ತ್ರ ಮುಗಿಸಿಬಿಡೋಣ. ಈಗ ರಂಗಣ್ಣನಿಗೂ ಸ್ಕೂಲಿಗೆ ರಜಾ. ಸ್ಕೂಲು ತೆಗೆಯುವುದರೊಳಗಾಗಿ ಅವನು ಕುದುರಿಕೊಳ್ಳಲು ಅನುಕೂಲವಾಗುತ್ತದೆ."

"ಅಂತೂ ನಾನೂ ನನ್ನ ಮಗಳೂ ಒಂದು ಕಡೆ ಇರುವುದು ನಿಮಗೆ ಬೇಕಿರಲಿಲ್ಲ. ಎಲ್ಲಾ ನಿಮ್ಮ ಮನಸ್ಸಿನಂತೆಯೇ ಆಯಿತಲ್ಲಾ."

ವೆಂಕಪ್ಪಯ್ಯನವರಿಗ ತಲೆ ಚಿಟಿಗುಟ್ಟಿ ಹೋಯಿತು. ದೇಹಾದ್ಯಂತ ಕೋಪವಾವರಿಸಿತು. ಸಮಾಧಾನ ತಂದುಕೊಂಡು

"ಸುಮ್ಮನೆ ಒಳಗೆ ಹೋಗು-ಗಳಿಗೆ ಚೆನ್ನಾಗಿಲ್ಲ. ದುಡುಕು ಮಾತುಗಳು ಬಾಯಿಂದ ಹೊರಬಿದ್ದಾವು"

ಎಂದರು. ನರಸಮ್ಮ ಲೊಟಗುಟ್ಟುತ್ತಾ ಒಳಗೆ ಹೋದರು.

ವೆಂಕಪ್ಪಯ್ಯ ಪುರೋಹಿತರನ್ನು ಬರಮಾಡಿಕೊಂಡು 'ಗರ್ಭಾದಾನ' ಮಹೋತ್ಸವಕ್ಕೆ ಒಂದು ಒಳ್ಳೆಯ ದಿನ ಗೊತ್ತುಮಾಡಿದರು. ನರಸಮ್ಮ ಕಾವೇರಮ್ಮ ಬಿಡುವಿಲ್ಲದೆ ಉತ್ಸವಕ್ಕೆ ಬೇಕಾದ ಅಣಿ ಮಾಡತೊಡಗಿದರು.

ರಂಗಣ್ಣನಿಗೆ ಸ್ವರ್ಗ ಒಂದೇ ಗೇಣಿನಲ್ಲಿ ಉಳಿಯಿತು. ಸೂರಪ್ಪನವರ ಹೈಸ್ಕೂಲಿನಲ್ಲಿ ಅವನು ಕೆಲಸಕ್ಕೆ ಸೇರಿದ್ದೂ ಆಗಿತ್ತು. ಸೂರಪ್ಪನವರು ತನಗೆ ಮಾಡಿದ್ದ ಉಪಕಾರಕ್ಕೆ ಅವನ ಹೃದಯ ಕೃತಜ್ಞತೆಯಿಂದ ತುಂಬಿ ತುಳುಕುತ್ತಿತ್ತು. ಅವರನ್ನು ತನ್ನ ಭಾಗದ ದೇವರೆಂದು ಭಾವಿಸುತ್ತಿದ್ದ.

ಪ್ರಸ್ತದ ದಿನ ವೆಂಕಪ್ಪಯ್ಯನವರು ಭರ್ಜರಿ ಔತಣವೇರ್ಪಡಿಸಿ ತಮ್ಮ ಜತೆಯ ಕೆಲವು ಲಾಯರುಗಳನ್ನೂ, ಇಷ್ಟಮಿತ್ರರನ್ನೂ, ಬಂಧು ಬಳಗವನ್ನೂ ಊಟಕ್ಕೆ ಕರೆದಿದ್ದರು. ಸೂರಪ್ಪನವರಿಗೂ, ಶ್ರೀನಿವಾಸನಿಗೂ

ಆಮಂತ್ರಣ ಹೋಗಿತ್ತು. ಶಂಕರನಿಗೆ ಆಮಂತ್ರಣ ಕೊಡಬೇಕೆಂದು ಸುಭದ್ರೆ ಸೂಚಿಸಿದಳು. ನರಸಮ್ಮನವರೇ ಹೋಗಿ ಸೂರಪ್ಪನವರ ಹೆಂಡತಿಯನ್ನು ಕರೆದು ಬಂದರು. ಆಮಂತ್ರಣ ಸ್ವೀಕರಿಸಬೇಕೆಂದು ಸೂರಪ್ಪನವರೂ ಹೆಂಡತಿಗೆ ಸೂಚಿಸಿದರು.

ಔತಣದ ಆಮಂತ್ರಣ ಸ್ವೀಕರಿಸಿ ಎಲ್ಲರೂ ಬಂದರು. ಶ್ರೀನಿವಾಸ ಮಾತ್ರ ಬರಲಿಲ್ಲ. ವೆಂಕಪ್ಪಯ್ಯನವರು ಕೇಳಿಯೇ ಬಿಟ್ಟರು

"ತಮ್ಮ ಮಕ್ಕಳೆಲ್ಲ ಸ್ವಾಮಿ-ಬರುವುದಿಲ್ಲವೇ ?"

"ಅವನಿಗೆ ನೂರೆಂಟು ಕೆಲಸ. ಎಲ್ಲಿಗೆ ಹೋಗುತ್ತಾನೋ ಏನು ಮಾಡುತ್ತಾನೋ ಹೇಳುವುದಕ್ಕೇ ಬರುವುದಿಲ್ಲ. ಪ್ರಾಯಶಃ ಅವನು ಬರುವುದಿಲ್ಲ. ಅವನಿಗಾಗಿ ಎಲ್ಲರನ್ನೂ ಕಾಯಿಸಬೇಡಿ ವೆಂಕಪ್ಪಯ್ಯನವರೇ" ಎಂದು ಸೂರಪ್ಪನವರು ಹೇಳಿದರು.

ಊಟಕ್ಕೆ ಕುಳಿತವರನ್ನು ಸುಭದ್ರೆ ಒಳಗಿನಿಂದಲೇ ನೋಡಿದಳು. ಶ್ರೀನಿವಾಸನನ್ನು ಕಾಣದೆ ಅವಳ ಮನಸ್ಸು ಕಾತುರಗೊಂಡಿತು. ಕಣ್ಣಲ್ಲಿ ಮಿಡಿದ ಹನಿಯನ್ನು ಯಾರಿಗೂ ತೋರಗೊಡದೆ ನಿವಾರಿಸಿಕೊಂಡಳು. ಅಷ್ಟೆಲ್ಲ ಉತ್ಸಾಹ, ಸಂಭ್ರಮ, ಆನಂದ ಮನೆಯಲ್ಲಿ ಲಾಸ್ಯವಾಡುತ್ತಿದ್ದರೂ ಸುಭದ್ರೆಯ ಮನಸ್ಸಿಗೆ ಕಿಂಚಿತ್ತೂ ನೆಮ್ಮದಿಯಿಲ್ಲ.

ಊಟ ಮುಗಿದ ಮೇಲೆ ಆಶೀರ್ವಾದ ಮಾಡುವ ನೆಪಮಾಡಿಕೊಂಡು ಸೂರಪ್ಪನವರು ಒಳಗೆ ಬಂದು ಸುಭದ್ರೆಯನ್ನು ಕಂಡರು. ಉಡುಗೊರೆಯಾಗಿ ತಂದಿದ್ದ ಚಿನ್ನದ ಗಡಿಯಾರವನ್ನು ಅವಳ ಕೈಗಿಟ್ಟು ದಿಟ್ಟಿಸಿ ನೋಡಿದರು.

ಅಂದೇ ಪ್ರಾತಃಕಾಲ ಸುಭದ್ರೆಗೆ ಅಭ್ಯಂಜನ ಸ್ನಾನವಾಗಿತ್ತು. ಕೆದರಿದ ಕೇಶರಾಶಿಯನ್ನು ಎಣ್ಣೆ ಹಾಕದೆ ಬಾಚಿ, ತಾಯಿ ಎಣ್ಣೆಗಂಟು ಹಾಕಿ ಹೂ ಮುಡಿಸಿದ್ದರು. ಕೆನ್ನೆಗೆ ಸ್ವಲ್ಪ ಅರಿಶಿನ ಲೇಪವೂ ಆಗಿತ್ತು. ಮದೆಯಲ್ಲಿದ್ದ ಅಭರಣಗಳನ್ನು ಸುಭದ್ರೆಗೆ ತೊಡಿಸಿದ್ದರು. ಹಣೆಯ ಮೇಲೆ ಕುಂಕುಮ ಎದ್ದು ಕಾಣುತ್ತಿತ್ತು. ಹೊಸ ಸೀರೆ ಕುಪ್ಪಸ ತೊಟ್ಟ ಸುಭದ್ರೆ ಲಕ್ಷ್ಮಿಯಂತೆ ಕಂಗೊಳಿಸುತ್ತಿದ್ದಳು.

ಸುಭದ್ರೆಯನ್ನು ನೋಡಿ ಸೂರಪ್ಪನವರು ನಿಟ್ಟುಸಿರುಬಿಟ್ಟರು. ಅವರ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿದ ಸುಭದ್ರೆ ಒಮ್ಮೆ ಅವರ ಕಡೆ ತನ್ನ ಕುಡಿ

ನೋಟ ಬೀರಿ, ಮುಗುಳ್ನಗೆ ನಕ್ಕಳು. ನೂರು ಮಾತಿನಲ್ಲಿ ಹೇಳಲಾಗದಿದ್ದು ದನ್ನು ಆ ನಗೆ ಸೂಸಿತು.

"ದೇವರು ನಿನ್ನ ಚೆನ್ನಾಗಿಟ್ಟಿರಲಿ" ಎಂದರು ಸೂರಪ್ಪನವರು.

"ಎಲ್ಲಾ ಹಿರಿಯರ ಆಶೀರ್ವಾದ" ಎಂದಳು ಸುಭದ್ರಾ.

ಪ್ರಸ್ತದ ಶಾಸ್ತ್ರ ತೀರಿದ ಮೂರು ದಿವಸಗಳ ಮೇಲೆ ದಂಪತಿಗಳು ಸ್ವಗೃಹ ಪ್ರವೇಶ ಮಾಡಿದರು. ನರಸಮ್ಮನವರು ಗುಂಡಮ್ಮನನ್ನು ಅಡಿಗೆಗೆ ಗೊತ್ತುಮಾಡಿದ್ದರು.

ರಂಗಣ್ಣ ತನ್ನ ಮನೆಯ ತೊಟ್ಟಿಯಲ್ಲಿ ಕುಳಿತು ನಿರಾಯಾಸವಾಗಿ ಉಸಿರಾಡಿದ. ಅವನ ಹೃದಯ ಹೆಮ್ಮೆ, ಸಂತೋಷ, ಕನಸುಗಳಿಂದ ತುಂಬಿ ಹೋಗಿತ್ತು.

ಹೊಸ ಸಂಸಾರ ಸುಭದ್ರೆಗೆ ಅಹಿತವಾಗಲಿಲ್ಲ. ಮನೆಯನ್ನು ಓರಣ ವಾಗಿಡುವುದು, ಅಡಿಗೆಯ ಮನೆಯ ಪರಿಚಯ ಮಾಡಿಕೊಂಡು ಗುಂಡಮ್ಮ ನಿಗೆ ಬೇಕಾದ ಸಾಮಾನು ಸರಂಜಾಮು ತೆಗೆದುಕೊಡುವುದರಲ್ಲಿ ಅವಳು ಅತ್ಯಾಸಕ್ತಿ ವಹಿಸಿದಳು. ತನ್ನ ಮನೆಗೆ ತಾಯಿ, ತಂದೆ, ಅತ್ತೆ, ಗೆಳೆಯರನ್ನು ಬರಮಾಡಿಕೊಂಡು ಔತಣ ಮಾಡಬೇಕೆಂಬ ಆಸೆಯನ್ನು ಗಂಡನಿಗೆ ವ್ಯಕ್ತ ಪಡಿಸಿದಳು. ಅವಳ ಆಸೆ—ರಂಗಣ್ಣನಿಗೆ ಮಹದಾಜ್ಞೆಯಾಯಿತು.

## ೨೪

ಪರೀಕ್ಷೆ ಮುಗಿದಮೇಲೆ ಶ್ರೀನಿವಾಸನಿಗೆ ಸ್ವಲ್ಪವೂ ಬಿಡುವೇ ದೊರೆ ಯಲಿಲ್ಲ. ಲೇಬರ್ ಯೂನಿಯನ್ನಿಗೆ ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿಗಳಿದ್ದರೂ ಅವರೆಲ್ಲರ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದವನು ಅವನೇ. ಅವನ ಮಾತು ಕಾರ್ಮಿಕರಲ್ಲಿ ವೇದವಾಕ್ಯವಾಗುತ್ತ ಬಂತು.

ಮುನಿಸ್ವಾಮಿಯ ಕೊರಳಿಗೆ ಕಾರ್ಯದರ್ಶಿತ್ವ ಗಂಟುಬಿದ್ದಿತ್ತು. ಅದನ್ನು ಶ್ರೀನಿವಾಸ ಒಪ್ಪಿಕೊಳ್ಳಬೇಕೆಂದು ಅವನು ಹಲವು ಸಲ ಒತ್ತಾಯ ಮಾಡಿದ.

"ಆ ಮಾತು ಬಿಟ್ಟುಬಿಡಿ ಮುನಿಸ್ವಾಮಿ. ನಿಮ್ಮ ಕೆಲಸ ಕಾರ್ಯ ಗಳನ್ನು ನೀವೆ ನಿರ್ವಹಿಸಬೇಕು. ಹೊರಗಿನವರು ನಿಮ್ಮ ವ್ಯವಹಾರದಲ್ಲಿ ಕೈಹಾಕಬಾರದು."

"ನೀವು ಹೊರಗಿನವರಲ್ಲ."

"ನಾನು ಕಾರ್ಮಿಕನಲ್ಲ–ಬುದ್ಧಿ ಜೀವಿ."

"ಕಾರ್ಮಿಕರಿಗೆ ಬುದ್ಧಿ ಸಂಪರ್ಕ ಬೇಡೆ ಬೇಡವೇ ?"

"ಬೇಕು–ಆದರೆ ಬುದ್ಧಿಜೀವಿಗಳು ಅವರಮೇಲೆ ಸರ್ವಾಧಿಕಾರ ನಡೆಸಕೂಡದು."

"ಸರ್ವಾಧಿಕಾರ ನಡೆಸುವ ಮನೋಭಾವ ನಿಮ್ಮಲ್ಲಿಲ್ಲವಲ್ಲ."

"ಅದನ್ನು ಯಾರು ಖಚಿತವಾಗಿ ಹೇಳಬಹುದು. ಅಧಿಕಾರ ಎಂಥವನ ತಲೆಯನ್ನಾದರೂ ತಿರುಗಿಸುತ್ತದೆ."

"ನೀವು ಹಾಕಿದ ಬೀಜ ಚಿಗುರಿ ಬೆಳೆದು ಮರವಾಗುವುದಕ್ಕೆ ನೀವೆ ನೆರವಾಗಬೇಕು."

"ನನ್ನ ನೆರವು ತಪ್ಪುವುದೇ ಇಲ್ಲ. ಆದರೆ ಸ್ಥಾನಮಾನ ಬೇಡ. ನಾನೊಬ್ಬ ಸ್ವಯಂಸೇವಕ–ನನ್ನ ಜೀವಮಾನವೆಲ್ಲಾ ಹಾಗೇ ಸವೆಯ ಬೇಕೆಂದು ಆಸೆ. ಇದಕ್ಕೆ ಇನ್ನೊಂದು ಸ್ವಂತ ಕಾರಣವಿದೆ. ನಾನು ಪ್ರಾಯಶಃ ಇನ್ನು ಎರಡು ವರ್ಷಕಾಲ ನಿಮ್ಮೊಂದಿಗಿರಲು ಸಾಧ್ಯವಿಲ್ಲ."

"ನಾವು ಏನು ಅಪರಾಧ ಮಾಡಿದೆವು."

"ಅಪರಾಧವೇನು ಮಾಡಿರುವಿರಿ ? ನನ್ನ ಪರೀಕ್ಷೆಯ ಫಲಿತಾಂಶ ಕಾಯುತ್ತಿದ್ದೇನೆ. ತೇರ್ಗಡೆಯಾದರೆ ಲಾ ಕಾಲೇಜಿಗೆ ಸೇರಬೇಕೆಂದು ಮನಸ್ಸಿದೆ. ತಂದೆಯವರೂ ಅದನ್ನೇ ಹೇಳುತ್ತಿದ್ದಾರೆ. ನಾನು ಮದರಾಸಿಗೋ ಮುಂಬಯಿಗೋ ಹೋಗಬೇಕಾಗುತ್ತದೆ."

"ಅದಕ್ಕೆ ನಾನೇನು ಹೇಳಲು ಶಕ್ಯ. ನಿಮ್ಮ ಭವಿಷ್ಯವನ್ನು ನೋಡ ಬೇಕಾದುದು ಗೆಳೆಯರಾದ ನಮ್ಮ ಧರ್ಮ."

"ನಾನು ಬೇಕಂತಲೇ ಲಾ ಪರೀಕ್ಷೆಗೆ ಕೂಡುತ್ತೇನೆ ಮುನಿಸ್ವಾಮಿ. ಫ್ಯಾಕ್ಟರಿ ಲಾ ಬಗ್ಗೆ ವಿಶೇಷ ಪರಿಜ್ಞಾನ ಪಡೆಯಬೇಕೆಂದಾಸೆ. ನಾಳೆ ಪ್ರಸಂಗ ಬಿದ್ದರೆ ನನ್ನ ಕಾನೂನುಜ್ಞಾನ ಕಾರ್ಮಿಕವರ್ಗಕ್ಕೆ ಪ್ರಯೋಜನ ವಾಗಬಹುದು. ನಿಜವಾಗಿಯೂ ಲಾ ಪರೀಕ್ಷೆಯಲ್ಲಿ ನನಗೆ ಮೋಹವಿಲ್ಲ–ಆದರೆ ಕಾರ್ಮಿಕರಿಗೆ ಕಾನೂನಿನ ಬಲ ಬೇಕೆನ್ನುವ ಕಾರಣಕ್ಕೆ ಆ ಕಡೆ ಮನಸ್ಸು ಕೊಟ್ಟೆ."

ಮುನಿಸ್ವಾಮಿ ಮನಸ್ಸು ಹಗುರವಾಯಿತು. ಕಾರ್ಮಿಕರ ಹಿತಸಾಧನೆಗೆ ಶ್ರೀನಿವಾಸ ಎಷ್ಟು ಬದ್ಧಕಂಕಣನಾಗಿದ್ದಾನೆಂಬಂಶ ಅವನಿಗೆ ಹೊಸದಾಗಿರಲಿಲ್ಲ. ಆದರೂ ಶ್ರೀನಿವಾಸನ ಒಂದೊಂದು ಕೃತಿ, ಒಂದೊಂದು ಹೆಜ್ಜೆ ಅವನ ಬಗ್ಗೆ ಹೆಚ್ಚಿನ ಪ್ರೇಮ ಗೌರವಗಳನ್ನು ಹುಟ್ಟಿಸುತ್ತಿತ್ತು.

ಲೇಬರ್ ಯೂನಿಯನ್ನಿನ ಪ್ರತಿಯೊಂದು ಶಾಖೆಯಲ್ಲೂ ವ್ಯಾಸಂಗ ಗೋಷ್ಠಿ ಆರಂಭವಾಯಿತು. ಶ್ರೀನಿವಾಸ ಸರದಿಯ ಮೇಲೆ ಪ್ರತಿಯೊಂದು ಶಾಖೆಗೂ ಹೋಗಿ ಕಾರ್ಮಿಕರಿಗೆ ಅವರ ಕರ್ತವ್ಯವನ್ನು ತಿಳಿಸಿ ಬರುತ್ತಿದ್ದ.

ಪರೀಕ್ಷೆಯ ಫಲಿತಾಂಶ ಬರಲು ತಡವಾಗಲಿಲ್ಲ. ಸುಭದ್ರೆಯ ಫಲಿತಾಂಶ ತಿಳಿಯಲು ರಂಗಣ್ಣ ಬೆಳಿಗ್ಗೆಯೇ ವೃತ್ತಪತ್ರಿಕಾ ಕಾರ್ಯಾಲಯವೊಂದರಲ್ಲಿ ಹೋಗಿ ಕುಳಿತ.

ಮಧ್ಯಾಹ್ನ ಮೂರು ಗಂಟೆ ಸುಮಾರಿಗೆ ಮೈಸೂರಿನಿಂದ ಸುದ್ದಿ ಬಂತು. ವಿದ್ಯಾರ್ಥಿಗಳು ವೃತ್ತಪತ್ರಿಕಾ ಕಾರ್ಯಾಲಯಗಳ ಮುಂದೆ, ಎಲೆಕ್ಟ್ರಿಕ್ ಸ್ಟೇಷನ್ನುಗಳ ಮುಂದೆ ಕಿಕ್ಕಿರಿದು ತುಂಬಿದರು. ಸುಭದ್ರೆ, ಶಂಕರ ಇಬ್ಬರೂ ತೇರ್ಗಡೆಯಾಗಿದ್ದರು; ಶ್ರೀನಿವಾಸ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದ.

ಮಗನ ವಿಜಯದ ವಾರ್ತೆ ಕೇಳಿ ಸೂರಪ್ಪನವರು ಆನಂದಪಟ್ಟರು. ಸುಭದ್ರೆ ತೇರ್ಗಡೆಯಾದುದನ್ನು ಕೇಳಿ ಅವರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು.

ಮಗ ತೇರ್ಗಡೆಯಾದುದನ್ನು ಕೇಳಿ ಗೌರಮ್ಮನವರು ದೇವರಿಗೆ ತುಪ್ಪದ ದೀಪ ಹಚ್ಚಿಟ್ಟರು. ಮಗ ಬಂದು ನಮಸ್ಕರಿಸಿದಾಗ ಆಶೀರ್ವಾದದ ಎರಡು ಮಾತು ಹೇಳಲೂ ಅವರಿಗೆ ಸಾಧ್ಯವಿಲ್ಲವಾಯಿತು. ಸಂತೋಷದಿಂದ ಧ್ವನಿ ಭಾರವಾಗಿ ಗಂಟಲು ತುಂಬಿ ಬಂತು. ಅವರ ಪ್ರಯತ್ನ ನೋಡಿ ಶ್ರೀನಿವಾಸ

"ನೀನೇನು ಹೇಳಬೇಡಮ್ಮಾ... ನಿನ್ನ ಮನಸ್ಸಿನಲ್ಲಿರುವುದನ್ನು ನಾನು ಬಲ್ಲೆ."

"ಶ್ರೀನಿವಾಸೂ, ನಿಮ್ಮ ತಂದೆ ನಿನ್ನನ್ನು ಮದರಾಸಿಗೆ ಕಳಿಸಬೇಕೆಂದಿದ್ದಾರೆ. ಅಷ್ಟು ದಿವಸ ನಿನ್ನ ಬಿಟ್ಟು ಹೇಗಿರಲಪ್ಪಾ."

"ಮದರಾಸು ಬಹಳ ದೂರವಿಲ್ಲವಮ್ಮ-ಒಂದು ಮಧ್ಯಾಹ್ನದ ಪ್ರಯಾಣ. ರಾತ್ರಿ ಮದರಾಸಿನಲ್ಲಿ ಕುಳಿತರೆ ಬೆಳಿಗ್ಗೆ ಬೆಂಗಳೂರು. ಅಣ್ಣ ಒಪ್ಪಿದರೆ ಬೊಂಬಾಯಿಗೆ ಹೋಗಬೇಕೆಂದು ನನಗೆ ಆಸೆ."

"ಆ ವಿಷಯ ಅವರಲ್ಲಿ ಪ್ರಸ್ತಾಪಿಸಿದೆಯಾ?"

"ಇಲ್ಲ. ಇವತ್ತು ನಾಳೆ ಅವರೇ ಮಾತು ತೆಗೆಯುತ್ತಾರೆ. ಆಗ ಹೇಳುತ್ತೇನೆ."

"ನನಗೆ ನಿನ್ನ ಆರೋಗ್ಯದ್ದೇ ದೊಡ್ಡ ಚಿಂತೆ. ಊರಿನಲ್ಲಿ ನನ್ನ ಕಣ್ಣು ಮುಂದಿದ್ದೇ ಹೀಗಿರುವೆ. ಇನ್ನು ಬೊಂಬಾಯಿ--ಮದರಾಸು. ಹೋಟಲು ಊಟ, ನಿದ್ರೆಯಿಲ್ಲದ ಓದುಗಾರಿಕೆ."

"ಮಧ್ಯೆಮಧ್ಯೆ ಬಂದು ನಿನ್ನ ಕೈಯಲ್ಲಿ ಆರೈಕೆ ಮಾಡಿಸಿಕೊಂಡು ಹೋಗುತ್ತೇನಮ್ಮಾ—ಯೋಚನೆ ಮಾಡಬೇಡ."

"ಶೀನೂ--ಯಾವಾಗಲೂ ನೀನು ಓದುತ್ತಾ ಇದ್ದರೆ ಮದುವೆಯಾಗುವುದು ಯಾವಾಗಲೋ?"

"ನೀನೇ ಹೇಳಿಲ್ಲವೇ-ಕಂಕಣಬಲ ಕೂಡಿದಾಗ ಎಂದು."

"ಅವರು ಈ ವಿಷಯ ಕಿವಿಯಮೇಲೆ ಹಾಕಿಕೊಳ್ಳಲ್ಲ. ನನಗೆ ಹೇಳಿದರೆ ನೀನು ಮಾತು ಮರೆಸುತ್ತೀ—ಹೆಣ್ಣು ಹೆಂಗಸು ನಾನೇನು ಮಾಡಲಿ ಹೇಳು. ನಮ್ಮ ಜನದ್ದು ಒಳ್ಳೇ ಹೆಣ್ಣುಗಳಿವೆ-ಕರೆಸುತ್ತೇನೆ-ನೋಡುತ್ತಿಯೇನೋ?"

"ಲಾ ಪರೀಕ್ಷೆಯಾಗಿ ಹೋಗಲಮ್ಮಾ. ಆ ವಿಷಯ ಆಮೇಲೆ ವಿಚಾರ ಮಾಡೋಣ."

"ಇನ್ನು ಎರಡು ವರ್ಷದ ಮೇಲೆ."

"ಎರಡು ವರ್ಷ ಎರಡು ದಿನದ ಹಾಗೆ ಬರುತ್ತದೆ."

"ಯಾರಿಗೆ ಬರತ್ತೋಪ್ಪ-ನನಗಂತೂ ಬರಲ್ಲ."

"ಅಮ್ಮಾ-ಮದುವೆಯಾಗಲೇ ಬೇಕೇ?"

"ಏನೋ ಮಗು ಹೀಗೆ ಕೇಳುತ್ತೀ. ನನ್ನ ಮೊಮ್ಮಗನನ್ನು ನಾನು ಎತ್ತಿಕೊಳ್ಳಬೇಡವೇ?"

"ಅದು ಸರಿ-ನಾನು ಜೀವನದಲ್ಲಿ ಏನೋ ಸಾಧಿಸಬೇಕೆಂದು ಹೊರಟಿದ್ದೇನೆ- ಆದಕ್ಕೆ ಮದುವೆ ಅಡಚಣೆಯಾಗಬಾರದು. ನನಗೆ ಮದುವೆ ಮುಖ್ಯವಲ್ಲ-ಧ್ಯೇಯ ಮುಖ್ಯ."

"ಒಳ್ಳೆಯ ಹೆಂಡತಿ ಕೈಹಿಡಿದರೆ ಅವಳು ನಿನ್ನ ಧ್ಯೇಯ ಸಾಧನೆಗೆ ಸಹಾಯಕಳಾಗುತ್ತಾಳೆ ...ಅಡ್ಡಿಯಾಗುವುದಿಲ್ಲ. ನಮ್ಮ ವೆಂಕಪ್ಪಯ್ಯನವರ ಮಗಳು ಸುಭದ್ರೆಗೆ ಮದುವೆಯಾಗದಿದ್ದರೆ ಆವಳನ್ನು ಸಂತೋಷವಾಗಿ ನಿನಗೆ ತಂದುಕೊಳ್ಳುತ್ತಿದ್ದೆ."

"ಅವರು ನಮ್ಮ ಜನ ಅಲ್ಲವಮ್ಮಾ."

"ಜನ ಏನು ಮಾಡುತ್ತೋ ? ನೀನು ಸುಖವಾಗಿರುವುದು ಮುಖ್ಯ."

"ಹಾಗಾದರೆ ನಾಳೆ ನಾನು ಒಬ್ಬ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾದರೆ."

"ಆಗು. ಅವಳು ನಿನ್ನ ಸೇವೆ ಚೆನ್ನಾಗಿ ಮಾಡಿಕೊಂಡಿದ್ದರೆ ದೂರ ದಲ್ಲಿಯೇ ನೋಡಿ ಸಂತೋಷಿಸುತ್ತೇನೆ."

"ನಿನ್ನ ಮೊಮ್ಮಗನನ್ನು ನೀನು ಹೇಗೆ ಎತ್ತಿಕೊಳ್ಳುವೆಯಮ್ಮಾ."

"ಅಂತಃಕರಣಕ್ಕೆ ಜಾತಿಯೆಲ್ಲಿಂದ ಬಂತೋ ಮಗೂ. ನೀನು ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಲು ನಿಶ್ಚಯಿಸಿರುವೆಯೇನು ?"

"ಇಲ್ಲಮ್ಮಾ–ವಿನೋದಕ್ಕಂದೆ."

ತಾಯಿ ಸುಭದ್ರೆಯ ಬಗ್ಗೆ ಆಡಿದ ಮಾತು ಶ್ರೀನಿವಾಸನಿಗೆ ರೋಮಾಂಚವನ್ನುಂಟುಮಾಡಿತು. ಯಾವ ವಿಧಿ ಅವಳ ಬಾಯಲ್ಲಿ ಈ ಮಾತು ಆಡಿಸಿತು ಎಂದು ವಿಚಾರಪರವಶನಾದ.

## ೨೫

ಕಾವೇರಮ್ಮ ಸ್ನೇಹಜೀವಿ. ಜೀವನದಲ್ಲಿ ಮೊದಲಿನಿಂದ ಕೊನೆಯ ವರೆಗೂ ದುಃಖವನ್ನು ಉಂಡುಂಡು ಆಕೆಯ ಬಾಳು ಹಣ್ಣಾಗಿತ್ತು. ಗಂಡ ಬಿಟ್ಟುಹೋದ ನಾಲ್ಕು ಎಕರೆ ಜಮೀನು, ನಗನಾಣ್ಯ, ಪುಡಿಕಾಸುಗಳನ್ನು ಅಣ್ಣ ಸ್ವಾಹಾ ಮಾಡಿದರೂ ಆತನ ಮೇಲೆ ಲವಲೇಶವಾದ ಕೋಪವಿಲ್ಲ. ಅವನ ಮನೆ ತನ್ನದೆಂದು ಭಾವಿಸಿದಳು. ಅವನ ಮಗಳು ತನ್ನ ಮಗಳೆಂದು ಭಾವಿಸಿದಳು. ಅಣ್ಣನ ಮನೆಗೆ ದುಡಿಯುವುದು, ಅವನ ಶ್ರೇಯಃಚಿಂತನೆ ಮಾಡುವುದು ಅವಳ ಪರ ಧರ್ಮವಾಯಿತು. ಅಣ್ಣನ ಮೇಲಣ ಪ್ರೇಮ ಕ್ಕಾಗಿ ಅತ್ತಿಗೆಯ ಸಿಡುಕನ್ನೂ ಗಮನಿಸದಂಥ ಹೃದಯವೈಶಾಲ್ಯ.

ಕಾವೇರಮ್ಮನಿಗೆ ಒಂದು ಚಟ. ಒಂದು ನಿಮಿಷ ಬಿಡುವು ಸಿಕ್ಕಿತೆಂದರೆ ಯಾರ ಮನೆಗಾದರೂ ಹೋಗಿ ಅಲ್ಲಿ ಒಂದು ಗಳಿಗೆ ನಿಂತೋ ಕುಳಿತೋ ಹರಟಿಕೊಚ್ಚಿ ಬರಬೇಕು. ಅವರಿಗೆ ಏನಾದರೂ ಕೆಲಸಮಾಡಿಕೊಟ್ಟು ಬರಬೇಕು. ಅವರ ಮಕ್ಕಳನ್ನು ಮುದ್ದಾಡಿ ಬರಬೇಕು. ಅವರ ಮನೆಯಲ್ಲಿ ಯಾರಾದರೂ ಕಾಯಿಲೆಯಿದ್ದರೆ ಅವರ ಶುಶ್ರೂಷೆಮಾಡಿ ಬರಬೇಕು.

ಹೊಸಲು ಬಿಟ್ಟು ಆಚೆ ಕಾಲಿಡದ ನರಸಮ್ಮನವರಿಗೂ ಕಾವೇರಮ್ಮನಿಗೂ ಆಗಾಗ್ಗೆ ಈ ಬಗ್ಗೆ ವಾದವಿವಾದವೇಳುತ್ತಿತ್ತು. ಅತ್ತಿಗೆ ಗಳಿಗೆಗೆ ಇಪ್ಪತ್ತು ಸಲ ಕಂಡವರ ಮನೆ 'ತುಕ್ಕುವುದು' ನರಸಮ್ಮನವರಿಗೆ ಸೇರದು. ಈ ವಿಷಯ ಅವರೆಷ್ಟು ಹೇಳಿದರೂ ಕಾವೇರಮ್ಮ ಕಿವಿಯಮೇಲೆ ಹಾಕಿಕೊಳ್ಳುತ್ತಿರಲಿಲ್ಲ.

ಸೂರಪ್ಪನವರ ಹೆಂಡತಿ ಊಟಕ್ಕೆ ಬಂದಿದ್ದವರು ಲೋಕಾಭಿರಾಮವಾಗಿ ನರಸಮ್ಮ, ಕಾವೇರಮ್ಮನನ್ನು ಮನೆಗೆ ಬಂದು ಹೋಗಿ ಎಂದು ಕರೆದರು. ನರಸಮ್ಮ "ಆಗಲಿ, ಅದಕ್ಕೇನು" ಎಂದು ಉಪಚಾರಕ್ಕೆ ನುಡಿದರು. ಕಾವೇರಮ್ಮ ಅವರ ಆಹ್ವಾನವನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದಳು.

ಮಾರನೆಯ ದಿನವೇ ಕಾವೇರಮ್ಮ ಸೂರಪ್ಪನವರ ಮನೆಗೆ ಹೋಗಿ ಒಂದೆರಡು ಗಂಟೆ ಕಾಲ ಕುಳಿತು, ತರಕಾರಿ ಹೆಚ್ಚಿಕೊಟ್ಟು, ಹರಟಿಕೊಚ್ಚಿ ಬಂದಳು. ಒಮ್ಮೆ ಪರಿಚಯವಾದುದೇ ಸಾಕಾಗಿತ್ತು. ನಿತ್ಯ ತಪ್ಪದೆ ಅವಳು ಸೂರಪ್ಪನವರ ಮನೆಗೆ ಹೋಗಿ ಬರುತ್ತಿದ್ದಳು.

ಹಾಗೇ ದಿನಕ್ಕೊಮ್ಮೆಯಾದರೂ ಸುಭದ್ರೆಯ ಮನೆಗೆ ಹೋಗಿ ಬರದಿದ್ದರೆ ಅವಳಿಗೆ ಸಮಾಧಾನವಿಲ್ಲ. ಮನೆಯಲ್ಲಿ ಏನೇ ಅಡಿಗೆ, ತಿಂಡಿ ಪದಾರ್ಥ ಮಾಡಲಿ, ಬಿಸಿಲೆನ್ನದೆ ಮಳೆಯೆನ್ನದೆ ಅದನ್ನು ಕೂಡಲೆ ಒಯ್ದು ಸುಭದ್ರೆಗೆ ಕೊಟ್ಟು ಬರಬೇಕು. ಅಲ್ಲಿ ಅರ್ಧಗಂಟೆಯಾದರೂ ಕುಳಿತು ಗುಂಡಮ್ಮನ ಜತೆ ಹರಟೆ ಹೊಡೆದು ಬರಬೇಕು.

ಒಂದು ದಿನ ಅಡಿಗೆ ಸಾಗಿತ್ತು. ಕಾವೇರಮ್ಮನೇ ಅಡಿಗೆಯ ಜವಾಬ್ದಾರಿ ವಹಿಸಿಕೊಂಡಿದ್ದಳು. ನರಸಮ್ಮ ಸುತ್ತುಗೆಲಸ ಮಾಡಿಕೊಡುತ್ತಾ, ಮಧ್ಯೆ ಮಧ್ಯೆ ಹಾಡು ಹೇಳಿಕೊಂಡು ದೇವರ ತಲೆಯ ಮೇಲೆ ಒಂದೊಂದು

ಹೂವೇರಿಸುತ್ತಿದ್ದರು. ಕಾವೇರಮ್ಮ ಅದೂ ಇದೂ ಮಾತಾಡುತ್ತಲೇ ಇದ್ದರು. ಅಕ್ಕಿ ಕೇರುತ್ತಾ ಕಾವೇರಮ್ಮ

"ಅತ್ತಿಗೆಮ್ಮಾ....ದಿನಕ್ಕೆ ಒಂದು ಸಲವಾದರೂ ಇಲ್ಲಿಗೆ ಬಂದು ಹೋಗು ಎಂದು ಸುಭದ್ರೆಗೆ ಹೇಳಬಾರದೇ" ಎಂದು ಕೇಳಿದರು.

"ಹೇಗೆ ಹೇಳುವುದು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎನ್ನೋ ಗಾದೆ ಕೇಳಿದ್ದೀರೋ ಇಲ್ಲವೋ? ಅದಕ್ಕೇ ಅವಳನ್ನು ಮನೆಬಿಟ್ಟು ಹೊರಗೆ ಕಳಿಸುವುದಕ್ಕೆ ನಾನಷ್ಟು ವಿರೋಧಿಸಿದ್ದು."

"ನೀವು ಹೇಳುವುದು ಒಳ್ಳೆ ಚೆನ್ನಾಗಿದೆ ಅತ್ತಿಗೆಮ್ಮ. ಮದುವೆಯಾದ ಮೇಲೆ ಹೆಣ್ಣುಮಕ್ಕಳು ಗಂಡನ ಜತೆ ಸಂಸಾರ ಮಾಡಿಕೊಂಡಿರುವುದೇ ಚೆನ್ನ. ಚಿಕ್ಕಪುಟ್ಟ ವಯಸ್ಸಿನಲ್ಲಿ ಇವರಿಗೂ ಸ್ವತಂತ್ರವಾಗಿರಬೇಕೂಂತ ಆಸೆಯಿರುತ್ತೆ. ತೌರುಮನೆ ಒಂದೇ ಊರಿನಲ್ಲಿರೋದರಿಂದ ಮಗಳು ಆಗಾಗ್ಗೆ ಬಂದು ಹೋದರೆ ಎಲ್ಲರಿಗೂ ಸಂತೋಷ."

"ಅಳಿಮಯ್ಯನ ಅನುಕೂಲ ಹೇಗಿದೆಯೋ? ಸ್ಕೂಲು, ಪಾಠ ಜತೆಗೆ ಸೂರಪ್ಪನವರ ಕೆಲಸ ಬೇರೆ!"

"ಅಳಿಮಯ್ಯನ ಕೆಲಸಕಾರ್ಯಕ್ಕಿಂತ ಸುಭದ್ರೆಯ ಕೆಲಸಕಾರ್ಯವೇ ಹೆಚ್ಚಾಗಿರುವಂತೆ ಕಂಡು ಬರುತ್ತದೆ."

"ಏನು ಅತ್ತಿಗೆ ನೀವು ಹೇಳುತ್ತಿರುವುದು."

"ನೋಡಮ್ಮ - ನೀನೇನೋ ಸುಭದ್ರೆಯ ಹಡೆದ ತಾಯಿ. ನಾನು ಎಷ್ಟಾದರೂ ಸೋದರತ್ತೆ. ಆದರೆ ಅವಳ ಕಷ್ಟಸುಖ ನಿಮಗೆ ಹೇಗೆ ಸೇರಿದ್ದೋ ನನಗೂ ಹಾಗೇ ಸೇರಿದ್ದು"

"ನಾನು ಇಲ್ಲವೆಂದೆನೆ?"

"ನಾನು ಹೇಳೋ ಮಾತು ಕೋಪ ಮಾಡಿಕೊಳ್ಳದೆ ಕೇಳಿಕೊಳ್ಳಿ. ನಿಮಗೆ ದೇವರು ಹೇಗೆ ಬುದ್ಧಿ ಕೊಡುತ್ತಾನೆ ಹಾಗೆ ಮಾಡಿ."

"ಅದೇನು ಹೇಳಿಬಿಡಿ- ಎಷ್ಟು ಪೀಠಿಕೆ ಹಾಕುತ್ತಿರುವಿರಿ ?"

"ಸುಭದ್ರೆ ಸದಾ ಯಾರೋ ಪಕ್ಕದವರನ್ನು ಕಟ್ಟಿಕೊಂಡು ಓಡಾಡುವುದು ಸ್ವಲ್ಪವೂ ಚೆನ್ನಾಗಿಲ್ಲವಮ್ಮ. ಮನೆಗೆ ಯಾವಾಗ ಹೋಗಲಿ ಅವಳು ಅವರಿವರು ಗಂಡಸರ ಹತ್ತಿರ ಮಾತಾಡುತ್ತಿರುತ್ತಾಳೆ. ಮೈಮೇಲೆ ಪ್ರಜ್ಞೆಯೇ ಇಲ್ಲ. ಮೈ ಕಾಣುವ ಹಾಗೆ ಸೀರೆ ಕುಪ್ಪುಸ ತೊಟ್ಟು, ಎದೆಯ ಮೇಲೆ

ಬಟ್ಟೆ ಇರೋದನ್ನೂ ಲಕ್ಷಿಸದೆ ಹರಟೆ ಕೊಚ್ಚುತ್ತಿರುತ್ತಾಳೆ. ಮುಖಕ್ಕೆ ಪೌಡರೋ, ತುಟಿಗೆ ಕೆಂಪೋ ಹೇಳತೀರದು. ಇದೆಲ್ಲಾ ಯಾರು ಮಾಡುವ ಕೆಲಸ–ನೋಡಿದೋರು ಏನನ್ನುತ್ತಾರೆ."

"ಅದರ ಜವಾಬ್ದಾರಿ ಗಂಡನದು–ಅವರಿರುವಾಗ ನಮಗೇಕೆ ಇಲ್ಲದ ಹವ್ಯಾಸ ?"

"ಗಂಡ ! ಅದೊಂದು ಮಂಕುಮೂದೇವಿ. ಅವಳ ಮುಂದೆ ಹಲ್ಲು ಕಿರಿದುಕೊಂಡು ಪರಿಚಾರಿಕೆ ಮಾಡಿಕೊಂಡಿರುತ್ತೆ-"

"ಬಾಯಿ ಬಹಳ ಉದ್ದ ಮಾಡುತ್ತೀರಿ ಅತ್ತಿಗೆ ನೀವು. ಸುಭದ್ರೆ ಕಂಡರೆ ನಿಮಗಾಗದಿದ್ದರೆ ಸುಮ್ಮನಾದರೂ ಇದ್ದುಬಿಡಿ. ಅವಳ ಮೇಲೆ ಇಲ್ಲಸಲ್ಲದ ಚಾಡಿಛಿದ್ರ ಏಕೆ ಹೇಳುತ್ತೀರಿ."

ಕಾವೇರಮ್ಮನ ಮನಸ್ಸು ಕಳಕ್ಕೆಂದಿತು. ಕಣ್ಣಿನಲ್ಲಿ ನೀರು ತುಂಬಿತು.

"ಅದೂ ನನ್ನ ಮಗೂಂತ ನಾನು ತೋರಕೊಂಡರೆ ಇದೇನೇ ಕೊನೆಗೆ ನನಗಾಗುವ ಮರ್ಯಾದೆ. ಅರೀದ ಮಗು ಅವರ ಮೇಲೆ ಚಾಡಿಛಿದ್ರ ಹೇಳಿ ನಾನು ಸಾಧಿಸಬೇಕಾದದ್ದೇನು? ಯಾವಜನ್ಮದಲ್ಲಿ ಯಾವಪತಿವ್ರತೆ ಮನಸ್ಸು ನೋಯಿಸಿದ್ದೆನೋ ಈ ಜನ್ಮದಲ್ಲಿ ಈ ಹಣೆಬರಹ ನನಗೆ ಕಾದಿತ್ತು. ಜನ್ಮ ಜನ್ಮಕ್ಕೂ ಇದೇ ಪಾಡು ತಂದುಕೊಳ್ಳಲೇ ?"

"ನಿಮ್ಮ ದಮ್ಮಯ್ಯ ಸುಮ್ಮನಿರಿ ಅತ್ತಿಗೆ–ಅವರು ಮನೆಗೆ ಬರುವ ಹೊತ್ತಾಯಿತು. ಇದೇ ಒಂದು ರಂಪರಾದ್ಧಾಂತವಾದೀತು."

"ನಿಮ್ಮಿಷ್ಟ ಅತ್ತಿಗೆ-ಬೇಕಾದದ್ದು ಮಾಡಿಕೊಳ್ಳಿ.ನನಗೇಕೆ ಈ ಸಂಸಾರದ ವಾಂಛಲ್ಯ"

ಎಂದು ಕಾವೇರಮ್ಮ ತನ್ನ ಕೆಲಸದಲ್ಲಿ ಲೀನವಾದಳು. ಅವಳೇ ಹೇಳಿದ ಮಾತು ನರಸಮ್ಮನವರನ್ನು ಕೆಣಕದಿರಲಿಲ್ಲ- ಅತ್ತಿಗೆಯ ಮಾತನ್ನೇ ಮನಸ್ಸಿನಲ್ಲಿ ಯೋಚಿಸುತ್ತಾ ನರಸಮ್ಮ ತಮ್ಮ ಕೆಲಸದಲ್ಲಿ ಉದ್ಯುಕ್ತರಾದರು.

ಮಗನನ್ನು ಲಾ ಪರೀಕ್ಷೆಗೆ ಮದರಾಸಿಗೆ ಕಳಿಸಬೇಕೋ ಮುಂಬಯಿಗೆ ಕಳಿಸಬೇಕೋ ಎಂಬ ವಿಷಯ ಸೂರಪ್ಪನವರನ್ನು ತುಂಬ ಕಾಡಿಸಿತು. ಮದರಾಸು ಹತ್ತಿರ, ಬೇಕಾದಾಗ ಬಂದು ಹೋಗಬಹುದು, ಖರ್ಚು ಕಡಿಮೆಯಾಗುತ್ತದೆ. ಮುಂಬಯಿ ದೂರ, ಹೋಗಿ ಬರುವುದು ಪ್ರಯಾಸ, ಖರ್ಚು ಬಹಳವಾಗುತ್ತದೆ. ಎರಡು ಪಕ್ಷಗಳನ್ನೂ ಅಳೆದು ಸುರಿದು ನೋಡಿದರು.

ತಟ್ಟನೆ ಸೂರಪ್ಪನವರ ಮನಸ್ಸಿಗೆ ಒಂದು ಯೋಚನೆ ಹೊಳೆಯಿತು. ಆ ಬಗೆಯ ಯೋಚನೆ ಹೊಳೆದುದಕ್ಕೆ ಅವರೇ ಆಶ್ಚರ್ಯಚಕಿತರಾದರು. ಮನಸ್ಸಿಗೆ ಸ್ವಲ್ಪ ಜುಗುಪ್ಸೆಯೂ ಆಯಿತು.

ಸೂರಪ್ಪನವರ ಮನಸ್ಸಿನಲ್ಲಿ ಸಣ್ಣ ಹೋರಾಟವಾಗುತ್ತಿತ್ತು. 'ಹೀಗೆ ಸರಿ–ಇದರಿಂದ ಅವನಿಗೇ ಹಿತ–ಅವನೂ ಇದನ್ನೇ ಬಯಸುತ್ತಿದ್ದಾನೆ' ಎಂದು ತಮಗೆತಾವೇ ವಂಚಿಸಿಕೊಳ್ಳಲೆತ್ನಿಸಿದರು. ಮರುಕ್ಷಣವೇ 'ಈ ವಾದ ತಪ್ಪು–ಇದು ವಂಚನೆ–ಅವನು ಮುಂಬಯಿಗೆ ಹೋಗಲು ನಾನು ಸಮ್ಮತಿಸಿರುವುದು ಅವನಿಗಾಗಿಯಲ್ಲ, ನನಗಾಗಿ.' ಎಂದು ವಿಚಾರ ಮಾಡಿದರು.

ರಾಮಾಶಾಸ್ತ್ರಿಯೊಂದಿಗೆ ಆಗಾಗ್ಗೆ ವಿಚಾರ ವಿನಿಮಯ ಎನ್ನುವದಕ್ಕಿಂತ ವಿಚಾರ ಪ್ರಕಟಣೆ ಎನ್ನಬಹುದಾಗಿತ್ತು. ಸಾಮಾನ್ಯವಾಗಿ ಯಜಮಾನರ ಮಾತಿಗೆ–ವಿಚಾರಸರಣಿಗೆ ಪ್ರತಿ ಹೇಳು ಅಭ್ಯಾಸವೇ ರಾಮಾಶಾಸ್ತ್ರಿಗೆ ಇರಲಿಲ್ಲ. ಅವರ ಮಾತಿಗೆ ಎದುರು ಹೇಳುವ ಧೈರ್ಯವೂ ಇರಲಿಲ್ಲ. ಯಜಮಾನರ ಇಂಗಿತವನ್ನರಿತು ಅದಕ್ಕೆ ಸರಿಯಾಗಿ ಧ್ವನಿಗೂಡಿಸುವ ಕಲೆ ರಾಮಾಶಾಸ್ತ್ರಿಗೆ ಚೆನ್ನಾಗಿ ಸಾಧಿಸಿತ್ತು.

"ಶಾಸ್ತ್ರೀ–ಶ್ರೀನಿವಾಸ ಲಾಯರ್ ಪರೀಕ್ಷೆ ಓದಬೇಕೂ ಅನ್ನುತ್ತಿದ್ದಾನೆ. ನೀನೇನು ಹೇಳುತ್ತೀಯಯ್ಯಾ ?"

"ನಾನೇನು ಹೇಳಲಿ ಸ್ವಾಮಿ. ದೊಡ್ಡವರು ತಾವಿರುವಾಗ."

"ನಾನಿದ್ದೀನಿ ಸರಿ–ನಿನ್ನ ಅಭಿಪ್ರಾಯವೇನು ?"

"ಒಳ್ಳೆಯದೆಂದು ಕಾಣುತ್ತದೆ. ಇಷ್ಟು ದೊಡ್ಡ ಆಫೀಸು ನೋಡಿಕೊಳ್ಳುವುದಕ್ಕೆ ಕಂಡವರು ಬರುವುದಕ್ಕಿಂತ ಮನೆಯ ಮಗನೇ ಬರುವುದೊಳ್ಳೆಯದಲ್ಲವೇ ?"

"ನನಗೂ ಅದೇ ಯೋಚನೆ–ಅವನು ಬೊಂಬಾಯಿ ಲಾ ಕಾಲೇಜಿಗೆ ಹೋಗುತ್ತೇನೆನ್ನುತ್ತಿದ್ದಾನೆ."

"ಮದರಾಸು ಚೆನ್ನಾಗಿದೆಯಲ್ಲಾ."

"ಚೆನ್ನಾಗಿದೆ. ಅವನಿಗೇಕೋ ಬೊಂಬಾಯಿ ಮೇಲೆ ಮೋಹ."

"ಓದುವವರು ಅವನು. ಅವನ ಮನಸ್ಸಿಗೆ ನೆಮ್ಮದಿಯಾದರೆ ಸರಿ."

"ಖರ್ಚು!"

"ಸ್ವಲ್ಪ ಹೆಚ್ಚಾಗತ್ತೆ. ಆದರೇನು? ತಮಗದು ದೊಡ್ಡ ವಿಷಯವೇ?"

"ಹಾಗಾದರೆ ಬೊಂಬಾಯಿಗೆ ಹೋಗಲೀಂತ ಅನ್ನುವಿಯೇನು?"

"ನನಗದೇ ಸೂಕ್ತ ಎಂದು ತೋರತ್ತೆ. ನಿರ್ಣಯ ಮಾಡುವುದು ದೊಡ್ಡವರು ತಮ್ಮ ಚಿತ್ತ."

ಸೂರಪ್ಪನವರ ಮನಸ್ಸಿಗೆ ಸ್ವಲ್ಪ ಸಮಾಧಾನವಾಯಿತು. ರಾಮಾ ಶಾಸ್ತ್ರಿಯೂ ಬೊಂಬಾಯಿಗೆ ಮತ ಕೊಟ್ಟಿದ್ದ. ಇನ್ನು ನಿಶ್ಚಿಂತೆಯಿಂದ ಶ್ರೀನಿವಾಸನನ್ನು ಬೊಂಬಾಯಿಗೆ ಕಳುಹಿಸಬಹುದೆಂದು ಸೂರಪ್ಪನವರು ಯೋಚಿಸಿದರು.

ಆದರೀ ವಿಷಯ ಸುಭದ್ರೆಯನ್ನು ಕೇಳದೆ ಅವರು ನಿರ್ಣಯಿಸುವಂತಿರ ಲಿಲ್ಲ. ತಮ್ಮ ಜೀವನ, ಸಂಸಾರಕ್ಕೆ ಸಂಬಂಧಪಟ್ಟ ಹಲಕೆಲವು ವಿಷಯಗಳಲ್ಲಿ ಅವಳ ಅಭಿಪ್ರಾಯವನ್ನು ಅಂಗೀಕರಿಸುತ್ತಿದ್ದರು.

ಮಧ್ಯಾನ್ಹಾನಂತರ ಕೋರ್ಟಿನ ಕೆಲಸ ಮುಗಿಸಿಕೊಂಡು ಸುಮಾರು ಮೂರು ಗಂಟೆಯ ಹೊತ್ತಿಗೆ ಸುಭದ್ರೆಯ ಮನೆಗೆ ಹೋದರು. ರಂಗಣ್ಣ ಸ್ಕೂಲಿಗೆ ಹೋಗಿದ್ದ. ಗುಂಡಮ್ಮ ಅಡಿಗೆ ಮನೆಯಲ್ಲಿ ತೋಳನ್ನೇ ತಲೆ ದಿಂಬಾಗಿ ಉಪಯೋಗಿಸಿಕೊಂಡು ಸುಖವಾಗಿ ನೆಲದಮೇಲೆ ಮಲಗಿ, ನಿದ್ರಿಸುತ್ತಿದ್ದಳು.

ರಾಯರು ಬಂದದ್ದು ನೋಡಿ ಸುಭದ್ರೆ ಬಾಗಿಲು ತೆಗೆದಳು. ರಾಯರು ಒಳಗೆ ಬಂದು ಕುಳಿತರು.

"ಗುಂಡಮ್ಮನವರನ್ನೆಬ್ಬಿಸಿ ಕಾಫಿ ಮಾಡಿಸುತ್ತೇನೆ." ಎಂದಳು.

"ನಿಧಾನವಾಗಿ ಏಳಲಿ ಸುಮ್ಮನಿರು. ನನಗೀಗ ಕಾಫಿ ಬೇಕಾಗಿಲ್ಲ– ಸ್ವಲ್ಪ ಕೂಡು ಬಾ. ಮಾತಾಡತಕ್ಕದ್ದಿದೆ."

"ಏನಂಥ ರಾಜಕಾರಣ."

"ರಾಜಕಾರಣವಾಗಿದ್ದರೆ ಅವಸರವೇ ಇರುತ್ತಿರಲಿಲ್ಲ. ಇದು ಸ್ವಕಾರ್ಯ–ಅದಕ್ಕೋಸ್ಕರ ಧಾವಂತ ಹೆಚ್ಚು."

"ನಿಮಗೂ ಧಾವಂತವೇ?"

"ನಾನೇನು ಮನುಷ್ಯನಲ್ಲವೇ?"

"ಬಹಳ ಜನ ಹಾಗೆ ಭಾವಿಸಿಲ್ಲ."

"ಇನ್ನೇನು–ಭೂತವೆಂದು ಭಾವಿಸಿದ್ದಾರೆಯೋ?"

"ಇಲ್ಲ–ನಿಮ್ಮ ಪ್ರತಿಭೆ ನೋಡಿ ನೀವೊಬ್ಬರು ದೇವತಾಪುರುಷರೆಂದು ಭಾವಿಸಿದ್ದಾರೆ."

"ಪುಡ್ತಿ ಸಾಂಬ್ರಾಣಿಗಳು ಹಾಗೆ ಭಾವಿಸುವುದೇ ಒಳ್ಳೆಯದು ಬಿಡು. ನನ್ನ ಸ್ತುತಿಪಾಠ ಹಾಗಿರಲಿ. ನಾನು ಹೇಳಬೇಕೆಂದಿರುವ ವಿಷಯ ಕೇಳು."

"ಹೇಳಿ."

"ಶ್ರೀನಿವಾಸ ಲಾಯರಾಗುತ್ತಾನಂತೆ. ಅವನನ್ನು ಮದರಾಸಿಗೆ ಕಳಿಸಬೇಕೋ ಬೊಂಬಾಯಿಗೆ ಕಳಿಸಬೇಕೋ ಎಂಬ ಜಿಜ್ಞಾಸೆ ಹುಟ್ಟಿದೆ."

"ಏಕೆ? ಎಂ. ಎಸ್ಸಿಗೆ ಓದುವುದಿಲ್ಲವೇ?"

"ಇಲ್ಲವಂತೆ! ಅವನೂ ಲಾಯರಾಗಬೇಕಂತೆ!"

"ಸಹಜವೇ–ತಂದೆಯಂತೆ ಮಗ."

"ಅವನನ್ನು ಎಲ್ಲಿಗೆ ಕಳಿಸೋಣ ಹೇಳು."

"ಹೊಳೆ ನಾಯಕನಿಗೆ ದೋಣಿ ಅಪ್ಪಣೆಯೇ ಅಂದಹಾಗೆ ನಾನೇನು."

"ಅವನ ಹಿತ ನನಗೆ ಹೇಗೆ ಸೇರಿದ್ದೋ ಹಾಗೇ ನಿನಗೂ ಸೇರಿದ್ದು."

"ಸಂದೇಹವೇನು?"

"ಏಕೆ ಅನುಮಾನಿಸುತ್ತಿರುವೆ. ಹೇಳು ನಿನ್ನ ಮನಸ್ಸಿನಲ್ಲೇನಿದೆ?"

"ಬೊಂಬಾಯಿ ದೂರ–ಕಾಹಿಲೆ ಕಸಾಲೆ ಬಿದ್ದರೆ."

"ಅದನ್ನೂ ಯೋಚಿಸಿದೆ. ಆದರೆ ಅವನಿಗೆ ಬೊಂಬಾಯಿ ಗೀಳು ಹತ್ತಿದೆಯಲ್ಲಾ."

"ದೊಡ್ಡ ಊರು–ಅಲ್ಲಿ ಹೋಗುವುದೂ ಒಳ್ಳೆಯದೇ. ನಾಲ್ಕಾರು ಒಳ್ಳೆಯ ಪರಿಚಯ, ಗೆಳೆತನವಾಗುತ್ತದೆ."

"ನೀನೂ ಬೊಂಬಾಯಿಗೇ ಓಟು ಕೊಡುತ್ತೀಯನ್ನು."

"ಕೊಡಲೇಬೇಕಾಗಿದೆ."

"ನಿಜವಾಗಿ ಅದೇ ನನ್ನ ಮನಸ್ಸಿನಲ್ಲಿಯೂ ಇತ್ತು ನೋಡು. ಆದರೆ ಏನೇನೋ ಯೋಚನೆಗಳು ಬಂದು ಮನಸ್ಸು ಅಸ್ಥಿಮಿತವಾಗಿತ್ತು."

"ಅಂಥ ಪ್ರಬಲ ಯೋಚನೆ ಯಾವದೆಂದು ಕೇಳಬಹುದೆ?"

"ಸದ್ಯ ಶ್ರೀನಿವಾಸ ಇಲ್ಲಿರುವುದು ನನಗೆ ಬೇಕಿಲ್ಲ. ಅವನು ಮದರಾಸಿಗೆ ಹೋಗುವುದೂ ಬೇಕಿಲ್ಲ. ಸ್ವಲ್ಪ ದೂರವಿದ್ದರೆ ವಾಸಿಯೆನಿಸುತ್ತಿತ್ತು. ನನ್ನ ನಿನ್ನ ಋಣಾನುಬಂಧ ಒಂದು ಹಸನಾದ ರೀತಿ ಬೆಳೆಯುತ್ತಿರುವಾಗ ಅವನೆಲ್ಲಿ ಮಧ್ಯೆ ಬಂದು ಅಡಚಣೆ ತರುವನೋ ಎಂಬ ಯೋಚನೆ ಕಾಡುತ್ತಿತ್ತು. ದೇವರೇ ದಾರಿ ತೋರಿಸಿದ."

ಸೂರಪ್ಪನವರ ವಿಚಾರಲಹರಿ ಕಂಡು ಸುಭದ್ರೆ ಅವಾಕ್ಕಾದಳು. ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತಲೂ ತಾನು ಹೆಚ್ಚೆಂದು ಭಾವಿಸುತ್ತಾರಲ್ಲಾ ಎಂದು ಮನಸ್ಸು ಹಿಗ್ಗಿತು. ಮರುಕ್ಷಣವೇ ಮಗನನ್ನೇ ದೂರ ಮಾಡಲು ಸಿದ್ಧರಾದವರು ತನ್ನನ್ನು ದೂರ ಮಾಡದಿರುತ್ತಾರೆಯೇ ಎಂಬ ಚಿಂತೆ.

ಸುಭದ್ರೆ ಉತ್ತರ ಕೊಡದಿದ್ದುದನ್ನು ಕಂಡು ಸೂರಪ್ಪನವರು

"ಏಕೆ ಸುಭಾ, ಸುಮ್ಮನಾದೆ?"

"ನೀವು ಹೇಳಿದ್ದನ್ನೇ ಯೋಚಿಸುತ್ತಿದ್ದೆ. ನಿಮ್ಮ ಜೀವನದಲ್ಲಿ ನಾನು ಅಷ್ಟು ಮುಖ್ಯವೇ?"

"ಹೃದಯ ಬಿಚ್ಚಿ ತೋರಿಸಲು ಸಾಧ್ಯವಾದರೆ ತೋರಿಸುತ್ತಿದ್ದೆ, ಅದೇ ನನ್ನ ಕತೆ ಹೇಳುತ್ತಿತ್ತು. ನಿನಗಿನ್ನೂ ಸಂಶಯವೇ ?"

"ಇದರ ಪರ್ಯವಸಾನ ಮುಂದೆ ಹೇಗೆ?"

"ಅದನ್ನೀಗಾಗಲೇ ಏಕೆ ಯೋಚಿಸುತ್ತಿರುವೆ."

"ವಿಷಯ ಅಂಥದು. ಇಂದಲ್ಲ ನಾಳೆ ಹೊರಬರಲೇ ಬೇಕು."

"ನಾಳೆ ಬರುವ ವಿಪತ್ತಿಗೆ ಇಂದೇ ತಲೆಗೊಡುವುದು ಜಾಣತನವೆ?"

"ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು ಹೆಡ್ಡತನವೇ?"

"ಅಲ್ಲ ಸರಿ—ನೀನು ಯಾರಿಗಾಗಿ ಹೆದರಬೇಕು."

"ನಮ್ಮ ತಂದೆ-ಅವರು"

"ತಂದೆ ಲೋಕ ಕಂಡವರು. ನನ್ನ ವಿರುದ್ಧ ಏನೂ ಮಾಡಲಾರರು. ಇನ್ನು-ರಂಗಣ್ಣ......"

ಎಂದು ಗಹಗಹಿಸಿ ನಕ್ಕುಬಿಟ್ಟರು.

"ನಗುವುದೇಕೆ ?"

"ಅವನ ವಿಷಯ ಒಂದು ಲೆಕ್ಕದ್ದು ಎಂದು ಭಾವಿಸಿರುವೆಯಲ್ಲಾ, ನಿನ್ನ ಮುಖದರ್ಶನವಾದರೆ ಸಾಕು ಅವನ ಜೀವನ ಸಾರ್ಥಕವಾಗುತ್ತದೆ. ಅವನ ಯೋಗಕ್ಷೇಮ ನನಗೆ ಬಿಟ್ಟುಬಿಡು."

"ಬಿಟ್ಟೇ ಇರುವೆನಲ್ಲಾ, ಆದರೆ ಅವರು ಮನಸ್ಸಿಗೆ ಬೇಸರಪಟ್ಟು ಕೊಂಡಾರೆಂದು ಯೋಚನೆ."

"ಯಾವ ವಿಷಯಕ್ಕೆ ?"

"ನಮ್ಮ ವಿಷಯಕ್ಕೆ ?"

"ಅದು ಅವನಿಗೆ ತಿಳಿದಿಲ್ಲವೆಂದು ಭಾವಿಸಿರುವೆಯಾ ? ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತದಂತೆ."

"ತಿಳಿದಿದ್ದರೆ ಸುಮ್ಮನಿರುತ್ತಿದ್ದರೆ ?"

"ತಿಂಗಳಿಗೆ ಅರವತ್ತು ರೂಪಾಯಿ ಸಂಪಾದಿಸುತ್ತಿದ್ದ ಮೇಷ್ಟ್ರರಿಗೆ ಈ ಭೋಗಭಾಗ್ಯ ಸಿಕ್ಕಿದರೆ ಅವನು ಅದನ್ನು ಕಳೆದುಕೊಳ್ಳಲು ಪ್ರಯತ್ನಿಸುವನೇ?"

ಸುಭದ್ರೆಯ ಮನಸ್ಸಿಗೆ ಸಮಾಧಾನವಾಗಲಿಲ್ಲ. ಒಂದರೆಕ್ಷಣ 'ಈ ಭೋಗ ಭಾಗ್ಯಕ್ಕೆ ನನ್ನನ್ನು ನಾನು ಮಾರಿಕೊಳ್ಳಲೇ' ಎಂದೆನಿಸಿತು. ಮರುಕ್ಷಣ ತನ್ನಮುಂದಿನ ಬಾಳು, ಅಭ್ಯುದಯ–ಕೀರ್ತಿಗಳ ಚಿತ್ರ ಕಣ್ಣು ಮುಂದೆ ಕಟ್ಟಿದವು. ಅರವತ್ತು ರೂಪಾಯಿ ವರಮಾನದಲ್ಲಿ ಒಪ್ಪತ್ತು ಉಂಡು ಕೊಂಡು, ತೇಪೆ ಹಾಕಿದ ಹಳೆಯ ಸೀರೆ ಉಟ್ಟುಕೊಂಡು ಅಹನ್ಯಹನಿ ಜೀವನ ನಡೆಸುವ ಘೋರ ಚಿತ್ರ ಸುಳಿಯಿತು. ಅಸ್ಥಿರವಾಗಿದ್ದ ಮನಸ್ಸು ಒಂದು ವಿಚಿತ್ರ ಸ್ಥೈರ್ಯ ತಂದುಕೊಂಡಿತು.

"ಗುಂಡಮ್ಮನವರನ್ನು ಎಬ್ಬಿಸುತ್ತೇನೆ. ಕಾಫಿ ಮಾಡಲಿ"

ಎಂದು ಒಳಗೆ ಹೋದಳು. ಸೂರಪ್ಪನವರು ಮುಗುಳ್ನಗೆ ನಕ್ಕರು.

## ೨೭

ಮುಂಬಯಿಗೆ ಹೊರಡುವ ಮುನ್ನ ಶ್ರೀನಿವಾಸನಿಗೆ ಸ್ವಲ್ಪವೂ ಬಿಡುವೇ ಇಲ್ಲ. ಅವನ ಕಾಲೇಜಿನ ಗೆಳೆಯರು, ರಾಜಕೀಯ ಗೆಳೆಯರು, ಕಾರ್ಮಿಕ ಗೆಳೆಯರು ಔತಣಗಳ ಮೇಲೆ ಔತಣಗಳನ್ನೇರ್ಪಡಿಸಲಾರಂಭಿ

ಸಿದರು. ಇಷ್ಟಮಿತ್ರರ ಸ್ತುತಿಪಾಠ ಅವನಿಗೆ ತಲೆಬೇಸರ ತಂದಿತು. ಉಪಚಾರದ ಹೊಗಳಿಕೆ ಕೇಳಿ ಕೇಳಿ ಅವನ ಕಿವಿ ಮಂದವಾಗುತ್ತ ಬಂದಿತ್ತು.

ಊರಿಗೆ ಹೊರಡುವ ದಿನವೂ ನಿಶ್ಚಯವಾಯಿತು. ಗೌರಮ್ಮನವರು ಮಗನಿಗೆ ತಿಂಡಿತೀರ್ಥ ಸಿದ್ಧಗೊಳಿಸುವುದರಲ್ಲಿ ಉದ್ಯುಕ್ತರಾದರು.

ಒಂದು ದಿನ ಸ್ವರಾಜ್ಯಪಕ್ಷದ ಕಛೇರಿಯ ಆಳು ಶ್ರೀನಿವಾಸನ ಕೈಗೆ ಒಂದು ಕಾಗದ ತಂದಿತ್ತು ಉತ್ತರ ನಿರೀಕ್ಷಿಸುತ್ತ ನಿಂತ. ಸುಭದ್ರೆಯ ಕಾಗದ ಅದು.

ಗೆಳೆಯ ಶ್ರೀನಿವಾಸರಾಯರಿಗೆ :

ನೀವು ನಾಳೆ ನಾಳಿದ್ದರಲ್ಲಿ ಮುಂಬಯಿಗೆ ಪ್ರಯಾಣ ಬೆಳೆಸುವುದಾಗಿ ಕೇಳಿದೆ. ಹೋಗುವ ಮುನ್ನ ಇತ್ತ ಬಂದು ಹೋಗುವಿರೇನೋ ಎಂದು ಇದುವರೆಗೆ ನಿರೀಕ್ಷಿಸಿದೆ. ನೀವು ಬರಲಿಲ್ಲ. ಇಂದು ಸಂಜೆ ಆರು ಗಂಟೆಗೆ ಪುರಸತ್ತು ಮಾಡಿಕೊಂಡು ಬಂದು ಹೋಗಬೇಕು. ಇದನ್ನು ನನ್ನ ದೀನ ಪ್ರಾರ್ಥನೆಯೆಂದು ಭಾವಿಸಬೇಕಾಗಿ ವಿನಂತಿ

ನಿಮ್ಮ ಸ್ನೇಹಾಕಾಂಕ್ಷಿ
ಸುಭದ್ರಾ

ಒಪ್ಪಿಗೆ ಸೂಚಿಸಿ ಸುಭದ್ರೆಗೆ ಚೀಟಿ ಬರೆದುಕೊಟ್ಟು ಕಳಿಸಿದ.

ಸುಭದ್ರೆಯನ್ನು ಹೋಗಿ ನೋಡಿ ಅವಳಿಗೆ ತಿಳಿಸಿ ಪ್ರಯಾಣ ಮಾಡಬೇಕೆಂಬ ಉದ್ದೇಶ ಶ್ರೀನಿವಾಸನಿಗಿರಲಿಲ್ಲ. 'ಇವಳೇಕೆ ನನ್ನ ಕಾಡುತ್ತಾಳೆ' ಎಂದುಕೊಂಡ. 'ಹೇಗಾದರೂ ಆಗಲಿ. ಹೇಳಿಕಳಿಸಿದ್ದಾಳೆ. ನೋಡಿ ಹೋಗುವ' ಎಂದು ನಿರ್ಧರಿಸಿಕೊಂಡ.

ಸಂಜೆ ಶ್ರೀನಿವಾಸ ಬರುವ ವೇಳೆಗೆ ಸುಭದ್ರಾ ಸಿಂಗರಿಸಿಕೊಂಡು ಹೊರಗೆ ಹೊರಡಲು ಸಿದ್ಧಳಾಗಿದ್ದಳು. ಅವಳನ್ನು ನೋಡಿ ಶ್ರೀನಿವಾಸ,

"ಎಲ್ಲೋ ಹೊರಗೆ ಹೊರಟಿರುವಂತೆ ಕಾಣುತ್ತದೆ."

"ನೀವು ಬರುವಿರೆಂದೇ ಸಿದ್ಧಳಾದೆ."

"ಎಲ್ಲಿಗೆ ಹೋಗುವುದು ?"

"ಬನ್ನಿ-ಲಾಲ್‌ಬಾಗ್ ಕಡೆಯೋ ಕಬ್ಬನ್ ಪಾರ್ಕ್ ಕಡೆಯೋ ಹೋಗಿ ಬರೋಣ-ಅರ್ಧಗಂಟೆಯಾದರೂ ಸಾವಕಾಶವಾಗಿ ಮಾತನಾಡಬಹುದಂತಾಗುತ್ತದೆ."

"ಮನೆಯಲ್ಲಿಯೇ ಕುಳಿತು ಮಾತನಾಡಿದರಾಗದೇ ? ರಹಸ್ಯವೇನು ಬಂತು ?"

"ರಹಸ್ಯದ ಪ್ರಶ್ನೆಯಲ್ಲ. ಮನೆಯಲ್ಲಿ ಬಂದು ಹೋಗುವವರ ಹಾವಳಿ ಬಹಳ."

"ಆಗಬಹುದು ನಡೆಯಿರಿ"

ಎಂದ. ಈ ಕರ್ಮಕಾಂಡ ಬೇಗ ಮುಗಿದರೆ ಸಾಕೆಂಬ ಬೇಸರ ಅವನ ಧ್ವನಿಯಲ್ಲಿ ಸ್ಪಷ್ಟವಾಗಿ ಒಡಮೂಡಿತ್ತು. ಅದನ್ನು ತಿಳಿದೂ ತಿಳಿಯದವಳಂತಿದ್ದು ಬಿಟ್ಟಳು ಸುಭದ್ರಾ.

ಶ್ರೀನಿವಾಸ ತನ್ನ ಪೈಸಿಕಲ್ಲನ್ನು ಸುಭದ್ರೆಯ ಮನೆಯಲ್ಲಿಯೇ ಬಿಟ್ಟು ಅವಳ ಜತೆ ಕಾಲ್ನಡೆಯಲ್ಲಿ ಹೊರಟ. ಇಬ್ಬರೂ ನಡೆದು ಲಾಲ್‌ಬಾಗಿನ ಒಂದು ಕೊನೆಯಲ್ಲಿದ್ದ ನಿರ್ಜನ ಪ್ರಶಾಂತ ಪ್ರದೇಶ ಸೇರಿದರು.

ಹುಲ್ಲು ಹಾಸು ಸಮೃದ್ಧವಾಗಿತ್ತು. ಒಂದೆಡೆ ಇಬ್ಬರೂ ಕುಳಿತರು. ಶ್ರೀನಿವಾಸ ಏನು ಆಡಲಿಕ್ಕೂ ತೋರದೆ ಎಳಗರಿಕೆ ಹುಲ್ಲು ಕಿತ್ತು ರುಚಿ ನೋಡುತ್ತ ಕುಳಿತ. ಸುಭದ್ರಾ ಕೆಳಮುಖ ಮಾಡಿಕೊಂಡು ಕುಳಿತಿದ್ದಳು. ಗಲ್ಲಕ್ಕೆ ಕೈ ಆತುಕೊಟ್ಟು ಚಿಂತಾಮಗ್ನಳಾಗಿದ್ದಳು. ಅವಳು ಮಾತು ಆರಂಭಿಸುವ ಚಿನ್ಹೆಯೇ ಕಂಡುಬರಲಿಲ್ಲ. ಶ್ರೀನಿವಾಸನೇ ಮೌನಮುದ್ರೆಯನ್ನೊಡೆಯಬೇಕಾಯಿತು.

"ಬಹಳ ಮಾತನಾಡಬೇಕೆಂದಿರಿ ?"

ಸುಭದ್ರಾ ನಿದ್ರೆಯಿಂದ ಎದ್ದವಳಂತೆ

"ಹೂ ! ಹೇಗೆ ಆರಂಭಿಸಬೇಕೋ ಕಾಣೆ."

"ನೇರವಾಗಿ ಇರುವ ವಿಷಯಕ್ಕೆ ಬಂದರಾಯಿತು."

"ನೀವು ಎಂದು ಹೊರಡುವುದು ?"

"ನಾಡಿದ್ದು."

"ನಮ್ಮ ಮನೆಯಲ್ಲಿ ಒಪ್ಪತ್ತು ಊಟ ಕೂಡ ಮಾಡದೆ ಹೊರಟು ಬಿಡುತ್ತೀರಾ ?"

"ನನಗೆ ಬಿಡುವೇ ಇಲ್ಲ. ಔತಣಗಳ ಕಾಟ ಸಾಕಾಗಿದೆ. ಊಟ ಮಾಡುವುದು ಯಾವ ಮಹತ್ವದ ವಿಷಯ. ವಿಶ್ವಾಸ ಮುಖ್ಯ."

"ವಿಶ್ವಾಸವಿದೆಯೇ ಎಂದು ಕೇಳಲೇ ?"

"ನನಗೆ ಯಾರ ಮೇಲೆಯೂ ಅವಿಶ್ವಾಸವಿಲ್ಲ. ಯಾರ ಬಗ್ಗೆಯೂ ಕ್ಷಾತ್ರ, ದ್ವೇಷ ಸಾಧಿಸದೆ ಜೀವನ ನಡೆಸಬೇಕೆಂಬುದು ನನ್ನ ಆಕಾಂಕ್ಷೆ."

"ಆ ಬಗೆಯ ಸಾರ್ವಜನಿಕ ವಿಶ್ವಾಸವನ್ನಲ್ಲ ನಾನು ಕೇಳಿದ್ದು."

"ನಿಮ್ಮ ಬಗ್ಗೆ ನನಗೆ ತುಂಬ ವಿಶ್ವಾಸ-ಗೌರವವಿದೆ."

"ವಿಶ್ವಾಸ-ಗೌರವವಿದ್ದರೆ ನನ್ನಿಂದ ಏಕೆ ದೂರ ನಿಲ್ಲುವಿರಿ ?"

"ನಮ್ಮಿಬ್ಬರ ಜೀವನ ಬೇರೆ ಬೇರೆ ಮಾರ್ಗಗಳನ್ನು ಹಿಡಿದು ಹೊರಟಿದೆ. ಇಂಥ ಸಂದರ್ಭದಲ್ಲಿ ದೂರದಲ್ಲಿದ್ದರೇ ವಿಶ್ವಾಸ–ಗೌರವ ಉಳಿಯುವುದು ಸಾಧ್ಯ. ಸಮೀಪಗತವಾದರೆ ವಿಚಾರದ ತಾಕಲಾಟ ಬಂದು ಪರಸ್ಪರ ವೈಷಮ್ಯ ಬೆಳೆಯಬಹುದು."

"ವಿಚಾರದ ತಾಕಲಾಟಕ್ಕೆ ಭಂಗವಾಗುವ ವಿಶ್ವಾಸ ವಿಶ್ವಾಸವೇ ?"

"ಅಲ್ಲ. ಆದರೆ ಜನರ ಮನಸ್ಸು ಆ ಮಟ್ಟಕ್ಕೆ ಏರಬೇಕಲ್ಲಾ ?"

"ನೀವು ಆ ಮಟ್ಟದಲ್ಲಿರುವಿರೆಂದು ನಾನು ಬಲ್ಲೆ."

"ಅದು ನಿಮ್ಮ ಔದಾರ್ಯ. ಮುಂದೇನು ಮಾಡಬೇಕೆಂದಿರುವಿರಿ ? ಎಂ.ಎಸ್‌ಸಿ ಸೇರುವ ವಿಷಯವೇನಾಯಿತು ?"

"ನನಗೆ ಓದು ಸಾಕೆನಿಸಿದೆ. ಸಂಸಾರ ಗಂಟುಬಿದ್ದಮೇಲೆ ಓದು ಹೇಗೆ ಸಾಗಬೇಕು."

"ನಿಮ್ಮ ಓದಿಗೆ ರಂಗಣ್ಣ ಅಡ್ಡಿ ಬರುವವರಲ್ಲ."

"ಅಡ್ಡಿ ಬರುವುದಿಲ್ಲ. ಆದರೆ ಮನೆ ಕೆಲಸಕಾರ್ಯ ನಿರ್ವಹಿಸುವರು ಯಾರು ?"

"ನೀವು ಮುಂದಕ್ಕೆ ಓದದಿರುವುದು ನನಗೆ ತುಂಬ ವ್ಯಸನವನ್ನುಂಟು ಮಾಡಿದೆ. ಈ ಎಲೆಕ್ಷನ್ ಗೊಂದಲಕ್ಕೆ ಬೀಳದಿದ್ದರೆ ನಿಮಗೆ ಫಸ್ಟ್‌ಕ್ಲಾಸ್ ಸಿಕ್ಕಬೇಕಾಗಿತ್ತು."

"ಏನು ಮಾಡಲಿ. ನಮ್ಮ ತಂದೆ ಹೇಳಿದ ಮೇಲೆ ಅವರ ಮಾತು ನಿರಾಕರಿಸಲು ಸಾಧ್ಯವೇ ?"

"ಮುಂದೆ ರಾಜಕಾರಣದಲ್ಲಿ ಹೆಚ್ಚು ಭಾಗವಹಿಸಬೇಕೆಂದಿರುವಿರೇನು ?"

"ರಾಜಕಾರಣ ನನ್ನನ್ನು ಆಕರ್ಷಿಸುತ್ತಿದೆ. ಅದರಲ್ಲಿ ನಾನು ಪ್ರವೇಶ ಮಾಡಬಾರದೇ ?"

"ಬೇಡವೆಂದವರು ಯಾರು" ತಿಳಿದ ಹತ್ತು ಜನ ಹೆಣ್ಣುಮಕ್ಕಳು ಇಂದು ನಮ್ಮ ರಾಜಕಾರಣ ಪ್ರವೇಶಿಸಿ ಸಾರ್ವಜನಿಕ ಜೀವನವನ್ನು ಶುಚಿ ಮಾಡಬೇಕಾಗಿದೆ. ಇದು ಹೆಣ್ಣುಮಕ್ಕಳಿಂದಲೇ ಸಾಧ್ಯ. ನೀವು ರಾಜಕೀಯ ರಂಗದಲ್ಲಿ ಕೀರ್ತಿಶಾಲಿಗಳೂ ಪ್ರಭಾವಶಾಲಿಗಳೂ ಆಗುವಿರೆಂಬ ನಂಬಿಕೆ ನನಗಿದೆ."

"ನನ್ನ ಬಗ್ಗೆ ಒಂದು ಒಳ್ಳೆಯ ಮಾತು ನೀವು ಆಡಿದುದು ಇದೇ ಮೊದಲು."

"ಹಾಗೇನು? ನಾನಷ್ಟು ಕೃಪಣನೇ? ನಿಮ್ಮ ವಿಚಾರದಲ್ಲಿ ನನಗೆ ಯಾವಾಗಲೂ ಒಳ್ಳೆಯ ಅಭಿಪ್ರಾಯವೇ ಇದೆ. ಅದನ್ನು ಬಾಯಿಬಿಟ್ಟು ಹೇಳುವುದರಲ್ಲಿ ರಸಭಂಗವಾಗುವುದೆಂದು ಸುಮ್ಮನಿದ್ದೆ."

"ನನ್ನನ್ನು ನಿಜವಾಗಿಯೂ ಪ್ರೀತಿಸುವಿರಾ?"

"ಪ್ರೀತಿಯೆಂದರೇನು?"

"ಸುಭದ್ರೆಗೆ ಉತ್ತರ ಹೊಳೆಯಲಿಲ್ಲ. ಶ್ರೀನಿವಾಸ ಎಷ್ಟು ಸುಲಭವಾಗಿ ಪ್ರಶ್ನೆ ಕೇಳಿದನೋ ಅಷ್ಟು ಸುಲಭವಾಗಿ ಉತ್ತರಕೊಡುವುದು ಅವಳಿಗೆ ಸಾಧ್ಯವಾಗಲಿಲ್ಲ. ಅವಳ ಮೌನ ಕಂಡು

"ನಾನೆ ಹೇಳುವೆ ಕೇಳಿ. ಎರಡು ಮನ ಒಂದಾಗುವುದು ಪ್ರೀತಿಯಿಂದಲೇ; ಎರಡು ದೇಹಗಳು ಒಂದಾಗುವುದೂ ಪ್ರೀತಿಯಿಂದಲೇ. ಆದಕ್ಕೊಂದು ಹೊರಮುಖವಿದೆ, ಒಂದು ಒಳಮುಖವಿದೆ. ವ್ಯಕ್ತಿಗಳು ತಮ್ಮ ಸಂಬಂಧವನ್ನು ಹೇಗೆ ಬೆಳಸಿಕೊಂಡು ಯಾವ ಮಟ್ಟದಲ್ಲಿಟ್ಟುಕೊಳ್ಳಬೇಕೆಂದು ನಿಶ್ಚಯಿಸಿಕೊಳ್ಳುತ್ತಾರೆ ಆದರ ಮೇಲೆ ಅವಲಂಭಿಸಿದೆ ಪ್ರೀತಿಯ ವ್ಯಾಖ್ಯೆ"

"ನನ್ನ ಬಗ್ಗೆ ನೀವಿಟ್ಟಿರುವ ಪ್ರೀತಿ ಎಂಥದು?"

"ಸ್ಪಷ್ಟ ಸತ್ಯ ಹೇಳಿಬಿಡಲೇ?"

"ಹೇಳಿ—"

"ದೇಹಾತೀತವಾದದ್ದು. ದೇಹದ ಹಾಹಾಕಾರವನ್ನು ಅಣಗಿಸಲು ನಾನು ಶಪಥಮಾಡಿದ್ದೇನೆ. ನಾನು ಕಾಣುವುದು ಎಲ್ಲ ಹೆಣ್ಣಿನಲ್ಲಿಯೂ ನನ್ನ ತಾಯಿಯ ಮುಖ."

"ಇಂಥ ಘೋರ ಶಪಥವೇಕೆ?"

"ನನ್ನ ಜೀವನದ ಮುಂದೆ ಒಂದು ನಿರ್ದಿಷ್ಟ ಗುರಿ ಕಂಡುಬರುತ್ತಿದೆ. ಅದನ್ನು ನಾನು ಮುಟ್ಟಬೇಕಾದರೆ ಇಂಥ ಶಪಥ ಮಾಡಲೇಬೇಕು."

ಸುಭದ್ರೆಯ ಮನಸ್ಸು ಬಹು ಖಿನ್ನವಾಯಿತು. ಕಣ್ಣು ತುಂಬಿ ಬರುತ್ತಿದ್ದ ಹನಿಗಳು ಜಾರದಂತೆ ಸರ್ವ ಸಾಹಸ ಮಾಡಿದಳು. ಅವಳ ಮುಖದಲ್ಲಿ ಅಪಾರ ವೇದನೆ, ದೈನ್ಯ ಕಂಡು ಬರುತ್ತಿತ್ತು.

"ಆಗಾಗ್ಗೆ ಪತ್ರ ಬರೆಯುತ್ತಿರುವಿರಾ ?"

"ಬರೆಯಬೇಕೆನಿಸಿದರೆ ಖಂಡಿತ ಬರೆಯುತ್ತೇನೆ."

"ನಾನು ನಿಮಗೆ ಬರೆಯಬಹುದೇ ?"

"ಬೇಡವೆಂದವರು ಯಾರು? ಉತ್ತರ ಮಾತ್ರ ನನಗೆ ಅನುವು ದೊರೆತಾಗಲೇ ನಾನು ಬರೆಯುವುದು."

"ನಿಮ್ಮ ಇಷ್ಟ "

ಎಂದು ಎದ್ದಳು. ಅವಳ ಹೃದಯದಲ್ಲಾಗುತ್ತಿದ್ದ ತುಮುಲ ವಿಪ್ಲವ ಶ್ರೀನಿವಾಸನಿಗೆ ಅರ್ಥವಾಯಿತು. ಕರುಣೆಯಿಂದ ಅವಳ ಕೈಹಿಡಿದು

"ಸುಭಾ....ನಿಮ್ಮ ಶ್ರೇಯಾಕಾಂಕ್ಷಿ ನಾನು. ಅದರಲ್ಲಿ ನಾನು ಭಾಗ ಬಯಸುತ್ತೇನೆ. ಜೀವನದ ಆಸೆ ಆಮಿಷಗಳು, ಲೋಭಮೋಹಗಳನ್ನು ಗೆದ್ದು ಎಲ್ಲರಿಗೂ ಮಾದರಿಯಾಗುವಂತೆ ನಿಮ್ಮ ಜೀವನದ ತೇರು ಸಾಗಲಿ. ನಿಮ್ಮ ಅಣ್ಣನ ಆಶೀರ್ವಾದ"

ಎಂದು ಹೇಳಿದ. 'ಅಣ್ಣ' ಶಬ್ದ ಸುಭದ್ರೆಯನ್ನು ಚಕಿತಳನ್ನಾಗಿ ಮಾಡಿತು. ಅವಳು ಕತ್ತೆತ್ತಿ ನೋಡಲಿಲ್ಲ. ಮಾತನಾಡದೆ ರಸ್ತೆ ಹಿಡಿದು ನಡೆದಳು. ಅವಳ ಮನೆ ಮುಟ್ಟಿದ ಕೂಡಲೆ ಬೈಸಿಕಲ್ ತೆಗೆದುಕೊಂಡು ಶ್ರೀನಿವಾಸ ಹೊರಟುಬಿಟ್ಟ. ಅವನು ಹೋದ ದಾರಿಯನ್ನೇ ದಿಟ್ಟಿಸಿ ನೋಡುತ್ತಾ ಅವನು ಮರೆಯಾಗಲು ದೀರ್ಘ ನಿಟ್ಟುಸಿರುಬಿಟ್ಟು ಒಳಗೆ ಬಂದು ಮಲಗಿದಳು. ಇನ್ನು ಕಣ್ಣೀರು ತಡೆಯಲಾಗಲಿಲ್ಲ.

## ೨೮

ಶ್ರೀನಿವಾಸ ಮುಂಬಯಿಗೆ ಬರುವ ವಿಷಯವನ್ನು ಮುಂಬಯಿ ಕಾರ್ಮಿಕ ಸಂಘದ ಕಾರ್ಯದರ್ಶಿಗಳಾದ ಬನ್ಸಿಲಾಲ್ ಚೋಕ್ಸಿಯವರಿಗೆ

ಮುನಿಸ್ವಾಮಿ ಬರೆದಿದ್ದ. ಶ್ರೀನಿವಾಸನಿಗೆ ಎಲ್ಲ ವ್ಯವಸ್ಥೆ ಮಾಡುವುದಾಗಿ ವಾಗ್ದಾನ ಮಾಡಿ ಚೋಕ್ಸಿಯವರು ಪತ್ರ ಬರೆದಿದ್ದರು.

ಶ್ರೀನಿವಾಸ ಎಲ್ಲರ ಅಪ್ಪಣೆ ಆಶೀರ್ವಾದ ಪಡೆದು ಮುಂಬಯಿಗೆ ಪ್ರಯಾಣ ಬೆಳಸಿದ. ಅವನು ಹೊರಟ ದಿನ ಇಡೀ ಕಾರ್ಮಿಕ ವರ್ಗವೇ ನಿಲ್ದಾಣಕ್ಕೆ ಬಂದು ಅವನಿಗೆ ಸುಖ ಪ್ರಯಾಣ ಬಯಸಿತು. ಮಾಲೆಗಳ ಮೇಲ ಮಾಲೆಗಳು ಅವನ ಕೊರಳಿಗೆ ಬಿದ್ದವು. ಜಯ ಜಯಕಾರ ಮುಗಿಲು ಮುಟ್ಟಿತು.

ಜನತೆಗೆ ತಮ್ಮ ಮಗನ ವಿಷಯದಲ್ಲಿದ್ದ ಪ್ರೇಮ ಕಂಡು ಸೂರಪ್ಪನವರಿಗೂ ಆನಂದವಾಯಿತು. ರೈಲು ಹೊರಡುವ ಮುನ್ನ ಶ್ರೀನಿವಾಸ ತಾಯಿ ತಂದೆಗೆ ನಮಸ್ಕಾರ ಮಾಡಿದಾಗ ಸೂರಪ್ಪನವರ ಅಂತಃಕರಣ ಕೂಡ ಕಲಕಿ ಕಣ್ಣಲ್ಲಿ ಹನಿ ಮಿಡಿಯಿತು.

ವಿಕ್ಟೋರಿಯಾ ಟರ್ಮಿನಸ್ ನಿಲ್ದಾಣದಲ್ಲಿ ಚೋಕ್ಸಿಯವರೂ, ಸಂಘದ ಸದಸ್ಯರೂ ಬಂದು ಶ್ರೀನಿವಾಸನಿಗೆ ಸ್ವಾಗತ ಬಯಸಿದರು. ಚೋಕ್ಸಿ ಯವರ ಕಾರಿನಲ್ಲಿ ಶ್ರೀನಿವಾಸ ಅವರ ಮನೆಗೆ ಹೊರಟ.

ಮಜಗಾವಿನಲ್ಲಿ ಭವ್ಯವಾದ ಆರು ಅಂತಸ್ತಿನ ಮಹಲು. ಅದರ ಮೂರನೆಯ ಅಂತಸ್ತು ಸಂಪೂರ್ಣವಾಗಿ ಚೋಕ್ಸಿಯವರಿಗೆ ಸೇರಿತ್ತು. ಆರು ವಿಶಾಲವಾದ ಕೋಣೆಗಳಿದ್ದವು. ಒಂದು ದೊಡ್ಡ ತೊಟ್ಟಿ, ಅನುಕೂಲವಾದ ಅಡಿಗೆಯ ಮನೆ, ಸ್ನಾನ ಗೃಹ. ವೈಭವಯುಕ್ತವಾಗಿ ಅಲಂಕೃತವಾಗಿದ್ದ ಅವರ ಮನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ

"ಚೋಕ್ಸಿಯವರೇ, ನಾನು ಎಲ್ಲಿರುವಂತೆ ವ್ಯವಸ್ಥೆಮಾಡಿರುವಿರಿ ?"

"ಎಲ್ಲಿ ಎಂದೇಕೆ ಕೇಳುವಿರಿ. ಇಲ್ಲೇ ಇದ್ದರಾಗದೇ ?"

"ಇಂದೋ–ಯಾವತ್ತಿಗೋ ?"

"ಮನೆ ದೊಡ್ಡದಾಗಿದೆ. ನಿಮಗೆ ಸುಲಭವಾಗಿ ಒಂದು ರೂಮು ಬಿಟ್ಟು ಕೊಡಬಲ್ಲೆ. ಇಲ್ಲೇ ಆರಾಮವಾಗಿ ಇದ್ದುಬಿಡಿ."

"ನಾನು ಬಂದಿರುವುದು ಆರಾಮಕ್ಕಲ್ಲ, ವ್ಯಾಸಂಗಕ್ಕೆ."

"ಆರಾಮವಿಲ್ಲದಿದ್ದರೆ ವ್ಯಾಸಂಗ ಹೇಗೆ ಸಾಧ್ಯ ?"

"ನೀವು ಅಪ್ಪಣೆಯಿತ್ತರೆ ನಾನು ವರಳಿಯಲ್ಲಿರಲು ಬಯಸುತ್ತೇನೆ."

"ಅಲ್ಲಿ–ಕೂಲಿಗಳ ಮಧ್ಯೆ."

"ಹೌದು–ನಾನೂ ಒಬ್ಬ ಕೂಲಿಗಾರ"

ಎಂದ. ಅವನ ಮಾತಿನ ಒಗರು ಚೋಕ್ಸಿಯವರಿಗೆ ಅರ್ಥವಾಗದಿರಲಿಲ್ಲ. ಅವರು ಮರುಮಾತಾಡಲು ಬಯಸಲಿಲ್ಲ.

ಊಟ ಮುಗಿದ ಕೂಡಲೆ ಚೋಕ್ಸಿಯವರು ಶ್ರೀನಿವಾಸನನ್ನು ಪರೇಲಿಗೆ ಕರೆದೊಯ್ದು ಅಲ್ಲಿನ ಚಾಲುಗಳೊಂದರಲ್ಲಿ ಒಂದು ರೂಮು ಗೊತ್ತುಮಾಡಿ ಕೊಟ್ಟರು. ತಿಂಗಳಿಗೆ ಐದು ರೂಪಾಯಿ ಬಾಡಿಗೆ.

ರೂಮಿಗೆ ಬೇಕಾದ ಕೆಲವು ಸಾಮಾನು, ಒಂದೆರಡು ಕುರ್ಚಿಮೇಜು, ಒಂದು ಸ್ಟೋವ್ ಮೊದಲಾದ ಕೆಲವು ಪರಿಕರಗಳನ್ನು ಒದಗಿಸಿಕೊಳ್ಳಲು ಶ್ರೀನಿವಾಸನಿಗೆ ಒಂದೆರಡು ದಿನಗಳು ಬೇಕಾದವು. ಅವನ ಜತೆಗೆ ಚೋಕ್ಸಿ ಬರದಿದ್ದರೂ ಅವರ ಮುನೀಮ್‌ಜೀ ಬಂದು ಎಲ್ಲ ಅನುಕೂಲ ಮಾಡಿಕೊಟ್ಟ.

ಲಾ ಕಾಲೇಜ್ ಸೇರಿದ ವಿಧಿ ಶ್ರೀನಿವಾಸ ಪ್ರೌಢಿಕೆ, ಮುಂಬಯಿ ಕಾರ್ಮಿಕ ಸಂಘಗಳು, ಕಾರ್ಮಿಕ ಮುಖಂಡರು, ಕಾರ್ಮಿಕ ಸಾಹಿತ್ಯದ ಪರಿಚಯ ಮಾಡಿಕೊಳ್ಳಲಾರಂಭಿಸಿದ.

ಚೋಕ್ಸಿಯವರನ್ನು ಕಂಡಾಗ, ಅವರ ಮನೆ. ಜೀವನ ಪರಿಚಯ ಮಾಡಿಕೊಂಡಾಗ ಅವನಿಗಾದ ಆಶ್ಚರ್ಯ ಮತ್ತಷ್ಟು ಬಲಪಟ್ಟಿತು. ಕಾರ್ಮಿಕ ಮುಖಂಡರಿಗೇಕೆ ಮಹಡಿಯ ಮನೆಗಳು, ಅವರೇಕೆ ಮಲಬಾರ್ ಹಿಲ್, ನೇಪಿಯರ್ ಸೀ ರೋಡ್, ಮಜಗಾಂವ್‌ಗಳಲ್ಲಿ ವಾಸಮಾಡಬೇಕು ? ಅವರೇಕೆ ಪಾಂಟಿಯಾಕ್, ಪ್ಯಾಕಾರ್ಡ್, ಸನ್‌ಬೀಮ್ ಕಾರುಗಳಲ್ಲಿ ಓಡಾಡಬೇಕೆಂಬ ಸಮಸ್ಯೆ ಅವನನ್ನು ಬಾಧಿಸತೊಡಗಿತು.

ಕಾರ್ಮಿಕ ನಾಯಕರ ಪರಿಚಯ ಮಾಡಿಕೊಳ್ಳುವ ಈ ಸಂದರ್ಭದಲ್ಲಿಯೇ ಅವನಿಗೆ ಅಮೀರ್ ಇಲಾಹಿಯ ಪರಿಚಯವಾಯಿತು. ಅಮೀರ್ 'ಇಂಪೀರಿಯಲ್ ಅಲ್ಯುಮಿನಂ ಫ್ಯಾಕ್ಟರಿ' ಯಲ್ಲಿ ನೌಕರ. ಅದೇ ಫ್ಯಾಕ್ಟರಿಯ ಕಾರ್ಮಿಕರ ಸಂಘದ ಅಧ್ಯಕ್ಷ.

ಹರಕು ಪಾಯಿಜಾಮಾ. ಹರಕು ಜುಬ್ಬ, ತುರುಗಡ್ಡ, ತಲೆಯ ಮೇಲೊಂದು ಮಾಸಿದ ಗಾಂಧಿ ಟೋಪಿ, ಒಣಗಿ ಕಾಷ್ಠದಂತೆ ಕಾಣುತ್ತಿದ್ದ ನೀಳವಾದ ಎತ್ತರ, ರಕ್ತರಹಿತವಾದ ಮುಖವೆಲ್ಲಾ ಒಂದೇ ವ್ಯಕ್ತಿಯಲ್ಲಿ ಸೇರುವುದು ಸಾಧ್ಯವಾದರೆ ಅದು ಇಲಾಹಿಯಲ್ಲಿ ಸೇರಿತ್ತು. ಅವನ ಎರಡು ಹೊಳಪಾದ ಕಣ್ಣುಗಳು ಮಾತ್ರ ಬೇರೆಕತೆಯನ್ನು ಸುರುತ್ತಿದ್ದವು.

ಇಲಾಹಿ ಶ್ರೀನಿವಾಸನನ್ನು ತನ್ನ ಸಂಘಕ್ಕೆ ಕರೆದೊಯ್ದು ಎಲ್ಲ ಸದಸ್ಯರ ಪರಿಚಯ ಮಾಡಿಕೊಟ್ಟ. ಶ್ರೀನಿವಾಸ ಅವರ ಸ್ಥಿತಿಗತಿ, ಕೆಲಸದ ವೇಳೆ, ಸಂಕಷ್ಟ, ಸಂಬಳ ಕೇಳಿ ತಿಳಿದುಕೊಂಡ. ಇಲಾಹಿಯ ಸರದಿ ಬಂದಾಗ ಅವನನ್ನೂ ಕೇಳಿಯೇಬಿಟ್ಟ ”

“ನಿಮಗೆಷ್ಟು ಸಂಬಳ ಕಾಮ್ರೇಡ್ ಇಲಾಹಿ ?”

“ಓವರ್‌ಟೈಮೂ ಸೇರಿ ತಿಂಗಳಿಗೆ ೩೦೦ ರೂಪಾಯಿ ಬರುತ್ತದೆ.”

“ನೀವೆಲ್ಲಿ ವಾಸಿಸುವಿರಿ ?”

“ಪರೇಳದಲ್ಲಿ. ಈಗ ನಿಮ್ಮನ್ನು ನಮ್ಮ ಮನೆಗೆ ಕರೆದೊಯ್ದು ಅಲ್ಲಿ ಚಹಾ ಕೊಡಬೇಕೆಂದು ಯೋಚಿಸಿರುವೆ. ಬರುವಿರೇನು ?”

“ಖಂಡಿತವಾಗಿ.”

ತನ್ನ ಜತೆಗಾರ ತುಕೋಜಿಯನ್ನೂ ಕರೆದುಕೊಂಡು ಶ್ರೀನಿವಾಸ ನೊಂದಿಗೆ ಇಲಾಹಿ ಪರೇಳಕ್ಕೆ ಹೊರಟ.

ಶ್ರೀನಿವಾಸ ಎಷ್ಟು ಒಲ್ಲೆಂದರೂ ಕೇಳದೆ ಇಲಾಹಿಯೇ ಮೂವ್ವರಿಗೂ ಟ್ರಾಂ ಟಿಕೆಟುಗಳನ್ನು ಕೊಂಡ.

ಪರೇಳಕ್ಕೆ-ಅದರಲ್ಲಿಯೂ ಕಾರ್ಮಿಕರ ವಾಸಗೃಹಗಳೆಡೆಗೆ ಪ್ರವೇಶಿಸು ವುದೆಂದರೆ ಪ್ರತ್ಯಕ್ಷ ನರಕವಾಯಿತು. ಗೋಣಿತಟ್ಟು ಮುಚ್ಚಿದ ಮನೆಗಳು, ಬೀದಿಯ ಹೊಲಸಿನಲ್ಲಾಡುವ ಮಕ್ಕಳು, ಕುಪ್ಪೆ ಕುಪ್ಪೆಯಾಗಿ ಬಿದ್ದಿದ್ದ ತಪ್ಪೆಯ ರಾಶಿ, ದುರ್ಗಂಧಮಯವಾದ ರಸ್ತೆಗಳು. ಅವುಗಳನ್ನೇ ಹಾಯ್ದು ಕೊಂಡು ಇಲಾಹಿಯ ಮನೆಗೆ ಹೋಗಬೇಕಾಗಿತ್ತು.

“ಇಲಾಹಿಯ ಮನೆಯು ಅಂತಹದೇ. ಆದರೆ ಇತರ ಕಾರ್ಮಿಕರ ಮನೆಗಳಷ್ಟು ಅದು ಅಶುಚಿಯಾಗಿರಲಿಲ್ಲ. ಒಂದು ರೂಮು, ಒಂದು ಅಡಿಗೆಯ ಮನೆ ಇಷ್ಟರಲ್ಲಿ ಇಲಾಹಿಯ ಮನೆ ಪೂರೈಸಿತ್ತು. ಅಂತಹ ಇನ್ನೂರು ಸಂಸಾರಗಳು ಆ ಕಟ್ಟಡದಲ್ಲಿ ವಾಸಿಸುತ್ತಿದ್ದರು. ಒಗೊಂದು ಸಾಲಿಗೆ-ಕೆಲವು ಸ್ನಾನಗೃಹಗಳು, ಕೆಲವು ಶೌಚಗೃಹಗಳು. ನಿವಾಸಿಗಳು ತಮ್ಮ ಸರದಿ ಕಾಯುತ್ತಾ ತಂಬಿಗೆಯೋ ಬಕೆಟ್ಟೋ ಹಿಡಿದು ನಿಂತಿರುವ ನೋಟ ನಿತ್ಯನೋಟ.

ಇಲಾಹಿ ಮನೆಯ ತೊಟ್ಟಿಯಲ್ಲಿದ್ದ ಒಂದೇ ಒಳ್ಳೆಯ ಫರ್ನಿಚ ರೆಂದರೆ ಒಂದು ಅರಾಮ ಕುರ್ಚಿ. ಅದರ ಬಳಿಯಲ್ಲಿ ಒಂದು ಮೇಜು,

ಒಂದೆರಡು ಹರಿದ ಬೆತ್ತದ ಕುರ್ಚಿಗಳು. ಮೇಜಿನ ಮೇಲೆ ಒಂದು ಕಂದೀಲು ಕೆಲವು ಪುಸ್ತಕಗಳು. ತೊಟ್ಟಿಯಲ್ಲಿ ಎರಡು ಚಾರ್‌ಪಾಯ್.

ಶ್ರೀನಿವಾಸ, ತುಕೋಜಿಯರನ್ನು ತನ್ನ ಮನೆಯ ತೊಟ್ಟಿ, ರೂಮು ಬೈಠಕ್ ಖಾನೆ ಎಲ್ಲಾ ಆಗಿದ್ದೆಡೆ ಕೂಡಿಸಿ ಇಲಾಹಿ ಒಳಗೆ ಹೋಗಿ ಬಂದು ಅವರ ಜತೆ ಕುಳಿತ.

ಇದಕ್ಕೆಷ್ಟು ಬಾಡಿಗೆ ಕೊಡುತ್ತಿರುವಿರಿ ಇಲಾಹಿ ?"

"ಇಪ್ಪತ್ತು ರೂಪಾಯಿ."

"ಇಷ್ಟು ಮನೆ ನಿಮಗೆ ಸಾಕೆ ?"

"ಸದ್ಯಕ್ಕೆ ಸಾಕು. ಮನೆಯಲ್ಲಿ ನಾನೂ ನನ್ನ ತಾಯಿ ಇಬ್ಬರೇ ಇರುವುದು."

"ನಿಮಗೆ ತಿಂಗಳಿಗೆ ೩೦೦ ರೂಪಾಯಿ ಸಂಬಳ ಬರುವುದೆಂದಿರಿ. ಇನ್ನೊಂದು ಹತ್ತು ಹದಿನೈದು ರೂಪಾಯಿ ಕೊಟ್ಟು ಸ್ವಲ್ಪ ಒಳ್ಳೆಯ ವಿಸ್ತರಣದಲ್ಲಿ ಮನೆ ಮಾಡಬಾರದೇ ?"

"ಇಲಾಹಿ ವಿಷಯ ನೀವು ಕಾಣಿರಿ ಕಾಮ್ರೇಡ್" ಎಂದು ತುಕೋಜಿ ಆರಂಭಿಸಿ ಇಲಾಹಿ 'ಚುಪ್‌ರೇ-ಚುಪ್‌ರೇ' ಎಂದು ಬಾಯಿ ಮುಚ್ಚುತ್ತಿದ್ದರೂ ಕೇಳದೆ ಮುಂದುವರಿಸಿದ.

"ಕಾಮ್ರೇಡ್ ಇಲಾಹಿಗೆ ೩೦೦ ರೂಪಾಯಿ ಸಂಬಳ. ಆದರೆ ಅವನು ಮನೆಗೆ ಒಯ್ಯುವುದು ನೂರೇ ರೂಪಾಯಿ. ಉಳಿದ ಇನ್ನೂರು ರೂಪಾಯಿಯನ್ನು ಕಾರ್ಮಿಕರ ರಕ್ಷಣಾನಿಧಿಗೆ ಕಟ್ಟುತ್ತಿದ್ದಾನೆ. ಕೊಳಕು ಮನೆಯಲ್ಲಿ ವಾಸಮಾಡಿ, ಅರೆಹೊಟ್ಟೆ ತಿಂದು, ಆ ಮುದುಕಿಯ ಜೀವ ತೆಗೆದು ತಾನೂ ಆತ್ಮಹತ್ಯಮಾಡಿಕೊಳ್ಳುತ್ತಿದ್ದಾನೆ."

ಶ್ರೀನಿವಾಸ ಇಲಾಹಿಯ ಕಡೆ ತಿರುಗುವಷ್ಟರಲ್ಲಿ ಅವನೆದ್ದು ಒಳಗೆ ಹೋಗಿದ್ದ. ಸ್ವಲ್ಪ ಕಾಲಾನಂತರ ಒಂದು ಕೈಯಲ್ಲಿ ಕೆಲವು ಖಾರದ ಬಿಸ್ಕತ್ತುಗಳ ತಟ್ಟೆ, ಇನ್ನೊಂದು ಕೈಯಲ್ಲಿ ಒಂದು ಕಪ್ ಚಹಾ ಹಿಡಿದು ಪ್ರವೇಶಿಸಿ ಅತಿಥಿಗಳ ಮುಂದಿಟ್ಟ. ಅವನ ಹಿಂದೆ ಅವನ ತಾಯಿ ಒಂದು ಕೈಯಲ್ಲಿ ಕೆಲವು ಬಾಳೆಯ ಹಣ್ಣುಗಳುಳ್ಳ ತಟ್ಟೆ, ಇನ್ನೊಂದು ಕೈಯಲ್ಲಿ ಒಂದು ಕಪ್ ಚಹಾ ಹಿಡಿದು ಪ್ರವೇಶಿಸಿದಳು. ಇಲಾಹಿ ಆಕೆಯ ಕೈಯಿಂದ ಅವುಗಳನ್ನು

ತೆಗೆದುಕೊಂಡು ಕೆಳಗಿಟ್ಟ. ಆಕೆ ಬಂದಾಗ ಎದ್ದು ನಿಂತ ಶ್ರೀನಿವಾಸನನ್ನು ದ್ದೇಶಿಸಿ

"ಇವರೇ ನನ್ನ ಅಮ್ಮಾಜಾನ್." ಎಂದು ತಾಯಿಯ ಕಡೆ ತಿರುಗಿ

"ಅಮ್ಮಾ ......ಇವರೇ ನನ್ನ ಹೊಸ ಸ್ನೇಹಿತರು. ಮೈಸೂರು ಕಡೆಯವರು."

ಇಲಾಹಿ ನಿಂತಿದ್ದ ತಾಯಿಯನ್ನು ಆರಾಮಾಸನದ ಮೇಲೆ ಕೂಡಿಸಿ, ಒಳಗೆ ಹೋಗಿ ಮತ್ತೆ ಎರಡು ಕಪ್ ಚಹಾ ತಂದಿಟ್ಟ. ತಾಯಿಯ ಪಾದದ ಬಳಿ ನೆಲದ ಮೇಲೆ ಕುಳಿತ.

ಬೀಯಮ್ಮ ಅತಿಥಿಗಳನ್ನು ಪಚರಿಸುತ್ತಾ 'ಚಹಾ ತೆಗೆದುಕೊಳ್ಳಿ' ಎಂದಳು. ಇಲಾಹಿ ಒಂದು ಕಪ್ ಚಹಾ ತೆಗೆದು ತಾಯಿಯ ಕೈಯಲಿಟ್ಟ. ಶ್ರೀನಿವಾಸ ಒಂದು ಬಿಸ್ಕತ್ ಕೈಗೆ ತೆಗೆದುಕೊಂಡ, ತುಕೋಜಿ ಒಂದು ಬಾಳೆಯ ಹಣ್ಣು ಸುಲಿದ.

"ಅಮೀರ್, ಅತಿಥಿಗಳನ್ನು ಕರೆದುಕೊಂಡು ಬರುತ್ತೇನೆಂದು ನೀನು ಮೊದಲೇ ಏಕೆ ಹೇಳಲಿಲ್ಲ" ಎಂದು ಬೀಯಮ್ಮ ಕೇಳಿದಳು.

"ಏಕೆ ಮಾ! ಏನು ಮಾಡುತ್ತಿದ್ದೆ. ಬಿರಿಯಾನಿ ಮಾಡಿಡುತ್ತಿದ್ದೆಯಾ?—ನಿನ್ನ ಬಿರಿಯಾನಿ ನಮ್ಮ ಅತಿಥಿಗಳು ತಿನ್ನುತ್ತಿರಲಿಲ್ಲ–ತುಕೋಜಿಯೊಬ್ಬನೇ ಪೂರೈಸಬೇಕಾಗಿತ್ತು."

"ಏಕೆ? ನೀವು ಬಿರಿಯಾನಿ ತಿನ್ನುವುದಿಲ್ಲವೇ?" ಎಂದು ಬೀಯಮ್ಮ ಶ್ರೀನಿವಾಸನನ್ನು ಕೇಳಿದಳು.

"ಇಲ್ಲ ತಾಯಿ. ನನಗೆ ಮಾಂಸಹಾರ ರೂಢಿಯಿಲ್ಲ.'

"ಹಾಗೇನು ? ಮಾಂಸಹಾಕದೆ ನಾನು ಬೇರೆ ಅಡಿಗೆ ಮಾಡುತ್ತೇನೆ. ಊಟಕ್ಕೆ ಬರುವಿರಾ—ಅಥವಾ ಜಾತಿ...."

"ನಾನು ಇಲಾಹಿ ಒಂದೇ ಜಾತಿಗೆ ಸೇರಿದವರು ತಾಯಿ. ಇಬ್ಬರೂ ಶ್ರಮಜೀವಿಗಳು. ನನ್ನ ತಾಯಿ ಬೇರೆಯಲ್ಲ. ನೀವು ಬೇರೆಯಲ್ಲ. ನೀವು ಕರೆದರೆ ಬರುವುದಿಲ್ಲನೆನ್ನುತ್ತೇನೆಯೇ ?"

"ನೀನು ಬಹಳ ಒಳ್ಳೆಯವನ ಹಾಗೆ ಕಾಣುವೆ ಮಗೂ–ನಾನು ನಿನ್ನ ಮಗೂ ಎಂದು ಕರೆಯಬಹುದೇ ?"

"ಹಾಗೆ ನೀವು ಕರೆಯಬೇಕು. ನಾನು ನಿಮ್ಮನ್ನು ಅಮ್ಮಾಜಾನ್ ಎಂದೇ ಕರೆಯುತ್ತೇನೆ."

"ಎಂಥ ಸಕ್ಕರೆಯಂಥ ಮಾತನಾಡುವೆ ಮಗೂ. ನನ್ನ ಅಮೀರ್ ಎತ್ತರವಾಗಿ ತೆಂಗಿನ ಮರದ ಹಾಗೆ ಬೆಳೆದಿದ್ದಾನೆ. ಆದರೆ ಇವನಿಗೆ ಸ್ವಲ್ಪವೂ ಬುದ್ಧಿಯಿಲ್ಲ."

"ಏನೇ ಅಮ್ಮಾ ಹೊಸಬರ ಎದುರಿನಲ್ಲಿ ನನ್ನ ಮರ್ಯಾದೆ ಹಾಳು ಮಾಡುತ್ತೀ ?"

"ಜುಸ್‌ರೇ ?" ಎಂದು ಅಮೀರನ ಬಾಯಿ ಮುಚ್ಚಿಸಿ

"ನೋಡು ಬೇಟಾ–ಅಮೀರ್ ಸರಿಯಾಗಿ ಊಟಮಾಡುವುದಿಲ್ಲ— ತಿಂಡಿ ತಿನ್ನುವುದಿಲ್ಲ–ಇವನಿಗೆ ದುಡಿಯುವುದೊಂದೇ ಗೊತ್ತು. ದುಡಿದು ದುಡಿದು ಸಾಕಾಗಿ ಬಂದು ರಾತ್ರಿಯೆಲ್ಲಾ ಸಂಕಟ ಪಡುತ್ತಾನೆ. ಅವನ ಸ್ಥಿತಿ ನೋಡಿ–ಯಾರು ಸೈರಿಸಬಹುದು."

"ಹೀಗೇಕೆ ಮಾಡುವಿರಿ ಕಾವ್ರೇಡ್" ಎಂದು ಶ್ರೀನಿವಾಸ ಕೇಳದ. ಇಲಾಹಿ ನಗುನಗುತ್ತಾ

"ತಾಯಿಯನ್ನು ಯಾವ ಮಗ ತೃಪ್ತಿಪಡಿಸಲು ಸಾಧ್ಯ ಕಾಮ್ರೇಡ್. ಗೊಣಗುವುದು, ಮಗನಿಗಾಗಿ ಸದಾ ಬೇಯುವುದು ಅವರ ಹುಟ್ಟುಗುಣ. ಬಿಡಿ- ಈ ಮುದುಕಿ ಮಾತು ಕಟ್ಟಿಕೊಂಡೇನು !"

"ನೋಡಿದಿರಾ–ನಿಮ್ಮೆದಿರಿಗೂ ತಾಯಿಯನ್ನು ನಿಂದಿಸುತ್ತಾನೆ ಈ ಸೈತಾನ್"

ಎಂದು ಬೀಯಮ್ಮ ಮಗನ ತಲೆಯ ಮೇಲೆ ಮೃದುವಾಗಿ ಒಂದು ಪೆಟ್ಟು ಕೊಟ್ಟಳು.

ತಾಯಿ ಮಗನ ಸರಸ ಕಂಡು ಶ್ರೀನಿವಾಸನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಅವನ ಕಣ್ಣಿನಿಂದ ಒಂದೆರಡು ಬಿಂದುಗಳುದುರಿದವು. ಇಲಾಹಿ ಅದನ್ನು ಕಂಡು

"ಏಕೆ ಶ್ರೀನಿವಾಸ್ ! ಏನು ನೆನಪಾಯಿತು ?" ಎಂದು ಕೇಳಿದ.

"ಬೀಯಮ್ಮ ಅವರನ್ನು ನೋಡಿ ನನ್ನ ತಾಯಿಯು ನೆನಪಾಯಿತು. ನೀವು ಹೇಳಿದಂತೆ ಮಕ್ಕಳಿಗೆ ತೊಳಲುವುದೇ ತಾಯಂದಿರ ವಿಧಿ. ನನ್ನ ತಾಯಿಗೆ ಇಷ್ಟೂ ಸ್ವಾತಂತ್ರವಿಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ''

ಎಂದು ಹೇಳಿ ತನ್ನ ಮನೆಯ ಕತೆಯನ್ನು ವಿವರಿಸಿದ. ರಾಜಕಾರಣದ ವಿವಿಧಾಭಿಪ್ರಾಯಗಳು ತನಗೂ ತನ್ನ ತಂದೆಗೂ ಉಂಟುಮಾಡುತ್ತಿದ್ದ ಅಂತರವನ್ನು ಬಣ್ಣಿಸಿದ.

"ನೀವು ಬಹಳ ದೊಡ್ಡ ಸಮಸ್ಯೆಯುನ್ನೆದುರಿಸುತ್ತಿರುವಿರಿ" ಎಂದು ತುಕೋಜಿ ನುಡಿದ.

"ಸಮಸ್ಯೆಯ ಪರ್ಯವಸಾನ ಹೇಗಾಗುವುದೋ ಎಂದು ಚಿಂತೆ ಹತ್ತುತ್ತದೆ" ಎಂದು ಶ್ರೀನಿವಾಸ ಮರುನುಡಿದ.

ಬಸ್ ತಪ್ಪಿಹೋಗುವುದೆಂಬ ಆತುರ ಮೂಡಿತು. ಶ್ರೀನಿವಾಸ ಎದ್ದು ಹೊರಡಲನುವಾದ. ಬೀಯಮ್ಮ ಮತ್ತೆ ಉಪಚರಿಸಿ ·ಖಂಡಿತ ಊಟಕ್ಕೆ ಬನ್ನಿ' ಎಂದಳು. ಇಲಾಹಿ ಶ್ರೀನಿವಾಸನನ್ನಪ್ಪಿ

"ಈ ಪರಿಚಯ, ನಿಕಟಬಾಂಧವ್ಯವಾಗಲಿ" ಎಂದ.

ಶ್ರೀನಿವಾಸನ ಕಣ್ಣುಗಳೇ ಅವನ ಹೃದಯ್ಯದ ಕರೆಗೆ ಉತ್ತರವಿತ್ತವು.

## ೨೯

ಸುಭದ್ರೆಯ ಕಾರ್ಯರಂಗ ದಿನದಿನಕ್ಕೆ ವಿಸ್ತಾರವಾಗುತ್ತ ಬಂತು. 'ಮಿಲ್ಕ್ ಸೆಂಟರ್' ಹೊಣೆಗಾರಿಕೆಯೆಲ್ಲಾ ಅವಳ ಮೇಲೆ ಬಿತ್ತು. ಪಾರ್ಟಿಯ ರಾಜಕಾರಣ ಸಂಧಾನುಸಂಧಾನ, ಪ್ರಚಾರ ಕಾರ್ಯ ಅವಳ ವೇಳೆಯನ್ನೆಲ್ಲಾ ಕಬಳಿಸುತ್ತಿತ್ತು.

'ಮಹಿಳಾ ಮಂಡಳಿ'ಯ ಕೆಲವು ಪ್ರಧಾನ ಸದಸ್ಯರು, ಅಧ್ಯಕ್ಷೆ ವಿಶ್ವೇಶ್ವರಮ್ಮ ನಿಯೋಗ ಬಂದು ಸುಭದ್ರೆಯನ್ನು ಕಾರ್ಯದರ್ಶಿನಿ ಮಾಡುವುದರ ಬಗ್ಗೆ ಅವಳ ಒಪ್ಪಿಗೆ ಪಡೆದು ಹೋಗಿದ್ದರು.

ನೂರೆಂಟು ಕೆಲಸ ಕಾರ್ಯ, ಸಾರ್ವಜನಿಕ ಚಟುವಟಿಕೆಗಳಲ್ಲಿ ಮನೆಗೆಲಸವೆಲ್ಲಾ ಗುಂಡಮ್ಮನ ತಲೆಯ ಮೇಲೆ ಬಿತ್ತು. ರಂಗಣ್ಣ ಆಗಾಗ್ಗೆ ಗುಂಡಮ್ಮನಿಗೆ ನೆರವಾಗಿ ಆಕೆಯ ಗೊಣಗಾಟ ಕಡಿಮೆ ಮಾಡುತ್ತಿದ್ದ.

ರಂಗಣ್ಣನಿಗೆ ಬಿಸಿತುಪ್ಪ ಗಂಟಲಲ್ಲಿ ಕುಳಿತ ಹಾಗಾಗಿತ್ತು. ಮಂಕು ಕವಿದು ಅವನು ವಿಚಾರಶೂನ್ಯನಾಗಿದ್ದ. ಬೆಳಿಗ್ಗೆಯಿಂದ ಸಂಜೆಯವರೆಗೆ ಸುಭದ್ರೆಯನ್ನು ಹುಡುಕಿಕೊಂಡು ಬರುತ್ತಿದ್ದವರಿಗೆ ಉತ್ತರ ಹೇಳಿ ಹೇಳಿ

ಅವನಿಗೆ ಸಾಕಾಗಿ ಹೋಗುತ್ತಿತ್ತು. ಬಂದವರನೇಕರು ರಂಗಣ್ಣ ಮನೆಯ ಯಜಮಾನ ಎಂಬುದನ್ನು ಸಂಪೂರ್ಣವಾಗಿ ಮರೆಯುತ್ತಿದ್ದರು.

ಈ ವಿಷಯ ಕುರಿತು ಸುಭದ್ರೆಯೊಂದಿಗೆ ಮನಸ್ಸು ಬಿಚ್ಚಿ ಒಮ್ಮೆಯಾದರೂ ಮಾತನಾಡಬೇಕೆಂದು ಅನೇಕ ಪ್ರಯತ್ನ ಮಾಡಿದ್ದ. ಮಾತು ಬೆಳೆದು ಈ ವಿಷಯಕ್ಕೆ ಬರುವ ವೇಳೆಗೆ ಸುಭದ್ರೆ 'ನನಗೆ ತುಂಬ ಆಯಾಸವಾಗಿದೆ. ಬಿದ್ದುಕೊಂಡರೆ ಸಾಕು ಎನಿಸುತ್ತಿದೆ' ಎನ್ನುತ್ತಿದ್ದಳು. ಅವಳ ಸೋತು ಸೊರಗಿದ ಮುಖ ನೋಡಿ ರಂಗಣ್ಣ ತೆಪ್ಪಗಾಗುತ್ತಿದ್ದ.

ತಿಂಗಳ ಮೊದಲಿನಲ್ಲಿ ರಂಗಣ್ಣನೇ ಪೇಟೆಯ ಕಡೆ ಹೋಗಿ ವ್ಯಾಪಾರ ಮಾಡಿ ತಿಂಗಳ ಪೂರ್ತಿ ಆಗುವಷ್ಟು ಸಾಮಾನು ತಂದುಹಾಕುತ್ತಿದ್ದ. ಒಂದು ತಿಂಗಳು ಹದಿನೈದನೆಯ ತಾರೀಖಿನ ವೇಳೆಗೇ ಗುಂಡಮ್ಮ ಸಕ್ಕರೆ ಮುಗಿದಿದೆಯೆಂದು ರಂಗಣ್ಣನಿಗೆ ಬೆಲ್ಲದ ಕಾಫಿ ಮಾಡಿಕೊಟ್ಟಳು. ರಂಗಣ್ಣನಿಗೆ ಪರಮಾಶ್ಚರ್ಯವಾಯಿತು.

"ಇದೇನು ಗುಂಡಮ್ಮನವರೇ, ಇನ್ನೂ ಹದಿನೈದು ದಿನವಾಗಿಲ್ಲ. ಆಗಲೇ ಸಕ್ಕರೆ ಮುಗಿದುಹೋಯಿತೇ ?" ಎಂದು ಕೇಳಿದ.

"ಮುಗಿದುಹೋದರೆ ನಾನೇನು ಮಾಡಲಪ್ಪಾ. ನಾನೇನೂ ಕಾಫಿ ಕುಡಿಯಲ್ಲ, ಟೀ ಕುಡಿಯಲ್ಲ."

"ನೀವು ತಿಂದಿರಿ ಎಂದು ನಾನು ಹೇಳಲಿಲ್ಲ. ಅರ್ಧಮಣ ಸಕ್ಕರೆ ಎರಡು ವಾರದಲ್ಲಿ ಮುಗಿದರೆ ಯಾರು ಸಂಸಾರಮಾಡಿ ಪೂರೈಸುವುದಕ್ಕಾಗುತ್ತದೆ ಹೇಳಿ."

"ಅದಕ್ಕೆ ನಾನೇನು ಮಾಡಲಿ. ಊರಿನ ಬಳಗವೆಲ್ಲಾ ಈ ಮನೆಯಲ್ಲಿಯೇ ಇರಬೇಕು. ದಿನಕ್ಕೆ ಇಪ್ಪತ್ತು ಸಲ ಕಾಫಿಯಾಗಬೇಕು. ಯಜಮಾನಿತಿ ಬರುವಾಗಲೇ ಒಂದು ಹಿಂಡು ಬಳಗ ಕಟ್ಟಿಕೊಂಡು ಬರುತ್ತಾರೆ. ಈ ಕಾಫಿ ಕಾಸಿಕಾಸಿ ನನ್ನ ಕೈ ಬೆಂದುಹೋಗಿದೆ."

"ನೀವು ಹೀಗೆ ಮಾತನಾಡಬೇಡಿ ಗುಂಡಮ್ಮನವರೇ. ಅವಳ ರೀತಿ ನೀತಿ ನಿಮಗೆ ಸಂಬಂಧಪಟ್ಟ ವಿಷಯವಲ್ಲ."

"ಈ ಮನೆಯಲ್ಲಿ ಯಾರಿಗೂ ಯಾವ ವಿಷಯವೂ ಸಂಬಂಧಪಟ್ಟಿದಲ್ಲ."

."ಹೀಗೆ ನೀವು ಬಾಯಿ ಹರಿಬಿಟ್ಟು ಮಾತನಾಡುವ ಹಾಗಿದ್ದರೆ...."

"ಏನು ಹಾಗಿದ್ದರೆ.... ನನ್ನ ಹೋಗು ಎನ್ನುತ್ತೀರೇನು ?"

"ಅನ್ನಬೇಕಾಗಿ ಬರಬಹುದು."

"ನನಗೇನೂ ಇಲ್ಲೇ ಇದ್ದು ಈ ಪಡಿಪಾಟಲು ಅನುಭವಿಸಬೇಕಾದ್ದೇನೂ ಹಣೆಯಲ್ಲಿ ಬರೆದಿಲ್ಲ. ನರಸಮ್ಮನವರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಈ ಗಜಾಗುಂಡಲ ಸೇರಬೇಕಾಯಿತು. ನಾನು ಯಾವಾಗ ಬೇಕಾದರೂ ಹೋಗಲು ಸಿದ್ಧ."

ಗುಂಡಮ್ಮನ ಎದುರು ನಿಂತು ವಾದಮಾಡಿ ಪ್ರಯೋಜನವಿಲ್ಲವೆಂದು ರಂಗಣ್ಣನಿಗೆ ಚೆನ್ನಾಗಿ ಮನವರಿಕೆಯಾಯಿತು. ತಾನು ಗುಂಡಮ್ಮನನ್ನು ಹೊರಡಿಸಿದರೆ ಸುಭದ್ರೆ ಏನು ಹೇಳುವಳೋ ಎಂಬ ಭೀತಿ ಅವನನ್ನಾವರಿಸಿತು. ಗುಂಡಮ್ಮನನ್ನು ಸಮಾಧಾನಮಾಡುತ್ತಾ ಧ್ವನಿ ತಗ್ಗಿಸಿ

"ಇಷ್ಟು ದೂರ ಏಕೆ ಹೋಗುವಿರಿ ಗುಂಡಮ್ಮನವರೇ. ನೀವು ಹೊರಗಿನವರು ಎಂದು ನಾವು ಯಾವಾಗಲೂ ಭಾವಿಸಿಲ್ಲ. ನೀವು ನಮ್ಮ ಹಿತೈಷಿಗಳು ಎಂದೇ ಸದಾ ನನ್ನ ಭಾವನೆ. ಈ ಮನೆ ಕಷ್ಟ ಸುಖ ನನಗೆ ಹೇಗೆ ಸೇರಿದೆ, ಹಾಗೇ ನೀವುಗೂ ಸೇರಿಲ್ಲವೇ ?"

"ಸೇರಿರೋ ಹೊತ್ತಿಗೇ ನಾನು ಇಷ್ಟು ನಿಷ್ಟೆಯಿಂದ ಕಚ್ಚಿಕೊಂಡಿರುವುದು."

"ಹೋಗಲಿ ಬಿಡಿ. ನಾನು ನಿಮ್ಮ ಮನಸ್ಸು ನೋಯಿಸುವುದಕ್ಕೆ ಆ ಮಾತನಾಡಿಲಿಲ್ಲ. ಪೇಟೆಗೆ ಹೋಗಿ ಸಕ್ಕರೆ ತಂದುಕೊಡುತ್ತೇನೆ."

ಎಂದು ಹೇಳಿದ. ತನ್ನ ಸ್ಥಿತಿ ನೋಡಿ ರಂಗಣ್ಣನಿಗೆ ಹಿಡಿಸಲಾರದಷ್ಟು ದುಃಖವಾಯಿತು.

. ರಾತ್ರಿ ಎಂಟು ಗಂಟೆಗೆ ಸುಭದ್ರಾ ಮನೆಗೆ ಬಂದಳು. ಅವಳಿಗೆ ಎಂದಿನಂತೆ 'ಬಹಳ ಆಯಾಸ'ವಾಗಿತ್ತು. ಮುಖ ತೊಳೆದುಕೊಂಡು ಸೀರೆ ಕುಪ್ಪಸ ಬದಲಾಯಿಸಿ, ತಲೆ ಬಾಚಿಕೊಂಡು ಊಟ ಮುಗಿಸಿ ಬಂದು ತೊಟ್ಟಿಯಲ್ಲಿ ಕುಳಿತಳು. ರಂಗಣ್ಣ ಅವಳ ಮುಂದೆ ಅಡಿಕೆ ಶೀಷೆಯನ್ನಿಟ್ಟ. ಬಾಯಿಗೆ ನಾಲ್ಕು ಕಾಳು ಅಡಿಕೆ ಹಾಕಿಕೊಂಡು ರೇಡಿಯೋ ತಿರುಗಿಸಿದಳು. ರಂಗಣ್ಣ ಒಂದೆರಡು ಸಲ ಮಾತನಾಡಿಸಲು ಪ್ರಯತ್ನಿಸಿದ. 'ಶ್‌ಶ್' ಎಂದಳು. ಅವನು ಬಾಯಿ ಮುಚ್ಚಿಕೊಂಡು ಮೇಜಿನ ಮೇಲಿದ್ದ 'ಇಲ್ಲ

ಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯ ಹಳೆಯ ಸಂಚಿಕೆಯೊಂದರ ಚಿತ್ರಗಳನ್ನು ನೋಡತೊಡಗಿದ.

ಒಂಭತ್ತು ಗಂಟೆಗೆ ಸರಿಯಾಗಿ ರೇಡಿಯೋ ಬದಲಾಯಿಸಿದಳು. ಮುಂಬಯಿ ಸ್ಟೇಷನ್ನಿನಿಂದ ಹಾನಗಲ್ ಗಾಂಧಾರಿ ಹಾಡುತ್ತಿದ್ದಳು. ಮತ್ತೆ ಒಂದು ಸಲ ಅವಳನ್ನು ಮಾತನಾಡಿಸಲು ರಂಗಣ್ಣ ಪ್ರಯತ್ನಿಸಿದ. ಬೇಸರ ದಿಂದ ಸುಭದ್ರಾ 'ಶ್ ಶ್' ಎಂದಳು.

ಹತ್ತು ನಿಮಿಷ ಹಾಡು ಕೇಳಿದಳು. ಅದೂ ಬೇಸರವನ್ನುಂಟು ಮಾಡಿತು. ರೇಡಿಯೋ ನಿಲ್ಲಿಸಿ ರಂಗಣ್ಣನ ಕಡೆ ತಿರುಗಿ

"ರೇಡಿಯೋ ಕೇಳುವಾಗಲೂ ಒಂದೇ ಸಮನಾಗಿ ಗಲಭೆ ಮಾಡ ಬೇಕೇ?" ಎಂದಳು.

ತಪ್ಪಿತಸ್ಥನಂತೆ ರಂಗಣ್ಣ ಮಿಕಮಿಕನೆ ಕಣ್ಣು ಬಿಡುತ್ತಾ

"ಮಾತನಾಡಬೇಕಾಗಿತ್ತು ..."

"ಅರ್ಧ ಗಂಟೆಯಲ್ಲಿ ಪ್ರಾಣ ಹೋಗುತ್ತಿತ್ತೇನೋ? ಏನು ಹೇಳ ಬೇಕೆಂದಿದ್ದೀರಿ ಬೇಗ ಹೇಳಿಬಿಡಿ-ನನಗೆ ತುಂಬ ಆಯಾಸವಾಗಿದೆ-ಹೋಗಿ ಮಲಗುತ್ತೇನೆ."

"ಸುಭಾ.... " ಎಂದ.

ಸುಭದ್ರೆಯ ಮೈಮೇಲೆ ಮುಳ್ಳು ಮುರಿದಂತಾಯಿತು.

"ಏನು ಹೇಳಿ ಎಂದೆನಲ್ಲಾ."

"ಬೆಳಿಗ್ಗೆಯಿಂದ ಸಂಜೆಯವರೆಗೂ ನಿನಗೆ ಪುರಸತ್ತೇ ಆಗುವುದಿಲ್ಲ. ನಾನು ನಿನ್ನ ಜತೆ ಯಾವಾಗ ಮಾತನಾಡಬೇಕು?"

"ದಿನವೂ ಮಾತನಾಡಲೇ ಬೇಕಾದ ರಾಜಕಾರ್ಯ ಏನು ಅಂಥದು?"

"ನಾನು ನಿನಗೆ ಯಾವ ರೀತಿಯಲ್ಲಾದರೂ ಹಿಂಸೆ ಕೊಡುತ್ತಿರು ವೆನೇ?"

ಆ ಪ್ರಶ್ನೆ ಕೇಳಿ ಸುಭದ್ರೆಗೆ ನಗು ಬಂದಿತು. ಮುಖದಲ್ಲಿ ನಗೆ ತೋರದಂತೆ ಅಡಗಿಸಿಕೊಂಡು

"ಹಿಂಸೆ ಕೊಡುತ್ತಿರುವಿರೆಂದು ಯಾವಾಗಲಾದರೂ ನಾನು ಹೇಳಿ ದೆನೇ?"

"ನೀನು ಹೇಳಲಿಲ್ಲ. ನೀನೇಕೆ ನನ್ನ ಇಷ್ಟು ನಿಕೃಷ್ಟವಾಗಿ ಕಾಣು ತ್ತಿರುವೆ ?"

"ನೀವು ಆಡುವ ಮಾತೇ ನನಗರ್ಥವಾಗುವುದಿಲ್ಲ."

"ಗಂಡ ಎನಿಸಿಕೊಂಡ ಈ ಪ್ರಾಣಿಗೆ ಒಂದು ಒಳ್ಳೆಯ ಮಾತು ನಿರೀ ಕ್ಷಿಸುವ ಅಧಿಕಾರವೂ ಇಲ್ಲವೆ ?"

"ಕಪಟ ಭಕ್ತಿ, ಕಪಟ ವಿಶ್ವಾಸ ತೋರಿಸುವುದು ನನಗೆ ಸಾಧ್ಯವಿಲ್ಲ."

"ನಿನ್ನ ಭಕ್ತಿಯನ್ನು ನಾನು ಅಪೇಕ್ಷಿಸಲಿಲ್ಲ. ವಿಶ್ವಾಸವನ್ನು ಬಯಸು ವುದೂ ತಪ್ಪೇ ?"

"ಬಯಕೆ, ನಿರೀಕ್ಷೆಯಿಂದ ಯಾವುದೂ ಲಭಿಸುವುದಿಲ್ಲ. ಎಲ್ಲ ಸಹಜ ವಾಗಿ ಉತ್ಪನ್ನವಾಗಬೇಕು."

"ಹೆಂಡತಿಗೆ ಗಂಡನಲ್ಲಿ ವಿಶ್ವಾಸವುತ್ಪನ್ನವಾಗಬೇಕಾದುದು ಸಹಜ ತಾನೇ ?"

"ಹೌದು ! ಗಂಡ ಅದಕ್ಕೆ ಅರ್ಹನಾಗಿದ್ದರೆ...."

"ನಾನು ಅನರ್ಹನೇ ?"

"ಆ ಪ್ರಶ್ನೆ ಕೇಳಬೇಡಿ."

"ನಾನೇನು ತಪ್ಪು ಮಾಡಿರುವೆ ಅದನ್ನಾದರೂ ತಿಳಿಸು."

"ಏನೂ ಮಾಡಿಲ್ಲ."

"ಏನೂ ಮಾಡದಿದ್ದರೆ ನನ್ನನ್ನು ಕಸದಂತೆ ಏಕೆ ಕಾಣುವೆ-ನಿನ್ನ ಸ್ನೇಹಿತರು ಹಾಗೇಕೆ ನನ್ನ ಕಾಣುವರು-ಮನೆಯ ಅಡಿಗೆಯವಳಿಗೂ ನಾನು ತಾಳಿಕೆಯಿಲ್ಲವಲ್ಲಾ."

"ಗುಂಡಮ್ಮ ಏನು ಮಾಡಿದರು ?"

"ಸಕ್ಕರೆ ಮುಗಿದುಹೋಯಿತು ಎಂದರು. ಇಷ್ಟು ಬೇಗ ಹೇಗೆ ಮುಗಿಯಿತು ಎಂದೆ. ಅದೇ ನನ್ನ ಅಪರಾಧ. ಮನಸ್ಸು ಬಂದಂತೆ ಮಾತ ನಾಡಿದರು."

"ನಾನು ವಿಚಾರಿಸಿಕೊಳ್ಳುತ್ತೇನೆ."

"ಅಷ್ಟು ಸಾಲದು ಸುಭಾ-ನಾನು ಒಬ್ಬ ಮನಷ್ಯನೆಂದು ಭಾವಿಸಿ ಕನಿಕರ ತೋರು."

"ಎಲ್ಲಾ ತಿಳಿದೂ ನೀವು ಹೀಗೇಕೆ ಮಾತನಾಡುವಿರಿ. ವೃಥಾ ನನ್ನ ಭಾಯಿಂದ ನಿಷ್ಠೂರದ ಮಾತುಗಳನ್ನು ಹೊರಡಿಸುತ್ತಿರುವಿರಿ."

"ಚಿಂತೆಯಿಲ್ಲ. ಮನಸ್ಸಿನಲ್ಲಿರುವುದನ್ನು ಹೇಳಿಬಿಡು."

ಸುಭದ್ರೆ ಒಂದು ಕ್ಷಣ ಮೌನದಿಂದ ಗಂಭೀರವಾದಳು. ಅವಳ ಮುಖ ಗಂಟಿಕ್ಕಿತು. ಮನಸ್ಸು ಕಠೋರವಾಯಿತು, ರಂಗಣ್ಣನ ಕಡೆ ಒಮ್ಮೆ ದುರುಗುಟ್ಟಿಕೊಂಡು ನೋಡಿ

"ನಿಮಗೆ ನನ್ನ ಕೊಟ್ಟು ಮದುವೆ ಮಾಡಿದುದು ನನ್ನ ಮನಸ್ಸಿಗೆ ವಿರೋಧವಾಗಿ ಎಂಬುದನ್ನು ಬಲ್ಲಿರಷ್ಟೇ!"

"ನನ್ನ ಮದುವೆಯಾಗುವುದಕ್ಕೆ ನಿನಗೆ ಪೂರ್ಣ ಸಮಾಧಾನವಿರಲಿಲ್ಲ ವೆಂದು ಬಲ್ಲೆ."

"ಮನಸ್ಸಿಗೆ ವಿರೋಧವಾದ ಮದುವೆಯಲ್ಲಿ ಮಮತೆಯೆಲ್ಲಿಂದ ಬರ ಬೇಕು?"

"ನನ್ನ ಭಕ್ತಿ, ಸೇವೆ, ಪ್ರೇಮದಿಂದ ಮಮತೆಯನ್ನು ನಿನ್ನಲ್ಲಿ ಹುಟ್ಟಿಸ ಬಲ್ಲೆನೆಂಬ ಧೈರ್ಯ ನನಗಿತ್ತು."

"ಅದನ್ನು ಮರೆತುಬಿಡಿ. ಒಂದೇ ಮನೆಯಲ್ಲಿ ವಾಸಿಸುವ ಎರಡು ಕುಟುಂಬ ನಮ್ಮದೆಂದು ಭಾವಿಸಿಕೊಳ್ಳಿ. ಲೋಕದೆದುರು ನಾವು ಗಂಡ ಹೆಂಡಿರಂತೆ ಕಾಣುವ-ಆದರೆ ನಮ್ಮಲ್ಲಿ ಆ ಭಾವನೆ ಸಾಧ್ಯವಿಲ್ಲ"

ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟು ಹೋದಳು. ರಂಗಣ್ಣ ಮುಖ ಮುಚ್ಚಿಕೊಂಡ. ಅವನ ಹೃದಯ ಒಡೆದು ನೀರಾಗಿ ಹರಿಯಿತು.

## ೩೦

ಮುಂಬಯಿಯಲ್ಲಿ ಯಾವ ಸಾರ್ವಜನಿಕ ಚಟುವಟಿಕೆಗೂ ಕೈಹಾಕದೆ ತನ್ನ ವ್ಯಾಸಂಗವನ್ನು ಮುಂದುವರಿಸಬೇಕೆಂದು ಶ್ರೀನಿವಾಸನ ಉತ್ಕಟಾ ಕಾಂಕ್ಷೆಯಾಗಿತ್ತು. ವ್ಯಾಸಂಗವೆಂದು ಸುಮ್ಮನೆ ಪುಸ್ತಕ ಹಿಡಿದು ಕೂಡು ವುದಕ್ಕೂ ಮನಸ್ಸಿಲ್ಲ. ಮುಂಬಯಿಯ ವಿವಿಧ ಸಮಸ್ಯೆಗಳು, ಸಂಸ್ಥೆಗಳ ಪರಿಚಯ ಮಾಡಿಕೊಳ್ಳುತ್ತಿದ್ದ. ಆಗಾಗ್ಗೆ ಚೋಕ್ಸಿ, ಇಲಾಹಿಯವರ ಬಲ ವಂತಕ್ಕೆ ಕಟ್ಟು ಬಿದ್ದು ಭಾಷಣಗಳನ್ನೂ ಮಾಡಬೇಕಾಯಿತು. ಅವನ

ವಾಗ್ಮಿತೆಯ ಹೆಚ್ಚು ಪ್ರಯೋಜನ ಪಡೆಯಬೇಕೆಂದು ಇಲಾಹಿಯ ಅಸೆ. ಶ್ರೀನಿವಾಸ ಭಾಷಣಮಾಡಿ, ಹಾರ ಹಾಕಿಸಿಕೊಂಡು ಒಣ ಹೊಗಳಿಕೆಯ ಮಾತು ಕೇಳುವ ಚಾಪಲ್ಯಕ್ಕೆ ಬೀಳಲಿಲ್ಲ.

ಶ್ರೀನಿವಾಸ ಬಯಸುತ್ತಿದ್ದ ವಿರಾಮ, ವಿಶ್ರಾಂತಿ ಅವನಿಗೆ ದುರ್ಲಭ ವಾಗುತ್ತ ಬಂತು. ಕಾರ್ಮಿಕರ ಜಾಗೃತಿಯನ್ನು ಭಯ, ಸಂಶಯಗಳಿಂದ ಸದಾ ನೋಡುತ್ತಿದ್ದ ಮುಂಬಯಿ ಪೋಲೀಸ್ ಇಲಾಖೆಯ ಸಿ. ಐ. ಡಿ. ಖಾತೆಯವರು ಶ್ರೀನಿವಾಸನ ಬೆನ್ನುಗಾವಲಿಗೆ ನಿಂತರು. ಅವನು ಹೋದಲ್ಲಿ ಬಂದಲ್ಲಿ ಯಾರಾದರೂ ನೆರಳಿನಂತೆ ಹಿಂದೆಯೇ ಇರುತ್ತಿದ್ದರು. ಅವನು ಬಸ್ ಕಾಯುತ್ತ ನಿಂತರೆ ಯಾವನಾದರೂ ಬಂದು ಕೈಯಲ್ಲಿ ಸಿಗರೇಟ್ ಹಿಡಿದು, ಕಡ್ಡಿಪೆಟ್ಟಿಗೆ ಬೇಡುತ್ತಿದ್ದ. ಅವನು ಸಮುದ್ರ ತೀರದಲ್ಲಿ ಕುಳಿತರೆ ಯಾವನೋ ಬಂದು ಅವನ ಜತೆ ಮಾತು ಬೆಳೆಸಲೆತ್ನಿಸುತ್ತಿದ್ದ. ಅವನ ಚಾಲಿನ ಸುತ್ತ ಮುತ್ತ ಸಿ ಐ. ಡಿ ಗಳು ಓಡಿಯಾಡುತ್ತಿದ್ದರು.

ಇಲಾಹಿ, ತುಕೋಜಿ ಶ್ರೀನಿವಾಸನ ರೂಮಿಗೆ ಬಂದರಂತೂ ನಾಲ್ಕಾರು ಜನ ಗಸ್ತು ತಿರುಗುತ್ತಿದ್ದರು. ಶ್ರೀನಿವಾಸನಿಗೆ ಇದರ ಮರ್ಮ ಸ್ವಲ್ಪವೂ ಅರ್ಥವಾಗಲಿಲ್ಲ. ಒಂದು ದಿನ ಇಲಾಹಿಯೊಂದಿಗೆ ಪ್ರಸ್ತಾಪ ಮಾಡಿದ.

"ಇವರೇಕೆ ಕಾಮ್ರೇಡ್, ನನ್ನ ಹೀಗೆ ನೆರಳಿನಂತೆ ಹಿಂಬಾಲಿಸುತ್ತಾರೆ."

"ನೀವು ಬಹಳ ತುಂಟರೆಂದು ಅವರು ತಿಳಿದುಕೊಂಡಿದ್ದಾರೆ."

"ನಾನು ತುಂಟತನವೇನು ಮಾಡಿದೆ ?"

"ನಮ್ಮ ಸಹವಾಸ ಮಾಡಿರುವುದು"

"ನೀವು ಸರ್ಕಾರದ ಕಣ್ಣಲ್ಲಿ ಮಹಾಪರಾಧಿಗಳೇನು ?"

"ಖಂಡಿತವಾಗಿ. ಮೊದಲನೆಯದಾಗಿ ನಾವು ಬಡವರು ; ಎರಡನೆಯ ದಾಗಿ ನಾವು ಕಾರ್ಮಿಕರು ; ಮೂರನೆಯದಾಗಿ ಕಾರ್ಮಿಕರ ಹಿತಸಾಧಕರು. ಇವು ಮೂರು ಮಹಾಪರಾಧಗಳಲ್ಲವೇ ?"

ಕಾರ್ಮಿಕ ವರ್ಗದಲ್ಲಿರುವ ಅಸಹನೆ, ಅಸಂತೋಷ ನಿವಾರಿಸದೆ ನಮ್ಮನ್ನು ಹಿಂಬಾಲಿಸಿದರೆ ಸರ್ಕಾರಕ್ಕೆ ಬರುವ ಲಾಭವೇನು? ನಮ್ಮನ್ನು ... ನಾಲ್ವರನ್ನು ಸರ್ಕಾರ ತುಳಿಯಬಹುದು ಆದರೆ ಇಡೀಕಾರ್ಮಿಕ ವರ್ಗವನ್ನೇ ತುಳಿಯಲು ಸಾಧ್ಯವೇ ?"

"ನೋಡಿ ಶ್ರೀನಿವಾಸ್- ಜಗತ್ತಿನ ಎಲ್ಲಕಡೆಯಲ್ಲಿಯೂ ಒಂದು ಗುಪ್ತಸಮರ ನಡೆಯುತ್ತಿದೆ. ಅದು ಯಾವಾಗ ಸ್ಫೋಟನವಾಗುವುದೋ ಹೇಳಲಾರೆ. ಹಿಂದೆ ಫ್ರಾನ್ಸಿಗೆ ಬಂದ ಪಾಡೇ ಇಂದು ರಷ್ಯಾಗೆ ಬಂದಿತ್ತು, ಇಂದು ರಷ್ಯಾಗೆ ಬಂದಿರುವ ಪಾಡು ನಾಳೆ ಹಿಂದುಸ್ಥಾನಕ್ಕೆ ಬರಬಹುದು. ಈ ಸಮರದಲ್ಲಿ ಸರ್ಕಾರ, ಬಂಡವಾಳ ವರ್ಗ, ಮಿತವಾದಿಗಳಾದ ರಾಜಕಾರಣಿಗಳು ಒಂದು ಪಕ್ಷ. ಕಾರ್ಮಿಕರಲ್ಲಿ ಎಲ್ಲಿ ಜಾಗೃತಿಯುಂಟಾಗಿ ತಮ್ಮ ಸುಲಿಗೆ ಸೇವೆ ತಪ್ಪುವುದೋ ಎಂಬ ಭಯ ಇವರನ್ನಾವರಿಸಿದೆ. ಇವರ ಕೈಯಲ್ಲಿ ಅಧಿಕಾರವಿದೆ, ಹಣವಿದೆ, ಮದ್ದುಗುಂಡಿದೆ. ಇನ್ನೊಂದು ಪಕ್ಷ ಕಾರ್ಮಿಕರದು. ಇವರಲ್ಲಿ ಅಜೇಯ ಶಕ್ತಿಯಿದೆ. ಅಮಾನುಷ ಸಮುಷ್ಟಿ ಶಕ್ತಿಯಿದೆ. ಕಾರ್ಮಿಕರ ಬೇಡಿಕೆಗಳು ನ್ಯಾಯವಾದುದು. ಸತ್ಯವಿದ್ದ ಕಡೆ ಜಯವಿರಲೇ ಬೇಕು. ಆದರೆ ಕಾರ್ಮಿಕರಲ್ಲಿ ಐಕ್ಯತೆಯಿಲ್ಲ. ಸಂಘಟನೆಯಿಲ್ಲ. ಜತೆಗೆ ಚೋಕ್ಸಿಯವರಂಥ ನಾಯಕರ ಕಾಟ. ಕಾರ್ಮಿಕ ನಾಯಕರೇ ಅವರನ್ನು ಯಾವಾಗ ಬಲಿಗೊಟ್ಟು ಬಿಡುತ್ತಾರೋ ಎಂಬ ನಿರಂತರ ಭಯ"

ಶ್ರೀನಿವಾಸ ಲೋಕನಾಥನ್ ಪ್ರಕರಣ ವಿವರಿಸಿ ಇಲಾಹಿಯ ಅನುಮಾನವನ್ನು ಸಮರ್ಥಿಸಿದ.

"ಹಾಗಾದರೆ ಈ ಪ್ರಶ್ನೆಯ ಮುಕ್ತಾಯವೆಂದಿಗೆ ಇಲಾಹಿಭಾಯ್"

"ಶ್ರಮಜೀವಿಗಳ ಕೈಗೇ ಸರ್ವಾಧಿಕಾರ ಬಂದಾಗ."

"ಸರ್ವಾಧಿಕಾರ ಪಡೆದ ಶ್ರಮಜೀವಿ, ಶ್ರಮಜೀವಿಯಾಗಿಯೇ ಉಳಿಯುತ್ತಾನೆಯೇ ?"

"ಏಕೆ ಉಳಿಯಬಾರದು ?"

"ನಾನು ನಿಮ್ಮಂಥ ನಾಲ್ಕು ಜನ ಅಪರೂಪ ವ್ಯಕ್ತಿಗಳ ಬಗ್ಗೆ ವಿಚಾರ ಮಾಡುತ್ತಿಲ್ಲ ಇಲಾಹಿ. ಆಯಾಸವಿಲ್ಲದೆ ಆನಂದಪಡುವ ಅನುಕೂಲ ದೊರೆತ ಮೇಲೆ ಶ್ರಮಜೀವಿಯ ಸಹಾನುಭೂತಿ ಶ್ರಮಜೀವಿಗಳ ವರ್ಗದ ಕಡೆಗಿರುವುದಿಲ್ಲ. ನೆಪೋಲಿಯನ್ ದೃಷ್ಟಾಂತ ತೆಗೆದುಕೊಳ್ಳಿ. ಅಧಿಕಾರ ಕೈಸೇರುವವರೆಗೆ 'ಲಿಟಲ್ ಕಾರ್ಪೊರಲ್' ಆಗಿದ್ದವನು, ಅಧಿಕಾರ ಕೈಸೇರಿದೊಡನೆಯೇ ಚಕ್ರವರ್ತಿಯಾದ. ತನ್ನ ಮನೆ ಮಂದಿಗೆಲ್ಲಾ ರಾಜ

ಮನೆತನದವರ ರಕ್ತಸಂಬಂಧ ಬೆಳೆಸಲು ಹವಣಿಸಿದ. ಇದು ಮಾನವ ಸ್ವಭಾವ."

"ಅದು ಏಕನಾಯಕ ಸರ್ವಾಧಿಕಾರದ ಮಾತಾಯಿತು. ನಾನು ಹೇಳುತ್ತಿರುವುದು ಬೇರೆ. ನಾಳೆ ಶ್ರಮಜೀವಿಗಳ ವರ್ಗಕ್ಕೆ ಸರ್ವಾಧಿಕಾರ ಬಂದರೆ ಸರ್ವಾಧಿಕಾರ ಉಳಿಯುವುದು ವ್ಯಕ್ತಿಯ ಕೈಯಲ್ಲಿಲ್ಲ, ತತ್ತ್ವದ ಕೈಯಲ್ಲಿ. ಆ ತತ್ತ್ವವನ್ನು ಪರಿಪಾಲಿಸದಿರುವ ವ್ಯಕ್ತಿ ತನ್ನ ಸ್ಥಾನ ಕಳೆದು ಕೊಳ್ಳುತ್ತಾನೆ."

"ಇಂದು ಮಾರ್ಕ್ಸ್-ಲೆನಿನ್ನರ ತತ್ತ್ವಗಳನ್ನು ಸ್ಟಾಲಿನ್ ಪಾಲಿಸುತ್ತಿದ್ದಾನೆಯೇ? ಸ್ಟಾಲಿನ್ ಏಕೆ ಸರ್ವಾಧಿಕಾರ ಕಳೆದುಕೊಂಡಿಲ್ಲ."

"ರಷ್ಯಾ ಒಂದು ಕತ್ತಲು ಗುಹೆ. ಅಲ್ಲಿ ಏನಾಗುತ್ತಿದೆಯೆಂದು ಹೇಳಲಿಕ್ಕೆ ಬರುವಂತಿಲ್ಲ. ನೀವು ಹೇಳುವುದು ನಿಜವಾದರೆ ಅದು ಶೋಚನೀಯವಾದುದೇ ಸರಿ."

"ಪರಿಹಾರ ನೀವು ಹೇಳಲೇ ಇಲ್ಲವಲ್ಲಾ "

"ನನಗೆ ತೋರುವ ಪರಿಹಾರವಿಷ್ಟೇ ಶ್ರೀನಿವಾಸ್. ಶ್ರಮಜೀವಿಗಳಲ್ಲಿ ಹತ್ತು ಜನನಾದರೂ ತ್ಯಾಗಿಗಳೂ, ಕರ್ಮಯೋಗಿಗಳೂ ಇರುವವರೆಗೆ ಅವರ ಹಿತಕ್ಕೆ ಧಕ್ಕೆ ತಗಲುವುದಿಲ್ಲ. ಶ್ರಮಜೀವಿಗಳನ್ನೇ ಉಪಯೋಗಿಸಿಕೊಂಡು ಒಬ್ಬ ವ್ಯಕ್ತಿ, ಒಂದು ಸಂಸ್ಥೆ, ಒಂದು ಪಕ್ಷ ಕೆಲಕಾಲ ಸರ್ವಾಧಿಕಾರ ನಡೆಸಬಹುದು. ಆದರಮೂ ರಕ್ತದ ಹೊಳೆಗೆ ಕಾಲುವೆ ತೋಡಿದಂತೆ. ಇಂಥ ದುರ್ಘಟನೆಯನ್ನು ತಡೆಗಟ್ಟುವ ವಿಧಾಯಕ ವ್ಯವಸ್ಥೆಯಾಗಬೇಕು. ಅದನ್ನು ಯಾರೂ ಮಾಡಲು ಸಾಧ್ಯವಿಲ್ಲ. ಲೋಕವೇ ಅಂಥ ವ್ಯವಸ್ಥೆಯ ಕಡೆ ಬೆಳೆದು ಬರಬೇಕು. ಗಾಂಧೀಜಿ ಹೇಳುವಂತೆ ಪರರ ರಕ್ತ ಹೀರಿ ಬಾಳುವುದು ಮನುಷ್ಯತ್ವದ ಲಕ್ಷಣವಲ್ಲವೆಂಬ ವಿಚಾರ ಎಲ್ಲರ ಮನದಲ್ಲಿಯೂ ಮೂಡಬೇಕು."

"ಅಂದಿನವರೆಗೂ ಕಲಹ ಅನಿವಾರ್ಯ."

"ಅನಿವಾರ್ಯವೆಂದೇ ಹೇಳಬೇಕು."

ಶ್ರೀನಿವಾಸನಿಗೆ ಸಮಾಧಾನವಾಗಲಿಲ್ಲ.

ಆದರೆ ಇಲಾಹಿ ಹೇಳಿದ ವಿಚಾರದ ಮುಂದೆ ಬುದ್ಧಿ ಚಾಚುವುದು ಸಾಧ್ಯವೂ ಆಗಲಿಲ್ಲ.

# ೩೧

ಸೂರಪ್ಪನವರು, ಸುಭದ್ರೆಯ ಸಾರ್ವಜನಿಕ ಜೀವನ ಹಾಸುಹೊಕ್ಕಾಗಿ ಹೊಂದಿಕೊಂಡವು. ಅವರು ಅಧ್ಯಕ್ಷರಾಗಿದ್ದ ಸಂಸ್ಥೆಗಳಲ್ಲಿ ಸುಭದ್ರೆ ಕಾರ್ಯಕಾರಿ ಮಂಡಳಿಯ ಸದಸ್ಯೆಯೋ, ಖಜಾಂಚಿಯೋ ಆಗಿರುತ್ತಿದ್ದಳು. ಅನೇಕ ಸಂಸ್ಥೆಗಳ ಕೆಲಸಕಾರ್ಯಗಳು ಅವರು ಪರಸ್ಪರ ಸಂಧಿಸಲು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಟ್ಟವು.

ಸುಭದ್ರೆಗೆ ಸ್ವಲ್ಪವೂ ಬಿಡುವಿಲ್ಲ ಉತ್ಸಾಹದೊಂದಿಗೆ ದುಡಿಮೆಯ ಆಸೆಯೂ ಅವಳಲ್ಲಿತ್ತು. ತಾಸಿದ್ದ ಸಂಸ್ಥೆಗಳ ಕೆಲಸಕಾರ್ಯಗಳನ್ನು ದಕ್ಷತೆಯಿಂದ, ಅಚ್ಚುಕಟ್ಟುತನದಿಂದ ನಿರ್ವಹಿಸುತ್ತಿದ್ದಳು. ಅನೇಕ ಸಂಸ್ಥೆಗಳ ಅಧಿಕಾರಿಗಳು ಅವಳು ಒಂದು 'ನಿಧಿ' (asset) ಎಂದು ಭಾವಿಸುತ್ತಿದ್ದರು.

ತನ್ನ ಮನದಲ್ಲಿ ಮೂಡಿದ್ದ ಕೊರಗನ್ನು ಮರೆಯಲು ಸಾರ್ವಜನಿಕ ಕೆಲಸದ ನೆರವು ಬೇಕಾಗಿತ್ತು. ಪರರ ಕಷ್ಟಗಳನ್ನು ನಿವಾರಿಸುವ ಬದುಕಿನಲ್ಲಿ ಅವಳಿಗೆ ವೈಯಕ್ತಿಕ ಕಷ್ಟ ಮರೆತು ಹೋಗಬೇಕಾಗಿತ್ತು.

ಆದರೆ ಸುಭದ್ರೆಯದು ಹೆಣ್ಣುಜೀವ. ಅಂದೆನೋ ಗಂಡನೊಂದಿಗೆ ವಾದಮಾಡಿ ಗೆದ್ದಿದ್ದಳು. ಅವಳ ಮನಸ್ಸು ಹೇಳುತ್ತಿತ್ತು 'ಇದೆಂಥ ಗೆಲುವು' ಎಂದು. ರಂಗಣ್ಣನ ಗುಣದೋಷಗಳ ಒಂದು ಪಟ್ಟಿ ಮಾಡಿದಳು ಮನಸ್ಸಿನಲ್ಲಿಯೇ. ದೋಷ ಯಾವುದೆಂದು ತಿಳಿಯಲಿಲ್ಲ. ತನ್ನನ್ನು ಮದುವೆಯಾದುದೇ ದೋಷ–ಮಹಾಪರಾಧ. ಇದನ್ನುಳಿದು ಅವನು ಯಾವ ಅಪರಾಧವನ್ನೂ ಮಾಡಿದಂತೆ ಸುಭದ್ರೆಗೆ ಕಂಡುಬರಲಿಲ್ಲ.

ನಿರಪರಾಧಿಯನ್ನು ನೋಯಿಸುವುದೇಕೆ? ತಪ್ಪು ಮಾಡದವನಿಗೆ ಶಿಕ್ಷೆ ವಿಧಿಸುವುದೇಕೆ? ತ್ರಿಕರಣಪೂರ್ವಕವಾಗಿ ತನ್ನ ಆರಾಧಿಸುವ ಭಕ್ತನನ್ನು ನಿರಾಕರಿಸುವುದೇಕೆ ಎಂದು ಪ್ರಶ್ನೆ ಕೇಳಿಕೊಂಡಳು. ಅದಕ್ಕೆ ಉತ್ತರ ದೊರೆಯಲಿಲ್ಲ. ಮನದ ದುಃಖ ಮತ್ತಷ್ಟು ಮುರುಕಳಿಸುತ್ತಿತ್ತೇ ವಿನಾ ಶಾಂತಿ ಅದರ ಬಳಿ ಸುಳಿಯಲಿಲ್ಲ.

ಸೂರಪ್ಪನವರೊಂದು ದಿನ ಸುಭದ್ರೆಯೊಂದಿಗೆ ಮಾತನಾಡುತ್ತ ಕುಳಿತಿದ್ದರು. ಮಾತು ಸ್ವಲ್ಪ ಬಲಿದ ಮೇಲೆ ಸುಭದ್ರೆ

"ನನಗೆ 'ಸ್ತ್ರೀಯರ ಸಮಸ್ಯೆ'ಗಳ ಮೇಲೆ ಕೆಲವು ಪುಸ್ತಕಗಳು ಬೇಕಾಗಿದ್ದವು. ಇಲ್ಲಿ ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ" ಎಂದಳು.

"ಹಿಗಿನ್ ಬೋಥಾಮ್ಸ್ ನೋಡಿದರೆ ಸಿಕ್ಕಬಹುದು."

"ಅಲ್ಲಿಯೂ ನೋಡಿದೆ, ಸಿಕ್ಕಲಿಲ್ಲ. ಮುಂಬಯಿಗೇ ಬರೆಯಬೇಕೆಂದು ಅವರು ತಿಳಿಸಿದರು."

"ಮುಂಬಯಿಗೆ ತಾರಪೋರವಾಲಾಗೆ ಒಂದು ಪತ್ರ ಬರೆದರಾಯಿತು."

"ಅವರು ಹುಡುಕಿ, ಪಟ್ಟಿ ಸಂಗ್ರಹಮಾಡಿ ಕಳಿಸಿಕೊಡುತ್ತಾರೆಯೆ? ನಮ್ಮವರು ಯಾರಾದರೂ ಅಲ್ಲಿದ್ದರೆ ಈ ಕೆಲಸ ಮಾಡಿ ಕಳಿಸಬಹುದು."

"ಅದಕ್ಕೇನು ಯೋಚನೆ. ಶ್ರೀನಿವಾಸ ಇಲ್ಲವೇ?"

"ಹೂ! ಮರೆತಿದ್ದೆ. ಅವರು ಹೇಗಿದ್ದಾರೆ? ಈಚೆಗೆ ಕಾಗದ ಬಂತೇ?"

"ಬಂತು—ಚೆನ್ನಾಗಿದ್ದಾನಂತೆ. ನಿನ್ನ ಪುಸ್ತಕದ ಪಟ್ಟಿ ಕಳಿಸಿ ನೀನೇ ಅವನಿಗೆ ಬರೆ"

"ನಾನೇಕೆ ಬರೆಯಲಿ—ನೀವು ಬರೆದರೆ ಸಾಕು."

"ಅಯ್ಯೋ ಹುಚ್ಚೀ! ನೀನೂ ಅವನೂ ಜತೆಯಲ್ಲಿ ಓದಿದವರು, ಇಷ್ಟು ಸಂಕೋಚವೇಕೆ. ಬರೆ."

ಎಂದು ಒಂದು ಕಾಗದದ ಮೇಲೆ ಶ್ರೀನಿವಾಸನ ವಿಳಾಸ ಗುರುತು ಹಾಕಿಕೊಟ್ಟರು.

ಸೂರಪ್ಪನವರು ಎದ್ದು ಹೋದ ಮೇಲೆ ತನ್ನ ಚಾಕ್ಸ್ಮಗೆ ತಾನೇ ತಲೆ ದೂಗಿದಳು. ವಿಳಾಸದ ಚೀಟಿಯನ್ನು ಹಲವು ಸಾರಿ ಓದಿದಳು. ಕಾಗದದ ಆ ಒಂದು ತುಂಡು ಅವಳಿಗೇನೋ ಆನಂದವನ್ನಿತ್ತಿತ್ತು. ಆ ಆನಂದದ ಭರದಲ್ಲಿ ಸೂರಪ್ಪನವರು, ಮನೆ, ತಾಯಿತಂದೆ, ರಂಗಣ್ಣ ಎಲ್ಲರನ್ನೂ ಮರೆತುಬಿಟ್ಟಳು.

ರಂಗಣ್ಣನಿಗೆ ಮಾತ್ರ ಮರೆಯಲು ಸಾಧ್ಯವಾಗಲಿಲ್ಲ. ಸುಭದ್ರೆ ಆಡಿದ ಸ್ಪಷ್ಟ ಮಾತುಗಳನ್ನು ಕೇಳಿ ಅವನ ಮನಸ್ಸು ಅಪಾರ ದುಃಖದಲ್ಲಿ ಮುಳುಗಿತು. ಸಮಾಧಾನ ಹೇಳುವುದಕ್ಕೆ ಹೊಂಬಾಳಯ್ಯನೂ ಇರಲಿಲ್ಲ. ಆದರೆ ತನ್ನ ದುಃಖವನ್ನು ಯಾರ ಮುಂದೆಯಾದರೂ ತೋಡಿಕೊಳ್ಳದಿದ್ದರೆ ಅವನ ಹೃದಯದ ಕಟ್ಟೆ ಒಡೆದು ಹೋಗುವಂತಾಯಿತು. ಗುಂಡಮ್ಮನ ಕೈಯಲ್ಲಿ ಕಾವೇರಮ್ಮನಿಗೆ ಹೇಳಿಕಳಿಸಿದ.

ಕಾ

ಕಾವೇರಮ್ಮ ಆಶ್ಚರ್ಯಪಟ್ಟುಕೊಂಡೇ ಬಂದಳು. ವಾವೆಯಲ್ಲಿ ಅವಳು ರಂಗಣ್ಣನಿಗೆ ದೂರದ ಅತ್ತೆಯಾದುದರಿಂದ ಬೇಕಾದಷ್ಟು ಸಲಿಗೆ ಯಿತ್ತು.

"ಏನು ಮಗೂ-ರಂಗಾ, ಹೇಳಿ ಕಳಿಸಿದ್ದೆಯಲ್ಲಾ."

"ಕುಳಿತುಕೊಳ್ಳಿ ಬನ್ನಿ ಅತ್ತೆ-ನಿಮ್ಮಲ್ಲಿ ಮಾತನಾಡಬೇಕಾದ ಒಂದೆರಡು ಮುಖ್ಯ ವಿಷಯಗಳಿವೆ."

"ಏನಪ್ಪಾ ಅಂಥ ವಿಷಯ !"

ರಂಗಣ್ಣ ಸಾದ್ಯಂತವಾಗಿ ತನಗೂ ಸುಭದ್ರೆಗೂ ಆದ ವಾದವನ್ನು ವಿವರಿಸಿದ. ಗುಂಡಮ್ಮನ 'ಸಕ್ಕರೆಯ ಪ್ರಕರಣ'ವೇ ಇದಕ್ಕೆ ಕಾರಣವಾದುದನ್ನೂ ತಿಳಿಸಿದ.

"ಗುಂಡಮ್ಮನಿಗೆ ಸುಭದ್ರೆ ಏನು ಹೇಳಿದಳು."

"ಒಂದು ಮಾತೂ ಆಡಲಿಲ್ಲ ಅತ್ತೆ. ಹೆಸರಿಗೆ ನಾನು ಮನೆಯ ಯಜಮಾನ. ಮನೆ ಅಡಿಗೆಯವಳು ಕೂಡ ನನ್ನ ಲಕ್ಷಿಸುವ ಹಾಗಿಲ್ಲ."

"ನೀನೊಬ್ಬ ಮುಠ್ಠಾಳ."

"ಏಕೆ ಅತ್ತೆ ಹಾಗೆನ್ನುವಿರಿ. ನಾನೇನು ಮಾಡಬೇಕಾಗಿತ್ತು."

"ಒಂದು ದೊಣ್ಣೆ ತೆಗೆದುಕೊಂಡು ಗುಂಡಮ್ಮನ ಸೊಂಟ, ಸುಭದ್ರೆಯ ಕಾಲು ಮುರಿಯಬೇಕಾಗಿತ್ತು. ತಿರುಗುಗಾಲಿನ ಹೆಣ್ಣು-ಅದಕ್ಕೇನು ಮನೆ, ಮಠ, ಸಂಸಾರ, ಗಂಡ ಅನ್ನೊ ವ್ಯಾಂಛಲ್ಯ ಇದೆಯೇ ?"

"ನಿಮ್ಮ ಮಾತು ಮೀರಲಾರದೆ ನಾನು ಮದುವೆಯಾದೆ !"

"ಇಲ್ಲದ್ದೇಕೆ ಹೇಳುವೆ. ಸುಭದ್ರೆಯನ್ನೇ ಮದುವೆಯಾಗಬೇಕೆಂದು ನೀನು ಗೋಗರೆದುದು ಮರೆತುಹೋಯಿತೇ ?"

"ನಿಜ ಅತ್ತೇ, ಆದರೆ ಪರಿಣಾಮ ಹೀಗಾಗುವುದೆಂದು ನಾನು ನಿರೀಕ್ಷಿಸಿರಲಿಲ್ಲ."

"ನನ್ನೇನು ಮಾಡೂಂತಿ. ಗಂಡಹೆಂಡಿರ ಜಗಳದಲ್ಲಿ ಮೂರನೆಯವರು ಬಾಯಿ ಹಾಕಿದರೆ ಇನ್ನಷ್ಟು ಹದಗೆಡುತ್ತದೆ."

"ನಿಮ್ಮನ್ನು ಕಂಡರೆ ಅವಳಿಗೆ ಗೌರವವಿದೆ. ನಿಮ್ಮ ಮಾತಿಗೆ ಸ್ವಲ್ಪವಾದರೂ ಕಿವಿಗೊಡಬಹುದು."

"ಆಗಲಿ. ಪ್ರಯತ್ನಿಸಿ ನೋಡುತ್ತೇನೆ. ಎಲ್ಲಾ ಭಾರ ನನ್ನ ತಲೇ ಮೇಲೆ ಹಾಕಿ ಸುಮ್ಮನೆ ಕೂಡಬೇಡ. ನಿನ್ನ ಹೆಂಡತಿಯನ್ನು ತಿದ್ದಿಕೊಂಡು ಸರಿಯಾಗಿಟ್ಟುಕೊಳ್ಳೋ ರೀತಿ ನೀನೂ ಯೋಚಿಸು."

"ಯೋಚಿಸದಿರುತ್ತೇನೆಯೇ ಅತ್ತೇ."

"ನೀನು ಯೋಚಿಸಿದ್ದರೆ ಇಷ್ಟೇಕೆ ಆಗುತ್ತಿತ್ತು. ಎಲ್ಲಾ ಪ್ರಾರಬ್ಧ ಕರ್ಮ."

ಎಂದುಕೊಂಡು ಕಾವೇರಮ್ಮ ಹರಿಕಥೆ ಕೇಳುವುದಕ್ಕೆ ಹೋದಳು.

## ೩೨

ಇಲಾಹಿಯು ಸಿರೀಕ್ಷಣೆ ಮಾಡಿಕೊಂಡು ಶ್ರೀನಿವಾಸ ರೂಮಿನಲ್ಲಿ ಸ್ಟೌವ್ ಹೊತ್ತಿಸುತ್ತಿದ್ದ. ಇಲಾಹಿಗೆ ತಾನೇ ಚಹಾ ಮಾಡಿಕೊಟ್ಟ ಹೊರತೂ ಶ್ರೀನಿವಾಸನಿಗೆ ಸಮಾಧಾನವಿಲ್ಲ. ಅಂಚೆಯಾಳು ಬಂದು ಕೂಗಿ ಶ್ರೀನಿವಾಸನ ಕೈಗೊಂದು ರಿಜಿಸ್ಟರ್ ಕಾಗದವಿಟ್ಟು ರಶೀತಿಗೆ ಸಹಿಪಡೆದು ಹೋದ.

ಕಾಗದ ಒಡೆದು ಶ್ರೀನಿವಾಸ ಒಂದೆರಡು ಸಲ ಓದಿಕೊಂಡ. ಆದರ ಅರ್ಥ-ಧಾಟಿ ಅವನಿಗೆ ಪೂರ್ತಿ ಅರಿವಾಗಲಿಲ್ಲ. ಮತ್ತೆ ಗಟ್ಟಿಯಾಗಿ ಓದಿದ

"ಪ್ರಿಯತಮಾ,

"ನನ್ನ ಕಾಗದ ಕೈಯಲ್ಲಿ ಹಿಡಿದ ಕೂಡಲೆ ನಿಮ್ಮ ಮನಸ್ಸಿನಲ್ಲಿ ಏಳುವ ಭಾವನಾತರಂಗವನ್ನು ಚಿತ್ರಿಸಿಕೊಳ್ಳಬಲ್ಲೆ. ಇವಳೇಕೆ ಬರೆದಳು–ಇವಳಿಗೆ ನನ್ನ ವಿಳಾಸ ಹೇಗೆ ಸಿಕ್ಕಿತು ಎಂದು ನೀವು ಆಶ್ಚರ್ಯಪಡಬಹುದು. ನಿಮ್ಮ ತಂದೆಯವರಿಂದಲೇ ನಿಮ್ಮ ವಿಳಾಸ ದೊರಕಿಸಿಕೊಂಡೆ. ನೀವು ಮುಂಬಯಿಗೆ ಹೋಗಿ ಆರೆಂಟು ತಿಂಗಳಾದವು. ಈ ಅವಧಿಯಲ್ಲಿ ನಿಮ್ಮ ಪತ್ರದ ಹಾದಿ ನೋಡಿ ನೋಡಿ ಬೇಸತ್ತೆ. ನಿರಾಶೆ ಕವಿಯುತ್ತ ಬಂತು. ನನ್ನ ಸ್ವಾಭಿಮಾನವನ್ನು ನುಂಗಿಕೊಂಡು, ನಿಮ್ಮ ವಿಳಾಸ ದೊರಕಿಸಿ ಈ ಪತ್ರ ಬರೆಯುವ ಸಾಹಸ ಮಾಡುತ್ತಿದ್ದೇನೆ."

"ನಾನು ಬರೆಯುವುದು ಎಷ್ಟರ ಮಟ್ಟಿಗೆ ನಿಮ್ಮ ಮನಸ್ಸಿಗೆ ಹತ್ತುವುದೋ ನಾನು ಕಾಣೆ. ದೇವರಲ್ಲಿ ವರ ಬೇಡುವ ಹಕ್ಕು ಭಕ್ತನದು. ಅದನ್ನು ದೇವರೂ ಕಸಿದುಕೊಳ್ಳಲಾರ.

"ನಾವಿಬ್ಬರೂ ಎರಡು ವರ್ಷಕಾಲ ಕಾಲೇಜಿನಲ್ಲಿ ಕಳೆದೆವು. ಈ ಕಾಲದಲ್ಲಿ ನಮ್ಮ ಸಂಬಂಧ ಹೆಚ್ಚು ನಿಕಟವಾಗಬೇಕಾಗಿತ್ತು. ಅದು ನಿಕಟವಾಗದಿದ್ದರೆ ತಪ್ಪು ನನ್ನದಲ್ಲ. ನಾನು ಒಂದಲ್ಲ ನೂರು ಪ್ರಯತ್ನಮಾಡಿದೆ. ನೀವು ಮುಂಬಯಿಗೆ ಹೋಗುವ ಮುನ್ನ ನಿಮ್ಮನ್ನು ಕಂಡು ನನ್ನ ಹೃದಯ ತೋಡಿಕೊಂಡೆ. ಹಿರಿಯರಂತೆ ಉಪದೇಶಮಾಡಿ ಹೋದಿರಿ-ಆಶೀರ್ವಾದ ಮಾಡಿ ಹೋದಿರಿ-ಮುಂಬಯಿಗೆ ಹೋದಮೇಲೆ ನನ್ನ ಸಂಪೂರ್ಣವಾಗಿ ಮರೆತುಬಿಟ್ಟರಿ. ನನಗೆ ನಿಮ್ಮ ಉಪದೇಶ-ಆಶೀರ್ವಾದ ಬೇಕಿಲ್ಲ. ನನಗೇನು ಬೇಕೆಂಬುದನ್ನು ನೀವು ಅರಿಯದಿಲ್ಲ.

"ನಾನು ನಿಮ್ಮ ಸಮೀಪ ಸುಳಿಯಲೆತ್ನಿಸಿದಷ್ಟೂ ನೀವು ದೂರದೂರ ಸರಿಯುತ್ತಿದ್ದಿರಿ. ಏಕೆಂಬುದು ಇನ್ನಿದುವರೆಗೆ ನನಗೆ ಅರ್ಥವಾಗಿಲ್ಲ.

"ನನ್ನ ಪ್ರೇಮ ಯಾಚನೆಯನ್ನು ನೀವು ನಿರಾಕರಿಸಿದಿರಿ ಮಾತ್ರವಲ್ಲ. ನನ್ನ ಸ್ನೇಹವನ್ನೂ ತಿರಸ್ಕರಿಸಿದಿರಿ. ನಾನಷ್ಟು ತುಚ್ಛ ವಸ್ತುವೇ? ನಿಮ್ಮನ್ನು ಕಾಯಾ-ವಾಚಾ-ಮನಸಾ ಪ್ರೇಮಿಸಿದುದೇ ನನ್ನ ಅಪರಾಧವೇ? ಪ್ರೇಮ ಮುಳ್ಳು ಪೊದೆಯೊಳಗೆ ಬೆಳೆಯುತ್ತದೆಂಬುದನ್ನು ಬಲ್ಲೆ-ಆದರೆ ಆ ಮುಳ್ಳು ಪ್ರೇಮದ ಹೃದಯವನ್ನು ಹೊಕ್ಕು-ಇರಿದು-ಹಿಂಸಿಸಿ ರಕ್ತ ಚೆಲ್ಲಿಸುವುದೆಂದು ಅರಿತಿರಲಿಲ್ಲ.

"ನನ್ನ ಹೃದಯ ನೀವು ನೋಡಬಲ್ಲಿರಾದರೆ, ಅದರ ಅಣಗದ ಕೂಗು ನಿಮ್ಮ ಕಿವಿ ಮುಟ್ಟಬಲ್ಲುದಾದರೆ ನಾನು ಧನ್ಯಳಾಗುತ್ತೇನೆ.

"ಎಂದೋ-ಏನೋ-ಏಕೋ ನಿಮ್ಮನ್ನು ನೋಡಿದೆ. ಅಂದಿನಿಂದ ಒಂದೇ ಸಮನೆ ಈ ಮನಸ್ಸು ನಿಮಗಾಗಿ-ನಿಮ್ಮ ವಿಶ್ವಾಸಕ್ಕಾಗಿ-ನಿಮ್ಮ ಆಲಿಂಗನಕ್ಕಾಗಿ ಹಾತೊರೆಯುತ್ತಿದೆ. ನನ್ನ ದೇಹ-ಮನಸ್ಸು ಎರಡೂ ನಿಮಗಾಗಿ ಕಾತರಿಸುತ್ತಿವೆ.

"ಏಕೆ ಇಂಥ ನಿರ್ದಯ-ಇಂಥ ಕಾಠಿಣ್ಯ-ಇಂಥ ತಿರಸ್ಕಾರ. ನಾನು ವಿವಾಹಿತೆಯಾಗಿರುವೆನೆಂದೇ? ನಿಜ-ಸಮಾಜದ ಕಣ್ಣಲ್ಲಿ ನಾನು ವಿವಾಹಿತೆ-ಒಬ್ಬ ವ್ಯಕ್ತಿ ಹಲವರೆದುರಿನಲ್ಲಿ ನನ್ನ ಕುತ್ತಿಗೆಗೆ ತಾಳಿ ಬಿಗಿದಿದ್ದಾನೆ. ಇದು ಪ್ರೇಮದ ಮುದ್ರೆಯಲ್ಲ. ನಾಯಿ ಕೊರಳಿಗೆ ಯಜಮಾನ ಬಿಗಿಯುವ ನೇಣು. ಕೊರಳಿಗೆ ತಾಳಿ ಕಟ್ಟಿದರೆ ಕಟ್ಟಿಸಿಕೊಂಡ ಹೆಣ್ಣು ತನ್ನದಾಗುವು

ದೆಂದು ತಿಳಿಯುವನೆಂಥ ಮೂರ್ಖ-ಹಾಗೆ ಆತ್ಮವಿಸ್ಮೃತಿ ಮಾಡಿಕೊಳ್ಳುವ ಸಮಾಜ ಎಂಥ ಕುರುಡು ಸಮಾಜ.

"ನನ್ನ ವಿವಾಹದ ಕತೆ ನಿಮಗೆ ಗೊತ್ತಿದೆಯೋ ಇಲ್ಲವೊ ಕಾಣೆ. ಇಂದು ನನ್ನ ಗಂಡ ಎನಿಸಿಕೊಂಡಿರುವ ವ್ಯಕ್ತಿಯನ್ನು ನಾನೆಂದೂ ಮೆಚ್ಚ ಲಿಲ್ಲ–ಒಪ್ಪಿಕೊಳ್ಳಲಿಲ್ಲ. ನನ್ನ ತಂದೆ, ಸೋದರತ್ತೆ ಬಲವಂತ ಮಾಡಿ ಆತನ ಕೊರಳಿಗೆ ನನ್ನ ಬಿಗಿದರು. ತೀರದ ಆಸೆ ಇಟ್ಟುಕೊಂಡು ಆ ವ್ಯಕ್ತಿ ನನ್ನೊಂ ದಿಗೆ ತೊಳಲಾಡುತ್ತಿದ್ದಾನೆ. ಇದರಿಂದ ಆತನ ಜೀವಕ್ಕೂ ಸುಖವಿಲ್ಲ– ನನ್ನ ಜೀವಕ್ಕೂ ಸುಖವಿಲ್ಲ.

"ವಿವಾಹವಾಗಲಿ ಆಗದಿರಲಿ ನಾನು ಮನಸಾರೆ ವರಿಸಿದುದು ನಿಮ್ಮನ್ನೆ. ನನ್ನ ಹೃದಯಸಿಂಹಾಸನದಲ್ಲಿ ನಿಮಗೊಬ್ಬರಿಗೇ ಸ್ಥಾನ. ಆ ಸ್ಥಾನ ನೀವು ಬಂದು ಅಲಂಕರಿಸಬೇಕು. ನನ್ನ ಹೃದಯವನ್ನು ಬರಿದು ಮಾಡಬಾರದು. ಪ್ರೇಮದ ಕರೆಗೆ ಬೆನ್ನುತಿರುಗಿಸುವುದು ಧರ್ಮವಲ್ಲ— ನ್ಯಾಯವಲ್ಲ.

"ಪ್ರಿಯತಮಾ–ನನ್ನ ನಿರ್ಲಜ್ಜೆಯೆಂದು ನೀವು ಭಾವಿಸಬಹುದು. ದಿಟ್ಟೆಯೆಂದು ನೀವು ಕರೆಯಬಹುದು. ಈಗ ನಾನು ಲಜ್ಜೆ ಬಿಡದಿದ್ದರೆ, ದಿಟ್ಟತನ ತೋರದಿದ್ದರೆ ಮತ್ತೆ ಯಾವಾಗ ತೋರಬೇಕು. ನಿಮ್ಮ ಒಂದು ಕಾಗದ ಬರಲಿ-ತಂತಿ ಬರಲಿ ಮರು ರೈಲಿಗೆ ಹೊರಟುಬರುತ್ತೇನೆ. ನಿಮ್ಮ ದಾಸಿಯಾಗಿ ದುಡಿಯುತ್ತೇನೆ, ನಿಮ್ಮ ಬಾಳಿಗೆ ಗೆಲುವು ಚೆಲುವು ಕೊಡುವುದ ಕ್ಕಿಂತ ಹೆಚ್ಚಿನ ಸುಖ ನನಗಿಲ್ಲ-ಇದ್ದರೂ ಬೇಕಿಲ್ಲ.

"ಒಂದು ಕಾಗದ-ತಂತೀ ಅನುಗ್ರಹಿಸಿ. ಬಾರೆಂದು ಬರೆಯಿರಿ. ನಿಮ ಗಾಗಿ ತೊಳಲಾಡುವ ಒಂದು ಜೀವದ ಭವಿಷ್ಯವನ್ನು-ಬದುಕನ್ನು ನಾಶಮಾಡ ಬೇಡಿ. ಅತಿ ದೈನ್ಯದಿಂದ ನಿಮ್ಮ ಪಾದಗಳ ಮೇಲೆ ಉರುಳಿ ಈ ಪ್ರಾರ್ಥನೆ ಯನ್ನು ಮಾಡಿಕೊಳ್ಳುತ್ತಿರುವ,

ನಿಮ್ಮ ದಾಸಿ
ಸುನಂದಾ."

ಶ್ರೀನಿವಾಸ ಗಟ್ಟಿಯಾಗಿ ಕಾಗದ ಓದುತ್ತ ನಿಂತಿದ್ದುದನ್ನು ಕಂಡ ಇಲಾಹಿ ಅವನ ಏಕಾಗ್ರತೆಯನ್ನು ಕೆಡಿಸಬಾರದೆಂದು ಬಾಗಿಲಲ್ಲೇ ನಿಂತ. ಶ್ರೀನಿವಾಸ ಕಾಗದ ಓದಿದ್ದು ಮುಗಿಸಿ

"ಬನ್ನಿ ಇಲಾಹಿ-ನೀವು ಬರುವ ವೇಳೆಗೆ ಚಹಾ ಮಾಡಿಡಬೇಕೆಂದಿದ್ದೆ. ನೀರು ಮರಳುತ್ತಿದೆ-ನೀವೇ ಚಹಾ ಮಾಡಿಬಿಡಿ-ನಾನು ಒಂದು ಪತ್ರಕ್ಕೆ ಉತ್ತರ ಬರೆದು ಬರುತ್ತೇನೆ."

ಎಂಸ. ಇಲಾಹಿ ಸಕ್ಕರೆ, ಚಹಾ ಡಬ್ಬಿಗಳನ್ನು ಮುಂದಿಟ್ಟುಕೊಂಡು ಚಹಾ ಮಾಡಲಿಕ್ಕೆ ಕುಳಿತ. ಶ್ರೀನಿವಾಸ ಕಾಗದಕ್ಕೆ ಉತ್ತರ ಬರೆಯಲು ಕುಳಿತ.

ಕಾಗದದ ಮೇಲೆ ಲೇಖನಿ ಓಡದು. ಚಹಾ ಸಿದ್ಧವಾಗಿತ್ತು. ಇಲಾಹಿ ತಂದಿಟ್ಟ ಚಹಾ ಬಸಿದುಕೊಂಡು ಮತ್ತೆ ಬರೆಯಲು ಶ್ರೀನಿವಾಸ ಪ್ರಯತ್ನಿಸಿದ.

'ಏನೆಂದು ಆರಂಭಿಸಲಿ' ಎಂದು ಬಹಳ ಯೋಚನೆ ಮಾಡಿ ಮಾಡಿ ಕೊನೆಗೆ ಒಂದು ನಿರ್ಧಾರಕ್ಕೆ ಬಂದು ಕಾಗದವನ್ನು ಬರೆಯಲು ಮೊದಲು ಮಾಡಿದ.

"ಗೆಳತೀ,

"ನಿಮ್ಮ ಕಾಗದ ಕೈಸೇರಿತು. ನನ್ನ ಭಾವನಾಪ್ರಪಂಚದಲ್ಲಿ ಅಲ್ಲೋಲ ಕಲ್ಲೋಲವಾಗುವುದೆಂದು ನೀವು ಸರಿಯಾಗಿ ಊಹಿಸಿದಿರಿ. ಆಗದೆ ಉಂಟೇ? ನಿಮ್ಮ ದಿಟ್ಟತನಕ್ಕೆ ನನ್ನ ಅಭಿನಂದನೆ. ಆದರೆ ಅದರ ಪ್ರಖರಕಿರಣಗಳನ್ನು ತಡೆಯುವ ಯೋಗ್ಯತೆ ನನ್ನಲ್ಲಿಲ್ಲವೆಂದು ಬಹಳ ವಿಷಾದದಿಂದ ಒಪ್ಪಿಕೊಳ್ಳುತ್ತೇನೆ.

"ನಿಮ್ಮ ಮನಸ್ಸಿನಲ್ಲಿ ಭಯಂಕರ ಬಿರುಗಾಳಿ ಎದ್ದಿದೆ. ಇದು ಹೇಗೆ ಶಾಂತವಾಗಬೇಕು-ಯಾರು ಶಾಂತಿ ತಂದುಕೊಡಬೇಕೆಂಬುದನ್ನು ನಾನು ನಿರ್ಣಯಿಸಲಾರೆ. ಆ ಉತ್ತರವಾದಿತನ ನೀವು ನನ್ನ ಮೇಲ ಹೊರಸುತ್ತಿದ್ದೀರಿ. ನನ್ನನ್ನು 'ಪ್ರಿಯತಮಾ' ಎಂದು ಕರೆದಿರುವಿರಿ. ನನ್ನ ದಾಸಿಯಾಗಿ ಬಾಳು ತಳ್ಳಬೇಕೆಂಬ ಆಸೆಯನ್ನು ವ್ಯಕ್ತಮಾಡಿದ್ದೀರಿ. ನಾನು ನಿಜವಾಗಿಯೂ ಇಷ್ಟೊಂದು ತ್ಯಾಗಕ್ಕೆ, ಇಷ್ಟೊಂದು ಭೋಗಕ್ಕೆ ಅರ್ಹನಲ್ಲ.

"ನೀವು ನಿಮ್ಮ ಮನಸ್ಸನ್ನು ಸ್ಪಷ್ಟವಾಗಿ ತೋಡಿಕೊಂಡಿರುವಂತೆ ನಾನೂ ನನ್ನ ಮನಸ್ಸನ್ನು ತೋಡಿಕೊಳ್ಳುತ್ತೇನೆ. ಅದರಿಂದ ಅಸಮಾಧಾನ ಪಟ್ಟುಕೊಳ್ಳಬೇಡಿ. ಸತ್ಯವನ್ನು ಪ್ರಿಯವಾದ ರೀತಿಯಲ್ಲಿ ಹೇಳಬೇಕಾದುದು

ಯುಕ್ತ. ಆದರೆ ಅಪ್ರಿಯವನ್ನು ಆಡಬೇಕಾದ ಪ್ರಮೇಯ ಒದಗಿದಲ್ಲಿ ಹಿಂಜರಿಯಬಾರದು.

"ನಾನು ಸತ್ಯ ಹರಿಶ್ಚಂದ್ರನಲ್ಲ. ಮಹಾತ್ಮ ಗಾಂಧಿಯಲ್ಲ. ಆದರೆ ಅವರಂತೆ ಆಗಬೇಕೆಂಬುದೂ ಅವರ ಸಂಕಲ್ಪ, ನಿಷ್ಠೆ, ಪಾಪಭೀರುತನ, ಪಾವಿತ್ರ್ಯ ನನ್ನ ಜೀವನದಲ್ಲಿಯೂ ಮೂಡಬೇಕೆಂದು ಅಹರ್ನಿಶಿ ಬಯಸುತ್ತಿದ್ದೇನೆ. ಅದಕ್ಕಾಗಿ ಪ್ರಯತ್ನಪಡುತ್ತಿದ್ದೇನೆ. ಜಯಾಪಜಯಗಳು ಈಶ್ವರಾಧೀನ.

ನನ್ನ ಉಪದೇಶ, ಆಶೀರ್ವಾದಗಳನ್ನು ಅಲ್ಲಗಳೆದಿರುವಿರಿ. ನಾನು ಉಪದೇಶ ಮಾಡಲಿಕ್ಕೆ ಹೋಗಲಿಲ್ಲ. ನನ್ನ ಮನಸ್ಸಿನಲ್ಲಿದ್ದ ಭಾವನೆಯನ್ನು ವ್ಯಕ್ತಗೊಳಿಸಿದೆ.

"ನೀವು ನನ್ನ ಜೀವನದ ಒಂದು ಬಹು ಮುಖ್ಯ ನೋಟವನ್ನು ಬದಲಿಸಲು ಯತ್ನಿಸುತ್ತಿರುವಿರಿ. ಆಸೆಯ ಬಲೆಯೊಡ್ಡಿ ನನ್ನನ್ನು ಕರ್ತವ್ಯ ಪಥದಿಂದ ವಿಮುಖನನ್ನಾಗಿಸಲು ಯತ್ನಿಸುತ್ತಿರುವಿರಿ.

"ಗಂಡು ಹೆಣ್ಣಿನ ಸಂಬಂಧ ನನ್ನ ಈ ಜನ್ಮಕ್ಕೆ ಸಾಧ್ಯವಿಲ್ಲ. ಹೆಣ್ಣನ್ನು ನಾನು ತಾಯಿಯೆಂದಲ್ಲದೆ ಬೇರೆಯೆಂದು ಭಾವಿಸಲಾರೆ. ನೀವೂ ಇತರ ಹೆಣ್ಣುಮಕ್ಕಳೂ ನನಗೆ ತಾಯಿಸ್ವರೂಪರು. ತಾಯಿ–ಮಗನ ಸಂಬಂಧ ಬಿಟ್ಟು ಬೇರೆ ಸಂಬಂಧ ಬೆಳೆಸಲು ನನಗೆ ಸಾಧ್ಯವೇ ಇಲ್ಲ.

"ನಿಮ್ಮ ವಿವಾಹದಲ್ಲಿ ಅತೃಪ್ತಿಗೊಂಡು ತೃಪ್ತಿಯನ್ನು ಬೇರೆ ಕಡೆ ಕಂಡುಕೊಳ್ಳಲು ಪ್ರಯತ್ನಮಾಡುತ್ತಿರುವಿರಿ. ಸ್ವಲ್ಪ ವಿಚಾರವಮಾಡಿ. ದುಡುಕಬೇಡಿ. ಜೀವನಕ್ಕೆ ತೃಪ್ತಿಯನ್ನು ಸನ್ಮಾರ್ಗ-ದುರ್ಮಾರ್ಗಗಳೆರಡರಿಂದಲೂ ಒದಗಿಸಬಹುದು. ಆದರೆ ನಿಜವಾದ ತೃಪ್ತಿಯನ್ನು ಕೊಡುವ ಮಾರ್ಗ ಯಾವುದು ? ಶಾಶ್ವತವಾಗಿ ಉಳಿಯುವ ತೃಪ್ತಿ ಯಾವುದು? ನಿಮ್ಮ ಕೈಹಿಡಿದಿರುವ ವ್ಯಕ್ತಿಯನ್ನು ನಾನು ಬಲ್ಲೆ. ಆತ ತುಂಬ ಸಂಭಾವಿತ, ನಿಮ್ಮನ್ನು ಪ್ರತ್ಯಕ್ಷ ದೇವತೆಯೆಂದು ಆರಾಧಿಸುವ ಪವಿತ್ರಜೀವಿ. ಸಲ್ಲದ ಆಸೆಯ ಚಿತ್ರ ಕಟ್ಟಿಕೊಂಡು, ದೊರಕದ ಸುಖಕ್ಕೆ ಕೈನೀಡಿ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ. ರಂಗಣ್ಣನವರ ಗುಣ, ಪ್ರೇಮ ನಿಮ್ಮನ್ನು ಶಾಂತಗೊಳಿಸಬೇಕು. ಆದರೆ ನೀವು ಆ ಕಡೆ ಚಿತ್ತವಿಡಬೇಕು.

"ನೀವಿಲ್ಲಿಗೆ ಬಂದು ನನ್ನ 'ದಾಸಿ'ಯಾಗಿರುವ ಯೋಚನೆಯನ್ನು ಸದಾ ಸರ್ವದಾ ಮನಸ್ಸಿನಿಂದ ದೂರಮಾಡಿ. ನನ್ನ ಬಗ್ಗೆ ಇಂಥ ಭಾವನೆಯನ್ನು ನೀವು ವ್ಯಕ್ತಪಡಿಸಿದರೆ ನನ್ನ ಗೌರವವನ್ನೂ ಕಳೆದುಕೊಳ್ಳುವಿರಿ.

"ಭಗವಂತ ನಿಮಗೆ ಸದ್ಬುದ್ಧಿಯನ್ನಿತ್ತು ಸನ್ಮಾರ್ಗ ತೋರಿಸಲೆಂದು

ಸದಾ ಬಯಸುವ

ನಿಮ್ಮ ಸೋದರ

ಶ್ರೀನಿವಾಸ."

ಕಾಗದ ಮುಗಿಸಿ ಅದನ್ನು ಲಕೋಟೆಗೆ ಹಾಕಿ ಕೂಡಲೆ ಟಪಾಲಿಗೆ ಒಯ್ಯಲು ನೆರೆಮನೆಯ ಒಬ್ಬ ಹುಡುಗನ ಕೈಯಲ್ಲಿ ಕೊಟ್ಟು ಕಳಿಸಿದ.

"ಚಹಾ ಆರಿಹೋಯಿತೇನೋ" ಎಂದು ಇಲಾಹಿ ಎಚ್ಚರಿಸಿದ.

ಚಹಾ ಆರಿಯೇ ಹೋಗಿತ್ತು. ಅದನ್ನೇ ಕುಡಿದು ತೃಪ್ತನಾದ.

"ಈ ಕಾಗದ ನಿಮ್ಮನ್ನು ಬಹಳ ಚಿಂತಾಕ್ರಾಂತರನ್ನಾಗಿ ಮಾಡಿರುವಂತೆ ಕಾಣುತ್ತದೆ."

ಶ್ರೀನಿವಾಸ ಸಾವಕಾಶವಾಗಿ ಸುಭದ್ರೆಯ ಕಾಗದದ ಸಾರಾಂಶ ಹೇಳಿ, ಹಿಂದಿನ ವೃತ್ತಾಂತವನ್ನು ನಿರೂಪಿಸಿ

"ನಾನೇನು ಮಾಡಬೇಕು ನೀವೇ ಹೇಳಿ ಇಲಾಹಿ"

"ಬಹಳ ಚೆನ್ನಾಗಿದೆ ನಿಮ್ಮ ಪ್ರಶ್ನೆ. ಸನ್ಯಾಸಿ ಪೀರನ ಸಲಹೆ ಕೇಳಿದ ಹಾಗಾಯಿತು. ನಾನೇನು ಸಲಹೆ ಕೊಡಬಹುದೋ ಅದನ್ನು ನೀವೇ ಯೋಚಿಸಿ ಬರೆದು ಬಿಟ್ಟಿರುವಿರಿ."

"ಹಾಗಾದರೆ ನನ್ನ ನಿರ್ಧಾರ ಅಸಾಧುವಾದುದಲ್ಲವಲ್ಲಾ."

"ನಿಮ್ಮ ವ್ಯಕ್ತಿತ್ವ ಇಷ್ಟು ದೊಡ್ಡದೆಂದು ನಾನು ತಿಳಿದಿರಲಿಲ್ಲ ಅಣ್ಣಾ. ಬಾಯಲ್ಲಿ ಹತ್ತು ಮಾತಾಡಿದರೇನು-ಅದರಲ್ಲಿ ಒಂದು ಭಾಗವನ್ನು ಕೃತಿಯಲ್ಲಿ ತರುವುದು ಕಷ್ಟ. ನಿಮ್ಮಂಥ ಸಾಧಕರು ವಿರಳ" ಎಂದು ಹೇಳುತ್ತ ಹೇಳುತ್ತ ಇಲಾಹಿಯ ಕಣ್ಣುಗಳಿಂದ ಆನಂದಭಾಷ್ಪಗಳುದುರಿದವು.

## ೩೩

ರಂಗಣ್ಣನ ಮನವಿ ಕಾವೇರಮ್ಮನನ್ನು ಬಹಳ ದುಃಖಿಯನ್ನಾಗಿ ಮಾಡಿತ್ತು. ರಂಗಣ್ಣನ ಮದುವೆಯ ವಿಷಯದಲ್ಲಿ ತನ್ನ ಪಾತ್ರವೂ ಇದ್ದುದ

ರಿಂದ ಅವಳು ಹೆಚ್ಚು ಯೋಚನಾಕ್ರಾಂತಳಾದಳು. ಪರಿಸ್ಥಿತಿಯನ್ನು ಹೇಗಾದರೂ ಸುಧಾರಿಸಿ ಅವರ ಬಾಳುವೆಯನ್ನು ಸುಖಮಯವೂ ಸುದೃಢವೂ ಆಗುವಂತೆ ಮಾಡಬೇಕೆಂದು ಅವಳು ಸಂಕಲ್ಪಮಾಡಿದಳು.

ಈ ವಿಷಯವನ್ನು ವೆಂಕಪ್ಪಯ್ಯನವರಿಗೆ ತಿಳಿಸಬೇಕೆ ಬೇಡವೇ ಎಂಬ ವಿಷಯ ಅವಳನ್ನು ಬಹಳ ಕಾಡಿತು. ವಿಚಾರ ಮಾಡಿ ಮಾಡಿ ಕೊನೆಗೆ 'ನಾನೇ ಪ್ರಯತ್ನಿಸುತ್ತೇನೆ. ನನ್ನ ಕೈ ಮೀರಿದರೆ ಅಣ್ಣನಿಗೆ ತಿಳಿಸಿದರಾಯಿತು ' ಎಂದು ನಿರ್ಧರಿಸಿದಳು.

ಸುಭದ್ರೆಯನ್ನು ಕಂಡು ಮಾತನಾಡಬೇಕೆಂದು ಕಾವೇರಮ್ಮ ನಾಲ್ಕು ಸಲ ಅವಳ ಮನೆಗೆ ಹೋಗಿ ಬಂದಳು.

ಒಂದೆರಡು ಬಾರಿ ಬಾಗಿಲಿಗೆ ಬೀಗ ಹಾಕಿದ್ದುದನ್ನು ನೋಡಿ ಬಂದಳು. ಇನ್ನೆರಡುಸಾರಿ ಗುಂಡಮ್ಮನೊಂದಿಗೆ ಹರಟೆ ಕೊಚ್ಚುತ್ತಿದ್ದು ಮನೆ ಸೇರಿದಳು.

ಒಂದು ಮಧ್ಯಾಹ್ನ–ಸುಮಾರು ೩ ಗಂಟೆ ಸಮಯ. ಕಾವೇರಮ್ಮ ಉರಿಬಿಸಿಲನ್ನೂ ಲೆಕ್ಕಿಸದೇ ಮನೆಬಿಟ್ಟು ಹೊರಟಳು. 'ಬಿಸಿಲು ವಿಪರೀತ ವಾಗಿದೆ. ಸಂಜೆಯಾದಮೇಲೆ ಹೋಗಬಾರದೆ ?' ಎಂದು ನರಸಮ್ಮ ಎಚ್ಚರಿಸಿದುದೂ ಅವಳ ಕಿವಿಯ ಮೇಲೆ ಬೀಳಲಿಲ್ಲ.

ಹೊರಟವಳು ನೇರವಾಗಿ ಸುಭದ್ರೆಯ ಮನೆಯ ಬಳಿ ಬಂದಳು. ಮನೆಯ ತಲೆಬಾಗಿಲು ಹಾಕಿತ್ತು. ನಿಶ್ಶಬ್ದತೆ ತಾನೆ ತಾನಾಗಿ ಪಸರಿಸಿತ್ತು. 'ಎಲ್ಲಿ ಹೋದಳೋ ಹಾಳು ಮೂಳಿ' ಎಂದು ಗೊಣಗಿಕೊಂಡೇ ಮನೆಯನ್ನು ಸಮೀಪಿಸಿದಳು. ಬಾಗಿಲನ್ನು ಒಂದೆರಡು ಬಾರಿ ತಳ್ಳಿ ನೋಡಿದಳು. ಒಳಗಡೆ ಚಿಲಕ ಹಾಕಿತ್ತು. ಹಿಂದಿನಿಂದ ಹೋಗಿ ಅಡಿಗೆ ಮನೆ ಇಣಿಕಿ ನೋಡಿದಳು. ಗುಂಡಮ್ಮನ ಸುಳಿವೂ ಇರಲಿಲ್ಲ. ಮುಂಭಾಗಕ್ಕೆ ಬಂದು ಪಕ್ಕದ ಕೋಣೆಯ ಕಿಟಕಿಯಲ್ಲಿ ಇಣಿಕಿ ನೋಡಿದಳು.

ಕಾವೇರಮ್ಮ ಕಂಡ ದೃಶ್ಯ ಅವಳನ್ನು ಚಕಿತಳನ್ನಾಗಿಸಿತು. ಮೈ ಕಂಪಿಸಿತು. ನೆತ್ತಿಯಿಂದ ಕಾಲಿನವರೆಗೆ ಬೆವರೇರಿತು. ಮಂತ್ರಮುಗ್ಧಳಂತೆ ಕ್ಷಣಕಾಲ ಅಲ್ಲಿಯೇ ನಿಂತುಬಿಟ್ಟಳು. ತಾನು ಕಂಡದ್ದು ಕನಸೇ ವಿನಾ ಸತ್ಯ ನೋಟವಲ್ಲವೆಂದು ಮನಸ್ಸನ್ನು ಮೋಸಗೊಳಿಸಲೆತ್ನಿಸಿದಳು. ಕಣ್ಣುಜ್ಜಿ ಕೊಂಡು ಮತ್ತೆ ನೋಡಿದಳು. ಕನಸಲ್ಲ.... ಸತ್ಯ .. ಅಸಹನೀಯವಾದ ಸತ್ಯ.

ಅಲ್ಲಿ ಹೆಚ್ಚು ಕಾಲ ನಿಲ್ಲಲು ಅವಳಿಗೆ ಸಾಧ್ಯವಾಗಲಿಲ್ಲ. ಬಂದ ದಾರಿ ಹಿಡಿದು ಹೊರಟಳು. ಉದ್ದಕ್ಕೂ ಕಣ್ಣೀರು ಧಾರೆಧಾರೆಯಾಗಿ ಸುರಿಯುತ್ತಿತ್ತು. ಅವಳ ಇಡೀ ದೇಹವೇ ಕೋಪ, ಅಪಮಾನಗಳಿಂದ ಕಂಪಿಸುತ್ತಿತ್ತು.

ಮನೆಗೆ ಬಂದವಳೇ ಕಾವೇರಮ್ಮ ಕಣ್ಣೀರಿನಲ್ಲಿ ಮುಖ ತೊಳೆದು ಕೊಂಡು ಒಂದು ಚಾಪೆ ಹಾಸಿಕೊಂಡು ಮಲಗಿ ಬಿಟ್ಟಳು. ಅವಳ ಸ್ಥಿತಿ ನೋಡಿ ನರಸಮ್ಮನವರು ಸ್ವಲ್ಪ ಗಾಬರಿಯಾದರು.

"ಏಕೆ ಅತ್ತಿಗೆಮ್ಮ ಏನಾಯಿತು ? ಮೈಯಲ್ಲಿ ಹುಷಾರಿಲ್ಲವೇ ?"

"ನಂಗೇನು ಧಾಡಿ"

ಎಂದು ಕಾವೇರಮ್ಮ ಒರಟು ಉತ್ತರ ಕೊಟ್ಟುಬಿಟ್ಟಳು. ನರಸಮ್ಮ ಮತ್ತೆ ಒಂದೆರಡು ಸಲ ಪ್ರಯತ್ನಿಸಿ ವಿಫಲರಾಗಿ ಸುಮ್ಮನಾದರು.

ಸಂಜೆಯಾದರೂ ಕಾವೇರಮ್ಮ ಮಲಗಿದ್ದ ಸ್ಥಳ ಬಿಟ್ಟೇಳಲಿಲ್ಲ.

ವೆಂಕಪ್ಪಯ್ಯನವರು ಕೋರ್ಟು ಮುಗಿಸಿಕೊಂಡು ಮನೆಗೆ ಬಂದ ಕೂಡಲೆ ನರಸಮ್ಮನವರು ಅವರಿಗೆ ಕಾವೇರಮ್ಮನ ಪರಿಸ್ಥಿತಿ ತಿಳಿಸಿದರು. ವೆಂಕಪ್ಪಯ್ಯ ಕಾವೇರಮ್ಮ ಮಲಗಿದ್ದಲ್ಲಿಗೆ ಬಂದು

"ಏಕೆ ಕಾವೇರೂ-ಏನಾಗಿದೆಯೇ ? ಜ್ವರ ಬಂದಿದೆಯೇನೇ ?"

ಎಂದು ಕೇಳಿದರು. ಕಾವೇರಮ್ಮ ಉತ್ತರ ಕೊಡಲಿಲ್ಲ. ಚಾಪೆಯ ಮೇಲೆ ಎದ್ದು ಕುಳಿತು ಅಣ್ಣನ ಮುಖವನ್ನು ದಿಟ್ಟಿಸಿ ನೋಡಿದರು.

ವೆಂಕಪ್ಪಯ್ಯನವರಿಗೆ ಸಲ್ಪ ಗಾಬರಿಯೇ ಆಯಿತು.

ಕಾವೇರಮ್ಮ ಸಂಜ್ಞೆ ಮಾಡಿ ವೆಂಕಪ್ಪಯ್ಯನವರನ್ನು ಹತ್ತಿರ ಕರೆದು

"ಅತ್ತಿಗೆಮ್ಮ ಏನು ಮಾಡುತ್ತಿದ್ದಾರೆ ?"

"ನನಗೆ ಕಾಫಿ ತಿಂಡಿ ಸಿದ್ಧಮಾಡುತ್ತಿದ್ದಾಳೆ."

"ನೀನೂ ನಾನೂ ರಹಸ್ಯವಾಗಿ ಮಾತನಾಡಬೇಕಾಗಿದೆ. ಅತ್ತಿಗೆಮ್ಮನ ಕಿವಿಯಮೇಲೆ ಈ ಮಾತು ಬೀಳಕೂಡದು."

"ಅವಳೇನೋ ಸೀರೆ-ಸೀರೆ ಎನ್ನುತ್ತಿದ್ದಳು. ಇವತ್ತು ಸ್ವಲ್ಪ ದುಡ್ಡು ಬಂದಿದೆ. ತೆಗೆದುಕೊಂಡು ಬಾ ಎಂದು ಹೇಳುತ್ತೇನೆ. ಅವಳು ಬರುವುದಕ್ಕೆ ಒಂದು ಗಂಟೆಯಾಗಬಹುದು."

"ಹಾಗೇ ಮಾಡು."

ಎಂದು ಹೇಳಿದರು.

ಯಜಮಾನರು ತಾವಾಗಿಯೇ ಸೀರೆಗೆ ದುಡ್ಡು ಕೊಟ್ಟದ್ದನ್ನು ಕಂಡು ನರಸಮ್ಮ ಹಿರಿಹಿರಿ ಹಿಗ್ಗಿದರು. ಗಂಡನಿಗೆ ತಿಂಡಿ ಕಾಫಿ ಕೊಟ್ಟು ಲಗುಬಗೆಯಿಂದ ತಲೆಬಾಚಿ, ಹಣೆಗಿಟ್ಟುಕೊಂಡು, ಬದಲಾಯಿಸಿ ಸೀರೆ ಉಟ್ಟುಕೊಂಡು

"ಅತ್ತಿಗೇ, ಇವತ್ತು ನಿಮ್ಮ ಅಣ್ಣಾನವರು ದೊಡ್ಡ ಮನಸ್ಸು ಮಾಡಿದ್ದಾರೆ. ಹೋಗಿ ಸೀರೆ ತರುತ್ತೇನೆ" ಎಂದು ಹೇಳಿದರು.

"ನಿಧಾನವಾಗಿ ಬನ್ನಿ ಅತ್ತಿಗೆಮ್ಮ ನಾನು ಮಡಿಯುಟ್ಟುಕೊಂಡು ಒಲೆಯ ಮೇಲಿಟ್ಟಿರುತ್ತೇನೆ"

ಎಂದು ಕಾವೇರಮ್ಮ ಹೇಳಿದರು.

ನರಸಮ್ಮ ಅಂಗಡಿ ಕಡೆ ಹೊರಡಲು ತೊಟ್ಟಿಯಲ್ಲಿ ವೆಂಕಪ್ಪಯ್ಯ ಕುಳಿತಿದ್ದ ಬಳಿಗೆ ಕಾವೇರಮ್ಮ ಬಂದು ನೆಲದ ಮೇಲೆ ಕುಳಿತುಕೊಂಡಳು.

ಎರಡುಮೂರು ಸಾರಿ ಮಾತು ಆರಂಭಿಸಬೇಕೆಂದು ಕಾವೇರಮ್ಮ ಪ್ರಯತ್ನಮಾಡಿದಳು. ಸಫಲವಾಗಲಿಲ್ಲ. ಮಾತು ಆಡಹೋದರೆ ಕಣ್ಣಿನಿಂದ ಧಾರೆ.

"ಏನಾಯ್ತು—ಕಾವೇರೂ–ಏಕೆ ಹೀಗೆ ದುಃಖಪಡುತ್ತಿದ್ದೀಯೇ?"

"ಏನಾಯ್ತೇ! ಮನೆ ಹಾಳಾಯಿತು. ಹುಟ್ಟಿದ ಹೆಣ್ಣು ಕುಲಕ್ಕೆ ಕೊಡಲಿಯಾಯಿತು. ಇವಳು ಹೀಗಾಗುತ್ತಾಳೆಂದು ತಿಳಿದಿದ್ದರೆ ನಾನು ಹೊಲೆಮನೆಯಲ್ಲಿ ಮಗುವಿನ ಕುತ್ತಿಗೆ ಒಸುಕಿ ಹಾಕಿಬಿಡುತ್ತಿದ್ದೆ."

"ನೀನೆಂದೂ ಕೆಟ್ಟಮಾತು ಆಡಿದವಳಲ್ಲ. ಏನಾಯ್ತು ಹೇಳೇ ಮಹಾರಾಯ್ತಿ."

ಕಾವೇರಮ್ಮ ಯೋಚನೆ ಮಾಡಿಮಾಡಿ ಕೊನೆಗೆ

"ವೆಂಕೂ–ರಂಗಣ್ಣನಿಗೆ ಸುಭದ್ರೆಯನ್ನು ಕಟ್ಟಿದ್ದು ನಮ್ಮ ತಪ್ಪು. ಈಗವಳನ್ನು ನಾವು ಬಯ್ದು ಏನು ಪ್ರಯೋಜನ."

"ಏಕೆ? ರಂಗಣ್ಣ ಅವಳೂ ವ್ಯಾಜ್ಯ ಕಾಯುತ್ತಿದ್ದಾರೆಯೇ?"

ಕಾವೇರಮ್ಮ ಸಕ್ಕರೆ ಪ್ರಕರಣದಿಂದ ಆರಂಭಿಸಿ, ರಂಗಣ್ಣನ ಮನವಿಯ ವರೆಗೆ ಎಲ್ಲವನ್ನೂ ಸಾದ್ಯಂತವಾಗಿ ವರ್ಣಿಸಿದಳು.

"ಇಷ್ಟೇ ತಾನೆ. ಇದಕ್ಕಿಷ್ಟು ಆಂತಕವೇ? ಸುಭಾದು ಸ್ವಲ್ಪ ದುಡುಕು ಸ್ವಭಾವ. ಚಿಕ್ಕವಯಸ್ಸು. ವಿವೇಕವಿಲ್ಲ. ಸಂಸಾರದ ಕಷ್ಟಸುಖ ತಲೆಗೆ

ತಾಕಿದರೆ ತಾನೇ ಸರಿಹೋಗುತ್ತದೆ. ದೇವರ ದಯೆಯಿಂದ ಬೇಗ ಒಂದು ಮಗುವಾಗಿಬಿಟ್ಟರೆ ಅವಳ ಬುದ್ಧಿ ಸ್ಥಿಮಿತಕ್ಕೆ ಬರುತ್ತದೆ."

ವೆಂಕಪ್ಪಯ್ಯನವರ ಮಾತು ಕೇಳಿ ಕಾವೇರಮ್ಮನಿಗೆ ದುಃಖ ಉಕ್ಕೇರಿ ಬಂತು. ಎದೆಗೆ ಶೂಲ ನೆಟ್ಟಂತಾಯಿತು. ಹೃದಯದಲ್ಲಿ ಭೀಷಣ ಜ್ವಾಲೆ ಯೆದ್ದಿತು. ದುಃಖ ನುಂಗಿಕೊಂಡು

"ಮಗುವೇನೋ ಬೇಗ ಆಗುತ್ತೆ. ಅದಕ್ಕೆ ಏನು ಹೆಸರಿಡುತ್ತೀ ?"

"ನೀವೆಲ್ಲಾ ಏನು ನಿಶ್ಚಯಿಸುವಿರೊ ಅದನ್ನೇ ?"

"ನಾವು ಯಾರೂ ನಿಶ್ಚಯಿಸಬೇಕಾದುದಿಲ್ಲ. ಸುಭದ್ರೆಯೇ ನಿಶ್ಚಯಿಸಿದ್ದಾಳೆ."

"ಏನೆಂದು ?"

"ಚಿಕ್ಕಸೂರಪ್ಪ ಎಂದು"

ವೆಂಕಪ್ಪಯ್ಯನವರಿಗೆ ಸಿಡಿಲು ಬಡಿದಂತಾಯಿತು. ಕಾವೇರಮ್ಮನ ರಟ್ಟೆ ಹಿಡಿದು ಅಲುಗಿಸುತ್ತಾ

"ಏನು ಮಾತೂಂತ ಆಡ್ತೀಯೇ ಕಾವೇರೂ. ಹಾಳು ಬಾಯಿಗೆ ಸ್ವಲ್ಪ ಹದ್ದುಬಸ್ತು ಬೇಡವೆ ?"

ಕಾವೇರಮ್ಮ ಅಣ್ಣನನ್ನು ಕ್ರೂರವಾಗಿ ನೋಡಿ

"ಮೂರ್ಖಾ–ಮೂರ್ಖಾ–ನಿನಗೆ ಎಂದು ವಿವೇಕ ಬರುತ್ತೆ ಹೇಳು. ನಿನ್ನ ಮಗಳ ಲೋಲಾಸ್ತಿ ಇವತ್ತು ಮಧ್ಯಾಹ್ನ ನಾನೇ ಈ ಹಾಳು ಕಣ್ಣುಗಳಿಂದ ನೋಡಿದ್ದೇನೆ. ಕನಸು ಎಂದುಕೊಂಡು ಕಣ್ಣುಬಿಟ್ಟು ನೋಡಿದ್ದೇನೆ. ದೊಡ್ಡಮನುಷ್ಯ ದೊಡ್ಡಮನುಷ್ಯ ಎಂದು ಅವನನ್ನು ತಲೆಯ ಮೇಲೇರಿಸಿಕೊಂಡು ಮೆರೆದಾಡುತ್ತಿದ್ದೆಯಲ್ಲಾ, ನಿನ್ನ ದೊಡ್ಡಮನುಷ್ಯ ಮಾಡಿದ್ದು ಈಗಾದರೂ ಅರ್ಥವಾಯಿತೇ ? ಕುಲಕ್ಕೇ ಬೆಂಕಿ ಇಟ್ಟಳು ಹಾಳುರಂಡೆ"

ಎಂದಳು. ವೆಂಕಪ್ಪಯ್ಯನವರಿಗೆ ದಿಕ್ಕೇ ತೋರಲಿಲ್ಲ. ಬಾಯಿಂದ ಮಾತು ಹೊರಡಲಿಲ್ಲ. ಕಣ್ಣೀರು ಹಾಕುತ್ತ ಕುಳಿತುಬಿಟ್ಟರು. ಆಗಾಗ್ಗೆ ಅವರ ಹೃದಯದಿಂದ ಅಯ್ಯೋ !' ಎಂಬ ಉದ್ಗಾರವೇಳುತ್ತಿತ್ತು.

"ಏನು ಮಾಡೋಣ–ಕಾವೇರೂ–ನೀನಾದರೂ ಈಗ ನನಗೆ ದಾರಿ ತೋರಿಸೇ ?"

ಎಂದು ಆರ್ತರಾಗಿ ಕೇಳಿದರು. ಕಾವೇರಮ್ಮನ ಬಾಯಲ್ಲಿಯೂ ಮಾತು ಹೊರಡಲಿಲ್ಲ.

ಸ್ವಲ್ಪ ಹೊತ್ತು ಅಣ್ಣ-ತಂಗಿ ಇಬ್ಬರೂ ವಿಚಾರ ಮಾಡುತ್ತಾ ಮೌನವಾಗಿ ಕುಳಿತರು. ಕಾವೇರಮ್ಮ ತಾನೇ ಸಮಾಧಾನ ತಂದುಕೊಂಡು

"ವೆಂಕೂ, ಇದು ಇಷ್ಟು ಬೇಗ ಇತ್ಯರ್ಥವಾಗುವ ವಿಷಯವಲ್ಲ. ಇಬ್ಬರೂ ನಿಧಾನವಾಗಿ ಯೋಚಿಸೋಣ. ನೀನು ಅತ್ತಿಗೆಮ್ಮನ ಕಿವಿಗೆ ಮಾತ್ರ ಈ ಸುದ್ದಿ ಹಾಕಬೇಡ. ಹೆತ್ತ ಹೊಟ್ಟೆ-ಸುಮ್ಮನೆ ಕೊರಗತ್ತೆ"

ಎಂದು ಅಲ್ಲಿಂದ ಎದ್ದು ಒಳಗೆ ಹೋಗಿ ಅಡಿಗೆಯ ವ್ಯವಸ್ಥೆಗೆ ಆರಂಭಿಸಿದಳು.

ಕಾವೇರಮ್ಮ ಒಳಗೆ ಹೋದ ಸ್ವಲ್ಪ ಹೊತ್ತಿನೊಳಗಾಗಿ ನರಸಮ್ಮ ಅತ್ಯಂತ ಉತ್ಸಾಹದಿಂದ ಎರಡು ಧರ್ಮಾವರದ ಸೀರೆ ಹಿಡಿದು ಬಂದರು. ಕಟ್ಟು ಬಿಚ್ಚಿ ಅವುಗಳನ್ನು ಗಂಡನಿಗೆ ತೋರಿಸಿ, ಅವುಗಳ ಬಣ್ಣ ನಮೂನೆ, ಧಾರಣೆಗಳನ್ನು ವರ್ಣಿಸಿದರು. ವ್ಯಾಪಾರದಲ್ಲಿ ತಾವು ತೋರಿದ ಬುದ್ಧಿವಂತಿಕೆಯನ್ನೂ ಚೌಕಾಸಿ ಮಾಡಿದ ಬಗೆಯನ್ನೂ ವಿಶದವಾಗಿ ನಿರೂಪಿಸಿದರು.

ವೆಂಕಪ್ಪಯ್ಯನವರ ಕಿವಿಯ ಮೇಲೆ ಮಾತುಗಳೇನೋ ಬೀಳುತ್ತಿದ್ದವು. ಒಂದು ಶಬ್ದವೂ ಅವರಿಗೆ ಅರ್ಥವಾಗಲಿಲ್ಲ. ಕಾಟಾಚಾರಕ್ಕೆ 'ಸಂತೋಷ' ಎಂದರು.

ಸಂಜೆ ಮನೆ ಬಿಟ್ಟು ವೆಂಕಪ್ಪಯ್ಯನವರು ಹೊರಬೀಳಲಿಲ್ಲ. ತಮ್ಮ ಕೋಣೆ ಬಾಗಿಲು ಹಾಕಿಕೊಂಡು ಯೋಚಿಸುತ್ತ ಕುಳಿತುಬಿಟ್ಟರು. ಮಾರನೆಯ ದಿನ ಸೆಷನ್ಸ್ ಕೇಸಿತ್ತು. ಸೂರಪ್ಪನವರನ್ನು ಕಂಡು ಅವರಿಗೆ ಕೇಸಿನ ಪರಿಚಯ ಮಾಡಿಕೊಡಬೇಕಾದ ಅಗತ್ಯವೂ ಇತ್ತು. ವೆಂಕಪ್ಪಯ್ಯನವರಿಗೆ ಏನೂ ಬೇಕಾಗಲಿಲ್ಲ 'ಕೇಸಿನ ಮನೆ ಹಾಳಾಯಿತು' ಎಂದು ಶಾಪ ಹಾಕಿ ಮೇಜಿನ ಮುಂದೆ, ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟರು.

## ೩೪

ಶ್ರೀನಿವಾಸನ ಕಾಗದ ಸಕಾಲಕ್ಕೆ ಸುಭದ್ರೆಯ ಕೈಸೇರಿತು. ಅದನ್ನೋದಿಕೊಂಡು ಕಿಡಿಕಿಡಿಯಾದಳು. ತನ್ನ ಕಾಗದಕ್ಕೆ ಪೂರ್ತಿ ಸಮಾಧಾನ

ಕೊಡುವ ಪ್ರತ್ಯುತ್ತರ ಬರುವುದೆಂದು ಅವಳು ನಿರೀಕ್ಷಿಸಿರಲಿಲ್ಲ. ಆದರೆ ಇಷ್ಟು ಖಡಾಖಂಡಿತವಾಗಿ ತನ್ನ ಸ್ನೇಹ-ಪ್ರೇಮಗಳನ್ನು ಅವನು ನಿರಾಕರಿಸುತ್ತಾನೆಂದು ಅವಳು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ.

ಸುಪುತ್ರಿಯ ರೂಪ-ಯೌವನಕ್ಕೇ ಒಮ್ಮೆಲೇ ಸೋತು ಹೋಗಿತ್ತು. ಶ್ರೀನಿವಾಸನು ತನಗೂ ಅವಳ ಸೌಭಾಗ್ಯಕ್ಕೇ ಅಪಚಾರವೆಸಗಿದಂತಾಗಿತ್ತು. ಅವಳ ಮನಸ್ಸು ಘೋರವಾದ ಯೋಚನಾಗ್ನಿಯಲ್ಲಿ ಸಿಕ್ಕಿ ಪರಿತಪ್ತವಾಯಿತು. ಕೊನೆಗೆ ಕೆಂಪು ಕಣ್ಣು ಹಿಂಬದಿಯಲ್ಲಿ ನಿಂತಿರುವ ನೀರನ್ನು ಒಣಗಿಸಿತ್ತು.

ಕಾವೇರಮ್ಮ ಎರಡುಮೂರು ಸಲ ಹುಡುಕಿಕೊಂಡು ಬಂದಿದ್ದ ಸುದ್ದಿ ಹೇಳ ಬಂದ ಗುಂಡಮ್ಮನಿಗೆ ಛೀಮಾರಿ ಮಾಡಿ ಕಳಿಸಿದಳು. ಊಟಕ್ಕೇಳು ಎಂದು ಉಪಚರಿಸ ಬಂದ ರಂಗಣ್ಣನ ಮೇಲೆ ರಕ್ತ ನೇತ್ರ ಬೀರಿದಳು.

ಬುದ್ಧಿಗೆ ಬಲವಾದ ಮಂಕು ಕವಿಯಿತು. 'ಏನು ಮಾಡಲಿ-ಏನು ಮಾಡಲಿ' ಎಂದು ಹಣೆಹಣೆ ಚಚ್ಚಿಕೊಂಡಳು. ಮತ್ತೊಮ್ಮೆ 'ಬರೆದು ನೋಡಲೆ' ಎಂದು ವಿಚಾರಮಾಡಿದಳು. ಶ್ರೀನಿವಾಸನ ಉತ್ತರದಲ್ಲಿ ಮುಂದೆ ಪತ್ರವ್ಯವಹಾರ ಮಾಡುವುದಕ್ಕೆ ಅವಕಾಶವೇ ಇರಲಿಲ್ಲ. 'ನೀನು ನನ್ನವನಾಗದಿದ್ದರೆ ಪ್ರಾಣ ಕಳೆದುಕೊಳ್ಳುವೆ' ಎಂದು ಬರೆದು ನೋಡುವ ಎಂದುಕೊಂಡಳು. 'ಕಳೆದುಕೋ ಚಿಂತೆಯಿಲ್ಲ' ಎಂದು ಬರೆಯುವುದಕ್ಕೂ ಶ್ರೀನಿವಾಸ ಹೇಸುವವನಲ್ಲ ಎನಿಸಿತು.

ಗುಂಡಮ್ಮನ ಬಲವಂತಕ್ಕೆ ಒಂದು ತುತ್ತು ಊಟಮಾಡಿದ ಶಾಸ್ತ್ರ ಮುಗಿಸಿ, ಹಾಸಿಗೆಯ ಮೇಲೆ ಮಲಗಿ ವಿಚಾರಪರವಶಳಾದಳು.

ವೆಂಕಪ್ಪಯ್ಯನವರು ಕೂಗಿ ಎಬ್ಬಿಸಿದಾಗಲೇ ಎಚ್ಚರ. ತಂದೆಯನ್ನು ತೊಟ್ಟಿಯಲ್ಲಿ ಕೂಡಿಸಿ ಕೂಡಲೆ ಮುಖ ತೊಳೆದುಕೊಂಡು ಬಂದಳು. ಅವಳ ಕಂದಿದಾನನ ಕಂಡು ವೆಂಕಪ್ಪಯ್ಯನವರು

"ಏಕಮ್ಮ.....ಮೈಯಲ್ಲಿ ಚೆನ್ನಾಗಿಲ್ಲವೇ?" ಎಂದರು.

"ಚೆನ್ನಾಗಿಯೇ ಇದೆ. ಏಕೋ ಸ್ವಲ್ಪ ತಲೆನೋಯುತ್ತಿತ್ತು. ನೆತ್ತಿ ಭಾರವಾಗಿತ್ತು. ಮಲಗಿಬಿಟ್ಟಿದ್ದೆ. ಅಮ್ಮ ಈ ಕಡೆ ಬಂದು ಒಂದು ವಾರದ ಮೇಲಾಯಿತು."

"ಹೂ! ಹೋಗಬೇಕೂಂತಲೇ ಹೇಳುತ್ತಿದ್ದಾಳೆ. ಅವಳಿಗೂ ಕೈತುಂಬ ಕೆಲಸಕಾರ್ಯ. ಕಾವೇರೂ ಬಂದಿದ್ದಳಂತೆ-ನೀನು ಮನೆಯಲ್ಲಿಯೇ ಇರಲಿಲ್ಲವಂತೆ."

"ನನಗೆ ನೂರೆಂಟು ಸಂಸ್ಥೆಗಳ ಕಾಟ. ಮನೆಯಲ್ಲಿ ಸುಖವಾಗಿ ಒಂದು ಘಳಿಗೆ ಇರುವುದಕ್ಕೂ ಮಾರ್ಗವಿಲ್ಲದಾಗಿದೆ."

"ಇಷ್ಟೊಂದು ಚಟುವಟಿಕೆ ಕಟ್ಟಿಕೊಂಡರೆ ನೀನು ಪೂರೈಸುವುದು ಹೇಗೇ ತಾಯಿ. ನಿನ್ನ ಆರೋಗ್ಯದ ಕಡೆ ಲಕ್ಷ್ಯವಿರಬಾರದೇ ?"

"ಹಾಗೇ ಆಗಲಿ....ಕಾಫಿ ತಂದು ಕೊಡುತ್ತೇನೆ."

"ಏನೂ ಬೇಡ- ಇದೇ ಮುಗಿಸಿಕೊಂಡು ಬಂದಿದ್ದೇನೆ."

"ಸಿದ್ಧವಾಗಿದೆ. ಒಳಗೆ ಹೋಗಿ ತಂದುಕೊಡುವದಷ್ಟೇ ಬಾಕಿ."

ಎಂದು ಎದ್ದು ಹೋಗಿ ತಂದೆಗೂ ತನಗೂ ಕಾಫಿ ತಂದಳು. ವೆಂಕಪ್ಪಯ್ಯ ಕಾಫಿ ಕುಡಿದು ಮುಗಿಸಿ ಲೋಟಾ ಕೆಳಗಿಡುತ್ತಾ

"ಈಚೆಗೆ ಸೂರಪ್ಪನವರು ಬಂದಿದ್ದರೇ ?"

"ಬಂದಿದ್ದರು. ನಿನ್ನೆಯೂ ಬಂದಿದ್ದರು, ಏಕೆ ?"

"ನಾನು ಎರಡು ಮೂರು ದಿವಸ ಅವರ ಮನೆ ಕಡೆ ಹೋಗುವುದಕ್ಕಾಗಲಿಲ್ಲ. ಏನಾದರೂ ಹೇಳಿಹೋಗಿದ್ದಾರೆಯೋ ಏನೋಂತ"

"ಏನೂ ಹೇಳಲಿಲ್ಲವಲ್ಲಾ."

ವೆಂಕಪ್ಪಯ್ಯ ಸುಮ್ಮನೆ ಕುಳಿತುಬಿಟ್ಟರು. ಅವರ ಮುಖದಲ್ಲಿ ಮೂಡುತ್ತಿದ್ದ ಚಿಂತೆಯ ಆಳವಾದ ಗೆರೆಗಳನ್ನು ಗಮನಿಸಿ ಸುಭದ್ರಾ

"ಏಕಣ್ಣಾ ! ಏನು ಬಹಳ ಚಿಂತೆ ಮಾಡುತ್ತಿರುವಿರಿ ?"

ದೊಡ್ಡ ಚಿಂತೆಮಾಡುತ್ತಿದ್ದೇನೆ ಸುಭಾ, ಅದನ್ನು ನಿನ್ನಲ್ಲಿ ಪ್ರಸ್ತಾಪ ಮಾಡುವುದಕ್ಕೇ ನಾನು ಬಂದದ್ದು."

"ಹೇಳಿ—ನಿಮ್ಮ ಮನಸ್ಸನ್ನು ಹಗುರಮಾಡುವುದಕ್ಕೆ ನನ್ನಿಂದ ಸಾಧ್ಯವಾಗುತ್ತದೇನೋ ನೋಡುವೆ."

"ನಿನ್ನಿಂದಲೇ ಸಾಧ್ಯ ತಾಯಿ, ಬೇರೆ ಯಾರಿಂದಲೂ ಸಾಧ್ಯವಿಲ್ಲ."

"ಹೇಳಿ ಅಣ್ಣಾ–ಶಿರಸಾವಹಿಸಿಮಾಡಲು ಸಿದ್ಧಳಾಗಿದ್ದೇನೆ."

ವೆಂಕಪ್ಪಯ್ಯನವರು ಕ್ಷಣಕಾಲ ಸುಭದ್ರೆಯ ಮುಖ ನೋಡಿದರು. ಹೌದು ! ಅದೇ ಮಗು–ಅದೇ ನಿಷ್ಕಲ್ಮಷ ಮುಖ–ಅದೇ ಸರಳ ಮಾತುಗಾರಿಕೆ. ಅವರ ಮನಸ್ಸು ಅಧೀರವಾಯಿತು. 'ಕೇಳಲೇ ಬೇಡವೇ' ಎಂಬ ಯೋಚನೆ ಬೇರೆ. ಸುಭದ್ರೆಯೇ ಒತ್ತಾಯಮಾಡಿ

"ಹೇಳಿ ಅಣ್ಣಾ–ಸುಮ್ಮನೆ ಮನಸ್ಸಿನಲ್ಲಿ ಚಿಂತೆಯಿಟ್ಟುಕೊಂಡು ನೀವು ಕೊರಗುವುದನ್ನು ನಾನು ನೋಡಲಾರೆ" ಎಂದಳು.

ವೆಂಕಪ್ಪಯ್ಯನವರು ಧೈರ್ಯ ತೆಗೆದುಕೊಂಡು,

"ಸುಭಾ ನೀನು ನನ್ನಲ್ಲಿ ಯಾವಾಗಲೂ ಸುಳ್ಳು ಹೇಳುವುದಿಲ್ಲ ವಲ್ಲಾ !"

''ಹಿಂದೆ ಯಾವಾಗಲಾದರೂ ಹೇಳಿದ್ದೇನೆಯೆ ?"

"ಇಲ್ಲ" ಈಗ ?"

"ಈಗಲೂ ಇಲ್ಲ"

''ಹಾಗಾದರೆ ನಾನು ಕೇಳುವ ಪ್ರಶ್ನೆಗೆ ನೇರವಾಗಿ ಉತ್ತರ ಹೇಳುವೆಯಾ ?"

"ಹೇಳುತ್ತೇನೆ ಅಣ್ಣಾ"

"ಸೂರಪ್ಪನವರಿಗೂ ನಿನಗೂ ಹೇಗಿದೆ ?"

"ಚೆನ್ನಾಗಿಯೇ ಇದೇ. ನಾವು ಏತಕ್ಕೂ ವ್ಯಾಜ್ಯ ಕಾದಿಲ್ಲ: ಇಂದಿಗೂ ನಾವಿಬ್ಬರೂ ಹಲವು ಸಂಸ್ಥೆಗಳಲ್ಲಿ ಕೂಡಿ ಕೆಲಸಮಾಡುತ್ತಿದ್ದೇವೆ."

"ಆ ಸಂಬಂಧ ಬಿಟ್ಟು ಹೆಚ್ಚಿನ ಸಂಬಂಧವಿದೆಯೇ ?"

ಸುಭದ್ರಾ ಆವಾಕ್ಕಾದಳು. ತನ್ನ ಅಧೀರತೆಯನ್ನು ತೋರಗೊಡದೆ ಬನ್ನಾಣ ಬೀರುತ್ತ

"ಏಕಣ್ಣ–ಇಂಥ ವಿಚಿತ್ರ ಪ್ರಶ್ನೆ ಕೇಳುತ್ತಿರುವಿರಿ ?"

"ಕೇಳಬೇಕಾಗಿ ಬಂದಿದೆ. ಮನಸ್ಸಿಲ್ಲದೆ, ವಿಧಿಯಿಲ್ಲದೆ, ನಿರ್ವಾಹ ವಿಲ್ಲದೆ ಕೇಳುತ್ತಿದ್ದೇನೆ. ಸತ್ಯವಾದ ಉತ್ತರ ಹೇಳು ಸುಭಾ."

"ಇನ್ನು ಯಾವ ಸಂಬಧವೂ ಇಲ್ಲ. ಗಂಡು ಹೆಣ್ಣು ಒಟ್ಟಿಗೆ ತಿರುಗಾಡಿದರೆ ಹೆಸರಿಡುವುದು ಲೋಕ ಸ್ವಭಾವ. ಹಾಗೆ ನಿಮಗೆ ಯಾರೋ ನಮ್ಮ ಮೇಲೆ ಇಲ್ಲಸಲ್ಲದ ಚಾಡಿ ಹೇಳಿರಬೇಕು."

"ಈ ಮಾತು ಸತ್ಯವೇ ?"

''ಸತ್ಯ"

''ನನ್ನ ಮೇಲೆ ನಿನ್ನ ತಾಯಿಯ ಮೇಲೆ ಪ್ರಮಾಣಮಾಡಿ ಹೇಳುವೆಯಾ ?"

"ನಿಮ್ಮಿಬ್ಬರ ಆಣೆಗೂ ನಾನು ಹೇಳುತ್ತಿರುವುದು ಸತ್ಯ"

ಎಂದು ನಿರಾತಂಕವಾಗಿ ನುಡಿದುಬಿಟ್ಟಳು. ವೆಂಕಪ್ಪಯ್ಯನವರ ಮನಸ್ಸು ಹಗುರವಾಯಿತು. ಹೋದ ಉಸಿರು ಬಂದಂತಾಯಿತು.

"ಆದಷ್ಟು ಇಂಥ ಮಾತಿಗೆ ಅವಕಾಶ ಕೊಡಬೇಡ ತಾಯೀ."

"ಅವರ ಜತೆ ಕೆಲಸಮಾಡುವುದೇ ತಪ್ಪೆ? ಅಜ್ಞಾನಿಗಳು ಮನಸ್ಸಿಗೆ ಬಂದಂತೆ ಭಾವಿಸಿಕೊಂಡು ಆಡಿದರೆ ನಾನೇನು ಮಾಡಲು ಸಾಧ್ಯ?"

"ನಿನ್ನ ಎಚ್ಚರದಲ್ಲಿ ನೀನಿರುವುದು ಒಳ್ಳೆಯದು."

"ಅಣ್ಣಾ, ಈ ಮಾತು ನಿಮ್ಮ ಕಿವಿಯ ಮೇಲೆ ಹಾಕಿದವರು ಯಾರು?"

"ಯಾರಾದರೇನು? ಅದು ಮುಖ್ಯವಲ್ಲ."

"ಮುಖ್ಯ. ಯಾರೆಂಬುದು ಗೊತ್ತಾದರೆ ಅವರ ಉದ್ದೇಶವೂ ತಿಳಿಯುತ್ತದೆ."

"ನಿನ್ನ ಮೇಲೆ ಯಾವ ದುರುದ್ದೇಶವೂ ಇಲ್ಲದಿರುವ ನಿನ್ನ ಹಿತೈಷಿಗಳಲ್ಲೊಬ್ಬರು"

"ನನ್ನ ಸಂಸಾರಕ್ಕೆ ಹುಳಿ ಹಿಂಡಲೆತ್ನಿಸುತ್ತಿರುವ ಅಂಥ ಹಿತೈಷಿಗಳು ಯಾರು?"

"ಆ ಮಾತು ಬೇಡ-ಹೋಗಲಿ ಬಿಡು."

"ಇಲ್ಲ.....ನೀವು ಹೇಳಲೇಬೇಕು."

"ಬೇಡ ಸುಭಾ-ಮನೆಯಲ್ಲೇಕೆ ಕುರುಕ್ಷೇತ್ರವಾಗಬೇಕು."

"ಆದರೂ ಚಿಂತೆಯಿಲ್ಲ ಹೇಳಿ .ಗುಂಡಮ್ಮನವರೇ..."

"ಛೆ! ಛೆ! ಪಾಪ! ಆ ಬಡಾಯಿ ಯಾವ ಮಾತಿಗೂ ಬರುವುದಿಲ್ಲ."

"ಕಾವೇರತ್ತೇನೆ?"

"ಹೋಗಲಿ ಬಿಡು. ಯಾರಾದರೇನು?"

"ಅವಳೇ ಇರಬೇಕು. ಮೊದಲಿನಿಂದಲೂ ಕಾವೇರತ್ತೇಗೆ ನನ್ನ ಮೇಲೆ ಕೋಪ. ನಾನು ಕಾಲೇಜಿಗೆ ಹೋಗುತ್ತಿದ್ದುದೇ ಅವಳಿಗೆ ಸಹನೆಯಿರಲಿಲ್ಲ."

"ಅವಳ ಮನಸ್ಸು ಒಳ್ಳೆಯದು ಸುಭಾ......ನಿಜವಾಗಿಯೂ ಅವಳು ನಿನ್ನ ಹಿತೈಷಿ."

"ನಾನೆಲ್ಲ ಬಲ್ಲೆ ಅಣ್ಣಾ. ಇವರು ಹೋಗಿ ಅತ್ತೇಗೆ ಚಾಡಿ ಹೇಳಿದ್ದಾರೆ. ಅವಳು ಇಲ್ಲದ ಕಥೆ ಕಟ್ಟಿ ನಿಮ್ಮ ಮುಂದೆ ಹೇಳಿದ್ದಾಳೆ."

"ಪಾಪ–ರಂಗಣ್ಣ ನನ್ನೇಕೆ ಈ ಹಗರಣಕ್ಕೆ ಎಳೆಯುತ್ತೀ."

"ಅವರ ಮನಸ್ಸು ನಾನು ಚೆನ್ನಾಗಿ ಬಲ್ಲೆ. ಹಳ್ಳಿ ಹುಡುಗಿಯರ ಹಾಗೆ ಸದಾ ಅವರ ಪಾದಸೇವೆ ಮಾಡಿಕೊಂಡಿರಬೇಕೆಂದು ಅವರ ಇಚ್ಛೆ."

"ಹೋಗಲಿ. ಈ ಮಾತು ಬಿಟ್ಟುಬಿಡುತ್ತೀಯೋ ಇಲ್ಲವೋ?—ಇವನ್ನೇ ಒಂದು ರಾಮಾಯಣ ಮಾಡುತ್ತೀಯೋ?"

"ನೀವು ಬೇಡವೆಂದಷ್ಟನ್ನು ನಾನೇಕೆ ಮಾಡಲಿ. ಎತ್ತಲಾದರೂ ಹಾಳಾಗಿ ಹೋಗಲಿ. ನನ್ನ ಮೇಲೆ ಚಾಡಿ ಹೇಳಿದವರ ಬಾಯಲ್ಲೇ ಹುಳು ಸುರಿಯುತ್ತೆ."

"ಹಾಗೆ ಅಂದುಕೊಂಡು ಸಮಾಧಾನ ತಂದುಕೋ"

ಎಂದು ಮಗಳಿಗೆ ತಾವೇ ಸಮಾಧಾನ ಹೇಳಿ, ತಮ್ಮ ಅವಿವೇಕಕ್ಕೆ ಪಶ್ಚಾತ್ತಾಪ ಪಡುತ್ತಾ ವೆಂಕಪ್ಪಯ್ಯ ಮನೆಯ ಕಡೆ ಹೊರಟರು.

## ೨೫

ಸೂರಪ್ಪನವರು ರಂಗಣ್ಣನನ್ನು ತಮ್ಮ ಸೆಕ್ರೆಟರಿ ಮಾಡಿಕೊಂಡಿದ್ದರು. ಶಾಲೆಯಲ್ಲಿ ಅವನಿಗೆ ವಿಶೇಷ ಕೆಲಸವಿರುತ್ತಿರಲಿಲ್ಲ. ಪಠ್ಯೇತರ ಚಟುವಟಿಕೆಗಳಲ್ಲಿ ಉಪಾಧ್ಯಾಯರು ಭಾಗವಹಿಸಬೇಕೆಂಬ ನಿಯಮ ರಂಗಣ್ಣನಿಗೆ ಅನ್ವಯವಾಗುತ್ತಿರಲಿಲ್ಲ.

ಆದರೆ ಸೂರಪ್ಪನವರ ಮನೆಯಲ್ಲಿ ರಂಗಣ್ಣನಿಗೆ ಕೈತುಂಬ ಕೆಲಸ. ಸೂರಪ್ಪನವರಿಗೆ ಸಂಬಂಧಪಟ್ಟ ಸಭೆಗಳು, ಸಂಸ್ಥೆಗಳು, ಬ್ಯಾಂಕುಗಳು ಇವುಗಳ ವ್ಯವಹಾರ ನೋಡಿಕೊಳ್ಳುವುದಲ್ಲದೆ ಸೂರಪ್ಪನವರ ಅಧ್ಯಕ್ಷ ಭಾಷಣಗಳು, ಆರಂಭ ಭಾಷಣಗಳು, ನ್ಯಾಯವಿಧಾಯಕ ಸಭೆ ಭಾಷಣಗಳನ್ನು ಸಿದ್ಧಗೊಳಿಸುವುದು, ಪತ್ರಿಕೆಗಳಿಗೆ ಸುದ್ದಿ ಕಳಿಸುವುದು ಮೊದಲಾದ ಸಮಸ್ತ ಜವಾಬ್ದಾರಿಯೂ ಅವನ ಮೇಲೇ ಬಿದ್ದಿತ್ತು. ಕೆಲವು ಸಲ ಕೆಲಸ ಹೆಚ್ಚಾಗಿ ರಂಗಣ್ಣ ಶಾಲೆಗೆ ರಜೆ ತೆಗೆದುಕೊಂಡು ಅವುಗಳನ್ನು ಮುಗಿಸಬೇಕಾಗಿತ್ತು. ಕೆಲವು ಸಲ ರಾತ್ರಿ ಮನೆಗೆ ಹೋಗುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ.

ರಂಗಣ್ಣನಿಗೆ ಕೆಲಸ ಹೆಚ್ಚೆಂದೂ, ಅದಕ್ಕೆ ತಕ್ಕ ಪ್ರತಿಫಲ ಕೊಡಬೇಕೆಂದೂ ಸೂರಪ್ಪನವರು ಚೆನ್ನಾಗಿ ತಿಳಿದುಕೊಂಡಿದ್ದರು. ಅವನಿಗೆ ತಾವು ಕೊಡುತ್ತಿದ್ದ ಮಾಸಾಶನವನ್ನು ಐವತ್ತರಿಂದ ನೂರಕ್ಕೇರಿಸಿದರು. ಅವನ ಮೈಮೇಲೆ ಹರಕು ಬಟ್ಟೆ ಕಂಡರೆ ತಮ್ಮ ಅಕೌಂಟಿರುವ ಅಂಗಡಿಗೆ ಕರೆದೊಯ್ದು ಬೇಕಾದಷ್ಟು ಬಟ್ಟೆ ಹೊಲಿಸಿಕೊಡುತ್ತಿದ್ದರು. ಅವನ ಕೈಯಲ್ಲಿ ಗಡಿಯಾರವಿಲ್ಲದ್ದನ್ನು ಕಂಡು ಇನ್ನೂರೈವತ್ತು ರೂಪಾಯಿ ತೆತ್ತು ಫೆವರ್ ಲೂಬಾ ಕಂಪೆನಿಯ ಸೊಗಸಾದ ಕೈಗಡಿಯಾರ ತಂದಿತ್ತರು.

ಹಬ್ಬ, ಹುಣ್ಣಿಮೆ ಬಂತೆಂದರೆ ರಂಗಣ್ಣನ ಕೈತುಂಬ ಹಣವಿತ್ತು 'ಸೊಗಸಾಗಿ ಹಬ್ಬ ಮಾಡಯ್ಯ' ಎಂದು ಆಶೀರ್ವದಿಸುತ್ತಿದ್ದರು.

ರಂಗಣ್ಣ ಆಗಾಗ್ಗೆ ಸೂರಪ್ಪನವರ ಕೆಲಸದ ಸಲುವಾಗಿ ಊರುಬಿಟ್ಟು ಹೊರಗೆ ಹೋಗಬೇಕಾಗಿತ್ತು. ಅವನಿಗೆ ಸೆಂಕೆಂಡ್‌ಕ್ಲಾಸ್ ವೆಚ್ಚ, ದಿನಕ್ಕೆ ಹತ್ತು ರೂಪಾಯಿ ಭತ್ಯ ದೊರೆಯುತ್ತಿತ್ತು. ಕೆಲಸ ಮುಗಿಸಿಕೊಂಡು ಬಂದ ಮೇಲೆ ಸೂರಪ್ಪನವರು ಧಾರಾಳವಾಗಿ ನೂರಿನ್ನೂರು ರೂಪಾಯಿ ಅವನ ಕೈಗೆ ಹಾಕುತ್ತಿದ್ದರು.

ಸೂರಪ್ಪನವರ ಔದಾರ್ಯ ಕಂಡು ರಂಗಣ್ಣ ದಿಙ್ಮೂಢನಾಗಿ ಬಿಟ್ಟಿದ್ದ. ತನ್ನ ಶುಕ್ರಮಹಾದೆಸೆಯನ್ನು ಕಂಡು ಆಶ್ಚರ್ಯವಾಗಿತ್ತು. ಸೂರಪ್ಪನವರೇ ತನ್ನ ಭಾಗದ ದೇವರು ಎಂದು ಅವನಿಗೆ ಮುಂದಟ್ಟಾಗಿತ್ತು. ಯಾವ ಕಾರಣಕ್ಕೂ ಸೂರಪ್ಪನವರಿಗೆ ಬೇಸರವನ್ನುಂಟುಮಾಡದೆ, ಅವರ ವಿಶ್ವಾಸವನ್ನು ಕಾಪಾಡಿಕೊಂಡು ಅಭಿವೃದ್ಧಿಗೊಳಿಸಿಕೊಳ್ಳಬೇಕೆಂಬುದು ಅವನ ಉತ್ಕಟಾಕಾಂಕ್ಷೆಯಾಗಿತ್ತು.

ಮಂಕು ಮುಖದ ರಾಮಾಶಾಸ್ತ್ರಿ ಈ ವೈವಾಟನ್ನೆಲ್ಲಾ ಕುತೂಹಲ, ತಿರಸ್ಕಾರಗಳಿಂದ ನೋಡುತ್ತಿದ್ದ. ರಂಗಣ್ಣ ಯಾವಾಗಲಾದರೂ ಸೂರಪ್ಪನವರನ್ನು ಪ್ರಶಂಸೆ ಮಾಡಿದರೆ ಶಾಸ್ತ್ರಿ ವ್ಯಂಗ್ಯವಾಗಿ ನಕ್ಕು ಸುಮ್ಮನಾಗುತ್ತಿದ್ದ.

ಶಾಸ್ತ್ರಿಯ ವ್ಯಂಗ್ಯನಗೆ ಕಂಡು ರಂಗಣ್ಣನಿಗೆ ಒಮ್ಮೊಮ್ಮೆ ಭಯವಾಗುತ್ತಿತ್ತು. ಅವನ ಚುಚ್ಚು ಮಾತಿನ ಮರ್ಮ ಅರ್ಥವಾಗದೆ ಒಮ್ಮೊಮ್ಮೆ ತೊಳಲಾಡುತ್ತಿದ್ದ.

ಶಾಸ್ತ್ರಿಗೂ ರಂಗಣ್ಣನನ್ನು ಕಂಡರೆ ಭಯ. ಯಜಮಾನ'ರ ನಿಸ್ಸೀಮ ವಿಶ್ವಾಸಕ್ಕೆ ಪಾತ್ರನಾಗಿರುವ ರಂಗಣ್ಣನನ್ನು ಎದುರು ಹಾಕಿಕೊಂಡರೆ ನಾಳೆ ತಾನುಣ್ಣುವ ಅನ್ನಕ್ಕೆ ಮಣ್ಣು ಬೀಳುತ್ತದೆಂದು ಅವನು ಚೆನ್ನಾಗಿ ಬಲ್ಲ. ಅವಕಾಶ ಸಿಕ್ಕಿದಾಗ ರಂಗಣ್ಣನನ್ನು ಸ್ತುತಿಮಾಡಿ ಅವನ ವಿಶ್ವಾಸವನ್ನುಳಿಸಿ ಕೊಳ್ಳುವುದೇ ಬದುಕುವ ಮಾರ್ಗವೆಂದು ಶಾಸ್ತ್ರಿ ನಿರ್ಧರಿಸಿದ್ದ.

ರಂಗಣ್ಣನಿಗೆ ಎಲ್ಲಕ್ಕಿಂತ ಹೆಚ್ಚು ಆಪ್ಯಾಯನವಾದ ವಿಷಯವೆಂದರೆ ಸುಭದ್ರೆಯ ನಡವಳಿಕೆಯಲ್ಲಾದ ಬದಲಾವಣೆ. ಇದಕ್ಕೆ ಕಾವೇರಮ್ಮನ ಮಧ್ಯಸ್ಥಿಕೆಯೇ ಕಾರಣವೆಂದು ರಂಗಣ್ಣ ಭಾವಿಸಿದ.

ಸುಭದ್ರೆ ಗಂಡನನ್ನು ಗೌರವದಿಂದ ಕಾಣಲಾರಂಭಿಸಿದ್ದಳು. ಒಂದೊಂದು ಸಂಜೆ ಎಲ್ಲಿಗೂ ಹೋಗದೆ ಮನೆಯಲ್ಲಿಯೇ ಗಂಡನೊಂದಿಗೆ ಚದುರಂಗವಾಟವಾಡುತ್ತಿದ್ದಳು, ಆಗಾಗ್ಗೆ ಪ್ರೀತಿಯಿಂದ ಗಂಡನ ಮುಖದ ಮೇಲೆ ಕೈಯಾಡಿಸಿ 'ಏಕೆ ಇಷ್ಟು ಬಡವಾದಿರಿ-ನಿಮಗೆ ಕೆಲಸ ವಿಪರೀತ ಹೆಚ್ಚು-ವಿಶ್ರಾಂತಿ ಬೇಕು-ನಾಳೆ ಎಣ್ಣೆನೀರು ಹಾಕಿಕೊಳ್ಳಿ' ಎಂದು ಉಪಚಾರೋಕ್ತಿಗಳನ್ನು ನುಡಿಯುತ್ತಿದ್ದಳು

ಕಳೆದುಕೊಂಡ ನಿಧಿ ಮತ್ತೆ ದೊರಕಿದಂತಾಗಿತ್ತು ರಂಗಣ್ಣನಿಗೆ. ತನ್ನ ಬಾಳನ್ನು ಸುಖಮಯವನ್ನಾಗಿ ಮಾಡಲು ಸುಭದ್ರೆ ಪಡುತ್ತಿದ್ದ ಪ್ರಯತ್ನ ಕಂಡು ರಂಗಣ್ಣನ ಹೃದಯ ಕೃತಜ್ಞತೆಯಿಂದ ತುಂಬಿ ಹೋಯಿತು.

ಗಂಡನನ್ನು ಆದರಿಸಬೇಕು-ಅವನನ್ನು ಸುಖಿಯನ್ನಾಗಿ ಮಾಡಬೇಕೆಂಬ ನಿರ್ಧಾರ ಸುಭದ್ರೆಯಲ್ಲಿ ಮೂಡಿದೊಡನೆಯೇ ಅವಳು ಬಹುದೂರ ಹೋಗಲು ಸಿದ್ಧಳಾದಳು.

ಸುಭದ್ರೆ, ರಂಗಣ್ಣ ಪ್ರತ್ಯೇಕ ಸಂಸಾರ ಹೂಡಿ ನಿಂತಮೇಲೆ ಅವರು ಸಹಜ ದಾಂಪತ್ಯಜೀವನದೊಳಗೆ ಕಾಲಿಟ್ಟುದೇ ಅಪರೂಪ. ಎರಡು ಮಂಚಗಳು ಒಂದಾಗುವುದಕ್ಕೆ ಸುಭದ್ರೆ ಅವಕಾಶಕೊಟ್ಟಿರಲಿಲ್ಲ. ಎರಡು ಮನಸ್ಸುಗಳೊಂದಾಗಬೇಕೆಂದು ಅವಳು ಬಯಸಿದಂತೆ, ಎರಡು ಮಂಚಗಳೂ ಒಂದಾಗಬೇಕೆಂದು ಬಯಸಿದ್ದಳು. ರಂಗಣ್ಣನಿಗೆ ಬೇರೆ ಸ್ವರ್ಗವೇ ಬೇಕಿರಲಿಲ್ಲ. ನಗೆಯಿಂದ, ಗೆಲುವಿನಿಂದ, ಚೆಲುವಿನಿಂದ ಅವನ ಹೃದಯ ತುಂಬಿ ತುಳುಕುತ್ತಿತ್ತು. ಹೊಟ್ಟೆಯ ಪಾಡಿನ ಕಷ್ಟವೂ ಇರಲಿಲ್ಲ; ಸಂಸಾರದ ಸಮಸ್ಯೆಯೂ ಪರಿಹಾರವಾಗಿತ್ತು.

ಸಂಸ್ಥಾನದ ರಾಜಕೀಯ ಆಗಸದಲ್ಲಿ ಕಾರ್ಮೋಡಗಳು ಕವಿಯುತ್ತ ಬಂದವು. ವರ್ಷಕಾಲ ಆರಂಭವಾಗುವ ಚಿಹ್ನೆ ಸುಸ್ಪಷ್ಟವಾಯಿತು.

ಸೂರಪ್ಪನವರಿಗೆ ಹಲವು ಯೋಚನೆ ಆರಂಭವಾಯಿತು. ಕಾಲೇಜ್ ಟರ್ಮ್ ಮುಗಿಯುತ್ತ ಬಂದಿತ್ತು.

ಶ್ರೀನಿವಾಸ ಕೆಲವು ದಿನಗಳಲ್ಲಿಯೇ ಊರಿಗೆ ಬರುವವನಿದ್ದ. ಅವನು ಬಂದ ಮೇಲೆ ಯಾವ ಸುದ್ದಿ ಅವನ ಕಿವಿಯ ಮೇಲೆ ಬೀಳುವುದೋ ಏನು ಪಗರಣವಾಗುವುದೋ ಎಂಬ ಯೋಚನೆ ಸೂರಪ್ಪನವರಿಗೆ ಹತ್ತಿತ್ತು.

ಸ್ವರಾಜ್ಯ ಪಕ್ಷದಲ್ಲಿ ಸೂರಪ್ಪನವರ ಪ್ರಾಬಲ್ಯ ಬೆಳೆದಿತ್ತು. ಅವರ ಪ್ರಾಬಲ್ಯಕ್ಕೆ ಇದಿರಾಗಿ ಒಂದು ಬಲಿಷ್ಠ ವಿರೋಧಪಕ್ಷವೂ ಸಿದ್ಧವಾಗಿತ್ತು. ಸಂಧಾನುಸಂಧಾನಗಳಿಂದ ಸೂರಪ್ಪನವರು ನ್ಯಾಯವಿಧಾಯಕ ಸಭೆಯಲ್ಲಿ ಪಕ್ಷದ ನಾಯಕರಾಗಿದ್ದರು. ಅವರಿಗೆ ಪಕ್ಷದ ಆಶ್ರಯಕೊಟ್ಟು ನ್ಯಾಯ ವಿಧಾಯಕ ಸಭೆಯಲ್ಲಿ ಸ್ಥಾನ ಕೊಡುವುದಕ್ಕೇ ವಿರೋಧಿಸಿದ್ದ ಸದಸ್ಯರು ಅವರ ನಾಯಕತ್ವಕ್ಕಂತೂ ಕಿಡಿಕಿಡಿಯಾದರು.

ಸೂರಪ್ಪನವರ ವಿರೋಧಿಗಳು ಒಂದು ಬಲವಾದ ವಾದ ಮುಂಡಿಸುತ್ತಿದ್ದರು. ವಿರೋಧಿಗಳಲ್ಲಿ ಕೆಲವರು ಮೊದಲಿನೆಯ ಇಸವಿಯಿಂದ ಸ್ವರಾಜ್ಯ ಪಕ್ಷದ ಸದಸ್ಯರಾಗಿ ಹಲವು ರಾಷ್ಟ್ರೀಯ ಸಂಗ್ರಾಮಗಳಲ್ಲಿ ಭಾಗವಹಿಸಿದವರಿದ್ದರು. ಸತ್ಯಾಗ್ರಹಗಳಲ್ಲಿ ಪಾತ್ರವಹಿಸಿ ನಾಲ್ಕಾರು ಸಲ ಸೆರೆಮನೆಯ ವಾಸಮಾಡಿ ಬಂದವರಿದ್ದರು. ಸೂರಪ್ಪನವರು ಯಾವ ಆಂದೋಲನದಲ್ಲಿಯೂ ಭಾಗವಹಿಸಿರಲಿಲ್ಲ. ಬುದ್ಧಿಬಲ, ಧನಬಲದಿಂದ ಅವರು ಪ್ರತಿಷ್ಠೆ ಬೆಳಸಿಕೊಂಡು ಪಕ್ಷದ ನಾಯಕತ್ವದವರೆಗೇರಿದ್ದರು. ಇದು ಹಳೆಯ ಸದಸ್ಯರ ಮತ್ತು ಅವರ ಅಭಿಮಾನಿಗಳ ಆಗ್ರಹಕ್ಕೆ ಮೂಲಕಾರಣವಾಗಿತ್ತು.

ಸೂರಪ್ಪನವರ ಮೇಲಿದ್ದ ಅಸಮಾಧಾನ ಹೊರಬೀಳುವುದಕ್ಕೆ ಒಂದು ಕಾರಣವೂ ಒದಗಿತು.

ಸರ್ಕಾರದ ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳಿಗೆ ತನಗೆ ಬೇಕಾದ ಕೆಲವರನ್ನು ನಾಮಕರಣ (nomination) ಮಾಡುವ ಪದ್ಧತಿ ಬಹಳ ದಿನಗಳಿಂದ ಆಚರಣೆಯಲ್ಲಿತ್ತು.

ಆ ವರ್ಷ ಎಲೆಕ್ಷನ್ನಿಗೆ ನಿಂತು ಸೋತ ಲೋಕನಾಥನ್ ಅವರಿಗೆ ನಾಮಕರಣ ದೊರೆತಿತ್ತು. ಸೂರಪ್ಪನವರಿಗೂ ಮುನ್ಸಿಪಾಲಿಟಿಯವರಿಗೂ ಇದ್ದ ಬಾಂಧವ್ಯ ಬಲ್ಲ ಜನ ಇವರ ಕೀರ್ತಿಯನ್ನು ಸೂರಪ್ಪನವರ ಕೊರಳಿಗೆ ಕಟ್ಟಿದರು.

ತಮ್ಮ ಪಕ್ಷದ ಎದುರು ನಿಂತು ಹೋರಾಡಿ ಅಪಜಯ ಹೊಂದಿದ ವ್ಯಕ್ತಿಗೆ ಪಕ್ಷದ ನಾಯಕನೊಬ್ಬ ಸಹಾಯಮಾಡಿ ನಾಮಕರಣ ಮಾಡಿಸುವುದು ಸ್ವರಾಜ್ಯ ಪಕ್ಷದ ಕೆಲವು ಸದಸ್ಯರ ಕಣ್ಣಲ್ಲಿ ಮಹಾಪರಾಧವಾಯಿತು. ತಮಗೂ ಅದಕ್ಕೂ ಸಂಬಂಧವಿಲ್ಲವೆಂದು ಸೂರಪ್ಪನವರು ಘಂಟಾಘೋಷವಾಗಿ ಹೇಳಿದರು: ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟರು. ಅವರ ಪ್ರಯತ್ನ ಸಫಲವಾಗಲಿಲ್ಲ—ಸದಸ್ಯರ ಮನಸ್ಸಿನ ಅಪನಂಬಿಕೆ ಮಾಯವಾಗಲಿಲ್ಲ.

ಇದೇ ಸಮಯಕ್ಕೆ ಶ್ರೀನಿವಾಸ ಊರಿಗೆ ಬಂದರೆ ತಮ್ಮ ಸ್ಥಿತಿ ಮತ್ತಷ್ಟು ಕಠಿಣವಾಗುತ್ತದೆಂಬ ಅಂಜಿಕೆ ಬೇರೆ ಸೂರಪ್ಪನವರ ಮನಸ್ಸು ಹೊಕ್ಕಿತು. ಆದರೆ ಮಗನನ್ನು ಮನೆಗೆ ಬರಬೇಡವೆಂದು ಬರೆಯುವುದು ಹೇಗೆ?

ಪರೀಕ್ಷೆ ಮುಗಿದ ಕೂಡಲೆ ಊರಿಗೆ ಹಿಂದಿರುಗಬೇಕೆಂಬ ಯೋಚನೆ ಶ್ರೀನಿವಾಸನಿಗಿರಲಿಲ್ಲ. ಅವನೂ ಇಲಾಹಿ ಕೂಡಿ ಕೆಲವು ಕಾರ್ಮಿಕರ ಕ್ಷೇತ್ರಗಳಲ್ಲಿ ವ್ಯವಸ್ಥಿತ ಕೆಲಸ ಮಾಡಬೇಕೆಂದು ಲೆಕ್ಕಹಾಕಿದ್ದರು. ಆದರೆ ಊರಿನಿಂದ ಮುನಿಸ್ವಾಮಿ ಬರೆಯುತ್ತಿದ್ದ ಕಾಗದಗಳು ಶ್ರೀನಿವಾಸನ ನಿರ್ಧಾರಕ್ಕೆ ಕಾರಣವಾದವು.

ಮುನಿಸ್ವಾಮಿ ತಪ್ಪದೆ ಶ್ರೀನಿವಾಸನಿಗೆ ಕಾಗದ ಬರೆದು ಊರಿನ ಪರಿಸ್ಥಿತಿ, ರಾಜಕೀಯ ಚಲನವಲನಗಳು, ಕಾರ್ಮಿಕರ ಸ್ಥಿತಿಗತಿಗಳಲ್ಲಾಗುತ್ತಿದ್ದ ವ್ಯತ್ಯಾಸಗಳನ್ನು ವಿವರಿಸುತ್ತಿದ್ದ. ಅವನ ಕಳೆದ ಕಾಗದದಲ್ಲಿ ಲೋಕನಾಥನ್ ಅವರಿಗಾದ ನಾಮಕರಣ, ಅದರಲ್ಲಿ ಸೂರಪ್ಪನವರು ವಹಿಸಿದ ಪಾತ್ರವನ್ನು ಕೂಲಂಕಷವಾಗಿ ವಿವರಿಸಿದ್ದ.

ತಂದೆಯ ರಾಜಕೀಯ ಕಂಡು ಶ್ರೀನಿವಾಸನಿಗೆ ಅಸಹ್ಯವಾಯಿತು. "ಇಷ್ಟೆಲ್ಲ ಅಧರ್ಮಕ್ಕೆ ಬಿದ್ದು ಗಳಿಸುವುದಾದರೂ ಏನು?" ಎಂದು ವಿಚಾರ ಮಾಡಿದ.

ಮುನಿಸ್ವಾಮಿ ಇನ್ನೊಂದು ಮಹತ್ವದ ವಿಷಯ ತನ್ನ ಕಾಗದದಲ್ಲಿ ಸೂಚಿಸಿದ್ದ.

"ಹೊರಗೆ ಪ್ರಶಾಂತವಾಗಿ ಕಾಣುತ್ತಿರುವ ಸಂಸ್ಥಾನ ಒಳಗೆ ಪ್ರಶಾಂತ ವಾಗಿಲ್ಲ. ಆಗಸ್ಟ್ ೧೫ ಆದ ನಂತರ ದೇಶದ ರಾಜಕೀಯರಂಗದ ಮೇಲೆ ಯಾವ ಬಿರುಗಾಳಿ ಬೀಸಿತೆಂಬುದನ್ನು ನೀವು ಚೆನ್ನಾಗಿ ಬಲ್ಲಿರಿ. ನಮ್ಮ ಸಂಸ್ಥಾನದ ಸುಂದರ ವಾತಾವರಣ, ರಮಣೀಯವಾದ ನೋಟಗಳು, ಮನೋಹರವಾದ ಹವಾಮಾನ ನೋಡಿಕೊಂಡು ಕ್ರಾಂತಿಯ ಬಿರುಗಾಳಿ ದೂರ ನಿಲ್ಲುವುದಿಲ್ಲ. ದೇಶ ಅಶಾಂತಿಯಿಂದ, ದಾರಿದ್ರ್ಯದಿಂದ ಬೆಂದು ಹೋಗಿದೆ. ಅಧಿಕಾರಶಾಹಿಯಲ್ಲಿ ಬೆಳೆಯುತ್ತಿರುವ ದರ್ಪ, ದಬ್ಬಾಳಿಕೆ ಅನುಭವಿಸಿ ಅನುಭವಿಸಿ ಜನ ಬೇಸತ್ತು ಬೆಂಡಾಗಿದ್ದಾರೆ. ಅವರು ತೋರು ತ್ತಿರುವ ಸಹನೆ ಹೊರಗಣ್ಣಿಗೆ ದೌರ್ಬಲ್ಯವೆಂದು ಕಾಣಬರುವುದಾದರೂ ಅದು ದೌರ್ಬಲ್ಯವಲ್ಲ. ಮಹಾಕ್ರಾಂತಿಗೆ ಮುನ್ನ ಒಂದು ಅಪೂರ್ವ ಶಾಂತಿ ಮೂಡುತ್ತದೆ-ಒಂದು ಬಗೆಯ ಶ್ಮಶಾನ ಶಾಂತಿ. ಅಂಥ ಶಾಂತಿ ಇಂದು ನಮ್ಮ ದೇಶದಲ್ಲಿ. ಸ್ವಲ್ಪ ಕಿಡಿ ಹಾರಿದರೆ ಸಾಕು ಆಸ್ಫೋಟನ. ಅನಿವಾರ್ಯ ನೀವು ಈಗಲೇ ಹಿಂದಿರುಗಿ ಬರಬೇಕು. ಜನತೆಯ ಸಂಘಟನೆ ಮಾಡಬೇಕು. ಈಗ ಬರಲಿರುವ ಚಳುವಳಿಯಲ್ಲಿ ಜನ ಸೋತರೆ ಅವರು ಮುಂದೆ ಯಾವಾಗಲೂ ತಲೆ ಯೆತ್ತಲು ಸಾಧ್ಯವಿಲ್ಲ."

ಕಾಗದ ಓದಿಕೊಂಡು, ಅದರ ಅರ್ಥ ಇಲಾಹಿಗೆ ವಿವರಿಸಿ ಹೇಳಿ

"ಲಾಯರ್ ಅನಿಸಿಕೊಳ್ಳುವುದು ನನ್ನ ಹಣೆಯಲ್ಲಿ ಬರೆದಿಲ್ಲ ಇಲಾಹಿ, ನಾನು ಹೋಗಿ ಈಸಾರಿ ರಣರಂಗದಲ್ಲಿ ಧುಮ್ಮಿಕ್ಕಬೇಕಾಗುತ್ತದೆ."

"ಅದಕ್ಕೆ ಯೋಚನೆ ಮಾಡುವಿರೇನು ?"

"ನಾನು ಒಂದು ವೃತ್ತಿ ಬೇಕೆಂದು ಈ ಡಿಗ್ರಿಯ ಮರೆ ಹೋಗಲಿಲ್ಲ ವಲ್ಲಾ ? ಇದೂ ಜನತೆಯ ಸೇವೆಗಾಗಿ ಎಂದು ಭಾವಿಸಿಯೇ ಇಲ್ಲಿ ಬಂದೆ. ಡಿಗ್ರಿ ದೊರಕಿಸುವುದಕ್ಕಿಂತ ಹೆಚ್ಚಿನ ಸೇವೆ ನನ್ನಿಂದಾಗುವ ಸಂಭವವಿದ್ದರೆ ಆಗಲಿ-ಅದಕ್ಕೇಕೆ ವ್ಯಸನಪಡಬೇಕು."

"ನೋಡಿ ಕಾಮ್ರೇಡ್....ನಾಳೆ ನಿಮ್ಮಲ್ಲಿ ಚಳುವಳಿ ಆರಂಭವಾಗಿ ನಿಮಗೆ ಜನಬಲ, ಧನಬಲ ಬೇಕಾಗಿದ್ದರೆ ನನಗೊಂದು ಮಾತು ತಿಳಿಸಿ. ನಾನು ಐದುನೂರು ಸತ್ಯಾಗ್ರಹಿಗಳೊಂದಿಗೆ ಬರುವುದಕ್ಕೆ ಸಿದ್ಧ. ಧನ

ಸಂಗ್ರಹಮಾಡಿ ಕಳಿಸಿಕೊಡುತ್ತೇನೆ. ಮತ್ತೆ ಏನಾದರೂ ನೆರವು ಬೇಕಾದಲ್ಲಿ ಸಂಕೋಚಪಟ್ಟುಕೊಳ್ಳದೆ ಕೇಳಿ."

"ಆಗಬಹುದು. ಸದ್ಯಕ್ಕೆ ಏನೂ ಬೇಕಾಗಲಾರದು. ಮುನಿಸ್ವಾಮಿ ತುಂಬ ದಕ್ಷರು. ಅವರು ಎಲ್ಲ ವ್ಯವಸ್ಥೆ ಮಾಡಿಯೇ ನನಗೆ ಬರೆದಿರಬೇಕು"

"ನಿಮಗೆ ಹೇಗೆ ಸೂಕ್ತ ತೋರುವುದೋ ಹಾಗೇಮಾಡಿ"

ಎಂದು ಇಲಾಹಿ ಹೇಳಿದ.

ತಾನೂ ಊರಿಗೆ ಬರುವ ತಾರೀಕು ನಿಶ್ಚಯಿಸಿ ಶ್ರೀನಿವಾಸ ಸೂರಪ್ಪನವರಿಗೂ ಮುನಿಸ್ವಾಮಿಗೂ ಪತ್ರಗಳನ್ನು ಬರೆದ.

## ೩೭

ಸೂರಪ್ಪನವರ ಅಶಾಂತಿ ದಿನದಿನಕ್ಕೆ ಬೆಳೆಯುತ್ತ ಹೋಯಿತು. ಪಕ್ಷದ ಉಗ್ರ ಸದಸ್ಯರು ಸತ್ಯಾಗ್ರಹ ಹೂಡಿ ಜವಾಬ್ದಾರಿ ಸರ್ಕಾರದ ಹೋರಾಟ ನಡೆಸಬೇಕೆಂದು ಒತ್ತಾಯ ಮಾಡತೊಡಗಿದರು ಸೂರಪ್ಪನವರು ಅದನ್ನು ಸಾಮ, ಭೇದಗಳಿಂದ ನಿವಾರಿಸಿ ಸತ್ಯಾಗ್ರಹವನ್ನು ಮುಂದೂಡುತ್ತಾ ಬಂದಿದ್ದರು. ಈ ಚಾಣಕ್ಯ ನೀತಿ ಹೆಚ್ಚು ದಿನ ನಡೆಯುವುದಿಲ್ಲವೆಂದು ಸೂರಪ್ಪನವರ ಮನಸ್ಸಿಗೆ ಖಚಿತವಾಗಿತ್ತು.

ಅವರು ಆದಷ್ಟು ಅವಕಾಶ ಕಲ್ಪಿಸಿ ರಂಗಣ್ಣನನ್ನು ಬೇರೆ ಬೇರೆ ಊರುಗಳಿಗೆ ಕಳಿಸುವ ವ್ಯವಸ್ಥೆ ಮಾಡಿ ಸುಭದ್ರೆಯೊಂದಿಗೆ ಕಾಲ ತಳ್ಳತೊಡಗಿದರು. ಸುಭದ್ರೆಯ ಮಾತುಕಥೆ, ಸಮಾಧಾನೋಕ್ತಿ, ಉಪಚಾರಗಳೇ ಅವರಿಗೆ ಉಳಿದಿದ್ದ ನಿಧಿ.

ಸುಭದ್ರೆ ಮನಸ್ಸು ಗಟ್ಟಿ ಮಾಡಿಕೊಂಡಿದ್ದಳು. ಶ್ರೀನಿವಾಸನ ಕೊನೆಯುತ್ತರ ಬಂದ ಮೇಲೆ ಅವಳು ಯಾವುದನ್ನೂ ಲಕ್ಷಿಸುತ್ತಿರಲಿಲ್ಲ. ಮನಸ್ಸು ರೋಸಿ ಹೋಗಿತ್ತು. ಮುಂದೆ ತನ್ನ ಜೀವನಕ್ಕೇನಾಗಬಹುದು–ತನ್ನ ಕೀರ್ತಿಗೇನಾಗಬಹುದು ಎಂಬುದರ ಪರಿವೆಯೂ ಸಂಪೂರ್ಣವಾಗಿ ಮರೆತು ಹೋಯಿತು. ನಿರ್ಭಯೆಯಾಗಿ ಸೂರಪ್ಪನವರ ಜತೆ ಓಡಿಯಾಡತೊಡಗಿದಳು.

ಊರಿನಲ್ಲಿ ಈ ವಿಷಯ ಹೆಚ್ಚು ದಿನ ಗುಂಭವಾಗಿರಲು ಸಾಧ್ಯವಾಗಲಿಲ್ಲ. ಎಲ್ಲರ ಬಾಯಲ್ಲಿಯೂ ಇದೇ ಮಾತು. ಸ್ವರಾಜ್ಯ ಪಕ್ಷದ ಸ್ವಯಂ

ಸೇವಕರಾಗಿದ್ದ ಹುಡುಗರಂತೂ ಸೂರಪ್ಪನವರ ಕ್ರೀಡೆಯ ಬಗ್ಗೆ ತುಂಬ ಕನಲಿದರು. ಪುಂಡ ಹುಡುಗರು ಬೀದಿಯ ಗೋಡೆಗಳ ಮೇಲೆ ಸೂರಪ್ಪನವರ-ಸುಭದ್ರೆಯ ಸಂಬಂಧವನ್ನು ಕುರಿತು ಶಾಸನ ಬರೆದರು. ಇನ್ನು ಕೆಲವರು ಸಣ್ಣ ಪ್ರಕಟನೆ ಅಚ್ಚು ಹಾಕಿಸಿ ಊರಿನಲ್ಲೆಲ್ಲಾ ಹಂಚಿಸಿದರು. ಪ್ರಕಟನೆ ಸೂರಪ್ಪನವರು ಸುಭದ್ರೆ ಇಬ್ಬರ ಕೈಗೂ ಬಂದಿತು. ಅವರದನ್ನು ನೋಡಿಕೊಂಡು ನಕ್ಕು ಸುಮ್ಮನಾದರು.

ಸೂರಪ್ಪನವರ ಕೆಲಸದ ಮೇಲೆ ಮೈಸೂರಿಗೆ ಹೋಗಿದ್ದ ರಂಗಣ್ಣನ ಕೈಗೂ ಒಂದು ಅಚ್ಚಾದ ಪ್ರಕಟನೆ ಸಿಕ್ಕಿತು. ಅವನ ಮನಸ್ಸು ಅಲ್ಲೋಲ ಕಲ್ಲೋಲವಾಯಿತು, 'ಇದು ಪುಂಡರ ಕಿತಾಪತಿ—ಸೂರಪ್ಪನವರು ಅಂಥವರಲ್ಲ' ಎಂದು ಮೊದಲು ಸಮಾಧಾನಮಾಡಿಕೊಂಡ. ಆದರೆ ತಮ್ಮ ಮೂವರ ಸಂಬಂಧ ಜ್ಞಾಪಿಸಿಕೊಂಡ ಮೇಲೆ ಈ ಸಮಾಧಾನ ಸುಳ್ಳು ಸಮಾಧಾನವೆಂದು ಅವನಿಗೆ ಭಾಸವಾಯಿತು.

"ನಿಜವಾದರೆ ಏನು ಮಾಡುವುದು?—ಸೂರಪ್ಪನವರಂಥ ಪ್ರಬಲರನ್ನು ವಿರೋಧಿಸುವುದು ಸಾಧ್ಯವಿಲ್ಲ, ವಿರೋಧಿಸಿದರೆ ಪ್ರಯೋಜನವೂ ಇಲ್ಲ. ಈಗ ಗುಪ್ತವಾಗಿ ನಡೆಯುತ್ತಿರುವುದನ್ನು ತಾನೇ ಬಯಲಿಗೆ ತಂದ ಹಾಗಾಗುತ್ತದೆ."

ಎಲ್ಲಕ್ಕೂ ಮುಖ್ಯವಾಗಿ ಒಂದು ವಿಚಾರ ರಂಗಣ್ಣನಿಗೆ ಹೊಳೆಯಿತು. ಸುಭದ್ರೆ ಪ್ರತಿಭಟಿಸಿ ನಿಂತು, ತಾನು ಸೂರಪ್ಪನವರ ಜತೆ ಹೊರಟು ಹೋಗುವುದಾಗಿ ಹೇಳಿದರೆ ಗತಿಯೇನು?

ರಂಗಣ್ಣನಿಗೆ ದಿಕ್ಕು ತೋರಲಿಲ್ಲ. ಈ ಹೊತ್ತಿನಲ್ಲಿ ಏನು ಮಾಡಿದರೆ ಒಳ್ಳೆಯದು ಎಂದು ಸಾವಕಾಶವಾಗಿ ವಿಚಾರಮಾಡಿ ಒಂದು ಖಚಿತವಾದ ನಿರ್ಧಾರಕ್ಕೆ ಬರುವ ಚಿತ್ತವೃತ್ತಿ ಅವನಲ್ಲಿ ಉಳಿಯಲಿಲ್ಲ. ಅವನ ಕಾರ್ಯಕ್ರಮದ ಪ್ರಕಾರ ಇನ್ನೂ ಎರಡು ದಿವಸ ಮೈಸೂರಿನಲ್ಲಿಯೇ ಉಳಿಯುವ ಅಗತ್ಯವಿತ್ತು. ರಾತ್ರಿಯೆಲ್ಲಾ ಯೋಚನೆಮಾಡಿದ. ಬೆಳಗಾದ ಕೂಡಲೆ ಸಾಮಾನು ಸುತ್ತಿಕೊಂಡು ಬೆಳಿಗ್ಗೆಯ ಗಾಡಿ ಹತ್ತಿ ಬೆಂಗಳೂರಿಗೆ ಪ್ರಯಾಣ ಬೆಳಸಿದ.

ಬೆಂಗಳೂರಿನಲ್ಲಿ ಇಳಿದವನು ನೇರ ಮಾಡರ್ನ್ ಹಿಂದೂ ಹೋಟೆಲಿಗೆ ಹೋಗಿ ಸ್ನಾನ, ಊಟ ತೀರಿಸಿಕೊಂಡು ಅಲ್ಲೇ ಒಂದು ಗಂಟೆಕಾಲ ವಿಶ್ರಮಿಸಿಕೊಂಡ.

ಸುಮಾರು ಮೂರುವರೆಗೆ ಹೋಟೆಲ್ ಬಿಟ್ಟು ತನ್ನ ಮನೆಯ ಕಡೆ ಕಾಲ್ನಡಿಗೆಯಲ್ಲಿಯೇ ಹೊರಟ. ಮನೆ ಸಮೀಪಿಸಿದಂತೆ ಅವನಲ್ಲಿ ದುಗುಡ. ಎದೆ ಡವಡವನೆ ಬಡಿದುಕೊಳ್ಳುತ್ತಿತ್ತು ಮನೆಯ ಬಳಿ ಬಂದು ನಿಂತ. ತಲೆಬಾಗಿಲು ಹಾಕಿತ್ತು. ಅಡಿಗೆಯ ಮನೆ ಕಡೆ ನೋಡಿದ-ಗುಂಡಮ್ಮನ ಸುಳಿವಿಲ್ಲ.

ಮೆಲ್ಲನೆ ಸುಭದ್ರೆಯ ಶಯ್ಯಾಗೃಹದ ಕಿಟಕಿಯ ಬಳಿ ಬಂದು ನಿಂತು, ತೆಳ್ಳನೆಯ ತೆರೆಯ ಹಿಂದಿನ ನೋಟ ನೋಡಿದ. ಅವನ ಮೈ ಬೆವರೇರಿತು. ಕಣ್ಣು ಕತ್ತಲೆ ಇಟ್ಟುಕೊಂಡು ಬಂದಿತು. ಆ ಸ್ಥಳಬಿಟ್ಟು ಮನೆಯ ಒಂದು ಮೂಲೆಯಲ್ಲಿ ಬಂದು ಕುಳಿತು ಸಮಾಧಾನ ತಂದುಕೊಂಡ. ಹೊರಗಿದ್ದ ನಳದಲ್ಲಿ ಕೈಕಾಲು ಮುಖ ಚೆನ್ನಾಗಿ ತೊಳೆದುಕೊಂಡು ಮನೆಯ ಮುಂಭಾಗಕ್ಕೆ ಬಂದು ಮೆಲ್ಲನೆ ಬಾಗಿಲು ತಟ್ಟಿದ. ಸುಭದ್ರೆ ಶಯ್ಯಾಗೃಹ ಬಿಟ್ಟು ಬಂದು ಬಾಗಿಲು ಹಿಂದಿದ್ದ ತೆರೆಯ ಕಿಂಡಿಯಲ್ಲಿ ಬಂದಿರುವವರು ಯಾರೆಂಬುದನ್ನು ನೋಡಿದಳು. ಅವಳ ಎದೆ ಧಸಕ್ಕೆಂದಿತು. ಓಡಿಹೋಗಿ ಸೂರಪ್ಪನವರಿಗೆ ಸುದ್ದಿ ಮುಟ್ಟಿಸಿದಳು. ಕ್ಷಣಕಾಲ ಸೂರಪ್ಪನವರೂ ಅಧೀರರಾದರು. ಕೂಡಲೆ ಸ್ಥೈರ್ಯ ತಂದುಕೊಂಡು

"ನೀನು ಹೋಗಿ ಮುಖ ತೊಳೆದುಕೊಂಡು, ಹಣೆಗಿಟ್ಟುಕೊಂಡು ಬಾ-ನಾನೇ ಹೋಗಿ ಬಾಗಿಲು ತೆರೆಯುತ್ತೇನೆ" ಎಂದು ಹೇಳಿದರು.

"ಬೇಡಿ-ಹಿಂದುಗಡೆಯಿಂದ ನೀವು ಹೊರಟುಹೋಗಿ. ನಾನು ಅವರಿಗೆ ಸಮಾಧಾನ ಹೇಳುತ್ತೇನೆ."

"ಹುಚ್ಚಿ! ಇನ್ನೇನು ಸಮಾಧಾನ ಹೇಳಬಲ್ಲೆ. ಇದು ಎಂದಾದರೂ ಆಗಬೇಕಾಗಿದ್ದುದೇ - ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸೋಣ— ನೀನು ಹೋಗು."

ಎಂದೆದ್ದು ಗ್ಲಾಸಿನಲ್ಲಿದ್ದ ನೀರಿನಿಂದ ಮುಖ ತೇವಮಾಡಿ ಒರೆಸಿಕೊಂಡು ತಮ್ಮ ವಸ್ತ್ರಭೂಷಣ ಧರಿಸಿ ಹೊರಗೆ ಬಂದು ರಂಗಣ್ಣನಿಗೆ ಬಾಗಿಲು ತೆರೆದರು.

ರಂಗಣ್ಣ ಕತ್ತು ತಗ್ಗಿಸಿಕೊಂಡು ಒಳಗೆ ಪ್ರವೇಶಿಸಿದ. ಅವನಿಗೆ ನಿಲ್ಲುವುದಕ್ಕೂ ತ್ರಾಣವಿಲ್ಲ. ಒಳಗೆ ಬಂದವನೇ ತೊಟ್ಟಿಯಲ್ಲಿದ್ದ ಸೋಫಾದ

ಮೇಲೆ ಕುಕ್ಕರಿಸಿಬಿಟ್ಟ. ಸೂರಪ್ಪನವರು ತಲೆಬಾಗಿಲನ್ನು ಹಾಕಿಕೊಂಡು ಬಂದು ತಾವೂ ಒಂದು ಸೋಫಾ ಕುರ್ಚಿಯ ಮೇಲೆ ಕುಳಿತರು.

ಐದು ಹತ್ತು ನಿಮಿಷ ಕಳೆದಿರಬಹುದು. ಒಂದೊಂದು ನಿಮಿಷಾರ್ಧವೂ ಒಂದೊಂದು ಯುಗದಂತೆ ಕಳೆಯಿತು. ರಂಗಣ್ಣನ ಮುಖಕ್ಕೆ ಕರವಸ್ತ್ರವಿಟ್ಟು ದುಃಖಿಸುತ್ತಿದ್ದ. ಸೂರಪ್ಪನವರು ನಿಶ್ಚಲರಾಗಿ ಕುಳಿತಿದ್ದರು. ಸ್ವಲ್ಪ ವೇಳೆ ಕಳೆಯಲು ಸೂರಪ್ಪನವರು 'ಸುಭಾ' ಎಂದು ಕೂಗಿದರು. ಸುಭದ್ರೆ ಒಳ ಬಾಗಿಲಿಗೆ ಬಂದು ಮುಖ ತೋರಿದಳು.

"ಬಾ-ಇಲ್ಲಿಯೇ ಕುಳಿತುಕೋ ಬಾ. ನಿನ್ನ ಯಜಮಾನರು ನಿನ್ನೊಂದಿಗೆ ಮಾತನಾಡಬೇಕೆಂದಿದ್ದಾರೆ."

ಯಂತ್ರದಂತೆ ಸುಭದ್ರೆ ಬಂದು ರಂಗಣ್ಣನ ಎದುರಿಗಿದ್ದ ಸೋಫಾ ಕುರ್ಚಿಯ ಮೇಲೆ ಕುಳಿತಳು. ಸೂರಪ್ಪನವರು ಕೇಳಿದರು.

"ನೀನು ನಾಡಿದ್ದು ಬರಬೇಕಾಗಿತ್ತಲ್ವೇ ರಂಗಣ್ಣ. ಇದೇನು ಇಂದೇ ಬಂದುಬಿಟ್ಟೆ?"

ರಂಗಣ್ಣ ಕತ್ತೆತ್ತಿ ಒಮ್ಮೆ ಸೂರಪ್ಪನವರ ಕಡೆ, ಒಮ್ಮೆ ಸುಭದ್ರೆಯ ಕಡೆ ನೋಡಿ ಕ್ರೂರನೋಟ ಬೀರಿದ.

ಒಂದೆರಡು ನಿಮಿಷ ಸುಮ್ಮನಿದ್ದು ಸೂರಪ್ಪನವರು

"ನೋಡು ರಂಗಣ್ಣಾ, ಇರುವ ವಿಷಯ ನಿನಗೆ ಗೊತ್ತೇ ಆಗಿದೆ. ಇನ್ನು ಮುಚ್ಚುಮರೆ ಮಾಡಿ ಸುಳ್ಳು ನಾಟಕವಾಡುವುದರಲ್ಲಿ ಪ್ರಯೋಜನವಿಲ್ಲ. ಇದು ನಮ್ಮ ಮೂವರಿಗೆ ಸಂಬಂಧಪಟ್ಟ ಪ್ರಶ್ನೆ-ಇದನ್ನು ಗೆಳೆಯರಂತೆ ಒಮ್ಮತಿ ಸಮ್ಮತಿಯಿಂದ ನಿರ್ಧರಿಸಿಬಿಡೋಣ. ಕೋಪತಾಪದಿಂದ ಏನೂ ಪ್ರಯೋಜನವಿಲ್ಲ."

ರಂಗಣ್ಣನ ದುಃಖದ ಕಟ್ಟೆ ಕಿತ್ತುಬಂದಿತು. ಅವನ ಹೃದಯ ಒಡೆದು ಕೊಂಡು ಮಾತು ಹೊರಬಿದ್ದಿತು.

"ನೀವು ಹೀಗೆ ಮಾಡಬಹುದೇ ಸಾರ್." ಎಂದ.

ಸೂರಪ್ಪನವರು ಉತ್ತರಕೊಡಲಿಲ್ಲ.

"ನೀವು ನನ್ನ ಹಿತೈಷಿಗಳು-ನನ್ನ ಧಣಿ-ನನ್ನ ತಂದೆ ಎಂದು ಭಾವಿಸಿ ಕೊಂಡಿದ್ದೆನಲ್ಲಾ."

"ನಾನು ಇಂದಿಗೂ ನಿನ್ನ ಹಿತೈಷಿಯೇ ರಂಗಣ್ಣ."

"ನನ್ನ ಸಂಸಾರ ಮುರಿದ ಮೇಲೂ ನನ್ನ ಹಿತೈಷಿಗಳೇ!"

"ನಿನಗೆ ನಿಜವಾಗಿ ಸಂಸಾರವೇ ಇರಲಿಲ್ಲ ರಂಗಣ್ಣ. ಯಾವದನ್ನು ನೀನು ಸಂಸಾರವೆಂದುಕೊಂಡಿದ್ದೆಯೋ ಅದೊಂದು ಬಿಸಿಲ್ಗುದುರೆ"

"ನೀನೇಕೆ ಸುಭಾ–ನನಗಿಷ್ಟು ಮೋಸಮಾಡಿದೆ–ಕೆಲವು ದಿವಸದಿಂದ ನೀನೇಕೆ ನನ್ನಲ್ಲಿ ಇಷ್ಟು ವಿಶ್ವಾಸ ನಟಿಸಿದೆ. ಒಮ್ಮೆಲೆ ನನ್ನನ್ನು ಮೇಲ ಕ್ಕೆತ್ತಿ ಕೂಡಲೇ ಏಕೆ ಕೆಳಗೆಹಾಕಿ ತುಳಿದುಬಿಟ್ಟೆ."

"ರಂಗಣ್ಣ–ಈಗ ನೀನು ತಂದೆಯಾಗಲಿರುವೆ ಎಂಬುದನ್ನು ಮರೆಯ ಬೇಡ."

"ನಾನು ತಂದೆಯಲ್ಲ–ಸುಭಾ ತಾಯಿ ನಿಜ....ಆದರೆ...."

"ಇರಬಹುದು. ನಾವಿಬ್ಬರೂ ಈಗ ಅವಳ ಹಿತದ ಕಡೆ ಲಕ್ಷ್ಯವಿಡ ಬೇಕಲ್ಲವೇ?"

"ನನ್ನ ಏನು ಮಾಡೂಂತ ಹೇಳುತ್ತೀರಿ ಸರ್."

"ಏನೂ ಮಾಡಬೇಡ ಎಂತ ಹೇಳುತ್ತಿದ್ದೇನೆ."

"ಇದನ್ನು ನೋಡಿಕೊಂಡು ಸುಮ್ಮನಿರಲೇ?"

"ರೇಗಾಡಿ ಚೀರಾಡಿ ಊರಿನಲ್ಲಿ ಡಂಗುರ ಸಾರುವೆಯಾ?"

"ಆ ಕೆಲಸ ಯಾರೋ ಪುಣ್ಯಾತ್ಮರು ಈಗಾಗಲೇ ಮಾಡಿಯೇ ಇದ್ದಾರೆ."

"ಮಾಡಿದ್ದಾರೆಂಬುದನ್ನು ನಾನೂ ಬಲ್ಲೆ. ನಾನೊಂದು ಮಾತು ಹೇಳುತ್ತೇನೆ ಕೇಳುವಿಯಾ ರಂಗಣ್ಣ."

"ಹೇಳಿ ಸರ್. ನನಗೆ ಬುದ್ಧಿ ಶೂನ್ಯವಾಗಿದೆ."

"ಈ ಯೋಚನೆಬಿಟ್ಟು ನೀನು ಸುಮ್ಮನಿರು. ಏನೋ ಧರ್ಮಕರ್ಮ ಸಂಯೋಗದಿಂದ ನನಗೂ ಸುಭದ್ರೆಗೂ ಬಾಂಧವ್ಯ ಬೆಳೆಯಿತು. ಅದನ್ನು ನೀನಾಗಲೀ ಯಾರೇ ಆಗಲಿ ತಪ್ಪಿಸಲು ಸಾಧ್ಯವಿಲ್ಲ. ನೀನು ಹಟಕ್ಕೆ—ಮೊಂಡಾಟಕ್ಕೆ ಬಿದ್ದರೆ ನಾನು ಸುಭದ್ರೆಯನ್ನು ಕರೆದುಕೊಂಡು ಹೋಗ ಬೇಕಾಗುತ್ತದೆ. ಆಗ ನಿನ್ನ ಪರಿಸ್ಥಿತಿ ಏನಾಗುವುದು ವಿಚಾರಮಾಡು. ಏನೂ ತಿಳಿಯದಂತೆ ನೀನು ಸುಮ್ಮನಿದ್ದು ಬಿಡು-ನಾನು ಹಿಂದೆಯೂ ನಿನ್ನ ಹಿತೈಷಿ-ಈಗಲೂ ನಿನ್ನ ಹಿತೈಷಿ. ನೋಡು ದೃಷ್ಟಾಂತಕ್ಕೆ ನಿನಗಾಗಿ ೮,೦೦೦ ರೂಪಾಯಿ ಕೊಟ್ಟು ಒಂದು ಮನೆಕೊಂಡಿದ್ದೇನೆ. ಅದರ ಸಾರಣೆಕಾರಣೆಗೆ

ಮತ್ತೆ ೩,೦೦೦ ರೂಪಾಯಿ ಖರ್ಚುಮಾಡಿದ್ದೇನೆ. ನೀನು ಸುಖವಾಗಿ ಬಾಳುವೆ ಸಾಗಿಸಲು ಹತ್ತು ಎಕರೆ ತರೀ ಜಮೀನು ಖರೀದಿ ಮಾಡುತ್ತಿದ್ದೇನೆ-ನಿನಗೆ ಬೇಕೆಂದರೆ ಹೇಳು. ಬೇರೆ ಮದುವೆ ಮಾಡಿಸಲು ಸಿದ್ಧನಾಗಿದ್ದೇನೆ."

"ನನಗೇಕೆ ಇನ್ನು ಮದುವೆ ಸರ್ ಈಗಾಗಿರುವುದು ಸಾಲದೇ?"

"ಯೋಚನೆಮಾಡು. ಇದು ದುಡುಕುವ ವಿಷಯವಲ್ಲ, ಇದರಲ್ಲಿ ಸುಭದ್ರೆಯನ್ನು ಆಕ್ಷೇಪಣೆ ಮಾಡಿದರೆ ಏನೂ ಪ್ರಯೋಜನವಿಲ್ಲ."

"ಅದನ್ನು ನಾನು ಬಲ್ಲೆ ಸರ್."

"ನೀನು ಎಂದು ಹೇಳಿದರೆ ಅಂದು ಮನೆ ನಿನ್ನ ಹೆಸರಿಗೇ ಬರೆದು ಕೊಡುತ್ತೇನೆ. ಸಂಬಂಧ ಹೀಗೆ ನಡೆದುಕೊಂಡು ಹೋಗಲಿ-ಸುಭದ್ರಾ ನೀನು ಸುಖವಾಗಿ ಇರುವುದಕ್ಕೆ ಬೇಕಾದ ಎಲ್ಲ ವ್ಯವಸ್ಥೆಮಾಡುವ ಜವಾಬ್ದಾರಿ ನನಗಿರಲಿ."

ರಂಗಣ್ಣ ಯೋಚನೆ ಮಾಡುತ್ತ ಕುಳಿತುಬಿಟ್ಟ. ಸೂರಪ್ಪನವರು ಸುಭದ್ರೆಯ ಕಡೆ ತಿರುಗಿ

"ಹೋಗು-ಸ್ವಲ್ಪ ಕಾಫಿಮಾಡಿ ತೆಗೆದುಕೊಂಡು ಬಾ."

ಎಂದರು. ಸುಭದ್ರೆ ಖಿನ್ನಳಾಗಿ ಎದ್ದುಹೋದಳು. ವಿಚಾರಮಾಡಿ ಮಾಡಿ ಕೊನೆಗೆ ರಂಗಣ್ಣ

"ಮನೆಯೆಲ್ಲಿದೆ ಸರ್." ಎಂದ

"ವಿಲ್‌ಸನ್ ಗಾರ್ಡನ್ಸ್‌ನಲ್ಲಿ" ಎಂದರು ಸೂರಪ್ಪನವರು.

## ೩೮

ಸಂಸ್ಥಾನದಲ್ಲಿ ಒಂದು ಕಾಲದಲ್ಲಿ ಕೋಮುವಾರು ಭೂತ ಸ್ಥಾಪನೆಯಾಗಿರಲಿಲ್ಲ. ಬ್ರಾಹ್ಮಣ, ಒಕ್ಕಲಿಗ, ವೀರಶೈವ, ರೆಡ್ಡಿ, ಮುಸಲ್ಮಾನ ಒಂದೇ ಊರಿನಲ್ಲಿ ಒಂದೇ ಕೇರಿಯಲ್ಲಿ ಅಣ್ಣ ತಮ್ಮಂದಿರಂತೆ ಬಾಳುತ್ತಿದ್ದರು. ಒಬ್ಬರ ಕಷ್ಟಕ್ಕೆ ಒಬ್ಬರಾಗುತ್ತಿದ್ದರು. ಊರಿಗೇ ಸಂಬಂಧಪಟ್ಟ ಕ್ಷಾಮ ಡಾಮರ, ರೋಗರುಜಿನ ತಲೆದೋರಿದರೆ ಎಲ್ಲರೂ ಒಟ್ಟುಗೂಡಿ ಅದನ್ನೆದುರಿಸುತ್ತಿದ್ದರು.

ಈ ಅಮೃತಜೀವನದಲ್ಲಿ ಒಂದುತೊಟ್ಟು ವಿಷ ಹಿಂಡಿದವನು ಮಿಲ್ಲರ್ ಎಂಬ ಇಂಗ್ಲೀಷಿನವನು. ಅವನು ಒಂದು ವರದಿ ಸಿದ್ಧಗೊಳಿಸಿ ವಿದ್ಯಾ ವಿಷಯದಲ್ಲಿ ಮುಂದಿದ್ದ ಒಂದು ಜನಾಂಗವನ್ನು ತುಳಿಯಲೆತ್ನಿಸಿದ. ಇದರಿಂದ ಉಳಿದ ಜನಾಂಗಗಳಿಗೆ ಪ್ರಯೋಜನವಾಗಲಿಲ್ಲ. ಪರಸ್ಪರ ನಂಬಿಕೆ, ಗೌರವ, ಪ್ರೇಮವಿದ್ದೆಡೆ ಅಪನಂಬಿಕೆ, ಅಗೌರವ, ದ್ವೇಷ ಬೆಳೆಯಲು ಸಾಧಕವಾಯಿತು. ಉಚ್ಚಶಿಕ್ಷಣ ಪಡೆದು ಸರ್ಕಾರದಲ್ಲಿ ಕೆಲಸ ದೊರಕಿಸಿಕೊಳ್ಳಬೇಕೆಂಬ ಚಟ ಎಲ್ಲರಿಗೂ ಹತ್ತಿತು. ವ್ಯಾಪಾರಸ್ಥರು ವ್ಯಾಪಾರ ಬಿಟ್ಟರು; ಒಕ್ಕಲು ಮಕ್ಕಳು ಹಳ್ಳಿ ಊರು ಸೇರಿದರು. ಎಲ್ಲರಿಗೂ ಸರ್ಕಾರಿ ಕೆಲಸದ ದಾಹ ಹತ್ತಿತು. ಅಸೆಂಬ್ಲಿ, ಕೌನ್ಸಿಲ್ಲುಗಳಿಗೆ ನುಗ್ಗಿ ಆದಷ್ಟು ಸ್ಥಾನಗಳನ್ನಾಕ್ರಮಿಸಿ ತಮ್ಮ ಹಾಗೂ ತಮ್ಮ ಜಾತಿಯ, ಕೋಮಿನ ಪ್ರತಿಷ್ಠೆ ಬೆಳೆಸಬೇಕೆಂಬ ಮಹತ್ವಾಕಾಂಕ್ಷೆ ಮೂಡಿತು.

ಇದರಿಂದ ಸಂಸ್ಥಾನದ ಮಕ್ಕಳಿಗೆ ಕಿಂಚಿತ್ತೂ ಹಿತವಾಗಲಿಲ್ಲ. ಅವರ ಮಧುರಮೈತ್ರಿ ಹಾಳಾದುದಲ್ಲದೆ, ಯಾವ ಇಷ್ಟಾರ್ಥಕ್ಕೆ ಅದನ್ನು ಬಲಿಗೊಟ್ಟರೋ ಅದು ಸಾಧ್ಯವಾಗಲಿಲ್ಲ. ಕೋಮಿನ ಹೆಸರು ಹೇಳಿಕೊಂಡು ಹೊರಗಿನವರು ಬಂದು ಪೂರ್ಣಾಹುತಿ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತ ಬಂತು. ಸಂಸ್ಥಾನದ ಅಧಿಕಾರದ ಶ್ರೇಷ್ಠ ಜ್ಯೇಷ್ಠಸ್ಥಾನಗಳೆಲ್ಲಾ ಮದರಾಸಿನವರ ಕೈವಶವಾದವು. ದೊಡ್ಡ ದೊಡ್ಡ ಸರ್ಕಾರಿ ಕೈಗಾರಿಕೆಗಳ ಸ್ವಾಮ್ಯ ಅವರ ಕೈವಶವಾಗುತ್ತ ಬಂತು.

ಗುಪ್ತವಾಗಿ ನಡೆಯುತ್ತಿದ್ದ ಈ ಸುಲಿಗೆಯ ಸೇವೆಯ ಜತೆಗೆ ನಾಡ ಮಕ್ಕಳಿಗೆ ಕಿರುಕುಳ ಹೆಚ್ಚಾಗುತ್ತಾ ಬಂದಿತು. ಸ್ಥಳೀಯ ಪತ್ರಿಕೆಗಳ ಮೇಲೆ ಸರ್ಕಾರ ಗದಾಪ್ರಹಾರ ಮಾಡಿತು. ಸ್ಥಳೀಯ ವಿದ್ಯಮಾನಗಳನ್ನು ಬಣ್ಣಿಸುವ ಗ್ರಂಥಗಳ ಮುಟ್ಟುಗೋಲು ಆರಂಭವಾಯಿತು. ಅರೆಸ್ಟ್, ಡಿಟೆನ್‌ಷನ್, ಶಿಕ್ಷೆ ಸರ್ವಸಾಮಾನ್ಯವಾಗುತ್ತ ಬಂತು. ಸ್ವಭಾವತಃ ಆಲಸಿಗಳೂ, ಸುಖಜೀವನಪ್ರಿಯರೂ ಆದ ಸಂಸ್ಥಾನದ ಪ್ರಜೆಗಳು ಅಧಿಕಾರ ದರ್ಪಕ್ಕೆ ಕನಲಿ ತಪ್ತರಾಗಿದ್ದರು. ಅಸಹನೆಯ ಕಿಡಿ ಒಳಗೊಳಗೇ ಕವರುತ್ತಿತ್ತು.

ಕೂಲಿಗಾರರ ಪಾಡು ಕರುಣಾಜನಕವಾಯಿತು. ಅವರು ವೇತನ ಕೇಳಿದರೆ ಸಾಕು, ವಿರಾಮ ಕೇಳಿದರೆ ಸಾಕು, ರಕ್ಷಣೆ ಕೇಳಿದರೆ ಸಾಕು

ಬಂಡವಾಳಶಾಹಿ ಮಾಲಿಕರು 'ಲಾಕ್‌ಔಟ್' (Lock Out) ಮಾಡು ತ್ತಿದ್ದರು. ಬಡತನದ ದಾರುಣವೇದನೆಯನ್ನು ತಡೆಯಲಾರದೆ ಮಾಲಿಕರು ಹೇಳಿದ ಷರತ್ತುಗಳಿಗೆ ಒಪ್ಪಿಕೊಂಡು ಕೂಲಿಗಾರರು ಅವರು ಹೊಸದಾಗಿ ವಿಧಿಸುತ್ತಿದ್ದ ಕಾಯಿದೆ ಕಟ್ಟಳೆಗಳಿಗೂ ಶರಣಾಗಿ ಕೆಲಸಕ್ಕೆ ಹಿಂದಿರುಗು ತ್ತಿದ್ದರು.

ಯಾವುದಾದರೂ ಗಿರಣಿ ಸ್ವಲ್ಪ ಧೈರ್ಯ ಮಾಡಿ ಮುಷ್ಕರ ಹೂಡಿದರೆ ಸಾಕು. ಮಾಲಿಕರು ನಿರ್ಭಿಯದಿಂದ ಪೋಲೀಸ್ ಸಹಾಯ ತೆಗೆದುಕೊಂಡು ನಾಲ್ಕಾರು ಹೆಣ ಉರುಳಿಸುತ್ತಿದ್ದರು. ನಿಷ್ಕರುಣೆಯಿಂದ ಕೂಲಿಗಾರರಿಗೆ ಅನ್ನ ನೀರು ಸಿಗದಂತೆ ಮಾಡುತ್ತಿದ್ದರು. ಕೂಲಿ ಮಾಡುವುದಕ್ಕಿಲ್ಲ, ಬಿಡು ವುದಕ್ಕಿಲ್ಲ; ಮುಷ್ಕರ ಹಿಡಿಯದೆ ವಿಧಿಯಿಲ್ಲ. ಹಿಡಿದರೆ ಸರ್ವನಾಶ ಖಂಡಿತ–ಇಂಥ ವಿಷಮ ಪರಿಸ್ಥಿತಿಗೆ ಕೂಲಿಗಾರರು ಸಿಕ್ಕಿಬಿದ್ದಿದ್ದರು.

ತಮ್ಮ ಮುಖದ ಮೇಲೆ ತಣ್ಣೀರೆರಚಿದಂತೆ ಸರ್ಕಾರ ಲೋಕನಾಥ ನ್ನಿಗೆ ನಾಮಕರಣ ಮಾಡಿದುದು ಕೂಲಿಗಾರರಿಗೆ ಅಸಹನೀಯವಾಗಿತ್ತು. ಇದೇ ಕಾರಣವನ್ನು ಮುಂದುಮಾಡಿ ಮುಷ್ಕರ ಹೂಡಿ–ಊರಿನಲ್ಲೆಲ್ಲಾ ಪ್ರದರ್ಶನ ಮಾಡಬೇಕೆಂಬು ಅವರು ಹಟ ಹಿಡಿದರು. ಮುನಿಸ್ವಾಮಿ ಶ್ರೀನಿವಾಸನ ಆಗಮನದ ವಿಷಯ ಅವರಿಗರುಹಿ ಅವರನ್ನು ತಡೆಗಟ್ಟಬೇಕಾ ದರೆ ಅವನಿಗೆ ಸಾಕುಸಾಕಾಗಿ ಹೋಯಿತು.

ಶ್ರೀನಿವಾಸನಿಗೆ ಸೂರಪ್ಪನವರು ದೇಶಾವರದ ಸ್ವಾಗತ ಬಯಸಿದರು. ಆದರೆ ಅವನ ಆಗಮನವನ್ನು ಕಂಡ ಹಿರಿಹಿರಿ ಹಿಗ್ಗಿದವರೆಂದರೆ ಮುನಿಸ್ವಾಮಿ, ರಾಮಸ್ವಾಮಿ. ಮುನಿಸ್ವಾಮಿ ತಡಮಾಡದೆ ಶ್ರೀನಿವಾಸನಿಗೆ ಪರಿಸ್ಥಿತಿಯ ಪರಿಚಯ ಮಾಡಿಕೊಟ್ಟ.

"ಲೋಕನಾಥನ್ ನಾಮಕರಣಕ್ಕೆ ಸೂರಪ್ಪನವರು ಹೇಗೆ ಕಾರಣ ಎಂದು ಹೇಳುವಿರಿ ?"

"ಈಗ ಅವರಿಬ್ಬರೂ ತುಂಬ ಆಪ್ತಮಿತ್ರರು."

"ಇರಬಹುದು. ಅದು ನಿಮ್ಮ ವಾದಕ್ಕೆ ಪುಷ್ಟಿ ಕೊಡುವುದೇನು ?"

"ಇಂಥ ವಿಷಯಗಳಿಗೆ ಆಧಾರ ದೊರಕಿಸುವುದು ಹೇಗೆ ?"

"ಆಧಾರ ದೊರೆಯುವವರೆಗೂ ನಂಬದಿರುವುದೇ ಜಾಣತನ. ಒಂದು ವೇಳೆ ಇದು ಸತ್ಯವಾಗಿದ್ದ ಪಕ್ಷಕ್ಕೆ ನಮಗೇನು ಸಂಬಂಧ. ಲೋಕನಾಥನ್ನ

ರಿಗೂ ನಮಗೂ ಈಗ ಯಾವ ಸಂಬಂಧವೂ ಇಲ್ಲ. ಇಂಥ ಕ್ಷುಲ್ಲ ಕಾರಣ ಮುಂದುಮಾಡಿ ಮುಷ್ಕರ ಹಿಡಿದು-ಪ್ರದರ್ಶನ ನಡೆಸಿದರೆ ನಮ್ಮ ಧ್ಯೇಯ ಹಗುರವಾಗಿ ಬಿಡುತ್ತದೆ. ಜನತೆಯ ಸಹಾನುಭೂತಿ ಕಳೆದುಕೊಳ್ಳುತ್ತೇವೆ."

ಮುನಿಸ್ವಾಮಿ ತನ್ನ ವಾದ ಮುಂದುವರಿಸಲಿಲ್ಲ. ಆದರೆ ಮುಷ್ಕರದ ಬಗ್ಗೆ ಕೂಲಿಗಾರರು ಮಾಡುತ್ತಿದ್ದ ಒತ್ತಾಯವನ್ನು ಎದುರಿಸುವುದು ಅವನಿಗೂ ಸಾಧ್ಯವಾಗಿರಲಿಲ್ಲ."

"ಅರವಿಂದ ಮಿಲ್ಸ್‌ನವರು ಮುಷ್ಕರ ಹಿಡಿಯಲು ನಮ್ಮ ಅನುಮತಿ ಬೇಡಿದ್ದಾರೆ" ಎಂದು ಹೇಳಿದ.

"ನೀವೇನು ಉತ್ತರವಿತ್ತಿರುವಿರಿ ?"

"ನೀವು ಬರಲಿ ಎಂದು ನಾನು ಅವರನ್ನು ಸಮಾಧಾನ ಪಡಿಸಿರುವೆ."

"ಅವರಿಗೆ ಬೇಕಾದ ಪರಿಹಾರವೇನು ? "

"ಬೋನಸ್ ಕೊಡುತ್ತೇವೆಂದು ಕಳೆದ ವರ್ಷವೇ ಮಾಲೀಕರು ವಾಗ್ದಾನ ಮಾಡಿದ್ದರು ಹೋದವರ್ಷವೂ- ಈ ವರ್ಷವೂ ಕೊಟ್ಟಿಲ್ಲ."

"ಮಾಲೀಕರಿಗೆ ಜನರಲ್ ಸೆಕ್ರೆಟರಿಯಾಗಿ ನೀವು ಒಂದು ಕಾಗದ ಬರೆಯಿರಿ, ಮುನಿಸ್ವಾಮಿ. ಅವರ ಉತ್ತರ ನೋಡಿ ಮುಂದಿನ ಕಾರ್ಯ ವಿಧಾನ ನಿಶ್ಚಯಿಸೋಣ."

"ಅವರು ಉತ್ತರ ಕೊಡದಿದ್ದರೆ ? "

"ನಾವು ಒಂದು ನಿಯೋಗ ಹೋಗಿ ಬರೋಣ."

"ಅದೂ ಪ್ರಯೋಜನಕ್ಕೆ ಬಾರದಿದ್ದರೆ ? "

"ಮುಷ್ಕರವಿದ್ದೇ ಇದೆಯಲ್ಲಾ- ಯೋಚನೆಯೇಕೆ ? "

ಶ್ರೀನಿವಾಸನೇ ಒಂದು ಕಾಗದ ಬರೆದು, ಅದರಲ್ಲಿ ವಿವರವಾಗಿ ಮಾಲೀಕರ ವಾಗ್ದಾನವನ್ನು ಕಾಣಿಸಿ, ಬೋನಸ್ ಕೊಟ್ಟು ಕೂಲಿಗಾರರ ಕಷ್ಟ ಪರಿಹರಿಸಬೇಕೆಂದು ಪ್ರಾರ್ಥಿಸಿದ್ದ. ಮುನಿಸ್ವಾಮಿ ಕಾಗದದ ಧಾಟಿ ಬಹಳ ವಿನಯ ಪೂರ್ಣವಾಯಿತೆಂದು ಗೊಣಗುಟ್ಟಿದ್ದ. ಶ್ರೀನಿವಾಸ ಅದನ್ನು ಲೆಕ್ಕಿಸದೆ ಮುನಿಸ್ವಾಮಿಯ ಕೈಯಲ್ಲಿ ಸಹಿಮಾಡಿಸಿ ಅರವಿಂದ ಮಿಲ್ಸ್‌ನ ಮಾಲೀಕರಿಗೆ ಕಳಿಸಿ ಕೊಟ್ಟ.

ಮುನಿಸ್ವಾಮಿಯ ಊಹೆ ತಪ್ಪಾಯಿತು. ಅರವಿಂದ ಮಿಲ್ಲಿನ ಮಾಲೀಕರು ಕೂಡಲೆ ಉತ್ತರಿಸಿ ತಾವು ಬೋನಸ್ ಕೊಡುತ್ತೇವೆಂದು ವಾಗ್ದಾನವನ್ನೇ ಮಾಡಿರಲಿಲ್ಲವೆಂದು ತಿಳಿಸಿದರು.

ಶ್ರೀನಿವಾಸ ಮಿಲ್ಲಿನ ವಾರ್ಷಿಕ ವರದಿ, ಕೂಲಿಗಾರರ ಸಂಘದ ವಶದಲ್ಲಿದ್ದ ಕೆಲವು ಕಾಗದ ಪತ್ರಗಳಿಂದ ಮಾಲೀಕರು ಸುಳ್ಳು ಹೇಳುತ್ತಿದ್ದಾರೆಂದು ನಿಶ್ಚಯಿಸಿಕೊಂಡ. ಒಂದು ನಿಯೋಗ ಗೋಷ್ಠಿ ಬರುವುದಾಗಿಯೂ ಅದನ್ನು ಕಾಣಲು ಅವಕಾಶ ಕೊಡಬೇಕಾಗಿ ಪ್ರಾರ್ಥಿಸಿ ಕಾಗದ ಬರೆದ. ಮಾಲೀಕರು ಒಪ್ಪಿಗೆಯಿತ್ತು ಮಾರುತ್ತರ ಕೊಟ್ಟರು.

ನಿಯೋಗ ಗೋಷ್ಠಿಯ ನಾಯಕ ಶ್ರೀನಿವಾಸನೇ ಆಗಿರಬೇಕೆಂದು ಉಳಿದವರು ತೀರ್ಮಾನಿಸಿದರು. ಗೋಷ್ಠಿಯಲ್ಲಿ ಮುನಿಸ್ವಾಮಿ, ರಾಮಸ್ವಾಮಿ, ಅರವಿಂದ ಮಿಲ್ಸ್ ಕಾರ್ಮಿಕರ ಸಂಘದ ಅಧ್ಯಕ್ಷ ಸದಾನಂದ, ಕಾರ್ಯದರ್ಶಿ ಜ್ಞಾನಮುತ್ತು ಇರಬೇಕೆಂದು ನಿಶ್ಚಯವಾಯಿತು.

ಅರವಿಂದಮಿಲ್ ಮಾಲೀಕರು ತಮ್ಮ ಭವ್ಯ ದಿವಾನಖಾನೆಯಲ್ಲಿ ನಿಯೋಗ ಗೋಷ್ಠಿಯನ್ನು ಬರಮಾಡಿಕೊಂಡರು. ಮಿಲ್ಲಿನಪರವಾಗಿ ಇಬ್ಬರು ಮಾಲೀಕರು ಗೋಪಾಲಕೃಷ್ಣಯ್ಯ, ಸಂಜೀವಶೆಟ್ಟಿ, ಮ್ಯಾನೇಜರ್ ಗುರುನಾಥ, ವಕೀಲ ರಾಜಾರಾವ್ ಇದ್ದರು. ಮಾಲೀಕರು ಕಾಫಿ ತಿಂಡಿ ವ್ಯವಸ್ಥೆ ಮಾಡಿದ್ದರು. ಅವರು ನೀಡಿದ ಆತಿಥ್ಯ ಸ್ವೀಕರಿಸಬಾರದೆಂದು ಮುನಿಸ್ವಾಮಿ, ಜ್ಞಾನಮುತ್ತು ಸ್ವಲ್ಪ ಮುರುಟಿಕೊಂಡಿದ್ದರು. ಶ್ರೀನಿವಾಸ ನಸುನಗುತ್ತ ಎದುರಿಗಿದ್ದ ಬಿಸ್ಕತ್ ಪ್ಲೇಟಿಗೆ ಕೈಹಾಕಿದ. ಉಳಿದವರು ನಿರ್ವಾಹವಿಲ್ಲದೆ ಅವನ ಮೇಲ್ಪಂಕ್ತಿ ಅನುಸರಿಸಬೇಕಾಯಿತು. ಉಪಾಹಾರ ಮುಗಿದ ಮೇಲೆ ಕೈಯಲ್ಲಿದ್ದ ವಜ್ರದುಂಗುರ ಪ್ರದರ್ಶಿಸುತ್ತಾ ಸಂಜೀವಶೆಟ್ಟರು ಕೇಳಿದರು.

"ಏನು ಸ್ವಾಮಿ-ನಿಮಗಾಗಬೇಕಾದದ್ದು ?"

"ಅದನ್ನು ಕಾಗದದಲ್ಲಿಯೇ ಬರೆದಿದ್ದೇವಲ್ಲಾ."

"ಉತ್ತರ ನಾವು ಕೊಟ್ಟ ಹಾಗೆ ಜ್ಞಾಪಕ" ಎಂದು ವಕೀಲರು ಹೇಳಿದರು.

"ಆ ಉತ್ತರ ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಾಗಿಲ್ಲ."

"ಅದಕ್ಕೂ ಹೆಚ್ಚಿಗೆ ಹೇಳುವುದಕ್ಕೆ ನಾವು ಸಿದ್ಧರಾಗಿಲ್ಲ." ಎಂದು ಮ್ಯಾನೇಜರ್ ಗುರುನಾಥ್ ಸ್ವಲ್ಪ ಬಿರುಸಾಗಿ ನುಡಿದ.

ಮಾತು ಸ್ವಲ್ಪ ಬಿಗಡಾಯಿಸುವುದನ್ನು ಕಂಡು ಗೋಪಾಲಕೃಷ್ಣಯ್ಯನವರು ಸೌಹಾರ್ದದಿಂದ

"ಅವರ ಅಭಿಪ್ರಾಯ ತಿಳಿಸಲಿ. ಗುರುನಾಥ್, ನೀವೂ ಅವರು ಹೇಳುವುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಿ. ಹೇಳಿ ಶ್ರೀನಿವಾಸರೇ— ನಿಮ್ಮ ಇಚ್ಛೆಯೇನು ?"

"ನನ್ನ ಇಚ್ಛೆ ಮಾಲಿಕರು, ಕೂಲಿಗಾರರು ಒಮ್ಮತಿಸಮ್ಮತಿಯಿಂದ ಇರಬೇಕು. ಅವರವರಲ್ಲಿ ವೈಮನಸ್ಯ ಬರಬಾರದೆಂದು."

"ನಮ್ಮ ಇಚ್ಛೆಯೂ ಅದೇ ಆಗಿದೆ. ಕೂಲಿಗಾರರೇ ನಮ್ಮ ಮಿಲ್ಲಿನ ಬೆನ್ನೆಲುಬು-ಅವರನ್ನು ಎದುರು ಹಾಕಿಕೊಂಡು ನಾವಾದರೂ ಮಾಡುವುದೇನು ?"

"ನೀವು ಅವರಿಗಿತ್ತ ವಾಗ್ದಾನ ಪೂರೈಸದಿದ್ದರೆ-ಅವರ ಕಷ್ಟಸುಖದ ಕಡೆ ಕಣ್ಣೆತ್ತಿ ನೋಡದಿದ್ದರೆ ಅವರು ಬದುಕುವುದು ಹೇಗೆ ಸಾಧ್ಯ ? ನಿಮ್ಮ ಅವರ ವಿಶ್ವಾಸ ಈ ಪರಿಸ್ಥಿಯಲ್ಲಿ ಉಳಿಯುವುದೇ ?"

"ನೀವು ಹೇಳುವುದು ಸರಿ—ಆದರೆ ಕೂಲಿಗಾರರು ದಿನಕ್ಕೊಂದು ಬೇಡಿಕೆ ಇಡುತ್ತಾ ಹೋದರೆ ನಾವು ಪೂರೈಸುವುದು ಹೇಗೆ ?"

"ಈಗ ನಿಮ್ಮ ಮಿಲ್ಲಿನ ಕೂಲಿಗಾರರು ಕೇಳುತ್ತಿರುವುದು ಅವರ ಭಾಗದ ಬೋನಸ್. ಕಳೆದ ವರ್ಷ—ಈ ವರ್ಷ ನಿಮಗೆ ಅಪಾರ ಲಾಭವಾಗಿದೆ, ಅದರಲ್ಲಿ ಒಂದು ಸಣ್ಣ ಅಂಶ ಅವರು ಕೇಳುತ್ತಿದ್ದಾರೆ. ಲಕ್ಷಾಧೀಶ್ವರರಾದ ನೀವು-ಹಲವು ದಾನಧರ್ಮಗಳಿಗೆ ಖರ್ಚುಮಾಡುವ ನೀವು-ನಿಮ್ಮ ನೌಕರರ ಬೇಡಿಕೆಯನ್ನೇಕೆ ಮಾನ್ಯ ಮಾಡಬಾರದು ?"

"ನಾವು ವಾಗ್ದಾನ ಮಾಡಿದ್ದರಲ್ಲವೇ ಮಾನ್ಯ ಮಾಡುವುದು."

ಶ್ರೀನಿವಾಸ ನಾಷ್ಟ್ಯಸಾಹಿತ್ಯ ತೆಗೆದು ವಾಗ್ದಾನ ಮಾಡಿರುವುದು ನಿಜವೆಂದು ತೋರಿಸಲೆತ್ನಿಸಿದ. ಎಲ್ಲವನ್ನೂ ಸಾವಕಾಶವಾಗಿ ಕೇಳಿಕೊಂಡ. ಸಂಜೀವಶೆಟ್ಟರು

"ಮಾತನಾಡುವುದು ಸುಲಭ ಸ್ವಾಮಿ. ಎರಡು ವರ್ಷದ ಲಾಭ ನಿಮ್ಮ ಕಣ್ಣು ಕೋರೈಸಿದೆ. ಆದರೆ ಈ ಸ್ಥಿತಿಗೆ ಮಿಲ್ಲನ್ನು ತಂದು ಅದು ನಾಲ್ಕು ಕಾಸು ಲಾಭ ಕೊಡುವಂತೆ ಮಾಡಬೇಕಾದರೆ ನಾವು ಎಷ್ಟು ವರ್ಷ ದುಡಿಯಬೇಕಾಯಿತು, ಕೈಯಿಂದ ಎಷ್ಟು ಕಳೆದುಕೊಳ್ಳಬೇಕಾಯಿತೆನ್ನುವುದನ್ನು ಆಲೋಚಿಸಿ"

ಎಂದರು. ಇವರ ಮೊಂಡುವಾದಕ್ಕೆ ಯಾವ ರೀತಿ ಸಮಾಧಾನ ಹೇಳಬೇಕೋ ಶ್ರೀನಿವಾಸನಿಗೆ ತಿಳಿಯದಾಯಿತು.

"ನಿಮಗೆ ನಷ್ಟವಾಗುತ್ತಿದ್ದಾಗ ಕೂಲಿಕಾರರು ಹೆಚ್ಚು ಕೂಲಿ, ಸಂಭಾವನೆ ಕೇಳಲಿಲ್ಲವಲ್ಲ. ನೀವು ಕೊಟ್ಟಿದರಲ್ಲಿಯೇ ತೃಪ್ತರಾಗುತ್ತಿದ್ದರಲ್ಲವೇ. ಈಗ ನಿಮಗೂ ಕೈತುಂಬ ಆದಾಯ ಬಂದಿರುವಾಗ, ಅದಕ್ಕೆ ಕಾರಣಕರ್ತರಾದ ಕೂಲಿಕಾರರಿಗೆ ಒಂದಂಶ ಕೊಡುವುದಕ್ಕೆ ಸಂಕೋಚವೇತಕ್ಕೆ ?"

"ನಾವು ಯಾವ ಬೋನಸ್ಸನ್ನೂ ಕೊಡುತ್ತೇವೆಂದು ಹೇಳಿರಲಿಲ್ಲ. ಈಗ ಹೆಚ್ಚೇನೂ ಕೊಡಲು ಸಾಧ್ಯವಿಲ್ಲ."

ಎಂದು ಗೋಪಾಲಕೃಷ್ಣಯ್ಯ ಖಂಡಿತವಾಗಿ ಹೇಳಿದರು.

ಸಂಧಾನ ಮುರಿದು ಬಿತ್ತು. ಶ್ರೀನಿವಾಸನಿಗೂ ಹೆಚ್ಚು ಮಾತನಾಡಲು ಮನಸ್ಸಾಗಲಿಲ್ಲ. ಮುನಿಸ್ವಾಮಿ, ಜ್ಞಾನಮುತ್ತು ಶ್ರೀನಿವಾಸನ ಮುಖ ನೋಡುತ್ತಿದ್ದರು. ಶ್ರೀನಿವಾಸನ ಮನಸ್ಸಿನಲ್ಲಿ ಅಚಲ ನಿರ್ಧಾರ ಮೂಡಿತು.

"ನ್ಯಾಯ ದೊರಕಿಸಲು ಕೂಲಿಕಾರರಿಗೆ ಉಳಿದಿರುವುದೊಂದೆ ದಾರಿ ಸಾವಕಾರರೇ ? "

"ಯಾವ ದಾರಿ ? " ಎಂದು ಸಂಜೀವಶೆಟ್ಟರು ಕೇಳಿದರು.

"ಮುಷ್ಕರ ಹಿಡಿಯುವುದು."

"ಆಗಬಹುದು–ಈ ಗೊಡ್ಡು ಬೆದರಿಕೆಗೆ ನಾವು ಹೆದರುವವರಲ್ಲ"

ಎಂದು ಗೋಪಾಲಕೃಷ್ಣಯ್ಯ ಹೇಳಿದರು.

"ಇಂದಿನಿಂದಲೇ ಒಂದು ತಿಂಗಳು ನೋಟೀಸ್ ತೆಗೆದು ಕೊಳ್ಳಿ— ಇನ್ನು ನಾವು ಹೊರಡುತ್ತೇವೆ"

ಎಂದು ಅಲ್ಲಿ ನಿಲ್ಲದೆ ಶ್ರೀನಿವಾಸ ಸಂಗಡಿಗರೊಂದಿಗೆ ಹೊರಟು ಬಂದ.

ಶ್ರೀನಿವಾಸ ಇಂಥ ನಿರ್ಧಾರಕ್ಕೆ ಬರುತ್ತಾನೆಂದು ಗೋಪಾಲಕೃಷ್ಣಯ್ಯ, ಸಂಜೀವ ಶೆಟ್ಟರು ಇಬ್ಬರೂ ನಿರೀಕ್ಷಿಸಿರಲಿಲ್ಲ. ಸಂಜೀವ ಶೆಟ್ಟರ ದೇಹಾದ್ಯಂತ ಬೆವರಿ ಬಿಟ್ಟಿತು. ಅವರು ಮುಖ ವರಸಿಕೊಳ್ಳುತ್ತಾ

"ಗೋಪಾಲಕೃಷ್ಣಯ್ಯನವರೇ, ಏನೋ ಇತ್ಯರ್ಥ ಮಾಡಿ. ಹಾಳಾಗಿ ಹೋಗಲಿ ಒಂದು ತಿಂಗಳ ಬೋನಸ್ ಬಿಸಾಕಿ ಬಿಡೋಣ. ಮುಷ್ಕರವೆಂದರೆ ದೊಡ್ಡ ರಾಮಾಯಣ. ಒಂದು ಹೋಗಿ ಒಂದಾದೀತು."

"ಎಲ್ಲಾದರೂ ಉಂಟೇ ಸ್ವಾಮಿ. ನಾವು ಹೀಗೆ ಬಿಟ್ಟುಕೊಡುತ್ತಾ ಹೋದರೆ ನಾಳೆ ಕೂಲಿಕಾರರಿಗೆ ಮಿಲ್ಲನ್ನೇ ಬಿಟ್ಟುಕೊಡಬೇಕಾಗಿ ಬರಬಹುದು. ಅವರ ಆಸೆಗೇನಾದರೂ ಇತಿಮಿತಿ ಯಿದೆಯೇ " ಎಂದು ಮ್ಯಾನೇಜರ್ ಹೇಳಿದ.

"ನಿಮ್ಮ ಅಭಿಪ್ರಾಯವೇನು ರಾಜಾರಾಯರೇ ?" ಎಂದು ಗೋಪಾಲಕೃಷ್ಣಯ್ಯ ಲಾಯರನ್ನು ಕೇಳಿದರು.

"ನನ್ನ ಅಭಿಪ್ರಾಯ ಗುರುನಾಥರು ಹೇಳಿದ್ದೇ. ಆದರೆ ಈಗ ಮಿಲ್ ಕೂಲಿಕಾರರಲ್ಲಿ ತುಂಬ ಜಾಗ್ರತಿಯಾಗಿದೆ. ನಮ್ಮ ಮಿಲ್ಲಿನ ಕೂಲಿಕಾರರು ಮುಷ್ಕರ ಹಿಡಿದರೆ...."

"ಯಶಸ್ವಿಯಾಗುವುದೇನು ?" ಎಂದು ಗೋಪಾಲಕೃಷ್ಣಯ್ಯ ಕೇಳಿದರು.

"ಆಗದೆ ಏನು ?" ಎಂದು ಲಾಯರು ಹೇಳಿದರು.

"ಹೇಗರೀ ಆಗತ್ತೆ. ಎಂಟು ಹತ್ತು ದಿವಸ ಕೂಲಿಯವರು ಕೂಳಿಗೇನು ಮಾಡುತಾರ್ರೀ. ಒಂದೊಪ್ಪತ್ತು ಕೂಲಿಕೊಡುವುದು ತಡವಾದರೆ ಅವರಲ್ಲಿ ಹಾಹಾಕಾರ ಹುಟ್ಟುತ್ತದೆ."

"ನಿಜ. ಆದರೆ ಈಗ ನಾವು ಅವರ ಬಲವನ್ನು ಅಳೆಯಬೇಕಾದುದು ಆ ದೃಷ್ಟಿಯಿಂದಲ್ಲ. ನಾಳೆ ಇತರ ಮಿಲ್ಲುಗಳ ಕೂಲಿಕಾರರೂ ಅವರ ಜತೆ ಸೇರಿಕೊಳ್ಳುವ ಸಂಭವವಿದೆ. ಸಾರ್ವತ್ರಿಕ ಮುಷ್ಕರವಾದರೆ ಜನತೆಯ ಬೆಂಬಲ ಸಿಕ್ಕುತ್ತದೆ. ಜನತೆಯಲ್ಲಿ ಇಷ್ಟು ಕಳವಳವಾದರೆ ಸರ್ಕಾರ ಕೂಡ ವಿಧಿಯಿಲ್ಲದೆ ಅವರ ಪರವಾಗಿ ನಿರ್ಧಾರ ಕೊಡಬೇಕಾಗುತ್ತದೆ."

ಲಾಯರ ವಾದ ವೈಖರಿ ನೋಡಿ ಗೋಪಾಲಕೃಷ್ಣಯ್ಯ ಗಹಗಹಿಸಿ ನಗುತ್ತಾ

"ಏನು ಮಿಸ್ಟರ್ ರಾಜಾರಾವ್, ಇಷ್ಟು ಅನುಭವಶಾಲಿಗಳಾದ ಲಾಯರು ನೀವು. ಈಗ ನಮ್ಮ ಬಲಾಬಲ ನಿಮಗೆ ತಿಳಿಯಲಿಲ್ಲವಲ್ಲಾ. ಕೂಲಿಕಾರನಲ್ಲಿ ಹುಟ್ಟುತ್ತಿರುವ ಜಾಗೃತಿಯನ್ನು ತಿಳಿಯಬೇಕೆಂದು ಸರ್ಕಾರ ಬದ್ಧಕಂಕಣ ತೊಟ್ಟಿರುವುದು ನಿಮಗೆ ತಿಳಿಯದೇ. ಲೋಕನಾಥನ್‌ರಿಗೆ ನಾಮಕರಣ ಮಾಡಿದ್ದೇ ಸಾಲದೆ ದೃಷ್ಟಾಂತ. ಏನು ಮಾಡುತ್ತಾರೋ ಮಾಡಲಿ ಕೂಲಿ

ಕಾರರು-ನಾವೂ ಒಂದು ಕೈನೋಡಿಬಿಡೋಣ... ಆ ಶ್ರೀನಿವಾಸ ಯಾರ್ರಿ?...... ಹುಡುಗ ಸೂಟಿಯಾಗಿದ್ದಾನೆ, ಬಹಳ ಮಾತನಾಡುತ್ತಾನೆ.”

“ಲಾಯರ್ ಸೂರಪ್ಪನವರ ಮಗ ಸ್ವಾಮಿ. ಮುಂಬಯಿಯಲ್ಲಿ ಲಾ ಪರೀಕ್ಷೆಗೆ ಓದುತ್ತಿದ್ದಾನೆ- ಈಗ ರಜೆಯೆಂದು ಊರಿಗೆ ಬಂದಿದ್ದಾನೆ.”

“ಸೂರಪ್ಪನವರ ಮಗನೇ! ಅವನಿಗೇಕೆ ಈ ಕಿತಾಪತಿ!”

“ಅವನು ಮೊದಲಿನಿಂದಲೂ ಕೂಲಿಕಾರರ ಪಕ್ಷಪಾತಿ. ಕೂಲಿಕಾರರಿಗೂ ಅವನನ್ನು ಕಂಡರೆ ತುಂಬ ಗೌರವ.”

“ಹಾಗೇನು!”

ಎಂದು ಗೋಪಾಲಕೃಷ್ಣಯ್ಯ ದೀರ್ಘವಾಗಿ ರಾಗ ಎಳೆದರು. ಗೋಪಾಲಕೃಷ್ಣಯ್ಯನವರು ಧೈರ್ಯ ತೋರಿದರೂ ಸಂಜೀವಶೆಟ್ಟರ ಭಯ ನಿವಾರಣೆಯಾಗಲಿಲ್ಲ.

## ೩೯

‘ವಿಲ್ಸನ್‌ಗಾರ್ಡನ್’ ಬೆಂಗಳೂರಿನಲ್ಲಿ ಹೊಸದಾಗಿ ರೂಪುಗೊಳ್ಳುತ್ತಿದ್ದ ವಿಸ್ತರಣ. ಮಧ್ಯಮ ವರ್ಗದವರಿಗೆ ಮನೆಯ ಪ್ರಶ್ನೆ ಮಹತ್ತ್ವದ್ದಾಗುತ್ತ ಬಂದಿತ್ತು. ಬಾಡಿಗೆ ಕೊಟ್ಟು ಕೊಟ್ಟು ಅವರ ಜೀವಮಾನವೆಲ್ಲಾ ಅದರಲ್ಲಿಯೇ ಸವೆದು ಹೋಗಿತ್ತು. ಧನಪಿಶಾಚಗ್ರಸ್ತರಾದ ಮನೆ ಮಾಲಿಕರು ದಿನೇ ದಿನೇ ಮನೆ ಬಾಡಿಗೆ ಹೆಚ್ಚಿಸುತ್ತಿದ್ದರು.

ನಗರ ಸಭೆ ಲಾಲ್‌ಬಾಗ್ ತೋಟದಾಚೆಯಿದ್ದ ಒಂದು ವಿಶಾಲ ತೋಟವನ್ನು ಆಕ್ರಮಿಸಿಕೊಂಡು ಅದನ್ನು ಸೈಟುಗಳನ್ನಾಗಿ ವಿಭಾಗಿಸಿತು. ಹೆಚ್ಚು ಆರ್ಥಿಕಾನುಕೂಲವಿಲ್ಲದ ಮಧ್ಯಮ ವರ್ಗದವರಿಗೆ ಸೈಟುಗಳನ್ನು ಕೊಟ್ಟು ಮನೆ ಕಟ್ಟಿಕೊಳ್ಳಲು ಅವರಿಗೆ ಸಹಾಯ ಮಾಡಬೇಕೆಂಬುದು ನಗರ ಸಭೆಯ ಉದ್ದೇಶವಾಗಿತ್ತು.

ಆದರೆ ಯಾರಿಗಾಗಿ ವಿಲ್ಸನ್‌ಗಾರ್ಡನ್ ಸೈಟುಗಳ ನಿಯೋಜಿತವಾದವೋ ಅವು ಹೆಚ್ಚು ಮಂದಿ ಮಧ್ಯಮ ವರ್ಗದವರಿಗೆ ಸಿಕ್ಕಲೇ ಇಲ್ಲ. ಕೆಲವರು ಸೈಟುಗಳನ್ನು ಕೊಂಡು ಏರುಬೆಲೆಗೆ ಮಾರಿಬಿಟ್ಟರು ; ಕೆಲವರು ಮನೆಕಟ್ಟಿ ಲಾಭಕ್ಕೆ ಮಾರಿಬಿಟ್ಟರು ; ಕೆಲವು ಧನವಂತರು ಬೇರೆ ಬೇರೆ

ಯವರ ಹೆಸರಿನಲ್ಲಿ ಸೈಟುಗಳನ್ನು ಕೊಂಡು ಮನೆಕಟ್ಟಿ ಮನಸ್ಸಿಗೇ ಬಾಡಿಗೆಗೆ ಅವುಗಳನ್ನು ಕೊಡುತ್ತಿದ್ದರು.

ಇಂಥ ಒಬ್ಬನಿಂದ ಸೂರಪ್ಪನವರು ವಿಲ್ಸನ್‌ಗಾರ್ಡನ್ನಿನಲ್ಲಿ ಒಂದು ಮನೆ ಕೊಂಡರು. ಮನೆಗೆ ದೀಪ, ನಳ ಹಾಕಿಸಬೇಕಾಗಿತ್ತು ; ಕಾಂಪೌಂಡು ಹಾಕಿಸಬೇಕಾಗಿತ್ತು. ಒಳಗೆ ಸುಣ್ಣ ಬಣ್ಣ ಮಾಡಿಸಬೇಕಾಗಿತ್ತು. ಅವುಗಳಿಗಾಗಿ ಮತ್ತಷ್ಟು ಖರ್ಚು ಮಾಡಿ ಮನೆಯನ್ನು ಅಣಿಮಾಡಿದರು.

ಸೂರಪ್ಪನವರು ಕೊಂಡ ಮನೆಯ ಎಡಗಡೆ ಸಾಲಿನಲ್ಲಿ ಮೂರು ವಿಸ್ತಾರವಾದ ಕೋಣೆಗಳಿದ್ದವು. ಪ್ರವೇಶ ಮಾಡಿದೊಡನೆಯೇ ಒಂದು ವರಾಂಡ. ಒಳಗೆ ಹೋದರೆ ಒಂದು ತೊಟ್ಟಿ. ತೊಟ್ಟಿಯಿಂದ ಒಳಗೆ ಪ್ರವೇಶಿಸಿದರೆ ಮತ್ತೊಂದು ವಿಶಾಲವಾದ ಕೋಣೆ. ಅದನ್ನು ದಾಟಿ ಹೋದರೆ ಅಡಿಗೆಯಮನೆ, ಉಗ್ರಾಣ, ಸ್ನಾನ-ಗೃಹ ಹಿಂಬದಿಗೆ ಭಾವಿ ಒಗೆಯುವ ಕಲ್ಲು ಇತ್ಯಾದಿ.

ರಂಗಣ್ಣನಿಗಿತ್ತ ಮಾತನ್ನು ಸೂರಪ್ಪನವರು ತಪ್ಪಲಿಲ್ಲ. ಒಂದು ದಿನ ಗೊತ್ತುಮಾಡಿ ಕ್ರಮವಾಗಿ ಮನೆಯನ್ನು ಸುಭದ್ರೆಯ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಟ್ಟರು.

ಆದಷ್ಟು ಬೇಗ ಗೃಹಪ್ರವೇಶೋತ್ಸವ ಮಾಡಿ ಹೊಸ ಮನೆಗೆ ಹೋಗಬೇಕೆಂದು ರಂಗಣ್ಣ ತವಕಪಡುತ್ತಿದ್ದ. ತನ್ನ ಸ್ವಂತ ಮನೆಯಲ್ಲಿಯೇ ಪ್ರಸವಿಸಬೇಕೆಂದು ಸುಭದ್ರೆಯೂ ಇಚ್ಛೆಪಡುತ್ತಿದ್ದಳು.

ವೆಂಕಪ್ಪಯ್ಯ, ನರಸಮ್ಮನವರ ಕಣ್ಣಿಗೆ ಸುಭದ್ರೆ ಹೆಚ್ಚು ಕಾಲ ಮಣ್ಣೆರಚಲು ಸಾಧ್ಯವಾಗಲಿಲ್ಲ. ಸೂರಪ್ಪನವರು ಸೂಚನೆ ಕೊಟ್ಟು ಸುಭದ್ರೆಯ ಕೆಲಸ ಹಗುರಮಾಡಿದ್ದರು. ವೆಂಕಪ್ಪಯ್ಯ ವಸ್ತುಸ್ಥಿತಿಯನ್ನು ಸುಭದ್ರೆಯಿಂದಲೇ ತಿಳಿದುಕೊಂಡು ತಮ್ಮ ಕುಟುಂಬಕ್ಕೆ ತಿಳಿಸಿದರು.

ವೆಂಕಪ್ಪಯ್ಯನವರು ಸಮಾಧಾನಮಾಡಿಕೊಂಡಷ್ಟು ಬೇಗ ನರಸಮ್ಮನವರು ಸಮಾಧಾನ ತಂದುಕೊಳ್ಳಲಾಗಲಿಲ್ಲ. “ಮಹಾತಾಯಿ ರಂಭೆ. ನಿಮ್ಮ ಮೇಲೆ ನನ್ನ ಮೇಲೆ ಆಣೆ ಪ್ರಮಾಣ ಮಾಡಿದ್ದಳಲ್ಲಾ ಭದ್ರೆ” ಎಂದರು. ವೆಂಕಪ್ಪಯ್ಯ ಹೆಂಡತಿಯನ್ನು ಸಮಾಧಾನಗೊಳಿಸುತ್ತಾ

“ಏನು ಮಾಡುವುದು ಹೇಳಿ. [illegible] ಯೋ ? ದೇವರ ಇಚ್ಛೆ ಹೀಗಾಗಬೇಕೂಂತಿದ್ದರೆ ನಾವೇನು ಮಾಡುವುದಕ್ಕಾತ್ತದೆ.”

"ನಮ್ಮ ಸುಭದ್ರಾ ಹೀಗಾಗುತ್ತಾಳೆಂದು ನಾನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ."

"ನೋಡು–ಏನಾದರೂ ಎಲ್ಲಾ ಒಳ್ಳೆಯದಕ್ಕೆ ಎಂದು ನಾವು ಭಾವಿಸಿಕೊಳ್ಳಬೇಕು. ಸೂರಪ್ಪನವರು ಗೌರವಸ್ಥರು, ಪ್ರಭಾವಶಾಲಿಗಳು. ಕಾರ್ಪಣ್ಯ ತೋರಿಸದೆ ಸುಭದ್ರೆಗೆ ಸಹಾಯಮಾಡಿದ್ದಾರೆ. ಒಂದು ವೇಳೆ ಅವಳು ಇನ್ನು ಯಾರಾದರೂ-- ಅಯೋಗ್ಯರ ಕೈಗೆ ಸಿಕ್ಕಿ–ಹಾದಿರಂಪ ಬೀದಿರಂಪ ಮಾಡಿದ್ದರೆ ಎಷ್ಟು ಅವಮಾನಕ್ಕೆ ಕಾರಣವಾಗುತ್ತಿತ್ತು."

"ರಂಗಣ್ಣನಿಗೆ ವಿವೇಕ ಎಲ್ಲಿಗೆ ಹೋಗಿತ್ತ್ರೂಂತೀನಿ"

"ಅವನು ತಾನೆ ಏನು ಮಾಡುತ್ತಾನೆ ಹೇಳು. ಹೆಂಗಸು ತನ್ನ ನಿಷ್ಠೆ, ಧರ್ಮದಲ್ಲಿ ತಾನಿರಬೇಕು. ಗಂಡನೇ ಆಗಲಿ ಯಾರೇ ಆಗಲಿ ಅವಳಿಗೆ ಬುದ್ಧಿಗಲಿಸಿ, ಬಲವಂತದಿಂದ ಸರಿಯಾದ ದಾರಿಯಲ್ಲಿ ನಡೆಸುತ್ತೇನೆಂಬುದು ಹುಚ್ಚು ಮಾತು"

"ನಮ್ಮ ವಂಶಕ್ಕೇ ಇದು ದೊಡ್ಡ ಅಪಕೀರ್ತಿ."

"ವಿಧಿ ಕಣೇ–ವಿಧಿಯ ಲೀಲೆಯ ಮುಂದೆ ನಾವು ಯಾವ ಲೆಕ್ಕ ಹೇಳು."

ನರಸಮ್ಮನವರು ದುಃಖ ನುಂಗಿಕೊಂಡರು. ಆದರೆ ಗಂಡ ಹೇಳಿದ ಸಮಾಧಾನೋಕ್ತಿ ಅವರ ಮನಸ್ಸಿಗೆ ನೆಮ್ಮದಿ ಕೊಡಲಿಲ್ಲ. ಸುಭದ್ರೆ ಅವರ ಹೃದಯದ ಮೇಲೆ ಮಾಗಲಾರದ ಗಾಯ ಮಾಡಿದ್ದಳು. ಮಾನಕ್ಕೆ, ದರ್ಪಕ್ಕೆ, ಶ್ರೀಮದ್ಗಾಂಭೀರ್ಯಕ್ಕೆ ಹೊಡೆದಾಡುತ್ತಿದ್ದ ನರಸಮ್ಮನವರ ಹೃದಯ ಹಿಂಡಿಹೋಯಿತು.

ಕಾವೇರಮ್ಮ ಮಾತ್ರ ಪರಿಸ್ಥಿತಿಗೆ ಹೊಂದಿಕೊಳ್ಳಲಿಲ್ಲ. ವೆಂಕಪ್ಪಯ್ಯ ಎಷ್ಟು ಸಮಾಧಾನ ಹೇಳಿದರೂ ಆಕೆ ಒಪ್ಪಲಿಲ್ಲ. 'ಆ ಹೀನ ಹೆಣ್ಣಿನ ಮುಖಾವಲೋಕನ ಮಾಡಿದರೆ ನನ್ನ ಪಿತೃಗಳು ರೌರವ ನರಕಕ್ಕೆ ಹೋಗುತ್ತಾರೆ' ಎಂದು ಖಡಾಖಂಡಿತವಾಗಿ ನುಡಿದುಬಿಟ್ಟರು.

ಗೃಹಪ್ರವೇಶಕ್ಕೆ ವೆಂಕಪ್ಪಯ್ಯ, ನರಸಮ್ಮ ಹೋಗಲೇಬೇಕಾಯಿತು. ಹೋದ ಮೇಲೆ ಸಪ್ಪೆ ಮೋರೆ ಹಾಕಿಕೊಂಡಿರುವುದೇಕೆಂದು ನರಸಮ್ಮ ಸಂತೋಷದಿಂದಲೇ ಎಲ್ಲ ಕೆಲಸಕಾರ್ಯಗಳನ್ನೂ ತೂಗಿಸಿದರು. ಕಾವೇರಮ್ಮ ಅತ್ತ ಸುಳಿಯಲಿಲ್ಲ. ಅಂದು ಮೂರು ಹೊತ್ತು ಸ್ನಾನಮಾಡಿ, ತೀರ್ಥಮಾತ್ರ ಸ್ವೀಕರಿಸಿ ನಿಟ್ಟುಪವಾಸ ಮಾಡಿಬಿಟ್ಟಳು.

ತಂದೆ ತನ್ನ ವಿಷಯದಲ್ಲಿ ವಿಶ್ವಾಸ ಪ್ರಕಟ ಮಾಡದಿದ್ದರೂ ಅವರಿಗೆ ಗಾಢವಾದ ವಿಶ್ವಾಸವಿದೆಯೆನ್ನುವುದು ಶ್ರೀನಿವಾಸನ ನಂಬಿಕೆಯಾಗಿತ್ತು. ಅಭಿರುಚಿ, ದೃಷ್ಟಿ, ವಿಚಾರಲಹರಿಗಳಲ್ಲಿ ಇಬ್ಬರಿಗೂ ವಿಶೇಷ ಅಂತರವಿದ್ದರೂ ಕರುಳಿನ ಬಾಂಧವ್ಯ ಅವುಗಳೆಲ್ಲದರ ಉಕ್ಕಿನ ಕಟ್ಟನ್ನು ಮುರಿಯಬಲ್ಲುದಾಗಿತ್ತು. ತಂದೆ ಗಂಭೀರವಾದ ವ್ಯಕ್ತಿ-ಆದರೆ ಸ್ವಲ್ಪ ಹಳೆಯ ಕಾಲದವರು-ವಿಕ್ಟೋರಿಯಾ ಯುಗದ ಮನೋಭಾವ-ಹೊಸ ಪ್ರಾಗತಿಕ ಭಾವನೆಗಳಿಗೆ ಹೊಂದಿಕೊಳ್ಳುವುದು ಅವರಿಗೂ ಕಷ್ಟ ಎಂದು ಶ್ರೀನಿವಾಸ ಭಾವಿಸಿಕೊಂಡು ಸಮಾಧಾನ ತಂದುಕೊಂಡಿದ್ದ.

ಶ್ರೀನಿವಾಸನಲ್ಲಿ ಏಕಾಂತ ಚಿಂತನೆ ಬೆಳೆಯುವುದಕ್ಕೆ ಮನೆಯ ವಾತಾವರಣವೂ ಕಾರಣವಾಗಿತ್ತು. ಅವನ ಜತೆ ಬಾಲ್ಯದಲ್ಲಿ ಆಡುವುದಕ್ಕೆ ಅಕ್ಕ ತಂಗಿಯರಿರಲಿಲ್ಲ; ಅಣ್ಣ ತಮ್ಮಂದಿರಿರಲಿಲ್ಲ. ತಾಯಿ ಮಗನನ್ನು ಕಣ್ಣ ಬೆಳಕಿನನಂತೆ ಬೆಳಸಿ ಕಾಪಾಡಿದರು. ಆದರೆ ವಯಸ್ಸು ಬೇಡುವ ಸಹಾನುಭೂತಿ, ಬಾಲಿಕಾವಸ್ಥೆಯ ಸ್ನೇಹ ಅವನಿಗೆ ಸಿಕ್ಕಲಿಲ್ಲ.

ತಾನು ಮುಂಬಯಿಯಿಂದ ಹಿಂದಿರುಗಿದ ಮೇಲೆ ತಂದೆಯಲ್ಲಿ ಏನೋ ವ್ಯತ್ಯಾಸ ಕಂಡ. ಅದೇನೆಂದು ಪೃಥಕ್ಕರಿಸಲಮರ್ಥನಾದ. ಮುಂಬಯಿಯಲ್ಲಿ ತಾನು ನಡೆಸಿದ ಮಿತಜೀವನ ತಂದೆಯ ಮನಸ್ಸಿಗೆ ಸಂತೋಷವನ್ನುಂಟುಮಾಡಿರಬೇಕೆಂದು ಭಾವಿಸಿದ. ಸೂರಪ್ಪನವರು ಅಂಥ ಸಂತೋಷ ವ್ಯಕ್ತಗೊಳಿಸಲಿಲ್ಲ. ತಾಯಿಯ ಬಳಿ ಎಲ್ಲ ತೋಡಿಕೊಂಡು ಅವನು ಸಮಾಧಾನ ತಂದುಕೊಳ್ಳಬೇಕಾಗಿತ್ತು. ಅವರಿಗೂ ಶ್ರೀನಿವಾಸನ ಸಮಸ್ಯೆ ಬಗೆಹರಿಸುವ ಮಾರ್ಗ ತಿಳಿಯಲಿಲ್ಲ.

"ಅಣ್ಣನಲ್ಲಿ ಏನೋ ವ್ಯತ್ಯಾಸ ಕಂಡುಬರುತ್ತಿದೆ. ನಿನಗೆ ಹಾಗನಿಸುವುದಿಲ್ಲವೇ ಅಮ್ಮ."

"ನನಗೇನೂ ಕಾಣಲ್ಲಪ್ಪಾ. ಎಲೆಕ್ಷನ್ ಪಲೆಕ್ಷನ್ ಗಲಾಟೆಯಲ್ಲಿದ್ದರು. ಮನಸ್ಸಿಗೆ ಸ್ವಲ್ಪ ಮುಜುಗರವಾಗಿರಬಹುದು."

"ಈಚೆಗೆ ಗೀತಾಧ್ಯಯನ ಕೂಡ ಕ್ರಮವಾಗಿ ಮಾಡುತ್ತಿಲ್ಲ."

"ಹೌದು. ಅವರಿಗೆ ಏನೂ ಬೇಡವಾಗಿದೆ. ಮೊದಲು ಕೋರ್ಟು-

ಕೋರ್ಟು ಬಿಟ್ಟರೆ ಮನೆಯಾಗಿತ್ತು. ಈಗ ಅವರು ಮನೆ ಸೇರುವುದೇ ಅಪರೂಪ."

"ಈ ಹಾಳು ರಾಜಕಾರಣವೇ ಹಾಗೆ. ಇದರೊಳಗೆ ಧುಮ್ಮಿಕ್ಕು ವುದೂ ಕಾದ ಎಣ್ಣೆ ಕೊಪ್ಪರಿಗೆಯೊಳಗೆ ಧುಮ್ಮಿಕ್ಕುವುದೂ ಒಂದೇ."

"ಶೀನೂ-ತಿಂಗಳಿಗೆ ಐವತ್ತು ರೂಪಾಯಿ ಸಾಕು ಎಂದು ಬರೆದುಬಿಟ್ಟಿ ಯಲ್ಲಾ, ಬೊಂಬಾಯಿಯಲ್ಲಿ ಐವತ್ತು ಸಾಕಾಗುತ್ತಿತ್ತೇ?"

"ಬೊಂಬಾಯಿಯಲ್ಲಿ ತಿಂಗಳಿಗೆ ಐದುಸಾವಿರ ಖರ್ಚುಮಾಡುವುದಕ್ಕೂ ಮಾರ್ಗವಿದೆ–ಐವತ್ತು ರೂಪಾಯಿಯಲ್ಲಿ ಸಂಸಾರ ಮಾಡುವುದಕ್ಕೂ ದಾರಿ ಯಿದೆ. ಸ್ವಂತ ಸಂಪಾದನೆ ಮಾಡುವ ಯೋಗ್ಯತೆ ಇಲ್ಲದಿರುವಾಗ ಹೆಚ್ಚು ಹಣ ಖರ್ಚು ಮಾಡುವುದು ಯಾವ ನ್ಯಾಯ?"

"ನಿನ್ನ ತಂದೆ ಹಣ ನಿನ್ನ ಹಣವಲ್ಲವೇ? ಅದನ್ನು ನೀನು ಖರ್ಚು ಮಾಡದೆ ಮತ್ತೆ ಯಾರು ಖರ್ಚು ಮಾಡಬೇಕು?"

"ಮೊದಲು ಖರ್ಚು ಮಾಡಬೇಕೆಂಬ ಚಾಪಲ್ಯವನ್ನು ಹತೋಟಿ ಯಲ್ಲಿಟ್ಟುಕೊಳ್ಳಬೇಕೆಂದು ನನ್ನ ಆಸೆ. ಅನಂತರ ಕೈಯಲ್ಲಿ ಹಣವಿದ್ದಾಗ ಅದನ್ನು ವಿತರಣೆಯಾಗಿ ಖರ್ಚುಮಾಡುವ ಬುದ್ಧಿ ಬರುತ್ತದೆ."

"ಆರೋಗ್ಯವನ್ನು ಲೆಕ್ಕಿಸದೆ ಮಿಗಿಸುವುದು ಯಾವ ಬುದ್ಧಿವಂತಿಕೆ ಹೇಳು."

"ಹಾಗೇನಿಲ್ಲಮ್ಮ. ನನಗೆ ಮುಂಬಯಿಯಲ್ಲಿ ದೇವರಂಥ ಇಬ್ಬರು ಸ್ನೇಹಿತರಿದ್ದರು. ಅವರು ನನ್ನ ಯೋಗಕ್ಷೇಮ ಚೆನ್ನಾಗಿ ನೋಡಿಕೊಳ್ಳು ತ್ತಿದ್ದರು. ಒಬ್ಬ ಸ್ನೇಹಿತನ ತಾಯಿ—ಎಲ್ಲಾ ನಿನ್ನ ಹಾಗೇ—ಆಕೆಗೂ ಒಬ್ಬನೇ ಮಗ—ನನ್ನೇ ಎರಡನೆಯ ಮಗ ಎಂದು ತಿಳಿದುಕೊಂಡು ಆದರಿಸಿದಳು."

"ಆ ತಾಯಿ ಹೊಟ್ಟೆ ತಣ್ಣಗಿರಲಿ. ಯಾರಪ್ಪಾ ಆ ಪುಣ್ಯಾತ್ಗಿತ್ತಿ."

ಇಲಾಹಿಯ ಮನೆಯ ವಿಷಯ ಸಾದ್ಯಂತವಾಗಿ ತಾಯಿಗೆ ಶ್ರೀನಿವಾಸ ನಿರೂಪಿಸಿದ. ಬೀಯಮ್ಮನ ಕಷ್ಟಕಾರ್ಪಣ್ಯ ತ್ಯಾಗ ಕೇಳುತ್ತ ಕೇಳುತ್ತ ಗೌರಮ್ಮನವರು ಕಣ್ಣೀರು ಮಿಡಿದರು. ಕೂಡಲೆ ಅವರಿಗೆ ಒಂದು ಯೋಚನೆ ಹೊಳೆಯಿತು.

"ಅವರ ಮನೆಯಲ್ಲಿ ಉಂಡು ತಿಂದು ಬಂದೆಯೇನೋ ?"

"ಹೂ! ಸ್ನೇಹಿತ ಎಂದ ಮೇಲೆ ಅವನ ಮನೆಯಲ್ಲಿ ಊಟ ತಿಂಡಿ ಮಾಡದಿದ್ದರಾಗುತ್ತದೆಯೇ ?"

"ಕುಲಗೆಟ್ಟು ಬಂದೆಯೆನ್ನು—ಏನೇನು ತಿಂದೆ."

"ಏನೇನೋ ಮಾಡಿ ಹಾಕುತ್ತಿದ್ದರಮ್ಮ. ಬಿರಿಯಾನಿ, ಖೈಮಾ ಎಲ್ಲಾ ಎಷ್ಟು ರುಚಿಯಾಗಿ ಮಾಡುತ್ತಿದ್ದರೂಂತಿ."

"ನಿಜವೇನೋ ಶ್ರೀನಿವಾಸೂ...."

ತಾಯಿಯ ಮುಖದಲ್ಲಿ ಮೂಡಿದ ವೇದನೆಯ ಚಿನ್ಹೆ ಕಂಡು ಶ್ರೀನಿವಾಸ

"ನೀನು ಯಾಕೇಮ್ಮಾ ಇಂಥ ಹುಚ್ಚಿಯಾಗಿಬಿಟ್ಟೆ. ಮುಸ್ಲಿಮ ಜಾತಿಯಲ್ಲಿ ಹುಟ್ಟಿದವರೆಲ್ಲ ಎಲ್ಲರೂ ಮಾಂಸ ತಿನ್ನುತ್ತಾರೆಂದುಕೊಂಡೆಯಾ ? ಇಲಾಹಿ ಮುಸ್ಲಿಮರಲ್ಲಿ ಬ್ರಾಹ್ಮಣ. ಉಪಚಾರಕ್ಕೆ ಕೂಡ ಅವನೂ ಅವನ ತಾಯಿಯೂ ನನಗೆ ಮಾಂಸಾಹಾರ ಕೊಡಲಿಲ್ಲ."

"ಈಗ ಅವರು ಬೇಕೆಂದು ಹಿಂದೂಗಳಿಗೆ ಮಾಂಸ ತಿನ್ನಿಸಿ ಜಾತಿ ಕೆಡಿಸುವುದಕ್ಕೆ ಹೊರಟಿದ್ದಾರಂತೆ. ಅದಕ್ಕೋಸ್ಕರ ಕೇಳಿದೆ."

"ಅಂಥವರೂ ಇರಬಹುದು. ಆದರೆ ಮುಸ್ಲಿಮರಲ್ಲಿ ಅಜಾದ್, ಅಜ್ಮಲ್ ಖಾನ್, ಅನ್ಸಾರಿಯಂಥವರೂ ಇದ್ದಾರಮ್ಮಾ. ನಾವು ಶೀಲಕ್ಕೆ ಬೆಲೆ ಕೊಡುವ ಹಾಗೆ ಅವರಲ್ಲಿಯೂ ಬೆಲೆ ಕೊಡುವವರಿದ್ದಾರೆ."

"ಏನಾದರೂ ಆಗಲಿ. ನಾಳೆ ಪಂಚಗವ್ಯ ತೆಗೆದುಕೊಂಡು ಜನಿವಾರ ಬದಲಾಯಿಸು"

"ಜನಿವಾರ ಇದ್ದರಲ್ಲವೇಮ್ಮಾ...ಬದಲಾಯಿಸುವುದು. ವೃಥಾ ನನಗೆ ಮುಂಜಿಮಾಡಿ ಖರ್ಚುಮಾಡಿಕೊಂಡಿರಿ."

ಗೌರಮ್ಮನವರು ಮಗನನ್ನು ತರಾಟೆಗೆ ತೆಗೆದುಕೊಳ್ಳಬೇಕೆಂದಿರುವಷ್ಟರಲ್ಲಿ ಕಾವೇರಮ್ಮ ಬಂದಳು. ಆಕೆ ಬಂದುದನ್ನು ನೋಡಿ ಶ್ರೀನಿವಾಸ ಅಡಿಗೆ ಮನೆ ಬಿಟ್ಟು ಹೊರಗೆಹೋದ.

ಕಾವೇರಮ್ಮ ಬಂದು ಅಡಿಗೆಯ ಮನೆಯಲ್ಲಿಯೇ ಕುಳಿತರು.

"ಅಡಿಗೆ ಕೆಲಸ ಆಯಿತೇ ಕಾವೇರಮ್ಮನವರೇ" ಎಂದು ಗೌರಮ್ಮ ಕೇಳಿದರು.

"ಆಯಿತಮ್ಮ ಆಯಿತು."

"ನಿಮ್ಮನ್ನು ನೋಡಿ ಬಹಳ ದಿವಸವಾಯಿತು. ಈ ಕಡೆ ಬರಲೇ ಇಲ್ಲ. ಪುರಸತ್ತಾಗಲಿಲ್ಲವೇನೋ? ಹೊಸ ಮನೆ 'ಗೃಹಪ್ರವೇಶ'ದ ಗಲಾಟೆ ಬೇರೆ."

"ಹೂ! ಅದನ್ನು ನಾನೇನು ಅಷ್ಟು ಹಚ್ಚಿಕೊಳ್ಳಲಿಲ್ಲ."

"ಇದೇನು ಹೀಗೆನ್ನುವಿರಿ ಕಾವೇರಮ್ಮ... ನಿಮ್ಮ ಅಣ್ಣನ ಮಗಳ ಮನೆಯಲ್ಲಿ ನೀವು ಓಡಿಯಾಡದೆ ಇನ್ನು ಯಾರು ಓಡಿಯಾಡಬೇಕು."

"ಅತ್ತಿಗೆ ಅಲ್ಲೀಗೇ ಹೋದರು. ಮನೆಯಲ್ಲಿ ಯಾರಾದರೂ ಇರಬೇಕಲ್ಲ. ವೆಂಕಣ್ಣನಿಗೆ ಅನ್ನ ಮಾಡಿ ಹಾಕುವುದಕ್ಕೆ ಯಾರಾದರೂ ಒಬ್ಬರು ಮನೆಯಲ್ಲಿರಬೇಡವೆ?"

"ನಿಮ್ಮ ಅತ್ತಿಗೆ ಮಗಳ ಮನೆಯಲ್ಲಿದ್ದಾರೆಯೇ?"

"ಹೂ–ಸುಭದ್ರಂಗೆ ಈಗ ದಿನ."

"ಹಾಗೇನು! ನನಗೆ ಗೊತ್ತೇ ಇರಲಿಲ್ಲ."

"ನಿಮ್ಮ ಮಗ ಚೆನ್ನಾಗಿದ್ದಾರೆಯೇ? ತಿರುಗಿ ಬೊಂಬಾಯಿಗೆ ಹೋಗುತ್ತಾರೆಯೇ?"

"ಅವನೇನು ಮಾಡುತ್ತಾನೆಯೋ ಅವನೇ ಕಾಣ. ಲಾ ಪರೀಕ್ಷೆ ಮುಗಿಸಬೇಕೂಂತಿದ್ದೇನೆ ಎಂದು ಹೇಳುತ್ತಿರುತ್ತಾನೆ."

"ಯಜಮಾನರು ಮನೆಯಲ್ಲಿಲ್ಲವೇನೋ?"

"ಅವರಿಗೆ ಬಿಡುವೇ ಇಲ್ಲ. ಈ ಕೌನ್ಸಿಲ್ ಕಟ್ಟಿಕೊಂಡ ಮೇಲಂತೂ ಅವರು ಮನೆ ಸೇರುವುದೇ ಕಷ್ಟವಾಗಿದೆ."

ಗೌರಮ್ಮನವರ ಸರಳತನ ಕಂಡು ಕಾವೇರಮ್ಮನ ಹೃದಯದಲ್ಲಿ ಅಪಾರ ಕರುಣೆ ತುಂಬಿತು. ಆಕೆಯ ಮುಗ್ಧತೆಯನ್ನು ಕಂಡು ಕಾವೇರಮ್ಮನಿಗೆ ತುಸ ಬೇಸರವೂ ಆಯಿತು. 'ಅಯ್ಯೋ ಪ್ರಾಣಿ, ಇಡೀ ಪ್ರಪಂಚಕ್ಕೇ ಡಂಗುರ ಸಾರಿದಂತೆ ಗೊತ್ತಾಗಿರುವ ವಿಷಯ ಈಕೆಗೆ ತಿಳಿಯದಲ್ಲ' ಎಂದುಕೊಂಡಳು. ಹೇಳಿಬಿಡಬೇಕೆಂದು ಮನಸ್ಸು ಹಾತೊರೆಯಿತು. ಮರುಕ್ಷಣವೇ ವಿಚಾರ ಬದಲಾಯಿಸಿತು. 'ಈ ವಿಸ್ಮೃತಿಯೇ–ಈ ಅಜ್ಞಾನವೇ ಈಕೆಯ ಜೀವದ ಅಮೃತಬಿಂದು. ನಾನೇಕೆ ಈಕೆಯ ಮನಸ್ಸಿನ ಶಾಂತಿಯನ್ನು ಕದಡಲಿ. ಆ ವಿಷಯ ಇವರಿಗೆ ಹೇಳಿ ನನಗಾಗಬೇಕಾದ್ದಾದರೂ ಏನು?' ಎಂದುಕೊಂಡು ಸುಮ್ಮನಾದಳು.

"ಏಕೆ ಸುಮ್ಮನೆ ಕುಳಿತುಬಿಟ್ಟಿರಲ್ಲಾ ಕಾವೇರಮ್ಮ."

"ನಾನು ಕಥೆಗೆ ಹೊರಟಿದ್ದೆ. ನೀವು ಬರುವಿರೇನೋ ಎಂದು ಇತ್ತ ಕಡೆ ಬಂದೆ."

"ನನಗೇಕಮ್ಮ ಕಥೆ. ಅಲ್ಲಿರುವ ರಾಮಕೃಷ್ಣ ಇಲ್ಲಿಯೂ ಇದ್ದೇ ಇರುತ್ತಾರೆ. ಮನೆಯಲ್ಲಿಯೇ ನನ್ನ ಕಥೆಯೆಲ್ಲಾ ಪೂರೈಸಿಹೋಗುತ್ತದೆ."

ಎಂದರು. ಕಾವೇರಮ್ಮ ಹೊರಡಲೆನ್ನದ ನಿಂತಳು. ಅವಳ ಮನಸ್ಸು ಅನೇಕ ಭಾವನೆಗಳಿಂದ ತುಂಬಿಹೋಗಿತ್ತು. ಲೋಕದ ವ್ಯಾಪಾರ ಕಂಡು ಜೀವನದ ಬಗ್ಗೆ ಜುಗುಪ್ಸೆ ಮತ್ತಷ್ಟು ವೃದ್ಧಿಯಾಯಿತು.

## ೪೧

ಅರವಿಂದ ಮಿಲ್ಲಿನ ಗೋಪಾಲಕೃಷ್ಣಯ್ಯನವರು ಸುಮ್ಮನೆ ಕೂಡುವ ವ್ಯಕ್ತಿಯಲ್ಲ. ಶ್ರೀನಿವಾಸನೆದುರಿಗೆ ಯಾವ ಬಗೆಯ ಭೀತಿಯನ್ನೂ ವ್ಯಕ್ತ ಮಾಡದೆ 'ನೀವು ಮಾಡಿದ್ದು ಮಾಡಿಕೊಳ್ಳಿ' ಎಂಬ ಧಾಟಿಯಲ್ಲಿ ಮಾತನಾಡಿದ್ದರೂ ಅವರ ಎದೆ ಬಡಿದುಕೊಳ್ಳುತ್ತಲೇ ಇತ್ತು. 'ಅಲ್ಪಸ್ವಲ್ಪ ಒಪ್ಪಿಕೊಂಡಿದ್ದರೆ ಚೆನ್ನಾಗಿತ್ತು' ಎಂದು ಸಂಜೀವಶೆಟ್ಟರು ಬೇರೆ ಚುಚ್ಚು ಮಾತು ಆಡುತ್ತಲೇ ಇದ್ದರು.

ಸದ್ಯದ ಸಂದರ್ಭದಲ್ಲಿ ತಮ್ಮ ಮಿಲ್ಲಿನಲ್ಲಿ ಮುಷ್ಕರವಾಗುವುದು ಗೋಪಾಲಕೃಷ್ಣಯ್ಯನವರಿಗೆ ಸ್ವಲ್ಪವೂ ಬೇಕಿರಲಿಲ್ಲ. ಮುಂಬಯಿ, ಅಹಮದಾಬಾದ್ ಗಿರಣಿಗಳಲ್ಲಿ ಬೆಳಗಾಗೆದ್ದರೆ ಮುಷ್ಕರವಾಗುತ್ತಿತ್ತು. ಜನ ಬಟ್ಟೆಗೆ ಹಾತೊರೆಯುತ್ತಿದ್ದರು. ವ್ಯಾಪಾರಿಗಳು ಮಾಲನ್ನು ಒಳಗಡೆ ಔತಿಟ್ಟು ಧಾರಾಳವಾಗಿ 'ಬ್ಲಾಕ್‌ಮಾರ್ಕೆಟ್' ಮಾಡುತ್ತಿದ್ದರು. ದೇಶದ ಪರಿಸ್ಥಿತಿಯಿಂದ ದಕ್ಷಿಣ ಹಿಂದೂಸ್ಥಾನದಲ್ಲಿದ್ದ ಮಿಲ್ಲುಗಳಿಗೆ ಒಳ್ಳೆಯಕಾಲ ಬಂದಂತಾಗಿತ್ತು. ದಿವಾಳಿ ತೆಗೆಯಲು ಸಿದ್ಧವಾಗಿದ್ದ ಮಿಲ್ಲುಗಳೂ ಭದ್ರವಾಗಿ ತಳವೂರಿ ನಿಂತವು. ಒಂದು ಷಿಫ್ಟ್ (Shift) ಕೆಲಸಮಾಡುತ್ತಿದ್ದವರು ಎರಡು, ಮೂರು ಷಿಫ್ಟುಗಳು ಕೆಲಸಮಾಡಲು ವ್ಯವಸ್ಥೆಮಾಡುತ್ತಿದ್ದರು. ಯಂತ್ರಗಳು ಮುರಿದುಬಿದ್ದರೂ ಚಿಂತೆಯಿಲ್ಲ, ಕೆಲಸಗಾರರು ನಿರ್ನಾಮವಾದರೂ ಚಿಂತೆಯಿಲ್ಲ, ಆದಷ್ಟು ಹೆಚ್ಚು ಬಟ್ಟೆ ತಯಾರಿಸಿ ಬೇಗಬೇಗ ಶ್ರೀಮಂತರಾಗಿಬಿಡಬೇಕೆಂಬ ದಾಹ ಮಿಲ್ ಮಾಲಿಕರನ್ನು ವ್ಯಾಪಿಸಿತ್ತು.

ತಾವು ಹಟ ಹಿಡಿದುದು ತಪ್ಪಾಯಿತೆಂದು ಗೋಪಾಲಕೃಷ್ಣಯ್ಯ ಗ್ರಹಿಸಿದರು. ಆದರೆ ಮಾಡುವುದೇನು? ಕಾರ್ಯ ಕೈಮುಂಚಿಹೋಗಿತ್ತು. ಕೂಲಿಗಾರರನ್ನಾಗಲಿ ಅವರ ನಾಯಕರನ್ನಾಗಲಿ ಆಕ್ಷೇಪಮಾಡುವಂತಿಲ್ಲ. ಅವರು ಕ್ರಮಬದ್ಧವಾಗಿ ನೋಟೀಸ್ ಕೊಟ್ಟಿದ್ದರು–ನಿಯೋಗ ಗೋಷ್ಠಿ ತಂದು ವಿನಯದಿಂದ ಪ್ರಾರ್ಥಿಸಿಕೊಂಡಿದ್ದರು. ಬೋನಸ್ ಬಗ್ಗೆ ತಾವು ವಾಗ್ದಾನ ಮಾಡಿಯೇ ಇರಲಿಲ್ಲವೆಂದು ಸಾರಿದ್ದರೂ ಮಾಡಿದ್ದುಂಟೆಂದು ಗೋಪಾಲ ಕೃಷ್ಣಯ್ಯನವರ ಅಂತರಾತ್ಮ ಚೀರುತ್ತಿತ್ತು.

ಈಗ ಪುರಸ್ಕರ ನಡೆದರೆ ಮಿಲ್ಲಿಗಾಗುವ ನಷ್ಟವಲ್ಲದೆ, ಕೂಲಿಕಾರರ ಸೌಹಾರ್ದ ತಪ್ಪಿಹೋಗುವುದೆಂಬ ಭಯವೂ ಗೋಪಾಲಕೃಷ್ಣಯ್ಯನವರನ್ನು ವ್ಯಾಪಿಸಿತು. ಯೋಚನೆ ಮಾಡಿಮಾಡಿ ಕೊನೆಗೆ ಒಂದು ನಿರ್ಧಾರಕ್ಕೆ ಬಂದು ಜಾನ್‌ಸ್ಟನ್ ದೊರೆಗಳನ್ನು ಕಂಡು ತಮ್ಮ ಅಳಲನ್ನುಸುರಿಕೊಂಡರು. ಜಾನ್‌ಸ್ಟನ್ ಕಾಲಯಾಪನೆ ಮಾಡದೆ ಸೂರಪ್ಪನವರನ್ನು ಕಂಡು ಆಗವಿಂದ ಮಿಲ್ಲಿನ ಪರಿಸ್ಥಿತಿಯನ್ನು ವಿವರಿಸಿದರು.

ನಿಯೋಗ ಗೋಷ್ಠಿಯ ನಾಯಕ ಶ್ರೀನಿವಾಸನಾಗಿದ್ದಾನೆಂಬ ಸುದ್ದಿ ಕೇಳಿದ ಮೇಲೆ ಸೂರಪ್ಪನವರು ಕಿಡಿಕಿಡಿಯಾದರು. ಮನೆಗೆ ಬಂದವರೇ ಮಗನ ದಾರಿ ಕಾಯುತ್ತ ಕುಳಿತರು. ಶ್ರೀನಿವಾಸ ಬಂದ ಕೂಡಲೆ ತಿಳಿಸಬೇಕೆಂದು ಶಾಸ್ತ್ರಿಗೆ ಆಜ್ಞೆಯಾಗಿತ್ತು.

ರಾಯರ ಮಹದಾಗ್ರಹ ಕಂಡು ರಾಮಾಶಾಸ್ತ್ರಿ ನಿಜವಾಗಿ ಹೆದರಿದ. ಶ್ರೀನಿವಾಸ ಬಂದ ಕೂಡಲೆ ಅವನನ್ನು ಕರೆದು 'ತಂದೆಯವರು ಕೂಡಲೆ ನೋಡಬೇಕೆಂದು ತಿಳಿಸಿದ್ದಾರೆ-ಏಕೋ ಬಹಳ ಕೋಪಗೊಂಡಿದ್ದಾರೆ' ಎಂದು ತಿಳಿಸಿದ.

"ಏಕೆ ಶಾಸ್ತ್ರಿಗಳೇ-ಯಾರ ಮೇಲೆ ಕೋಪ."

"ನಿಮ್ಮ ಮೇಲೇ ಇರಬಹುದು ಸ್ವಾಮಿ. ಕಾರಣ ಗೊತ್ತಿಲ್ಲ."

'ಇರಲಿ' ಎಂದುಕೊಂಡು ಶ್ರೀನಿವಾಸ ತಂದೆಯನ್ನು ನೋಡಹೋದ. ಮಗ ಬಂದದ್ದು ಕಂಡರೂ ಸೂರಪ್ಪನವರು ಕೂಡಲೆ ಮಾತನಾಡಿಸಲಿಲ್ಲ. ಏನೋ ಕೆಲಸದಲ್ಲಿದ್ದಂತೆ ನಟಿಸುತ್ತಿದ್ದರು. ಶ್ರೀನಿವಾಸ ಎದುರಿಗಿದ್ದ ಒಂದು ಲಾ ರಿಪೋರ್ಟ್ ಕೈಗೆ ತೆಗೆದುಕೊಂಡು ಅದರ ಹಾಳೆ ಮಗುಚಿಹಾಕುತ್ತಾ ನಿಂತ.

ಸೂರಪ್ಪನವರು ಕತ್ತೆತ್ತಿ ನೋಡಿ

"ಯಾಕಯ್ಯಾ ಇಷ್ಟು ಹೊತ್ತು ಮನೆಗೆ ಬರುವುದಕ್ಕೆ?" ಎಂದು ಕೇಳಿದರು.

"ಸ್ವಲ್ಪ ಕೆಲಸವಿತ್ತು."

"ಏನಂಥ ರಾಜಕಾರ್ಯ-ರಾತ್ರಿ ಒಂಭತ್ತು ಗಂಟೆವರೆಗೆ-ಇದೇನು ಮನೆಯೋ ಛತ್ರವೋ!"

ತಂದೆಯ ಪ್ರಶ್ನೆಗೆ ಗಟ್ಟಿಯಾಗಿ ಗಹಗಹಿಸಿ ನಕ್ಕುಬಿಡಬೇಕೆಂದು ಶ್ರೀನಿವಾಸನಿಗೆ ಹೊಳೆಯಿತು. ಆ ಚಾಪಲ್ಯಕ್ಕೆ ಬೀಳದೆ ಗಂಭೀರವಾಗಿ

"ನಾನು ನಿನಾಕಾರಣ ಮನೆಗೆ ತಡವಾಗಿ ಬರುವುದಿಲ್ಲ."

"ನಿನ್ನ ಕಾರಣ ನಾನು ಬಲ್ಲೆ.'

"ಹಾಗಾದರೆ ಕೇಳುವ ಅವಶ್ಯಕತೆಯೇ ಇರಲಿಲ್ಲವಲ್ಲಾ"

"ಅವಶ್ಯಕತೆ ಇದೆ-ಅದಕ್ಕೇ ನಿನ್ನ ಕರೆದದ್ದು."

"ಕೇಳಬಹುದು."

ಎಂದು ಶ್ರೀನಿವಾಸ ದಿಟ್ಟನಾಗಿ ನಿಂತ. ಹೊರಬಾಗಿಲಿನಲ್ಲಿ ತಂದೆ ಮಕ್ಕಳ ಸಂವಾದ ಕೇಳುತ್ತಿದ್ದ ಶಾಸ್ತ್ರಿಯ ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು.

"ನೀನೊಬ್ಬ ದೊಡ್ಡ ಲೇಬರ್ ಲೀಡರ್ (Labour Leader) ಆಗಿರುವೆಯಂತಲ್ಲಾ"

"ನನ್ನ ಯಾರೂ ಲೀಡರ್ ಎಂದು ಕರೆದಿಲ್ಲ. ದೊಡ್ಡ ಲೀಡರ್ ಆಗಬೇಕೆಂಬ ಇಚ್ಛೆಯೂ ನನಗಿಲ್ಲ. ನಾನೊಬ್ಬ ಸಾಮಾನ್ಯ ಕಾರ್ಮಿಕ ಅವರ ಕಷ್ಟ ಸುಖದಲ್ಲಿ ನನಗೆ ಆಸಕ್ತಿಯಿದೆ"

"ಕಂಡವರನ್ನು ಹೆದರಿಸಿ ಬೆದರಿಸಿ ಬ್ಲಾಕ್‌ಮೇಲ್ (Blackmail) ಮಾಡುವುದರಲ್ಲಿ ತಾನೆ ಆಸಕ್ತಿ"

ಅರವಿಂದ ಮಿಲ್ ಪ್ರಕರಣ ತಂದೆಯ ಕಿವಿ ಮುಟ್ಟಿರುವುದಾಗಿ ಶ್ರೀನಿವಾಸನಿಗೆ ಗೊತ್ತಾಯಿತು.

"ಈಗ ಬ್ಲ್ಯಾಕ್‌ಮೇಲಿಗೆ ಹೊರಟಿರುವವರು ಮಿಲ್ ಮಾಲಿಕರು, ಅವರ ಹಿತೈಷಿಗಳೇ ವಿನಾ ಕೂಲಿಕಾರರಲ್ಲ. ಕೂಲಿಕಾರರು ತಮ್ಮ ಹಕ್ಕಿಗಾಗಿ

ಹೋರಾಡುತ್ತಿದ್ದಾರೆ. ಬದುಕಬೇಕೆಂದು ಅವರು ಬಯಸುವುದು ಒಂದು ಅಪರಾಧವಲ್ಲವಲ್ಲಾ !"

"ಅಪರಾಧವೇ ! ಕಂಡವರ ರಕ್ತಹೀರಿ ಬದುಕುವುದು ಒಂದು ಬದುಕೇ ? –ಸೊಳ್ಳೆ, ತಿಗಣೆಗಳು ಬದುಕುವುದು ಅದೇ ಮಾರ್ಗ."

"ನೀವು ಎಲ್ಲಾ ತಿಳಿದವರು. ದೀನರ, ದಲಿತರ ಉದ್ಧಾರಕ್ಕೆ ಹೊರಟಿರುವ ಸ್ವರಾಜ್ಯಪಕ್ಷದ ನಾಯಕರು. ನೀವೆ ವಿಚಾರಮಾಡಿ. ರಕ್ತಶೋಷಣೆಗೆ ಹೊರಟಿರುವವರು ಕೂಲಿಕಾರರೋ ಬಂಡವಾಳಗಾರರೋ ?"

"ನೀನು ಅಧಿಕಪ್ರಸಂಗಿಯಾದೆ."

"ಆಗಬೇಕಾಗಿದೆ."

"ಯಾರಿಗಾಗಿ ? ಬೆಳಿಗ್ಗೆಯಿಂದ ಸಂಜೆಯವರೆಗೆ ಹೆಂಡ ಕುಡಿದು, ತಾಯಿ ಯಾರು ಹೆಂಡತಿಯಾರು ಎಂದು ವಿವೇಚನೆ ಮಾಡದಿರುವ ಕೂಲಿಗಾರರಿಗಾಗಿಯೋ ?"

"ಅವರಿಗಿರುವ ತಾರತಮ್ಯಜ್ಞಾನ–ಅವರಲ್ಲಿರುವ ನೀತಿ, ತ್ಯಾಗ, ಸಹಿಷ್ಣುತೆ ಅವರನ್ನು ಉದ್ಧಾರಮಾಡುವುದಕ್ಕೆ ಹೋರಾಡುವವರಲ್ಲಿಲ್ಲದಿರುವುದೇ ನಮ್ಮ ದೌರ್ಭಾಗ್ಯ."

"ಮಾತಿಗೆ ಮಾತು ಬೆಳಸಬೇಡ."

"ಮಾತಾಡಬೇಡವೆಂದರೆ ನಾನು ಹೊರಟುಹೋಗುವುದಕ್ಕೆ ಸಿದ್ಧನಾಗಿದ್ದೇನೆ."

"ಅರವಿಂದ ಮಿಲ್ ಕೂಲಿಕಾರರಿಗೂ ನಿನಗೂ ಏನು ಸಂಬಂಧ ?"

"ಎಲ್ಲ ಕೂಲಿಗಾರರೂ ನನನ್ನು ಮಿತ್ರನೆಂದು ಭಾವಿಸಿದ್ದಾರೆ."

"ಅರವಿಂದ ಮಿಲ್ಲಿನ ಕೂಲಿಕಾರರಿಗೆ ಮುಷ್ಕರ ಮಾಡಿರೆಂದು ಏಕೆ ಚಿತಾವಣೆ ಮಾಡಿರುವೆ."

"ನಾನು ಮಾಡಲಿಲ್ಲ. ನಾನು ಮುಂಬಯಿಯಿಂದ ಬರುವ ಮುನ್ನವೇ ಅವರೇ ಆ ನಿರ್ಧಾರಕ್ಕೆ ಬಂದಿದ್ದರು. ಮುಷ್ಕರ ನಿಲ್ಲಿಸಲು ನಾನು ಪ್ರಯತ್ನಪಟ್ಟೆ. ನಿಯೋಗ ಗೋಷ್ಠಿ ಹೋಗಿ ಮಾಲಿಕರನ್ನು ಭಿಕ್ಷೆ ಬೇಡುವುದು ಕೂಲಿಕಾರರಿಗೆ ಬೇಕಿರಲಿಲ್ಲ. ಅವರನ್ನು ಒಪ್ಪಿಸಿ ನಾನೇ ನಿಯೋಗಗೋಷ್ಠಿ ಕರೆದೊಯ್ದು ಭಿಕ್ಷೆ ಬೇಡಿದೆ. ನಾವು ಅನ್ನ ಕೇಳಿದವು—ಮಾಲಿಕರು ಕಲ್ಲು ಒಗೆದರು."

"ನೀನು ಇನ್ನು ಈ ವ್ಯವಹಾರಕ್ಕೆ ಕೈಹಾಕಕೂಡದು."

"ಏತಕ್ಕೆ ?"

"ಆ ಪ್ರಶ್ನೆ ಕೇಳಬೇಡ. ನೀನು ಈ ವ್ಯವಹಾರ ಮಾಡುವುದು ನನಗೆ ಬೇಕಿಲ್ಲ."

"ನನಗೆ ಬೇಕಾಗಿದೆ. ಈಗ ನಾನು ಯಾರಿಗಾಗಿಯೂ ಕೂಲಿಕಾರರ ಕೈಬಿಡಲು ಸಿದ್ಧನಾಗಿಲ್ಲ."

"ಇದರ ಪರಿಣಾಮವೇನಾಗುವುದೆಂದು ಚೆನ್ನಾಗಿ ಆಲೋಚಿಸು."

ಶ್ರೀನಿವಾಸ ಕ್ಷಣಕಾಲ ಸುಮ್ಮನಾದ. ಮಾತು ಬಿಸಿಯೇರುತ್ತಿರುವುದನ್ನು ಕಂಡು ರಾಮಾಶಾಸ್ತ್ರಿ ಕೂಡಲೆ ಓಡಿಹೋಗಿ ಗೌರಮ್ಮನವರಿಗೆ ಸುದ್ದಿ ಮುಟ್ಟಿಸಿದ. ಅವರೂ ಬಂದು ಬಾಗಿಲ ಮರೆಯಲ್ಲಿ ತಂದೆ ಮಕ್ಕಳ ವಾದ ವಿವಾದ ಕೇಳುತ್ತ ನಿಂತರು.

"ಆಲೋಚನೆ ಮಾಡಿದೆಯಾ ?" ಎಂದು ಸೂರಪ್ಪನವರು ಗದರಿದರು.

"ಹೊಸದಾಗಿ ನಾನು ಯೋಚನೆಮಾಡಿ ಒಂದು ನಿರ್ಧಾರಕ್ಕೆ ಬರ ಬೇಕಾಗಿಲ್ಲ. ಯೋಚನೆ, ನಿರ್ಧಾರ ಎಂದೋ ಮುಗಿಸಿದ್ದೇನೆ."

"ಏನು ನಿರ್ಧಾರ ಮಾಡಿದ್ದೀಯಾ ?"

"ಹೇಳಿದ್ದೇನಲ್ಲಾ-ಕೂಲಿಕಾರರ ಕೈಬಿಡಲು ಸಾಧ್ಯವಿಲ್ಲವೆಂದು."

ಸೂರಪ್ಪನವರ ಮುಖ ಕೆಂಪೇರಿತು. ರೋಷದಿಂದ ಅವರ ಮೈ ಕಂಪಿಸಿತು. ಕಣ್ಣುಗಳನ್ನರಳಿಸಿ ಮಗನನ್ನು ದುರುಗುಟ್ಟಿಕೊಂಡು ನೋಡುತ್ತಾ

"ನನ್ನ ಮನೆಯಲ್ಲಿದ್ದೂ ಈ ವ್ಯವಹಾರ ನಡೆಸಲು ಇನ್ನು ಮುಂದೆ ಸಾಧ್ಯವಿಲ್ಲ"

ಎಂದರು. ಶ್ರೀನಿವಾಸ ನಿಶ್ಚಲನಾಗಿದ್ದ. ತಂದೆಯ ಕೋಪತಪ್ತ ಸ್ಥಿತಿಯನ್ನು ಕಂಡು,

"ನೀವು ಬಹಳ ಕೋಪಗೊಂಡಿದ್ದೀರಿ. ಶಾಂತರಾಗಿ. ನಾಳೆ ಬೇಕಾದರೆ ಈ ಮಾತು ಮುಂದುವರಿಸೋಣ."

"ನನಗೆ ಸಮಾಧಾನ ಹೇಳಬೇಡ. ಈ ವಿಷಯ ಇಂದೇ-ಈಗಲೇ ಇತ್ಯರ್ಥವಾಗಿಬಿಡಬೇಕು. ನನ್ನ ಮಗನ ಅವಿಧೇಯತೆಯನ್ನು ನಾನು ಸಹಿಸಲಾರೆ. ಅಂಥ ಮಗ ಇದ್ದರೂ ಒಂದೇ ಸತ್ತರೂ ಒಂದೇ."

"ಮನಸ್ಸಿನಲ್ಲಿಲ್ಲದ ಕೆಟ್ಟ ಮಾತುಗಳನ್ನು ಕೋಪದ ಭರದಲ್ಲಿ ಬಾಯಿಂದೇಕೆ ಆಡುವಿರಿ."

"ನನಗೆ ವಿವೇಕ ಹೇಳುವುದಕ್ಕೆ ಬರಬೇಡ ಭಡವಾ. ಇಷ್ಟವಿದ್ದರೆ ನಾನು ಹೇಳಿದಂತೆ ಕೇಳಿಕೊಂಡು ಬಾಯಿ ಮುಚ್ಚಿಕೊಂಡು ಬಿದ್ದಿರು. ಇಷ್ಟವಿಲ್ಲದಿದ್ದರೆ ನಿನ್ನ ಕೂಲಿಕಾರರನ್ನು ಕಟ್ಟಿಕೊಂಡು ಹಾಳಾಗಿಹೋಗು. ಮತ್ತೆ ನನಗೆ ನಿನ್ನ ಹಾಳು ಮುಖ ತೋರಿಸಬೇಡ."

ಶ್ರೀನಿವಾಸನ ಆತ್ಮಗೌರವ ಸಿಡಿದೆದ್ದಿತು. ತನ್ನ ಸಹನೆ, ಸಂಯಮ ಯಾವ ಪ್ರಯೋಜನಕ್ಕೂ ಬಾರದಿದ್ದುದನ್ನು ಕಂಡು ಅವನಿಗೆ ತುಂಬ ವ್ಯಥೆ ಯಾಯಿತು. ತಂದೆಯ ಬಾಯಲ್ಲಿ ಬಂದ ಮಾತುಗಳು ಅವನ ಹೃದಯ ವನ್ನು ಹಿಂಡಿದವು. ಕಣ್ಣಿನಲ್ಲಿ ಒಂದೆರಡು ಹನಿ ಕಾಣಿಸಿಕೊಂಡವು.

"ಅಣ್ಣಾ" ಎಂದ.

"ನನ್ನ ಅಣ್ಣಾ ಎಂದು ಕರೆಯಬೇಡ" ಎಂದು ಸೂರಪ್ಪನವರು ನುಡಿದರು.

"ಈ ವಿಷಯ ಪುನರಾಲೋಚಿಸಲು ನೀವು ಸಿದ್ಧರಾಗಿಲ್ಲವೆ ?"

"ಇಲ್ಲ."

"ಕೇಳಿ–ಮನೆ ಬಿಟ್ಟು ಹೋಗಬೇಕೆಂದು ನಾನು ದುಃಖಪಡುತ್ತಿಲ್ಲ. ಇದು ಒಂದು ಮನೆಯೇ !–ಇಲ್ಲಿ ಪ್ರೇಮವಿದೆಯೇ–ಶಾಂತಿಯಿದೆಯೇ–ಸೌಖ್ಯವಿದೆಯೇ ?–ಇದೊಂದು ದುರಾಶೆಯ ಜ್ವಾಲಾಮುಖಿ. ಈ ಅಗ್ನಿ ಕುಂಡದಲ್ಲಿ ಬೆಂದು ಬೆಂದು ನನ್ನ ತಾಯಿ ಸೀದುಹೋಗಿದ್ದಾಳೆ. ತಾನೊಂದು ಮಾನವ ಜೀವವೆಂಬ ಭಾವನೆಯೇ ಆಕೆಯಲ್ಲಿ ಹೋಗಿಬಿಟ್ಟಿದೆ. ಆಕೆಯನ್ನು ಮುರಿದು, ಮೂಲೆಗೊತ್ತರಿಸಿದಂತೆ ನನ್ನೂ ಮುರಿಯಬೇಕೆಂದು ಹವಣಿಸು ತ್ತಿರುವಿರಿ. ನನಗೆ ನಿಮ್ಮ ಕೀರ್ತಿ ಬೇಕಿಲ್ಲ–ಸಂಪತ್ತು ಬೇಕಿಲ್ಲ–ಪ್ರತಿಷ್ಠೆ ಬೇಕಿಲ್ಲ. ನನಗೆ ಬೇಕಾದುದು ನಿಮ್ಮ ವಿಶ್ವಾಸ. ಮಗ ತಂದೆಯಲ್ಲಿ ನಿರೀಕ್ಷಿ ಸುವ ಸಹಜವಾದ ಮಾನವೀಯ ಪ್ರೇಮ. ಆ ಪ್ರೇಮ ನೀಡಲು ನಿಮಗೆ ಸಾಧ್ಯವಿಲ್ಲ. ಕೀರ್ತಿ, ಸಂಪತ್ತುಗಳ ಲಾಲಸೆಯಲ್ಲಿ ನೀವು ಮಾನವೀಯತೆ ಯನ್ನೇ ನೀಗಿಕೊಂಡಿರುವಿರಿ. ನೀವು ಹೇಗೆ ಇಚ್ಛಿಸಿರುವಿರೋ ಹಾಗೇ ಸಾಗಲಿ ನಿಮ್ಮ ಜೀವನ–ಆದರೆ ನನ್ನ ಜೀವನದೊಳಗೆ ಕಾಲಿಡಬೇಡಿ. ನಾನು

ನಿಮ್ಮ ಮನೆ ಬಿಡಲು ಸಿದ್ಧನಾಗಿದ್ದೇನೆ–ನಿಮ್ಮ ಒಂದು ಕುರುಡು ಕವಡೆಯೂ ನನಗೆ ಬೇಕಾಗಿಲ್ಲ.”

ಶ್ರೀನಿವಾಸ ಮಾತು ಮುಗಿಸುವಷ್ಟರಲ್ಲಿ ಗೌರಮ್ಮನವರು ಒಳಗೆ ಧಾವಿಸಿ ಬಂದರು. ಆಕೆಯನ್ನು ಕಂಡು ತಂದೆ ಮಕ್ಕಳಿಬ್ಬರೂ ಅವಾಕ್ಕಾದರು. ಗೌರಮ್ಮನವರು ಮಗನ ಬಳಿ ಬಂದು ದೈನ್ಯದಿಂದ

“ತಂದೆಯ ಮಾತು ಕೇಳು ಶೀನೂ–ಅವರಿಗಿಂತ ನಿನಗೆ ಹಿತೈಷಿಗಳು ಯಾರಿದ್ದಾರೆ. ಏನೋ ಕೋಪದಲ್ಲಿ ಒಂದು ಮಾತು ಅವರಾಡಿದರೆ ನೀನು ಅದನ್ನು ಪ್ರಮಾದವಾಗಿ ಭಾವಿಸಬಹುದೇ? ದೊಡ್ಡವರು ನಿನ್ನ ಹಿತಕ್ಕೇ ಒಂದು ಮಾತು ಹೇಳಬೇಕಾಗುತ್ತದೆ.”

ತಾಯಿಯ ಕರುಣಾಜನಕ ಸ್ಥಿತಿ ಕಂಡು ಶ್ರೀನಿವಾಸನ ಕರುಳು ಕುತ್ತಿಗೆಗೆ ಬಂತು. ಮುಖ ಮುಚ್ಚಿಕೊಂಡು ಒಂದೆಡೆ ಮಗುವಿನಂತೆ ಅಳುತ್ತ ನಿಂತುಬಿಟ್ಟ.

ಗಂಡನಿಗೆ ಸಮಾಧಾನ ಹೇಳಬೇಕೆಂದು ಗೌರಮ್ಮನವರು ಅವರ ಬಳಿ ಸಾರಿದರು. ಸೂರಪ್ಪನವರು ಮಾತಿಗೇ ಅವಕಾಶ ಕೊಡದೆ ಆಕೆಯನ್ನು ನುಂಗಿಬಿಡುವಂತೆ ನೋಡಿ

“ನಿನ್ನ ಮಗ ಹೇಳಿದ್ದು ಕೇಳಿದೆಯೇನೆ? ನಾನು ನಿನ್ನ ಪರಮ ಶತ್ರುವಂತೆ–ನಿನ್ನ ಸೆರೆಮನೆಯಲ್ಲಿಟ್ಟಿರುವೆನಂತೆ, ಅವನು ಮನೆ ಬಿಟ್ಟು ಹೊರಡಲು ಸಿದ್ಧನಾಗಿದ್ದಾನೆ–ನೀನೂ ಬೇಕಾದರೆ ಅವನ ಜತೆ ಹಾಳಾಗಿ ಹೋಗು” ಎಂದರು.

“ಯಾಕೆ ಸುಮ್ಮನೆ ಕೆಟ್ಟ ಮಾತಾಡುತ್ತೀರೀಂದ್ರೆ. ಇರುವವನು ಒಬ್ಬ ಮಗ–ಅವನು ಹಾಳಾಗಿ ಹೋದರೆ ನಿಮಗೇನು ಭಾಗ್ಯ ಬರುತ್ತದೆ.”

“ಮುಚ್ಚು ಬಾಯಿ-ನಡೆಯಾಚೆ–ಇಬ್ಬರೂ ನಡೆಯಿರಿ.”

ಎಂದು ಸೂರಪ್ಪನವರು ಹುಚ್ಚರಂತೆ ಚೀರಿದರು. ಶ್ರೀನಿವಾಸ, ಗೌರಮ್ಮ ಹೊರಗೆ ಬರಲು ‘ಶಾಸ್ತ್ರೀ’ ಎಂದು ಕೂಗಿದರು.

ಶಾಸ್ತ್ರಿ ನಡುಗುತ್ತ ಹೋಗಿ ಯಜಮಾನರ ಮುಂದೆ ನಿಂತ.

“ಗಫೂರನ್ನ ಕಾರು ತೆಗೆದುಕೊಂಡು ಬಾ ಅನ್ನು”

ಎಂದು ಹೇಳಿ ಅಂಗಿ ರುಮಾಲು ಧರಿಸಿದರು. ಹೋಗುತ್ತಾ ಶಾಸ್ತ್ರಿಗೆ ‘ನಾನು ಬರುವಷ್ಟರಲ್ಲಿ ಆ ಭಡವನ್ನ ಮನೆಯಿಂದ ಹೊರಗೆ ಹಾಕು’ ಎಂದು ಹೇಳಿ ಹೋದರು.

ಶ್ರೀನಿವಾಸನ ಕಿವಿಯ ಮೇಲೆ ತಂದೆಯ ಸಂದೇಶ ಬಿತ್ತು. ನಿಂತಲ್ಲಿಯೇ ತಾಯಿಯನ್ನಪ್ಪಿದ. ತನ್ನ ಕೋಣೆಗೆ ಹೋಗಿ ಕೆಲವು ಕಾಗದಗಳನ್ನು ಜೇಬಿಗೆ ತುರುಕಿಕೊಂಡು ತಾಯಿಯ ಬಳಿಗೆ ಬಂದು ಆಕೆಯ ಎರಡು ಪಾದಗಳನ್ನು ಹಿಡಿದು ಸಾಷ್ಟಾಂಗ ನಮಸ್ಕಾರಮಾಡಿದ.

ಗೌರಮ್ಮನವರು ಮಗನ ಕುತ್ತಿಗೆಯಪ್ಪಿ ಅಳುವುದಕ್ಕಾರಂಭಿಸಿದರು. ತಾಯಿಯ ಕಣ್ಣೀರೊರಸಿ ಅಲ್ಲಿ ಒಂದರೆಕ್ಷಣವೂ ನಿಲ್ಲದೆ ಹುಚ್ಚನಂತೆ ಓಡಿಬಿಟ್ಟ. ಅವನನ್ನು ಹಿಂದಕ್ಕೆ ಕರೆತರಲು ಶಾಸ್ತ್ರಿ ಓಡಿದ. ಶಾಸ್ತ್ರಿಯ ಹಿಂದೆ ಗೌರಮ್ಮನವರು ಓಡಿದರು. ಶಾಸ್ತ್ರಿಯ ಕೈಗೆ ಶ್ರೀನಿವಾಸ ಸಿಕ್ಕಲಿಲ್ಲ. ಶಾಸ್ತ್ರಿ ಪೆಚ್ಚು ಮುಖ ಹಾಕಿಕೊಂಡು ಬಂದು

"ಅವರು ಸಿಕ್ಕಲಿಲ್ಲ" ಎಂದ. ಗೌರಮ್ಮನವರು ನಿಂತಲ್ಲಿಯೇ ಸ್ಮೃತಿ ತಪ್ಪಿ ಕೆಳಗೆ ಬಿದ್ದುಬಿಟ್ಟರು.

## ೪೨

'ಎಲ್ಲಿಗೆ' ಎಂದು ಗಫೂರ್ ಸೂರಪ್ಪನವರನ್ನು ಕೇಳಬೇಕಾದ ಅಗತ್ಯವೇ ಇರಲಿಲ್ಲ. ಅವನು ನೇರವಾಗಿ ಕಾರನ್ನು ತಂದು 'ವಿಲ್ಸನ್‌ಗಾರ್ಡನ್'ನಲ್ಲಿದ್ದ ಸುಭದ್ರೆಯ ಮನೆ ಮುಂದೆ ನಿಲ್ಲಿಸಿದ.

ಸೂರಪ್ಪನವರು ಕಾರಿನಿಂದಿಳಿದು 'ನೀನು ಹೋಗು' ಎಂದು ಗಫೂರನನ್ನು ಕಾರಿನೊಂದಿಗೆ ಕಳಿಸಿಬಿಟ್ಟರು. ಒಳಗೆ ಬಂದು ನೇರವಾಗಿ ಸುಭದ್ರೆಯ ರೂಮಿನಲ್ಲಿದ್ದ ಸೋಫಾದ ಮೇಲೆ ಕುಸಿದುಬಿದ್ದರು.

ಅದೇ ಊಟ ಮುಗಿಸಿಕೊಂಡು ಸುಭದ್ರೆ ಕೈಯೊರಸಿಕೊಳ್ಳುತ್ತಾ ರೂಮಿಗೆ ಬಂದಳು. ಸೂರಪ್ಪನವರಿದ್ದ ಸ್ಥಿತಿ ನೋಡಿ ಅವಳಿಗೆ ಗಾಬರಿಯಾಯಿತು. ಸೂರಪ್ಪನವರ ಸಮೀಪದಲ್ಲಿ ಕುಳಿತು ಮೆಲ್ಲನೆ ಅವರ ರುಮಾಲು ಕೋಟು ಕಳಚಿ,

"ಏಕೆ. ಏನಾಯಿತು ?" ಎಂದಳು.

ಸೂರಪ್ಪನವರು ಮಾತನಾಡಲಿಲ್ಲ.

"ಊಟವಾಯಿತೇ ?" ಎಂದಳು.

ಸೂರಪ್ಪನವರು

"ಮೊದಲು ನನಗೆ ಸ್ವಲ್ಪ ಕಾಫಿ ಬೇಕು" ಎಂದರು.

ಸುಭದ್ರೆ ಒಳಗೆ ಹೋಗಿ ಐದು ನಿಮಿಷದೊಳಗಾಗಿ ಕಾಫಿ ಮಾಡಿ ತಂದು ಸೂರಪ್ಪನವರ ಕೈಗಿತ್ತಳು. ಕಾಫಿ ಕುಡಿದ ಮೇಲೆ ಸೂರಪ್ಪನವರಿಗೆ ಸ್ವಲ್ಪ ಚೇತನ ಬಂದಂತಾಯಿತು. ಸುಭದ್ರೆ ಹತ್ತಿರ ಕುಳಿತು ಸೂರಪ್ಪನವರನ್ನು ನೇವರಿಸುತ್ತಾ ಮೃದುವಾಗಿ

"ಮನಸ್ಸಿಗೇಕಿಷ್ಟು ಬೇಸರ ?" ಎಂದು ಮತ್ತೆ ಕೇಳಿದಳು.

"ಸಂದರ್ಭ ಹಾಗೆ ಒದಗಿ ಬಂತು. ನಿಮ್ಮ ತಾಯಿಯೆಲ್ಲಿ ?"

"ಮನೆಗೆ ಹೋಗಿ ಬರುತ್ತೇನೆಂದು ಹೋದರು."

"ಈಗ ಅಡಿಗೆ ಮಾಡಿಸಬೇಡ ನನಗೆ ಹಸಿವಿಲ್ಲ."

"ಮಾಡಿದ ಅಡಿಗೆ ಬೇಕಾದಷ್ಟಿದೆ. ಗುಂಡಮ್ಮ ಅನ್ನ ಮಾಡುತಿದ್ದಾರೆ."

"ರಂಗಣ್ಣ ಏನು ಮಾಡುತ್ತಿದ್ದಾನೆ."

"ಹಣ್ಣು ಹೆಚ್ಚುತ್ತಿದ್ದಾರೆ."

"ನಿಮ್ಮ ವಿಷಯ ಹೇಳಲೇ ಇಲ್ಲವಲ್ಲಾ."

"ಏನೆಂದು ಹೇಳಲಿ--ಶ್ರೀನಿವಾಸನನ್ನು ಮನೆಯ ಹೊರಗಟ್ಟ ಬೇಕಾಯಿತು."

"ಮನೆಯಿಂದ ಹೊರಗೆ ! ಏನಾಯಿತು ಅಂಥ ಪ್ರಮಾದ."

"ಸೂರಪ್ಪನವರೂ ಅರವಿಂದ ಮಿಲ್ಲಿನ ಕತೆಯಿಂದಾರಂಭಿಸಿ ತಮಗೂ ಶ್ರೀನಿವಾಸನಿಗೂ ಆದ ವಾದವಿವಾದವನ್ನು ವರ್ಣಿಸಿದರು.

"ಅವನಂತೂ ಹುಡುಗ-ತಿಳುವಳಿಕೆಯಿಲ್ಲ. ನೀವೇಕೆ ದುಡುಕಿದಿರಿ ?"

"ನೀನೂ ನನ್ನೇ ಆಕ್ಷೇಪಣೆ ಮಾಡುವೆಯಾ ?"

"ಆಕ್ಷೇಪಣೆ ಮಾಡುತ್ತಿಲ್ಲ. ಆದರೆ ಎಂಥ ಲೋಕಾಪವಾದ."

"ನನ್ನ ತತ್ವ ವಿರೋಧಿಸುವ ಮಗನನ್ನು ಮನೆಯಲ್ಲಿಟ್ಟುಕೊಂಡರೆ ಎಂಥ ಲೋಕಾಪವಾದ."

"ನಿಮ್ಮಿಬ್ಬರಿಗೂ ಮತ್ತೆ ವಿಶ್ವಾಸ ಬೆಳೆಯುವುದು ಸಾಧ್ಯವಿಲ್ಲವೇ ?"

"ಈ ಜನ್ಮದಲ್ಲಿ ಸಾಧ್ಯವಿಲ್ಲ,'

"ರಕ್ತ ಬಾಂಧವ್ಯ. ನೀವು ಬೇಡವೆಂದರೆ ಹೋಗುವುದೇ ?'

"ಹೋಗದೇ ಏನು ಮಾಡುತ್ತದೆ. ಬಾಂಧವ್ಯ ಇಟ್ಟು ಕೊಳ್ಳುವುದೂ ಬಿಟ್ಟು ಬಿಡುವುದೂ ನಮ್ಮ ಕೈಯಲ್ಲಿಯೇ ಇದೆ."

"ಪ್ರಕೃತಿಯೂ ಸ್ವಲ್ಪ ಕೆಲಸ ಮಾಡುತ್ತದೆ."

"ನೀನು ಹೇಳುತ್ತಿರುವುದೇನು ?"

"ಏನೂ ಇಲ್ಲ–ನೀವು ದುಡಕಬಾರದಾಗಿತ್ತು "

"ಅವನ ಪರ ಏಕಿಷ್ಟು ಮಾತನಾಡುತ್ತಿರುವೆ ?"

"ನಾನು ಯಾರ ಪರವಾಗಿಯೂ ವಕಾಲತ್ತು ವಹಿಸಿಲ್ಲ–ಹೋಗಲಿ ಬಿಡಿ–ಆ ಮಾತು ಮರೆತುಬಿಡಿ–ಇವತ್ತು ನಿಮ್ಮ ಮನಸ್ಸು ಬಹಳ ವ್ಯಗ್ರವಾಗಿರಬೇಕು."

"ಅದಕ್ಕೆ ನೀನು ಸಮಾಧಾನ ನೀಡುವೆಯೆಂದು ಇಲ್ಲಿಗೆ ಬಂದೆ."

"ನಾನು ಸದಾ ಸಿದ್ಧಳಾಗಿರುವೆನಲ್ಲಾ."

"ನೀನು ನನ್ನ ಆಕ್ಷೇಪಿಸುತ್ತಿರುವೆ."

"ಮತ್ತೆ ಅದೇ ಮಾತನಾಡುವಿರಲ್ಲಾ."

"ಆ ಮಾತು ಮುಗಿದುಹೋಗಲಿ."

"ಅದನ್ನು ಮರೆತುಬಿಡಿ. ಯಾರ ಕರ್ಮಕ್ಕೆ ಯಾರು ಹೊಣೆ"

ರಂಗಣ್ಣ ಬಂದು ಮೆಲ್ಲನೆ ಬಾಗಿಲು ತಟ್ಟಿದ ಸುಭದ್ರೆ ಒಳಗಿಂದಲೇ 'ಏನು ?' ಎಂದಳು ರಂಗಣ್ಣ ಹೊರಗಡೆಯಿಂದ 'ತಟ್ಟೆ ಹಾಕಿದೆ' ಎಂದ

"ಸುಭದ್ರೆ ಸೂರಪ್ಪನವರನ್ನು ಎಬ್ಬಿಸಿ ಅವರ ಹೆಗಲ ಮೇಲೆ ಒಂದು ಟವಲು ಹಾಕಿದಳು. ಸೂರಪ್ಪನವರ ಕೈ ಅವಳ ಕೃಶವಾಗಿದ್ದ - ಈಗ ತುಂಬಿದ್ದ ಸೊಂಟ ಬಳಸಿತು.

ಸೂರಪ್ಪನವರು ನಸುನಗುತ್ತಾ

"ಮನೆಯಲ್ಲಿ ವೀಳೆಯದೆಲೆ ಇದೆಯೋ ?"

"ಇದೆ–ನಿಮಗೆ ಪ್ರಿಯವಾದ ಮೈಸೂರು ಚಿಗುರು."

"ನನಗೆ ಪ್ರಿಯವಾದ ಬೆಂಗಳೂರು ಚಿಗುರು ನನ್ನ ಮುಂದೆಯೇ ಇದೆ"

ಎಂದರು. ಸುಭದ್ರೆ ಹುಸಿಮುನಿಸಿನಿಂದ ನಸುನಾಚಿ ನಕ್ಕಳು. ಅವಳ ಮನಸ್ಸು ಯಾವುದೋ ಅವ್ಯಕ್ತಾನಂದದಲ್ಲಿ ತುಂಬಿಹೋಗಿತ್ತು. ಏಕೆಂಬುದನ್ನು ಕಾಣಳು. ಆದರೆ ಅಂದು ಸೂರಪ್ಪನವರನ್ನು ಪೂರ್ಣ ಸುಖಿಗಳನ್ನಾಗಿ ಮಾಡಬೇಕೆಂಬ ಒಂದು ನಿರ್ಧಾರ ಅವಳಲ್ಲಿ ಮೂಡಿತು.

ಮನೆಬಿಟ್ಟು ಓಡಿದ ಶ್ರೀನಿವಾಸ ನೇರವಾಗಿ ಕಾರ್ಮಿಕ ಸಂಘದ ಕಛೇರಿಯ ಬಳಿಬಂದ. ಕತ್ತೆತ್ತಿ ನೋಡಿದ, ಮೇಲೆ ದೀಪ ಉರಿಯುತ್ತಿತ್ತು. ಬಹು ಪ್ರಯಾಸದಿಂದ ಮೆಟ್ಟಲು ಹತ್ತಿ ಮೇಲಕ್ಕೆ ಹೋಗಿ ಬಾಗಿಲುತಟ್ಟಿದ. ಮುನಿಸ್ವಾಮಿ ಬಂದು ಬಾಗಿಲು ತೆರೆದು ಶ್ರೀನಿವಾಸನನ್ನು ಒಳಗೆ ಬರಮಾಡಿ ಕೊಂಡ.

ಶ್ರೀನಿವಾಸ ಒಳಗೆ ಬಂದವನೆ ಕುಸಿದು ಬಿದ್ದುಬಿಟ್ಟ. ಮುನಿಸ್ವಾಮಿ ಅವನಿಗೆ ಶೈತ್ಯೋಪಚಾರಮಾಡಿ ಎಚ್ಚರಿಸಿದ. ಶ್ರೀನಿವಾಸನ ಸ್ಥಿತಿ ಗಾಬರಿ ಯನ್ನುಂಟುಮಾಡುತ್ತಿತ್ತು. ಎಷ್ಟು ಬಗೆಯಲ್ಲಿ ಮುನಿಸ್ವಾಮಿ ಕೇಳಿದರೂ ಶ್ರೀನಿವಾಸ ಹೇಳಬೊಲ್ಲ. ಅವನ ಕಣ್ಣಲ್ಲಿ ಒಂದೇ ಸಮನಾಗಿ ನೀರು. ಮುನಿಸ್ವಾಮಿ ಕಛೇರಿಯ ಆಳಿಗೆ ಹೇಳಿ ಬಿಸಿಬಿಸಿ ಕಾಫಿ, ಪೂರಿ ಪಲ್ಯ, ವಡೆ ತರಿಸಿದ.

ಮುನಿಸ್ವಾಮಿಯ ಮನಸ್ಸಿನಲ್ಲಿ ಕಳವಳ ಮೂಡಿತು. ಶ್ರೀನಿವಾಸನ ಧಾವಂತ ಕಂಡು ಯಾರೋ ಸಿ.ಐ.ಡಿ.ಗಳು ಅವನ ಬೆನ್ನಟ್ಟಿರಬೇಕು ಎಂದು ಭಾವಿಸಿದ. ಸಿ ಐ.ಡಿಗಳಲ್ಲದಿದ್ದರೆ ಪ್ರತಿ ಪಕ್ಷದವರು ಯಾರೋ ಶ್ರೀನಿವಾಸ ನನ್ನು ಹೊಡೆಯುವುದಕ್ಕೆ ಪ್ರಯತ್ನಿಸಿರಬೇಕು ಎಂದು ಊಹಿಸಿದ.

ಶ್ರೀನಿವಾಸ ಶಿಲಾಮೂರ್ತಿಯಂತೆ ಕುಳಿತುಬಿಟ್ಟ. ಮುನಿಸ್ವಾಮಿ ಬಲವಂತಮಾಡಿ ಅವನಿಗಷ್ಟು ಬಿಸಿ ಕಾಫಿ ಕುಡಿಸಿದ.

"ಶ್ರೀನಿವಾಸ್ ಏನಾಯಿತು ? ಏಕಿಷ್ಟು ಚಿಂತೆ ಮಾಡುತ್ತಿರುವಿರಿ."

ಮುನಿಸ್ವಾಮಿ ಕೇಳುತ್ತಿದ್ದ ಪ್ರಶ್ನೆಗಳಿಗೆ ಶ್ರೀನಿವಾಸ ಕೊಡುತ್ತಿದ್ದುದು ಕಣ್ಣೀರಿನ ಉತ್ತರ.

"ಸುಮ್ಮನೆ ಕಣ್ಣೀರು ಹಾಕಿ ಹಾಕಿ ನೀವು ಕಣ್ಣು ಹಾಳುಮಾಡಿ ಕೊಳ್ಳುವಿರಿ. ಏನಾಯಿತು ದಯೆಯಿಟ್ಟು ಹೇಳಿ. 'ನೀವೇ ಹೀಗೆ ಅಧೀರ ರಾದರೆ ನಮ್ಮ ಗತಿಯೇನು – ನಿಮ್ಮನ್ನು ನಂಬಿರುವ ಕೂಲಿಕಾರರ **ಗತಿಯೇನು ?"**

"ನಾನು ಅವರ ಕೈಬಿಡುವೆನೆಂದು ಭಾವಿಸಿರುವಿರಾ ?"

"ಛೆ! ಕನಸುಮನಸಿನಲ್ಲಿಯೂ ಭಾವಿಸಿಲ್ಲ, ನೀವೇಕೆ ಇಷ್ಟು ಧಾವತಿ ಗೊಂಡಿರುವಿರಿ ತಿಳಿಸಿ."

"ಮುನಿಸ್ವಾಮಿ—ಏನೆಂದು ಹೇಳಲಿ. ನನ್ನ ಜೀವನದಲ್ಲಿ ಅತ್ಯಂತ ಅಮೂಲ್ಯವಾದ ಒಂದು ವಸ್ತುವನ್ನು ನಾನಿಂದು ಕಳೆದುಕೊಂಡೆ."

"ಅಮೂಲ್ಯವಾದ ವಸ್ತು !"

"ಹೌದು, ನನ್ನ ತಂದೆಯ ಪ್ರೇಮ."

"ಅವರಿಗೂ ನಿಮಗೂ ವ್ಯಾಜ್ಯವಾಯಿತೇ ?"

"ಆಯಿತು–ನಾನು ಮನೆಬಿಟ್ಟು ಹೊರಗೆ ಬಂದೆ."

"ಕಾರಣ ?"

"ಅರವಿಂದ ಮಿಲ್ಲಿನ ವ್ಯವಹಾರ. ನಾನು ಇನ್ನು ಮೇಲೆ ಕೂಲಿಕಾರರ ಚಳುವಳಿಯಲ್ಲಿ ಭಾಗವಹಿಸಕೂಡದೆಂದು ತಂದೆ ಕಟ್ಟಾಜ್ಞೆ ವಿಧಿಸಿದರು. ನನಗೂ ಅವರಿಗೂ ಸ್ವಲ್ಪ ಬಿಸಿ ಬಿಸಿ ಮಾತಾಯಿತು ಅವರೇ ನನ್ನ ಮನೆ ಬಿಟ್ಟುಹೋಗು ಎಂದರು."

"ಮುಂದೇನು ಮಾಡುವುದೆಂದು ಯೋಚಿಸುತ್ತಿರುವಿರಾ ?"

ಶ್ರೀನಿವಾಸ ಉತ್ತರ ಕೊಡಲಿಲ್ಲ.

"ನಿಮ್ಮ ವಾಸಕ್ಕೆ ಸಂಘದ ಕಟ್ಟಡದಲ್ಲಿ ಒಂದು ಕೋಣೆಯಿದೆ. ಖರ್ಚಿಗೆ ಸಂಘದಿಂದ ನಾವು ತಿಂಗಳಿಗೆ ನೂರು ರೂಪಾಯಿ ಕೊಡಲು ಸಿದ್ಧರಾಗಿದ್ದೇವೆ."

"ನನಗೆ ಹೊಟ್ಟೆಯ ಪಾಡಿನ ಚಿಂತೆಯಿಲ್ಲ. ಅದಕ್ಕಾಗಿ ನಾನು ಕೂಲಿ ಕಾರರ ಬೆವರಿನ ಹಣದ ಒಂದು ಕಾಸೂ ತೆಗೆದುಕೊಳ್ಳಲು ಸಿದ್ಧನಾಗಿಲ್ಲ. ನನ್ನ ಜೀವನ ಹೇಗೋ ಸಾಗುತ್ತದೆ. ತಂದೆಯವರ ಅವಿಶ್ವಾಸಕ್ಕೆ ಪಾತ್ರ ನಾದೆನಲ್ಲಾ ಎಂಬುದೊಂದೇ ಕೊರಗು."

"ಅವರೂ ಕೋಪದಲ್ಲಿದ್ದಾರೆಂದು ಕಾಣುತ್ತದೆ. ಕೆಲವು ದಿನ ಸುಮ್ಮ ನಿದ್ದುಬಿಡಿ. ಮುಂದೆ ತಾನೇ ತಾನಾಗಿ ಸರಿಹೋಗುತ್ತದೆ. ಅವರಿಗೇ ವಿವೇಕ ಬರುತ್ತದೆ. ನಿಮ್ಮನ್ನು ಹುಡುಕಿಕೊಂಡು ಅವರೇ ಬರುತ್ತಾರೆ."

"ನನ್ನ ತಂದೆಯ ಸ್ವಭಾವ ನೀವು ಕಾಣಿರಿ ಮುನಿಸ್ವಾಮಿ. ತಮ್ಮ ಹಟಕ್ಕೆ ಅವರು ಬೇಕಾದುದನ್ನು ಬಲಿದಾನ ಮಾಡಿಬಿಡುತ್ತಾರೆ. ಈ ನಮ್ಮ

ಜಗಳದಲ್ಲಿ ನಿರಪರಾಧಿ ನನ್ನ ತಾಯಿಯ ಗತಿಯೇನು ಎಂದು ಯೋಚಿಸುತ್ತಿದ್ದೇನೆ."

"ನೋಡಿ ಶ್ರೀನಿವಾಸ್, ತಂದೆ ತಾಯಿಯ ಬಗ್ಗೆ ನಿಮಗಿರುವ ಪ್ರೇಮ ಗೌರವ ಕೆಡಿಸಲು ಯಾರಿಂದಲಾದರೂ ಸಾಧ್ಯವೇ ? ಅದೊಂದು ಅಮರವಾದ ದಿವ್ಯಭಾವನೆ. ಈಗ ನಿಮ್ಮ ಮುಂದೆ ಬಹಳ ದೊಡ್ಡ ಪ್ರಶ್ನೆ ಕುಳಿತಿದೆ. ನಿಮ್ಮ ತಂದೆಯವರಿಗೆ ಮೆಚ್ಚುಗೆಯಾಗುವಂತೆ ನೀವಿರಬೇಕಾದರೆ ಕೂಲಿಕಾರರ ಕೈಬಿಡಬೇಕು. ಕೂಲಿಕಾರರ ಕೈಹಿಡಿಯುವ ಹಾಗಿದ್ದರೆ ತಂದೆಯನ್ನು ದೂರ ಮಾಡಬೇಕು–ಇವುಗಳಲ್ಲಿ ಯಾವದು ಶ್ರೇಯಸ್ಕರ ಎಂಬುದನ್ನು ನೀವೇ ಆಲೋಚಿಸಿ ನಿರ್ಧರಿಸಿ."

"ಆಲೋಚಿಸಿದ್ದೂ ಆಯಿತು—ನಿರ್ಧರಿಸಿದ್ದೂ ಆಯಿತು. ನನ್ನ ಧ್ಯೇಯಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಲು ದೀಕ್ಷೆ ಹೊತ್ತೆ. ಆ ಸಂಕಲ್ಪದಿಂದ ವಿಮುಖನಾಗುವುದಿಲ್ಲ. ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳುವುದಕ್ಕೆ ಕೆಲವು ದಿನ ಕಷ್ಟವಾಗಬಹುದು. ಆಗಲಿ ಚಿಂತೆಯಿಲ್ಲ. ಸಹಿಸುತ್ತೇನೆ. ಆದರೆ ನೀವುಗಳು ಮಾತ್ರ ಎಂದೆಂದಿಗೂ ನನ್ನ ಮೇಲೆ ನಂಬಿಕೆ ಕಳೆದು ಕೊಳ್ಳಬೇಡಿ."

"ನಾವು ಸೇನಾನಿಗಳ ಹಾಗೆ ಒಂದು ಮಹಾ ಯುದ್ಧಕ್ಕೆ ಹೊರಟಿದ್ದೇವೆ. ನೀವು ನಮ್ಮ ಸೇನಾಪತಿ. ಯುದ್ಧದಲ್ಲಿ ಜಯವಾಗಲಿ ಅಪಜಯವಾಗಲಿ ನಾವು ಸೇನಾಪತಿಯನ್ನು ದೂರಮಾಡುವುದಿಲ್ಲ."

"ಅದನ್ನು ನಾನು ಚೆನ್ನಾಗಿ ಬಲ್ಲೆ ಮುನಿಸ್ವಾಮಿ. ಅದೇ ನನ್ನ ಬಾಳಿನ ಊರೆಗೋಲು."

ಮುನಿಸ್ವಾಮಿ ಆ ರಾತ್ರಿ ಮನೆಗೂ ಹೋಗಲಿಲ್ಲ. ತಾನು ತರಿಸಿದ್ದ ಪೂರಿಪಲ್ಯ, ವಡೆ ಶ್ರೀನಿವಾಸನಿಗೂ ತಿನ್ನಿಸಿ ತಾನೂ ತಿಂದು, ಕಛೇರಿಯಲ್ಲಿದ್ದ ಒಂದು ಜಮಖಾನೆ ಹಾಸಿ ಪವಡಿಸಿದ. ಶ್ರೀನಿವಾಸನೂ ಮಲಗಿದ. ಇಬ್ಬರಿಗೂ ನಿದ್ರೆ ಹತ್ತಲಿಲ್ಲ. ಮುಷ್ಕರ ಸಾಗಿಸುವುದರ ಬಗ್ಗೆ ಮಾತುಕತೆ ರಾತ್ರಿಯೆಲ್ಲಾ ಸಾಗಿತು. ಶ್ರೀನಿವಾಸನ ಬುದ್ಧಿ ವಿಶೇಷ ತಿಳಿಯಾಗಿತ್ತು. ಪ್ರತಿಯೊಂದು ಅಂಶವನ್ನೂ ಅವನು ಯೋಚಿಸಿ ವಿವರಿಸಿದ. ಪ್ರತಿಪಕ್ಷದವರು ಮಾಡಬಹುದಾದ ಕೃತ್ರಿಮ ಸಂಧಾನ, ತಂತ್ರಗಳನ್ನೆಲ್ಲಾ ಪೂರ್ವಭಾವಿಯಾಗಿ ವಿಚಾರಮಾಡಿ ಮುನಿಸ್ವಾಮಿಗೆ ತಿಳಿಸಿದ.

ಸೂರ್ಯೋದಯವಾದದ್ದು ಮಾತಿನ ಭರದಲ್ಲಿ ಇಬ್ಬರ ಗಮನಕ್ಕೂ ಬರಲಿಲ್ಲ. ಕಛೇರಿಯ ಆಳು ಬಂದು ಎಚ್ಚರಿಸಿ ಅವರಿಗೆ ಮುಖ ತೊಳೆಯಲು ನೀರು ತಂದುಕೊಟ್ಟ.

೪೪

'ತಂದೆ ಕೈಯಲ್ಲಿ ಮಗ ವ್ಯಾಜ್ಯವಾಡಿಕೊಂಡು ಮನೆಬಿಟ್ಟು ಹೋದ' ಸುದ್ದಿ ಹರಡಲು ಬಹಳ ದಿನ ಹಿಡಿಯಲಿಲ್ಲ. ಮಾರನೆಯ ದಿನವೇ ಸೂರಪ್ಪ ನವರು ವೆಂಕಪ್ಪಯ್ಯನವರಿಗೆ ಈ ವಿಷಯವನ್ನು ತಿಳಿಸಿದರು. ವೆಂಕಪ್ಪಯ್ಯ ನವರು ಮನೆಗೆ ಬಂದು ಆ ಸುದ್ದಿ ಮುಟ್ಟಿಸಿದರು. 'ಚಿನ್ನದಂತ ಹುಡುಗ– ಅವನನ್ನೂ ಮನೆ ಬಿಟ್ಟು ಹೊರಗೆ ಹಾಕಿದನೇ ಪುಣ್ಯಾತ್ಮ' ಎಂದು ಕಾವೇ ರಮ್ಮ ಉದ್ಗಾರ ತೆಗೆದಳು. ವೆಂಕಪ್ಪಯ್ಯ ಸೂರಪ್ಪನವರನ್ನು ವಹಿಸಿ ಕೊಂಡು

"ಹೂ ! ಎಲ್ಲರೂ ಹೊರಗೆ ನೋಡುವುದಕ್ಕೆ ಚಿನ್ನವೇ. ಆದರೆ ಒಳಗೆ ಎಂತಹ ವಿಷವಿದೆಯೆಂದು ಯಾರು ಬಲ್ಲರು." ಎಂದರು.

"ನಿಜ ವೆಂಕೂ-ನೀನು ಹೇಳುವುದು ನಿಜ"

ಎಂದು ಕಾವೇರಮ್ಮ ವ್ಯಂಗ್ಯವಾಗಿ ನುಡಿದಳು. ಇನ್ನು ಅವಳೊಂದಿಗೆ ವಾದ ಬೆಳಸಿ ಪ್ರಯೋಜನವಿಲ್ಲೆಂದು ವೆಂಕಪ್ಪಯ್ಯ ಸುಮ್ಮನಾದರು.

ಕಾವೇರಮ್ಮನ ಜೀವ ಮನೆಯಲ್ಲಿ ನಿಲ್ಲಲಿಲ್ಲ. ಅಡಿಗೆ ಮುಗಿದು ನರಸಮ್ಮನ ಊಟವಾಗಿ ಕೈಮೇಲೆ ನೀರು ಬೀಳುವುದೇ ತಡ ಹೊರಟು ಬಿಟ್ಟಳು. ಊಟ ಕೂಡ ಮಾಡದೆ ಹೊರಡುತ್ತಿರುವ ಅತ್ತಿಗೆಯನ್ನು ಕಂಡು

"ಇದೇನತ್ತಿಗೆಮ್ಮ — ಊಟ ಕೂಡ ಮಾಡದೆ ಹೊರಟು ಬಿಟ್ಟಿರಿ" ಎಂದರು ನರಸಮ್ಮನವರು.

"ನನಗೆ ಯಾರೋ ಊಟಕ್ಕೆ ಹೇಳಿದಾರೆ–ಅವರ ಮನೆಗೆ ಹೋಗಿ ಬರುತ್ತೀನೆ" ಎಂದು ಕಾವೇರಮ್ಮ ಉತ್ತರಕೊಡುತ್ತಲೇ ನಡೆದು ಬಿಟ್ಟಳು. ಹೊರಟವಳು ನೇರವಾಗಿ ಸೂರಪ್ಪನವರ ಮನೆಗೆ ಬಂದಳು. ಗೌರಮ್ಮ ತಲೆಯ ಮೇಲೆ ಕೈಹೊತ್ತು ಕಣ್ಣೀರ್ಗರೆಯುತ್ತಾ ಕುಳಿತಿದ್ದರು.

"ಊಟ ಆಯಿತೇನ್ರೀ ಗೌರಮ್ಮನವರೇ" ಎಂದು ಕಾವೇರಮ್ಮ ಕೇಳಿದಳು.

"ನಮ್ಮ ಮನೆ ಹಗರಣ ಕೇಳಿದಿರಾ ಕಾವೇರಮ್ಮನವರೇ. ದೊರೆಯಂಥ ಮಗನ್ನ ಮನೆಯಿಂದ ಕಳುಹಿಸಿ ಯಾವ ಬಾಯಲ್ಲಿ ಅನ್ನ ತಿನ್ನಲಿ ಹೇಳಿ."

"ನನಗೆಲ್ಲಾ ತಿಳಿದಿದೆ. ಏಳೀಂದ್ರೆ ಹೊಟ್ಟೆ ಒಣಗಿಸಬೇಡಿ. ದೇವರು ಎಲ್ಲಾ ನೋಡಿಕೊಳ್ಳುತ್ತಾನೆ"

ಎಂದು ಒಂದು ಬಿಂದಿಗೆ ತೆಗೆದುಕೊಂಡು ಭಾವಿಯ ಕಟ್ಟೆ ಬಳಿಹೋಗಿ ಎರಡು ಮೂರು ಬಿಂದಿಗೆ ನೀರು ಸೇದಿ ಮೈಮೇಲೆ ಹುಯಿದುಕೊಂಡು, ಒದ್ದೆ ಸೀರೆಯನ್ನೇ ಹಿಂಡಿ ಉಟ್ಟುಕೊಂಡು ಅಡಿಗೆಯ ಮನೆಗೆ ಬಂದಳು.

"ಇದೇನ್ರೀ ಕಾವೇರಮ್ಮ" ಎಂದರು ಗೌರಮ್ಮ.

"ನೀವು ಸುಮ್ಮನಿರಿ ಗೌರಕ್ಕ, ನಾನು ಹೇಳಿದ ಹಾಗೆ ಕೇಳಿ"

ಎಂದು ಗೌರಮ್ಮನವರಿಗೆ ಎಲೆಹಾಕಿ ಕೂಡಿಸಿ ಬಲವಂತಮಾಡಿ ಊಟ ಬಡಿಸಿದಳು. ಗೌರಮ್ಮನವರ ಗಂಟಲಲ್ಲಿ ಅನ್ನ ಇಳಿಯದು. ಕಾವೇರಮ್ಮ ಬಿಡಳು. ಅಂತೂ ಇಂತೂ ನಾಲ್ಕು ತುತ್ತು ತಿಂದ ಶಾಸ್ತ್ರ ಮಾಡಿ ಮುಗಿಸಿ

"ನೀವು ಎಲೆ ಹಾಕಿಕೊಳ್ಳೀಂದ್ರೆ" ಎಂದರು.

ಕಾವೇರಮ್ಮ ಎಲೆಹಾಕಿಕೊಂಡು ತಾನೇ ಬಡಿಸಿಕೊಂಡು ಊಟ ಮಾಡಿದಳು.

ಕಾವೇರಮ್ಮನ ಅಂತಃಕರಣ ಕಂಡು ಗೌರಮ್ಮನವರಿಗೆ ಕೃತಜ್ಞತೆ ಉಕ್ಕಿಬಂದಿತು. ಕಾವೇರಮ್ಮ ಊಟ ಮುಗಿಸಿ, ಗೋಮಯ ಹಚ್ಚಿಬಂದು ಕುಳಿತಮೇಲೆ ಗೌರಮ್ಮನವರು

"ನಿಮ್ಮದು ಬಹಳ ಅಪರೂಪದ ಜೀವ ಕಾವೇರಮ್ಮ. ನೀವು ಬಂದು ನನ್ನ ಜತೆ ಇದ್ದುಬಿಟ್ಟರೆ ನಾನು ಎಲ್ಲ ದುಃಖ ನುಂಗಿಕೊಳ್ಳಬಲ್ಲೆ ನೋಡಿ."

"ಈ ಪಾಪಿ ಮುಕ್ಕನ್ನ ಏನೂಂತ ಹೊಗಳುತ್ತೀ ನನ್ನ ತಾಯಿ. ಈ ಮನೆಗೆ ಮಹಾಲಕ್ಷ್ಮಿ ಹಾಗೆ ನೀವು ಬಂದಿರಿ. ಇವತ್ತು ದೇವರು ನಿಮಗೆ ಇಂಥ ಕಷ್ಟಕೊಟ್ಟಿದ್ದಾನೆ. ಇವತ್ತು ನಿಮ್ಮ ಜತೆ ಊಟಮಾಡಬೇಕೆಂದು ಕರುಳು ಬಾಧಿಸುತ್ತಿತ್ತು. ನಾನೇ ಬಂದೆ."

"ನೀವು ತಿನ್ನೋ ಊಟಕ್ಕೆ ಈ ಮನೆಯಲ್ಲಿ ಒಂದು ತುತ್ತು ಅನ್ನ ವಿಲ್ಲವೇ ? ಇವತ್ತು ನೀವು ಮಾಡಿರುವ ಉಪಕಾರ ಜನ್ಮಜನ್ಮಕ್ಕೂ ತೀರಿಸಲಾರೆ."

"ನನ್ನ ಮಾತಿರಲಿ. ತಂದೆಗೂ ಮಗನಿಗೂ ಏನಾಯಿತು ಗೌರಮ್ಮ ನವರೇ ?"

"ನಿನ್ನೆ ರಾತ್ರಿ ಸ್ವಲ್ಪ ಬಿಸಿಬಿಸಿ ಮಾತಾಯಿತು. ಕೂಲಿಕಾರರ ಸಹ ವಾಸ ಬಿಟ್ಟುಬಿಡು ಎಂದು ಅವರು ಗದರಿಸಿ ಹೇಳಿದರು. ಶ್ರೀನಿವಾಸ ಆಗು ವುದಿಲ್ಲವೆಂದ. ಅವರು ತುಂಬಾ ಕೋಪಮಾಡಿಕೊಂಡರು. ಶ್ರೀನಿವಾಸ ಸಮಾ ಧಾನವಾಗಿಯೇ ಇದ್ದ–ನನ್ನ ವಿಷಯ ಏನೋ ತೆಗೆದುಕೊಂಡು ತಂದೆಗೆ ಒಂದು ಮಾತು ಹೇಳಿದ. ಅದು ಅವರಿಗೆ ಸಹನವಾಗಲಿಲ್ಲ. ಮನೆ ಬಿಟ್ಟು ಹೋಗು ಎಂದರು—ಆಗಲಿ ಎಂದು ನಮ್ರನಾಗಿ ಶ್ರೀನಿವಾಸ ಹೋಗೇಬಿಟ್ಟ– ಎಲ್ಲಿಗೆ ಹೋಯಿತೋ ನನ್ನ ಕಂದ !"

"ನಮ್ಮಣ್ಣ ಹೇಳಿದ ರೀತಿಯೇ ಬೇರೆ. ಶ್ರೀನಿವಾಸನೇ ಕಾಲುಕೆರೆದು ಕೊಂಡು ವ್ಯಾಜ್ಯ ಕಾದು ಹೋದ ಎಂದು ವೆಂಕಪ್ಪಯ್ಯ ಹೇಳಿದ."

"ಸುಳ್ಳಮ್ಮ ಸುಳ್ಳು. ನಾನೇ ಎಲ್ಲಾ ಕಿವಿಯಾರೆ ಕೇಳುತ್ತಿದ್ದೆ. ಶ್ರೀನಿವಾಸ ಒಂದು ತಪ್ಪು ಮಾತೂ ಆಡಲಿಲ್ಲ."

"ಸರಿ—ಈಗ ಅರ್ಥವಾಯಿತು."

"ಏನರ್ಥವಾಯಿತು ಕಾವೇರಮ್ಮ."

"ಮುಂದಿನ ಪಾಳಿ....ಗೌರಕ್ಕಾ, ನಿಮ್ಮ ಯಜಮಾನರು ನಿಮ್ಮ ಹೆಸರಿಗೇನಾದರೂ ಆಸ್ತಿಪಾಸ್ತಿ ಹಣಕಾಸು ಮಾಡಿದ್ದಾರೆಯೇ ?"

"ಅವರಿರುವಾಗ ನನಗೇಕಮ್ಮ ಆಸ್ತಿಪಾಸ್ತಿ."

"ನೀವೂ ಮನೆಬಿಟ್ಟು ಹೋಗೋ ಪಾಳಿ ಬಹಳ ದೂರವಿಲ್ಲ ಗೌರಕ್ಕ. ನಾನು ಒರಟಾಗಿ ಮಾತನಾಡುತ್ತಿರುವೆನೆಂದು ಕೋಪಮಾಡಿಕೊಳ್ಳಬೇಡಿ. ನಿಮ್ಮ ಮನೆಯಲ್ಲಿ ಈಗ ತಾನೆ ಅಮೃತ ಉಂಡಿದ್ದೇನೆ – ಈ ಮನೆಯಲ್ಲಿ ವಿಷಬೀಜ ಹಾಕುವುದು ನನ್ನ ಉದ್ದೇಶವಲ್ಲ. ಆದರೆ ಹಸು ಮಗುವಿನ ಹಾಗಿರುವ ನಿಮ್ಮ ಸ್ಥಿತಿ ನಾಳೆ ಏನಾಗುವುದೋ ಎಂಬ ಚಿಂತೆ ನನ್ನ ಕಾಡುತ್ತಿದೆ. ಅದಕ್ಕಾಗಿ ನಾನಿಷ್ಟು ಮಾತನಾಡಬೇಕಾಯಿತು."

"ಏನು ವಿಷಯ—ಬಿಡಿಸಿ ಹೇಳಿ ಕಾವೇರಮ್ಮ....."

"ನಾನು ಅವತ್ತೇ ಈ ವಿಷಯ ನಿಮಗೆ ತಿಳಿಸೋಣ ಎಂದು ಬಂದೆ. ಇಲ್ಲದ ಜಗಳ ಕದನ ನಾನೇಕೆ ಹುಟ್ಟಿಹಾಕಲಿ ಎಂದು ಕೊಂಡು ಗಂಟಲಿಗೆ ಬಂದದ್ದನ್ನು ನುಂಗಿಕೊಂಡು ಸುಮ್ಮನಾದೆ-ಇನ್ನು ಸುಮ್ಮನಿದ್ದರೆ ನಾನು ನಿಮ್ಮ—ನಿಮ್ಮ ಮಗನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿದಂತಾಗುತ್ತದೆ."

ಗೌರಮ್ಮನವರ ಕುತೂಹಲ, ಉದ್ವೇಗ ಕೆರಳಿತು. "ಹೇಳಿ ಕಾವೇರಮ್ಮ." ಎಂದು ಅಂಗಲಾಚಿದರು. ಕಾವೇರಮ್ಮ ಯೋಚನೆ ಮಾಡುತ್ತಾ

"ಏನೂಂತ ಹೇಳಲಿ ಗೌರಕ್ಕ. ಕಾಲ ಹಾಳಾಗಿ ಹೋಯಿತು. ಈಗ ಮಗಳೂ ಒಂದೇ—ಹೆಂಡತಿಯೂ ಒಂದೇ. ಧರ್ಮ, ನೀತಿ, ಕಟ್ಟು ಕಟ್ಟಳೇ ಎಲ್ಲಾ ಗಾಳಿಗೆ ಹೋದವು. ಜನರಲ್ಲಿ ಸ್ವಲ್ಪವೂ ಸತ್ಯವಿಲ್ಲ.''

"ಅದಕ್ಕೂ ನಮ್ಮ ಮಾತಿಗೂ ಏನು ಸಂಬಂಧ ?"

"ಏನು ಸಂಬಂಧ ಎಂದು ಈ ಊರಿಗೇ ಗೊತ್ತಿದೆ. ನಿಮಗೆ ಮಾತ್ರ ಗೊತ್ತಿಲ್ಲ. ನಿಮ್ಮ ಮಗನ್ನ ಮನೆಬಿಟ್ಟು ಹೊರಗೆ ಹಾಕಿಸಿದವರು ಯಾರೊಂತೀರಿ ?"

"ಯಾರು ?"

"ನಮ್ಮ ಸುಭದ್ರಾ !"

"ಹಾ !"

"ಹಾನೂ ಇಲ್ಲ ಹೂನೂ ಇಲ್ಲ. ಎಷ್ಟೋ ತಿಂಗಳ ಕೆಳಗೆ ಅವರ ಸಂಬಂಧ ನಾನೇ ಕಣ್ಣಾರ ಕಂಡೆ. ವೆಂಕಪ್ಪಯ್ಯನಿಗೆ ಸೂಕ್ಷ್ಮವಾಗಿ ತಿಳಿಸಿದೆ—ಆ ಮುಡ್ಡಿ ಸಾಂಬ್ರಾಣಿ ನನ್ನ ಮಾತು ನಂಬಲಿಲ್ಲ. ತನ್ನ ಮಗಳ ಮೇಲೆ ನಾನು ದ್ವೇಷ ಸಾಧಿಸುತ್ತಿದ್ದೇನೆಂದು ನನ್ನ ಅತ್ತಿಗೆ ಭಾವಿಸಿದರು. ಆಗಲೇ ಏನಾದರೂ ಮಾಡಿದ್ದರೇ ಈ ಪ್ರಸಂಗ ಇಷ್ಟು ದೂರ ಬರುತ್ತಿರಲಿಲ್ಲ

ಈಗೇನು ರಾಜಾರೋಷ-ಸ್ವಂತ ಮನೆಯಾಯಿತು-ಕೈತುಂಬ ಹಣ ವಾಯಿತು-ಮೈತುಂಬ ಒಡವೆಯಾಯಿತು. ಮನೆ ಮಗನ್ನ ಮನೆ ಬಿಟ್ಟು ಆಚೆಗೆ ಕಳಿಸಿದ್ದಾಯಿತು-ಇನ್ನು ಯಾರು ಅವರ ದಾರಿಯಲ್ಲಿ ಅಡ್ಡಿ ಬರುವವರು-ನೀವು. ನಿಮ್ಮನ್ನ ಸಾಗಹಾಕಿದರೆ ಮುಂದೆ ಸುಖವಾಗಿ ಲೊಲಾಪ್ತಿಪಡಬಹುದು."

'ರಾಮ ರಾಮ' ಎಂದು ಕಿವಿ ಮುಚ್ಚಿಕೊಂಡು ಗೌರಮ್ಮನವರು ಕಣ್ಣೀರು ಹಾಕುತ್ತ ಕುಳಿತುಬಿಟ್ಟರು. ಅವರ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು.

"ಈ ನರಕ ಅನುಭವಿಸುವುದಕ್ಕೆ ನಾನು ಯಾವ ಪಾಪ ಮಾಡಿದ್ದೆ. ಹಾಳು ಪ್ರಪಂಚದಲ್ಲಿ ಇಷ್ಟು ಮೋಸವೇ–ಇಷ್ಟು ಕಾಪಟ್ಯವೇ? ಕಾವೇರಮ್ಮ. ಇನ್ನು ನಾನು ಯಾವ ಸೌಭಾಗ್ಯಕ್ಕೆ ಬದುಕಿರಬೇಕು."

"ನೀವು ಇಂಥ ಯೋಚನೆ ಮಾಡುತ್ತೀರೆಂದು ನಾನು ಇದುವರೆಗೆ ನಿಮ್ಮೆದುರಿನಲ್ಲಿ ಬಾಯಿ ಬಿಡಲಿಲ್ಲ. ಗೌರಕ್ಕ–ನೀವು ಇವತ್ತು ನಿಮ್ಮ ಯಜಮಾನರಿಗೆ ಬೇಡವಾಗಿರಬಹುದು. ಆದರೆ ನಿಮ್ಮ ಮಗ ನಿಮ್ಮಲ್ಲಿಯೇ ಪ್ರಾಣವಿಟ್ಟಿದ್ದಾನೆಂದು ಮರೆಯಬೇಡಿ. ಆ ಮಗ ಬದುಕಿರಬೇಕು–ಸುಖವಾಗಿರಬೇಕು ಎಂಬ ಆಸೆ ನಿಮಗಿದ್ದರೆ ಪ್ರಾಣ ಬಿಡುವ ಯೋಚನೆ ಬಿಟ್ಟು ಬಿಡಿ. ಬಿಟ್ಟೆ ಎಂದು ಆಣೆ ಮಾಡಿ."

ಗೌರಮ್ಮನವರು ಆಣೆಮಾಡಿ ಹೇಳುವವರೆಗೂ ಕಾವೇರಮ್ಮ ಬಿಡಲಿಲ್ಲ.

"ನಿಮ್ಮ ಯಜಮಾನರ ಜತೆ ಮಾತನಾಡಲು ನಿಮಗೆ ಕಷ್ಟವಾದರೆ ನನಗೆ ಬಿಡಿ. ನಾನು ಮಾತನಾಡುತ್ತೇನೆ."

"ಬೇಡಿ ಕಾವೇರಮ್ಮ. ನನಗೆ ಅವರೇ ಇಲ್ಲವಾದ ಮೇಲೆ ಅವರ ಆಸ್ತಿ ಕಟ್ಟಿಕೊಂಡು ಏನು ಮಾಡಲಿ. ನನ್ನ ಮಗ ಸತ್ಯವಂತ–ಪಾಪಕ್ಕೆ ಹೋಗುವವನಲ್ಲ. ದೇವರು ಅವನ ಅನ್ನ ಅವನಿಗೆ ಮೀಸಲಾಗಿಟ್ಟಿದ್ದಾನೆ. ನನ್ನ ಶ್ರೀನಿವಾಸನಿಗಾಗಿಯೂ ನಾನು ಭಿಕ್ಷೆ ಬೇಡುವುದಿಲ್ಲ. ಅವನನ್ನು 'ಮನೆ ಬಿಟ್ಟು ಹೋಗು' ಎಂದ ಹಾಗೆ ನನ್ನನ್ನೂ ಅಂದರೆ ಹೊರಡಲು ಸಿದ್ಧಳಾಗುತ್ತೇನೆ. ದೇವರು ಮಾಡಿಸಿದ್ದಾಗಲಿ."

ಕಾವೇರಮ್ಮನ ಬಾಯಲ್ಲಿ ಮುಂದೆ ಮಾತು ಹೊರಡಲಿಲ್ಲ. ಆ ತಾಯಿಯ ದೇದೀಪ್ಯಮಾನ ಪ್ರಭೆ ಕಂಡು ಅವಳ ಕಣ್ಣು ಕೋರೆಯಿಸಿತು.

ಅರವಿಂದ ಮಿಲ್ ಮಾಲಿಕರಿಗೆ ಕೊಟ್ಟಿದ್ದ ಒಂದು ತಿಂಗಳ ಅವಧಿ ಮುಗಿಯುತ್ತ ಬಂದಿತ್ತು. ಶ್ರೀನಿವಾಸ, ಮುನಿಸ್ವಾಮಿ, ಜ್ಞಾನಮುತ್ತು ಮುಷ್ಕರದ ವ್ಯವಸ್ಥೆಯಲ್ಲಿ ತಲ್ಲೀನರಾದರು. ಶ್ರೀನಿವಾಸನಿಗೆ ಆವೇಶ ಬಂದಂತಾಗಿತ್ತು. ಅವನು ಕೆಲಸ ಮಾಡುವ ವೈಖರಿ ಕಂಡು ಮುನಿಸ್ವಾಮಿ ಆಗಾಗ್ಗೆ ಜ್ಞಾನಮುತ್ತುವಿಗೆ ಹೇಳುತ್ತಿದ್ದ–'ನಮ್ಮ ಶ್ರೀನಿವಾಸರಿಗೆ ದೆವ್ವ ಹಿಡಿದಿದೆ' ಎಂದು.

ಮುಷ್ಕರಕ್ಕೆ ಮೂರೇ ದಿನ ಉಳಿಯಿತು. ಶ್ರೀನಿವಾಸ ಅರವಿಂದ ಮಿಲ್ಲಿನ ಕಾರ್ಮಿಕರ ಸಭೆ ಕರೆದ. ಬೇರೆ ಬೇರೆ ಕಾರ್ಮಿಕ ಸಂಘಗಳ ಸದಸ್ಯರೂ ಸಭೆಗೆ ಬಂದರು. ಜ್ಞಾನಮುತ್ತು ಸಭಾಧ್ಯಕ್ಷನಾದ. ಶ್ರೀನಿವಾಸ ಕಾರ್ಮಿಕರನ್ನುದ್ದೇಶಿಸಿ ಕೆಲವು ಮಾತುಗಳನ್ನಾಡಿದ

"ಸೋದರರೇ, ಸೋದರಿಯರೇ,

"ಆಚೆನಾಡಿದ್ದು ಗುರುವಾರ ನಾವು ಮುಷ್ಕರ ಆರಂಭಿಸುವವರಿದ್ದೇವೆ. ಮುಷ್ಕರದ ಉದ್ದೇಶ ನಿಮಗೆ ಈ ವೇಳೆಗೆ ಚೆನ್ನಾಗಿ ಅರ್ಥವಾಗಿರಬೇಕು. ಇದರಿಂದ ಜಯ ಸಿಕ್ಕುವುದು, ನಿಮ್ಮ ಜೀವನ ಸುಖಮಯವಾಗುವುದೆಂದು ನಾವು ವಾಗ್ದಾನ ಮಾಡುವುದಿಲ್ಲ.

"ಜಯ ದೊರೆತರೆ ನೀವು ಇಡೀ ಕಾರ್ಮಿಕ ವರ್ಗಕ್ಕೆ ಅಭೂತಪೂರ್ವ ದಿಗ್ವಿಜಯ ಮಾಡಿಕೊಟ್ಟಂತಾಗುತ್ತದೆ. ಅರವಿಂದ ಮಿಲ್ಲಿನ ೮೮೦ ಜನ ಕಾರ್ಮಿಕರು ಭಾರತದ ಇತಿಹಾಸವನ್ನು ಹೊಸದಾಗಿ ಬರೆದಂತಾಗುತ್ತದೆ."

"ಈಗ ನಾವು ನಡೆಸಲಿರುವುದು ಒಂದು ಟೋಕನ್ ಸ್ಟ್ರೈಕ್ (Token Strike). ಈ ಮುಷ್ಕರದಲ್ಲಿ ನಿಮ್ಮ ಅವಿವೇಕ, ದುರಾಸೆ, ದೌರ್ಬಲ್ಯಗಳಿಂದ ಅಪಜಯವಾದರೆ ಶಾಶ್ವತ ಅಪಕೀರ್ತಿಯನ್ನು ನೀವು ಅನುಭವಿಸಬೇಕಾಗುತ್ತದೆ.

"ನಾನು ಹೇಳುವ ಮಾತನ್ನು ಲಕ್ಷ್ಯವಿಟ್ಟು ಕೇಳಿ. ಈಗಲೂ ಮುಷ್ಕರ ಬೇಡವೆಂದು ನೀವು ಹೇಳುವುದಾದರೆ ನಾವು ನಿಲ್ಲಿಸಿಬಿಡಲು ಸಿದ್ಧರಾಗಿದ್ದೇವೆ"

"ಮುಷ್ಕರಬೇಕು-ಬೇಕು" ಎಂದು ಕೂಲಿಗಾರರು ಘೋಷಿಸಿದರು.

"ಒಮ್ಮೆ ಮುಂದಡಿಯಿಟ್ಟ ಮೇಲೆ ಅದನ್ನು ಹಿಂದಕ್ಕೆ ತೆಗೆಯಲು ಸಾಧ್ಯವಿಲ್ಲ. ನಿಮ್ಮಲ್ಲಿ ಯಾರಾದರೂ ನಿಮ್ಮ ಪಕ್ಷ ತ್ಯಜಿಸುವವರಿದ್ದರೆ ಅವರು ಈಗಲೇ ಹೊರಟುಹೋಗಬಹುದು."

"ಯಾರೂ ಇಲ್ಲ" ಎಂದು ಕೂಗೂ ಬಂತು.

ಕೂಲಿಕಾರರಲ್ಲಿ ಒಬ್ಬ ನಿಂತುಕೊಂಡು "ಈ ಮುಷ್ಕರ ಎಷ್ಟು ದಿವಸ ನಡೆಸಬೇಕು ಸಾರ್" ಎಂದ.

"ಅದಕ್ಕೆ ನಾನು ಉತ್ತರ ಹೇಳಲಾರೆ. ವಿನಾಕಾರಣ ಒಂದು ಗಂಟೆಯೂ ನಾವು ಮುಂದುವರಿಸುವುದಿಲ್ಲ. ಆದರಿದು ೮ ದಿವಸ ೧೫ ದಿವಸ ಒಂದು ತಿಂಗಳು ಸಾಗಬಹುದು. ಆ ಅವಧಿಯಲ್ಲಿ ನಿಮಗೆ ಒಪ್ಪತ್ತೂಟ ಒದಗಿಸುವ ವ್ಯವಸ್ಥೆ ಮಾಡಿದ್ದೇವೆ. ಅದಕ್ಕೂ ಮುಂದಕ್ಕೆ ಮುಷ್ಕರ ಹೋದರೆ ನೀವು ಉಪವಾಸವಿರಲು ಸಿದ್ಧರಾಗಿರಬೇಕು."

"ಸಿದ್ಧರಾಗಿದ್ದೇವೆ" ಎಂದು ಕೂಲಿಗಾರರು ನುಡಿದರು.

"ಸಾಯುವುದಕ್ಕೆ ಸಿದ್ಧರಾಗಿರಬೇಕು. ಹಸಿವಿನಿಂದ–ಪೋಲೀಸಿನವರ ಗುಂಡಿನೇಟಿನಿಂದ."

"ಸಿದ್ಧರಾಗಿದ್ದೇವೆ" ಎಂದು ಕೂಲಿಗಾರರು ಪ್ರತಿಧ್ವನಿಸಿದರು.

"ಅಂಥ ಎಲ್ಲ ಸಂದರ್ಭದಲ್ಲಿಯೂ ನಾನು ಮುಂದಿರುತ್ತೇನೆಂಬುದನ್ನು ಮರೆಯಬೇಡಿ. ನಿಮಗಿಂತಲೂ ನಾನು ಮೊದಲು ಉಪವಾಸಮಾಡುತ್ತೇನೆ –ನಿಮಗಿಂತಲೂ ನಾನು ಮೊದಲು ಸಾಯುತ್ತೇನೆ. ಆದರೆ ಎಂದೆಂದಿಗೂ ನಿಮ್ಮನ್ನು ಬಿಟ್ಟುಕೊಡುವುದಿಲ್ಲ."

"ಶ್ರೀನಿವಾಸರಿಗೆ ಜಯವಾಗಲಿ" ಎಂದು ಕೂಲಿಗಾರರು ಉತ್ಸಾಹದಿಂದ ಘೋಷಿಸಿದರು.

"ನನಗೆ ಜಯಜಯಕಾರ ಬೇಕಿಲ್ಲ. ನನಗೆ ಬೇಕು ನಿಮ್ಮ ನಿಸ್ಸೀಮ ಭಕ್ತಿ ಮತ್ತು ತ್ಯಾಗ. ನನ್ನ ನಾಯಕತ್ವದಲ್ಲಿ ನಿಮಗೆ ನಂಬಿಕೆಯಿದೆಯೇ?"

"ಇದೆ."

"ಹೊಳೆಗೆ ಬೀಳಿರೆಂದರೆ ನೀವು ಬೀಳಲು ಸಿದ್ಧರಾಗಿರಬೇಕು."

"ಸಿದ್ಧವಾಗಿದ್ದೇವೆ."

"ನಿಮ್ಮಲ್ಲಿ ದೃಢನಿಶ್ಚಯವೊಂದಿರಲಿ. ನಾವು ಸಮಸ್ಯೆಯನ್ನು ನಿವಾರಿಸಬಲ್ಲೆವು. ಬಡವರ, ದೀನರ, ದಲಿತರ, ಕಾರ್ಮಿಕರ ರಕ್ತ ಶೋಷಿಸುತ್ತಿರುವ ಬಂಡವಾಳಗಾರರನ್ನು, ಸರ್ಕಾರವನ್ನು ಬುಡಮೇಲು ಮಾಡಬಲ್ಲೆವು. ನಿರ್ಧಾರದಿಂದ ವಿಚಲರಾಗಬೇಡಿ-ನೀವು ಸತ್ಯಭ್ರಷ್ಟರಾದರೆ ಸರ್ವನಾಶವಾಗುತ್ತದೆ."

"ಸತ್ಯಭ್ರಷ್ಟರಾಗುವುದಿಲ್ಲ."

"ಮುಷ್ಕರ ಕಾಲದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಅನೇಕ ತಿಂಗಳಿಂದ ನಿಮಗೆ ತಿಳಿಸುತ್ತ ಬಂದಿದ್ದೇವೆ. ಬೆಳಿಗ್ಗೆ-ಸಂಜೆ ಊರಿನಲ್ಲಿ ಮೆರವಣಿಗೆ ಹೊರಡಬೇಕು-ಶಾಂತರಾಗಿರಬೇಕು-ಶಿಸ್ತಿನಿಂದ ಸಿಪಾಯಿಗಳಂತೆ ನಡೆದುಕೊಳ್ಳಬೇಕು - ಯಾರು ಹಿಂಸೆ ಮಾಡಿದರೂ ಸಹಿಸಿಕೊಳ್ಳಬೇಕು-ಪ್ರತಿ ಹಿಂಸೆಗೆ ಮನಸ್ಸುಕೊಡಬಾರದು. ಈ ವರ್ತನೆ ಸಾಧ್ಯವೇ? ಖಂಡಿತವಾಗಿ ಹೇಳಿ."

ಒಬ್ಬ ವೃದ್ಧ ಕೂಲಿ ಕೈಗಳ ಬಿಡಿಸಿಕೊಂಡು ವೇದಿಕೆಯ ಬಳಿ ಬಂದು ನಾಲ್ಕು ಮಾತು ಆಡಲು ಅಪ್ಪಣೆ ಬೇಡಿದ. ಅಧ್ಯಕ್ಷರು ಅಪ್ಪಣೆಯಿತ್ತರು. ಅವನು ಶ್ರೀನಿವಾಸನನ್ನು ನೋಡಿ

"ಬಂಧು-ನಾನು ಈ ಜೀವಮಾನವೆಲ್ಲಾ ಕೂಲಿಯಾಗಿ ದುಡಿದಿದ್ದೇನೆ. ನಾವು ಬಡವರು-ಆದರೆ ಆತ್ಮಾಭಿಮಾನಿಗಳು. ನಿಮ್ಮಂಥ ನಾಯಕ ದೊರೆತಿರುವುದು ನಮ್ಮ ಪುಣ್ಯ. ನನ್ನ ಎಲ್ಲ ಬಂಧುಗಳ ಪರವಾಗಿ ನಾನು ವಚನ ಕೊಡುತ್ತೇನೆ-ನಿಮ್ಮ ಮಾತಿಗೆ ಚಾಚೂ ತಪ್ಪದಂತೆ ನಡೆದುಕೊಳ್ಳುತ್ತೇವೆ. ನಮ್ಮ ಕುಲದೇವರಾಣೆಯಿಟ್ಟು ಪ್ರಮಾಣ ಮಾಡುತ್ತೇವೆ."

ಎಂದು ಹೇಳಿದ. ಶ್ರೀನಿವಾಸ ಅವನನ್ನು ಪರಮ ಪ್ರೇಮದಿಂದ ಅಪ್ಪಿಕೊಂಡ. ಕೂಲಿಗಾರರು ಶ್ರೀನಿವಾಸನ ಜಯಘೋಷಮಾಡಿದರು. ಅಧ್ಯಕ್ಷರು ತಮ್ಮ ಭಾಷಣ ಬೇಕಿಲ್ಲವೆಂದು ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀನಿವಾಸನ ಭಾಷಣ ಕೇಳಲು ಬಂದಿದ್ದವರಲ್ಲಿ ಬಹಳ ಮಂದಿ ಸಿ.ಐ.ಡಿ.ಗಳೂ ಇದ್ದರು. ಅವನ ಪ್ರತಿಯೊಂದು ಶಬ್ದವನ್ನೂ ಟಿಪ್ಪಣಿ ಮಾಡಿಕೊಂಡರು. ಶ್ರೀನಿವಾಸ ಅವರ ಕಡೆ ಕಣ್ಣೆತ್ತಿ ಸಹಾ ನೋಡಲಿಲ್ಲ.

ಆದರೆ ಮುನಿಸ್ವಾಮಿ, ಜ್ಞಾನಮುತ್ತು ಅಷ್ಟು ತಾತ್ಸಾರ ತೋರಿಸಲಿಲ್ಲ. ಶ್ರೀನಿವಾಸನ ಬೆನ್ನುಗಾವಲಿಗೆ ಸತತವಾಗಿ ನಾಲ್ಕೆಂಟು ಜನ ಇದ್ದೇ ಇರ ಬೇಕೆಂದು ನಿಶ್ಚಯಿಸಿದರು.

ಪೋಲೀಸಿನವರೂ ಮುನ್ನೆಚ್ಚರಿಕೆ ತೆಗೆದುಕೊಂಡರು. ಶ್ರೀನಿವಾಸ, ಮುನಿಸ್ವಾಮಿ, ಜ್ಞಾನಮುತ್ತು ಇವರ ಮೇಲೆ ಸರ್ಪಗಾವಲು ಆರಂಭವಾ ಯಿತು. ಅವರು ಹೋದೆಡೆ ಸಿ ಐ. ಡಿ. ಗಳ ದರ್ಶನವಾಗುತ್ತಿತ್ತು. ಶ್ರೀನಿ ವಾಸನ ಕಾರ್ಯಕ್ರಮದಲ್ಲಿ ಯಾವ ಗೋಪ್ಯವೂ ಇರಲಿಲ್ಲವಾದ್ದರಿಂದ ಅವನು ಸಿ. ಐ. ಡಿ. ಪಡೆಗೆ ಸ್ವಲ್ಪವೂ ಅಂಜಲಿಲ್ಲ.

ಪೋಲೀಸಿನವರು ಮುಷ್ಕರದಿಂದ ಗಲಭೆಯೇಳುತ್ತದೆಂದು ಊಹಿಸಿ ಮುಷ್ಕರದ ನಾಯಕರ ಮೇಲೆ ಅರೆಸ್ಟ್ ವಾರಂಟುಗಳನ್ನು ತೆಗೆದಿಟ್ಟು ಕೊಂಡರು. ಗಲಭೆಯ ಸೂಚನೆ ಕಂಡು ಬಂದರೆ ಸಾಕು, ಶ್ರೀನಿವಾಸನನ್ನು ಅವನ ಸಹಾಯಕರನ್ನು ಕಾರಾಗೃಹವಾಸಕ್ಕೆ ಕಳುಹಿಸಲು ಸಿದ್ಧರಾಗಿದ್ದರು.

ಹಲವು ಬಗೆಯ ಜನ ಹಲವು ಬಗೆಯಲ್ಲಿ ಮುಷ್ಕರ ನಿಲ್ಲಿಸಲು ಪ್ರಯತ್ನಿ ಸಿದರು. ಮುಷ್ಕರದಿಂದ ಕಾರ್ಮಿಕರಲ್ಲಿ ಅನವಶ್ಯಕ ಜಾಗೃತಿ ಹುಟ್ಟಿ ನಿತ್ಯ ವ್ಯವಹಾರವೇ ನಿಂತುಹೋಗುವುದೆಂದು ಕೆಲವರು ಭಾವಿಸಿದರು. ನಿರುದ್ಯೋ ಗಿಗಳಾದ ಕೂಲಿಕಾರರು ಅಂಗಡಿಗಳಿಗೆ, ಮನೆಗಳಿಗೆ ನುಗ್ಗಿ ಲೂಟಿ ಮಾಡು ವರೆಂದು ಕೆಲವರು ಯೋಚಿಸಿದರು. ಯಾರು ಯಾರು ಬಂದು ಯಾವ ಯಾವ ಗೊಡ್ಡು ಬೆದರಿಕೆ ಹಾಕಿದರೂ ಶ್ರೀನಿವಾಸ ತನ್ನ ನಿಶ್ಚಯದಿಂದ ವಿಚಲನಾಗಲಿಲ್ಲ.

ಭಾನುವಾರ ಬೆಳಿಗ್ಗೆ ಅರವಿಂದ ಮಿಲ್ಲಿನ ಕೂಲಿಗಾರರು ಕೆರೆಯಂಗಳ ದಲ್ಲಿ ಸಭೆ ಸೇರಿ ಧ್ವಜವಂದನೆ ಸಲ್ಲಿಸಿ ಊರಿನಲ್ಲಿ ಮೆರವಣಿಗೆ ಹೊರಟು– ಆ ಮೂಲಕ ಮುಷ್ಕರ ಸಾರುವುದೆಂದು ನಿಶ್ಚಯವಾಯಿತು.

ಹಿಂದಿನ ರಾತ್ರಿ ಶ್ರೀನಿವಾಸನಿಗೆ ಒಂದು ವಿಚಿತ್ರ ನಿರೂಪ ಬಂದಿತು. ಕಾಗದವನ್ನೊಡೆದು ಓದಿಕೊಂಡು ಪಕ್ಕದಲ್ಲಿದ್ದ ಮುನಿಸ್ವಾಮಿ ಕೈಗಿತ್ತ.

"ಏನು ಹೇಳಿ ಕಳುಹಿಸುವಿರಿ."

"ಬರಲು ಸಾಧ್ಯವಿಲ್ಲವೆಂದು ಹೇಳಿಕಳುಹಿಸುವೆ."

"ಹಾಗೆ ಮಾಡಬೇಡಿ- ಹೋಗಿಬನ್ನಿ-ಜತೆಯಲ್ಲಿ ಬೇಕಾದರೆ ನಾನೂ ಬರುವೆ."

"ಅವರ ಅಭಿಪ್ರಾಯ ಸ್ಪಷ್ಟವಾಗಿ ತಿಳಿದ ಮೇಲೆ ಇನ್ನು ಹೆಚ್ಚು ಮಾತುಕತೆಯೇಕೆ? ನಾಳೆಯಿಂದ ನಮ್ಮ ಕೆಲಸಾರಂಭವಾಗುತ್ತದೆ"

'ಇರಲಿ. ಅವರಿಗಿನ್ನೊಂದು ಅವಕಾಶಕೊಟ್ಟು ನೋಡಿ. ನಮ್ಮ ಮುಷ್ಕರ ಮುರಿಯಲು ಅವರು ಮಾಡುತ್ತಿರುವ ಪ್ರಯತ್ನ ಅವರ ಮಾತು ಕತೆಯಿಂದಲೇ ಹೊರಬೀಳಬಹುದು. ಈಗ ನೀವು ಅವರನ್ನು ನೋಡುವು ದರಲ್ಲಿ ನಮಗೆ ಲಾಭವಿದೆ."

"ಹಾಗಾದರೆ ನೀವೂ ಬನ್ನಿ."

ಎಂದು ಮುನಿಸ್ವಾಮಿಯೊಂದಿಗೆ ಗೋಪಾಲಕೃಷ್ಣಯ್ಯ ಕಳುಸಿದ್ದ ಕಾರಿನಲ್ಲಿ ಕುಳಿತು ಅವರ ಮನೆಗೆ ಹೋದ.

ಮುನಿಸ್ವಾಮಿ ಕಾರಿನಲ್ಲಿಯೇ ಕುಳಿತಿದ್ದ. ಶ್ರೀನಿವಾಸ ಮಾತ್ರ ಡ್ರೈವರೊಂದಿಗೆ ಒಳಗೆ ಹೋದ.

ಭವ್ಯವಾಗಿ ಸಿಂಗರಿಸಿದ್ದ ತೊಟ್ಟಿಯಲ್ಲಿ ಸಿಗರೇಟ್ ಹಚ್ಚಿಕೊಂಡು ಗೋಪಾಲಕೃಷ್ಣಯ್ಯ ಕುಳಿತಿದ್ದರು. ಅವರ ಸಮೀಪದಲ್ಲಿ ಸಂಜೀವಶೆಟ್ಟರು ಎಲಡಿಕೆ ಮೆಲ್ಲುತ್ತಾ ಕುಳಿತಿದ್ದರು.

ಗೋಪಾಲಕೃಷ್ಣಯ್ಯ ಎದ್ದುಬಂದು ಶ್ರೀನಿವಾಸನ ಕೈಹಿಡಿದು ಒಳಗೆ ಕರೆದೊಯ್ದು ಸೋಫಾದ ಮೇಲೆ ಕುಳ್ಳಿರಿಸಿ

"ಏನು ತೆಗೆದುಕೊಳ್ಳುವಿರಿ–ಕಾಫಿ ತರಿಸಲೇ?"

"ಬೇಡಿ-ಕೆಲಸವೇನು ಹೇಳಿ ಮುಗಿಸಿ. ನನಗೆ ಹೆಚ್ಚು ವ್ಯವಧಾನ ವಿಲ್ಲ."

"ಅಂತಹುದೇನು ಅವಸರ."

"ನಾಳೆಯಿಂದ ಮುಷ್ಕರ ಆರಂಭವಾಗುವ ಸಂಗತಿ ನಿಮಗೆ ತಿಳಿದಿರ ಬೇಕು."

"ಒಂದು ತಿಂಗಳ ಹಿಂದೆಯೇ ತಿಳಿಸಿದಿರಲ್ಲಾ. ಮುಷ್ಕರ ನಡೆದರೆ ಯಾರಿಗೆ ಪ್ರಯೋಜನ ಹೇಳಿ. ಕೂಲಿಗಾರರಿಗೂ ಹಿಂಸೆ-ನಮಗೂ ನಷ್ಟ."

"ಈ ವಿಷಯ ನಾನು ಮೊದಲೆ ನಿಮ್ಮಲ್ಲಿ ಅರಿಕೆ ಮಾಡಿಕೊಂಡೆ. ನೀವು ಹಟ ಹಿಡಿದು ಕುಳಿತಿರಿ. ನನ್ನ ಮಾತಿಗೆ ಬೆಲೆ ಕೊಡಲಿಲ್ಲ."

"ನನ್ನ ಸ್ವಭಾವವೇ ಹಾಗೆ. ನನ್ನ ಪಾರ್ಟನರ್ ಈ ವಿಷಯದಲ್ಲಿ ನನಗೆ ಸರಿಯಾದ ದಾರಿ ತೋರಿದ್ದಾರೆ."

"ಬೋನಸ್ ವಿಷಯ ನೀವು ಒಪ್ಪುವುದಾದರೆ ಒಂದು ಕಾಗದ ಬರೆದು ಕೊಡಿ–ಮುಷ್ಕರ ನಿಲ್ಲಿಸಿಬಿಡುತ್ತೇವೆ."

"ನೋಡಿ ಶ್ರೀನಿವಾಸ್. ಕೂಲಿಗಾರರಿಗೆ ಬೋನಸ್ ಸಿಕ್ಕಿದರೇನು ಬಿಟ್ಟರೇನು–ಇದರಿಂದ ನಿಮಗೇನು ಲಾಭ."

"ನನಗಾಗುವ ಲಾಭ ಆಗಿಹೋಗಿದೆ. ನನ್ನ ತಂದೆಯವರನ್ನೂ ನೀವು ಉಪಯೋಗಿಸಿಕೊಂಡಿರಿ."

"ಇದೇನು ದೊಡ್ಡ ವಿಷಯ ಬಿಡಿ—ನಾಳೆ ಅವರೇ ಬಂದು ನಿಮ್ಮನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ."

"ಹೋಗುವುದಕ್ಕೆ ನಾನು ಸಿದ್ಧವಾಗಿಲ್ಲ, ನನ್ನ ಸ್ವಂತ ವಿಷಯಬೇಡ. ನೀವು ನನ್ನ ಏಕೆ ಬರಮಾಡಿಕೊಂಡದ್ದು ?"

"ಮುಷ್ಕರ ನಡೆದರೆ ನಿಮಗೆ ಬರುವ ಲಾಭವೇನು ?"

"ನಮ್ಮ ಮಾತುಕತೆ ಬೋನಸ್ ವಿಷಯಕ್ಕೆ ಮಾತ್ರ ಅಡಕವಾಗಲಿ."

"ನಿಮ್ಮ ಹಿತೈಷಿಯಾದ ನಾನು ಒಂದು ಮಾತು ಹೇಳುವೆ ಕೇಳುವಿರಾ ?"

"ಹೇಳಿ–ಕೇಳುವುದರಲ್ಲಿ ಏನು ನಷ್ಟ."

ಗೋಪಾಲಕೃಷ್ಣಯ್ಯ ಸೋಫಾದ ಒರಗುದಿಂಬಿನ ಹಿಂದಿಟ್ಟಿದ್ದ ಒಂದು ಲಕೋಟೆ ತೆಗೆದು ಶ್ರೀನಿವಾಸನ ಕೈಗಿತ್ತರು. ಶ್ರೀನಿವಾಸ ಅದನ್ನು ಒಡೆದು ನೋಡಿದ–ನೂರು ರೂಪಾಯಿಯ ಐವತ್ತು ಹೊಸ ನೋಟುಗಳು.

"ಇದೇನು ಕೂಲಿಕಾರರಿಗೆ ನಿಮ್ಮ ಕಾಣಿಕೆಯೇ ? ಮುಷ್ಕರಕಾಲದಲ್ಲಿ ಅವರ ಯೋಗಕ್ಷೇಮದ ಸಲುವಾಗಿ !"

"ಅಲ್ಲ–ನಿಮ್ಮ ಯೋಗಕ್ಷೇಮದ ಸಲುವಾಗಿ–ಮುಷ್ಕರ ನಿಲ್ಲಿಸುವುದು ನಿಮ್ಮ ಭಾರ."

ಕೈಯಲ್ಲಿ ನೋಟಿನ ಕಂತೆ ಹಿಡಿದು ಶ್ರೀನಿವಾಸ ನಗುತ್ತಾ

"ನಾನು ಮಾಡುವ ಉಪಕಾರಕ್ಕೆ ಇಷ್ಟು ಪ್ರತಿಫಲ ಸಾಕೆ ?" ಎಂದು ಕೇಳಿದ, ಗೋಪಾಲಕೃಷ್ಣಯ್ಯ ಸಂಜೀವಶೆಟ್ಟರೊಂದಿಗೆ ಪಿಸುಗುಟ್ಟಿ

"ಮುಷ್ಕರ ನಿಂತುಹೋಗಲಿ–ಇನ್ನೊಂದು ೨–೩ ಸಾವಿರ ಕೊಡಲು ನಾವು ಸಿದ್ಧರಾಗಿದ್ದೇವೆ"

ಎಂದು ಹೇಳಿದರು. ಶ್ರೀನಿವಾಸನ ದೇಹಾದ್ಯಂತವೂ ಕೋಪದಿಂದ ಕಂಪಿಸಿತು ನೋಟಿನ ಕಂತೆಯನ್ನು ಗೋಪಾಲಕೃಷ್ಣಯ್ಯನವರ ಮುಖದ ಮೇಲೆ ಎಸೆದು

"ಕೂಲಿಗಾರರನ್ನು ಮಾರಿಕೊಂಡು ನನ್ನ ಹಾಳುಬಾಳು ಸಾಗಿಸ ಬೇಕೆಂಬ ಇಚ್ಛೆ ನನಗಿಲ್ಲ ಗೋಪಾಲಕೃಷ್ಣಯ್ಯನವರೇ. ಅವರ ರಕ್ತ ಕುಡಿದು ಶ್ರೀಮಂತಿಕೆ ಬೆಳೆಸಿರುವ ನಿಮ್ಮಷ್ಟು ನಾನು ನಾಚಿಕೆಕೆಟ್ಟಿಲ್ಲ"

ಎಂದು ನುಡಿದು ಅಲ್ಲಿ ನಿಲ್ಲದೆ ಹೊರಟುಬಿಟ್ಟ.

ಕಾರಿನಲ್ಲಿ ಕುಳಿತಿದ್ದ ಮುನಿಸ್ವಾಮಿ ಶ್ರೀನಿವಾಸನನ್ನು ಕಂಡು ಕೆಳಗಿಳಿದು ಬಂದ. 'ಬನ್ನಿ ಮುನಿಸ್ವಾಮಿ' ಎಂದಷ್ಟೇ ನುಡಿದು ಶ್ರೀನಿವಾಸ ಮುನಿಸ್ವಾಮಿಯನ್ನು ದರದರನೆ ಎಳೆದುಕೊಂಡು ನಡೆದುಬಿಟ್ಟ. ಶ್ರೀನಿವಾಸನ ಸ್ಥಿತಿ ಕಂಡು ಕಾರಣ ಕೇಳುವ ಧೈರ್ಯ ಮುನಿಸ್ವಾಮಿಗೂ ಆಗಲಿಲ್ಲ.

## ೪೨

ಶ್ರೀನಿವಾಸನ ಅಭ್ಯುದಯ, ರಾಜಕಾರಣದಲ್ಲಿ ಅವನಿಗೆ ದೊರೆಯು ತ್ತಿದ್ದ ಸ್ಥಾನ ಕಂಡು ಶಂಕರನಿಗೆ ತಳಮಳವುಂಟಾಯಿತು. ಅದರಿಂದ ಮುಲ್ಲಿನ ಮುಷ್ಕರ ಯಶಸ್ವಿಯಾಗಿಬಿಟ್ಟರೆ ಶ್ರೀನಿವಾಸನ ಕೀರ್ತಿ ಅಮರವಾಗುತ್ತ ದೆಂದು ಅವನು ಬಲ್ಲ. ಅಸೂಯೆ ಅವನನ್ನು ಒಳಗೇ ಹುಳುವಿನಂತೆ ಕೊರೆಯುತ್ತಿತ್ತು.

ಕ್ಷಿಪ್ರವಾಗಿ ಕೀರ್ತಿ ದೊರಕಿಸುವುದಕ್ಕೆ ರಾಜಕಾರಣ ಬಿಟ್ಟು ಬೇರೆ ಮಾರ್ಗವಿಲ್ಲವೆಂದು ಶಂಕರ ಭಾವಿಸಿದ. ಆದರೆ ಹೇಗೆ ರಾಜಕಾರಣಕ್ಕೆ ಪ್ರವೇಶಿಸುವುದು ಎನ್ನುವುದು ಅವನಿಗೆ ಬಗೆಹರಿಯಲಿಲ್ಲ.

ಶಂಕರನ ಸೋದರಮಾವ ವಿಶ್ವನಾಥಶಾಸ್ತ್ರಿಗಳು ಹಿಂದೂಧರ್ಮ ಪ್ರಸಾರಮಾಡುವುದಕ್ಕೆ ನಿಂತಿದ್ದರು. ಪುಣೆಯಲ್ಲಿ ಸ್ಥಾಪಿತವಾಗಿ ಉಗ್ರ ಕಾರ್ಯಕ್ರಮ ನಡೆಸುತ್ತಿದ್ದ ಹಿಂದೂಧರ್ಮ ರಕ್ಷಣೆ ಸಭೆಯ ಸರ್ವಾಧಿ ಕಾರಿಗಳಾದ ವೀರ ಮಹಿಸಾಳಕರ್ ಅವರೊಂದಿಗೆ ಪತ್ರವ್ಯವಹಾರ ನಡೆಸಿ ಅವರ ಇಚ್ಛೆಯಂತೆ ಬೆಂಗಳೂರಿನಲ್ಲಿಯೂ ಸಭೆಯ ಒಂದು ಶಾಖೆಯನ್ನು ಹುಟ್ಟಿಹಾಕಿದ್ದರು. ಭಜನೆ, ಹರಿಕಥೆ, ಧರ್ಮಸಂಬಂದ ಉಪನ್ಯಾಸಗಳಲ್ಲಿ ಸಭೆಯ ಕಾರ್ಯಕ್ರಮ ನಡೆದು ಬಂತು.

ಹೋರಾಟಗಾರರಿಗೆ ದೊರೆತರೆ ಸರ್ಕಾರ ನಿಯೋಜನೆಗೆ ಒಂದು ಜನರಲ್ ಎಲೆಕ್ಷನ್ ಅನಿವಾರ್ಯವಾಗುತ್ತದೆ. ಆಗ ಸ್ವರಾಜ್ಯಪಕ್ಷ ಎಷ್ಟೋ ಜನಗಳ ಕೈಬಿಡಬೇಕಾಗುತ್ತದೆ. ಅಂಥವರಿಗೆ ನಾವು ಸಭೆಯಲ್ಲಿ ಸ್ಥಾನವಿತ್ತು ಅವರನ್ನು ನಮ್ಮ ಉಮೇದುವಾರರಾಗಿ ನಿಲ್ಲಿಸಿದರೆ ನಮ್ಮ ಬುಡ ಭದ್ರವಾಗುತ್ತದೋ ಇಲ್ಲವೊ ಆಲೋಚಿಸು."

"ಸರಿ ಮಾವ-ಎರಡು ಮೂರು ಪ್ರಬಲ ಪಕ್ಷಗಳನ್ನೆದುರಿಸುವುದಕ್ಕೆ ಹಣವೆಲ್ಲಿಂದ ತರುವುದು-ಜನರೆಲ್ಲಿಂದ ತರುವುದು."

"ಜನ ತರುವುದು ನಿನ್ನ ಭಾರ. ಸದ್ಯಕ್ಕೆ ಚೆನ್ನಾಗಿ ಕೆಲಸಮಾಡುವ ಒಂದು ಯುವಕರ ತಂಡ ನಮಗೆ ಬೇಕು. ಅದನ್ನು ವ್ಯವಸ್ಥೆಮಾಡುವ ಜವಾಬ್ದಾರಿ ನೀನು ವಹಿಸಿಕೋ-ಉಳಿದದ್ದನ್ನು ನನಗೆ ಬಿಡು. ಹಣದ ಬಗ್ಗೆ ಯೋಚನೆಮಾಡಬೇಡ ಪುಣೆಯ ಮಾತೃಸಂಸ್ಥೆ ನಾವು ಕೇಳಿದಷ್ಟು ಹಣಕೊಡಲು ಸಿದ್ಧವಾಗಿದೆ."

"ಅವರಿಗಷ್ಟೊಂದು ಹಣವೆಲ್ಲಿಂದ ಬರಬೇಕು."

"ದೇಶದ ಶ್ರೀಮಂತರು, ಜಮೀನ್ದಾರರು. ರಾಜ ಮಹಾರಾಜರು ಪುಣೆಯ ಸಂಸ್ಥೆಯ ಸಹಾಯಕರು, ಪೋಷಕರು ಆಗಿದ್ದಾರೆ. ಇಲ್ಲಿ ನಾವು ಒಂದು ಒಳ್ಳೆಯ ದೈನಂದಿನ ಪತ್ರಿಕೆ ಆರಂಭಿ ಬೇಕೆಂದೂ ಅದರ ಖರ್ಚು ವೆಚ್ಚಕ್ಕಾಗಿ ಒಂದು ಲಕ್ಷ ರೂಪಾಯಿ ಕೊಡುವುದಾಗಿ ವೀರ ಮಹಿಸಾಳಕರ್ ಬರೆದಿದ್ದಾರೆ. ಯೋಚನೆಮಾಡು—ನಿನಗೂ ಇದು ಒಳ್ಳೆಯ ಅವಕಾಶ."

"ನನಗೆ ಒಂದೆರಡು ದಿನ ಅವಧಿಕೊಡು ಮಾವ. ವಿಚಾರಮಾಡಿ ತಿಳಿಸುತ್ತೇನೆ. ನಮ್ಮ ಸಂಸ್ಥೆಗೆ ಜನಸಹಾಯ ದೊರಕಿಸುವ ಪ್ರಯತ್ನವನ್ನೂ ಮಾಡುತ್ತೇನೆ."

ಎಂದು ಹೇಳಿ ಮಾವನ ಅಪ್ಪಣೆ ಪಡೆದು ಸುಭದ್ರೆಯನ್ನು ಕಾಣಲು ವಿಲ್ಸನ್‌ಗಾರ್ಡನ್ ಕಡೆ ಬೈಸಿಕಲ್ ಹತ್ತಿ ಹೊರಟ.

ಸುಭದ್ರಾ ಒಳ್ಳೆಯ ಸುಮ್ಮಾನದಲ್ಲಿದ್ದಳು. ಸೂರಪ್ಪನವರು ಅವಳನ್ನು ಪೇಟೆಗೆ ಕರೆದುಕೊಂಡು ಹೋಗಿ ಅವಳ ಸದ್ಯದ ಸ್ಥಿತಿಗೆ ಬೇಕಾಗುವ ಬಟ್ಟೆಗಳನ್ನು ತೆಗೆದುಕೊಟ್ಟಿದ್ದರು. ಸುಭದ್ರಾ ತನ್ನ ಹೊಸ ಸ್ವೆಟರ್ ಹಾಕಿಕೊಂಡು ಅದರ ಅಂದಚೆಂದ ನೋಡಿ ಸಂತೋಷಪಡುತ್ತಿದ್ದಳು.

ಶಂಕರ ಬಹಳ ದಿವಸಗಳ ಮೇಲೆ ಬಂದುದನ್ನು ಕಂಡು ಸುಭದ್ರೆಗೆ ಆಶ್ಚರ್ಯವಾಯಿತು.

"ಏನು ಮಿಸ್ಟರ್ ಶಂಕರರಾವ್, ನಮ್ಮ ಮನೆ ದಾರಿ ತಿಳಿಯಿತೇನು ?"

ಎಂದಳು. ಶಂಕರ ಅವಳ ಪ್ರಶ್ನೆಗೆ ಉತ್ತರ ಕೊಡದೆ ಅವಳ ಸ್ಥಿತಿಯನ್ನು ದಿಟ್ಟಿಸಿ ನೋಡಿ ನಿಟ್ಟುಸಿರುಬಿಟ್ಟ.

"ಏಕೆ ಶಂಕರ್, ನಿಟ್ಟುಸಿರು ?"

"ಇನ್ನೇನು ನಿಟ್ಟುಸಿರಲ್ಲದೆ–ಈಗ ನಿಮಗೆ ಯಾರೂ ಬೇಡವಾಗಿದೆ. ಹಳೆಯ ಸ್ನೇಹಿತರ ನೆನಪು ಕೂಡ ಹೋಗಿಬಿಟ್ಟಿದೆ."

"ನೆನಪಿದ್ದವರು ನೀವೇಕೆ ಇತ್ತ ಬರಲಿಲ್ಲ."

"ನಿಮಗೇಕೆ ವೃಥಾ ತೊಂದರೆಯೆಂದು."

"ಆಕ್ಷೇಪ ಇರಲಿ–ನೀವು ಹೇಗಿದ್ದೀರಿ ?"

"ಚೆನ್ನಾಗಿಯೇ ಇದ್ದೇನೆ. ನೀವು ಚೆನ್ನಾಗಿದ್ದಿರಾ ಎಂದು ಕೇಳಲೇ ಬೇಕಾಗಿಲ್ಲ."

ಸುಭದ್ರೆ ಅವನ ಕುಹಕ ನುಡಿಗೆ ನಕ್ಕಳು.

"ನಾನು ಒಂದು ಮುಖ್ಯ ಕೆಲಸದ ಮೇಲೆ ಬಂದೆ "

"ಅಪ್ಪಣೆಯಾಗಲಿ."

"ನೀವು ವಕ್ರಚೇಷ್ಟೆ ಬಿಟ್ಟು ಸರಿಯಾಗಿ ಸಲಹೆ ಕೊಡುವ ಹಾಗಿದ್ದರೆ ಹೇಳುತ್ತೇನೆ."

"ಏನದು, ನಿಮ್ಮ ಮದುವೆಯ ವಿಷಯವೇ ?"

"ಅದಕ್ಕೇ ನಾನು ವಕ್ರಚೇಷ್ಟೆ ಎನ್ನುವುದು."

"ಇಲ್ಲ–ಗಂಭೀರವಾಗಿರುತ್ತೇನೆ ಹೇಳಿ."

ವಿಶ್ವನಾಥ ಶಾಸ್ತ್ರಿಗಳ ಸಲಹೆಯನ್ನು ಸುಭದ್ರೆಯ ಮುಂದೆ ವಿವರವಾಗಿಟ್ಟು

"ನಾನು ಏನು ಮಾಡಲಿ ಹೇಳಿ" ಎಂದು ಕೇಳಿದ.

ಸುಭದ್ರಾ ಸ್ವಲ್ಪಕಾಲ ಗಂಭೀರವಾದಳು. ಮನಸ್ಸಿನಲ್ಲಿ ಲೆಕ್ಕಾಚಾರ ಮುಗಿಸಿ

"ಪುಣೆಯವರು ಒಂದು ಲಕ್ಷ ರೂಪಾಯಿ ಕೊಡುವುದು ನಿಜವೇ ?"

"ನಮ್ಮ ಮಾವ ಬಹಳ ಖಡಾಖಂಡಿತ ಮನುಷ್ಯ, ಆತ ಎಂದಿಗೂ ಅಸತ್ಯ ನುಡಿಯುವವನಲ್ಲ."

"ಅವರ ಮಾತು ನಾನು ಶಂಕಿಸುತ್ತಿಲ್ಲ. ಈ ಪುಣೆಯ ಜನಗಳನ್ನು ಹೇಗೆ ನಂಬುವುದು?"

"ಮಾನವನಿಗೆ ನಂಬಿಕೆಯುಂಟವ ಮೇಲೆ ಭಯವಿಲ್ಲ."

"ನನ್ನ ಸ್ಪಷ್ಟ ಅಭಿಪ್ರಾಯ ನೀವು ಕೇಳುವುದಾದರೆ ಈ ಅವಕಾಶ ಬಿಟ್ಟುಕೊಡಬೇಡಿ. ಇಂಥ ಸಂಸ್ಥೆ-ಇಂಥ ಜನ ಕೈಯಲ್ಲಿರಬೇಕು."

"ಹಿಂದೂಧರ್ಮ ರಕ್ಷಣಸಭೆ ಪ್ರತಿಗಾಮಿ ಪಕ್ಷ ಎನಿಸಿಕೊಂಡಿದೆ. ಜನತೆಗೆ ಅದರ ಮೇಲೆ ವಿಶ್ವಾಸ ಬಂದಿಲ್ಲ. ಸಭೆ ಗಾಂಧೀ ವಿರೋಧಿಯಾಗಿರುವುದೊಂದು ದೊಡ್ಡ ಆತಂಕ. ನಾವು ಈ ಸಂಸ್ಥೆ ಕಟ್ಟಿಕೊಂಡರೆ ನಾಳೆ ಜನ ನಮ್ಮನ್ನು ಜೀವದೊರಸೆ ಬಿಟ್ಟಾರೆ?"

"ಶಂಕರ್-ನಿಮಗೆ ರಾಜಕೀಯ ಚದುರಂಗದ ಆಟ ಗೊತ್ತಿಲ್ಲ. ಗಾಂಧೀಜಿ ಕಾಂಗ್ರೆಸ್ ಕಟ್ಟಿಕೊಂಡಾಗ, ಅಹಮದಾಬಾದ್ ಕಾಂಗ್ರೆಸ್ಸಿನಲ್ಲಿ ತಮ್ಮ ರಚನಾತ್ಮಕ ಕಾರ್ಯಕ್ರಮ ಮುಂಡಿಸಿದಾಗ ಅವರ ಮಾತು ಕೇಳುವ ಜನರೆಷ್ಟಿದ್ದರು."

"ಬಹಳ ಜನರಿರಲಿಲ್ಲ."

"ಇಂದು ನೋಡಿ-ಎಲ್ಲರೂ ಗಾಂಧಿ ಭಕ್ತರೇ. ಜನಕ್ಕೆ ಯಾವ ಕಾಲಕ್ಕೆ ಯಾವ ತತ್ವ ಬೇಕಾಗುತ್ತದೋ ಹೇಳಬಲ್ಲವನು ಯಾರು? ಮೊನ್ನೆ ತಾನೆ ಮುಸಲೋನಿ ಜೀವನಚರಿತ್ರೆ ಓದುತ್ತಿದ್ದೆ. ಅದರಲ್ಲಿ ಅವನು ಹೇಳುತ್ತಾನೆ 'ಸರಿಯೋ ತಪ್ಪೋ ಬಿಡದೆ ಹೇಳಿದ್ದನ್ನೇ ಒತ್ತಿಯೊತ್ತಿ ಹೇಳಿಕೊಂಡು ಹೋಗಬೇಕು-ಜನ ಒಂದಲ್ಲ ಒಂದು ದಿನ ಅದೇ ಸತ್ಯವೆಂದು ಭಾವಿಸಿ ಒಪ್ಪಿಕೊಳ್ಳುತ್ತಾರೆ'"

"ನಿಮ್ಮ ಸಹಕಾರ."

"ಸದ್ಯಕ್ಕೆ ನನ್ನ ಸಹಕಾರ ಪ್ರತ್ಯಕ್ಷವಾಗಿ ಅಪೇಕ್ಷಿಸಬೇಡಿ. ಸ್ವರಾಜ್ಯ ಪಕ್ಷ ನಾನು ಈಗ ಬಿಡಲು ಸಾಧ್ಯವಿಲ್ಲ. ನಿಮ್ಮ ಕೆಲಸ ನೀವು ಮಾಡಿಕೊಂಡು ಹೋಗಿ. ಮುಂದೆ ಸಂದರ್ಭ ಹೇಗೆ ಬರುವುದೋ ನೋಡೋಣ."

ಶಂಕರನ ಉತ್ಸಾಹ, ಆನಂದಕ್ಕೆ ಮಿತಿಯೇ ಇರಲಿಲ್ಲ. ತನ್ನ ಸೂಚನೆಯನ್ನು ಸುಭದ್ರೆ ಒಪ್ಪಲಾರಳು ಎಂದು ಅವನು ಶಂಕಿಸಿದ್ದ. ಅವಳ ಸೌಹಾರ್ದ ಕಂಡು ಅವನ ಹೃದಯ ಹಿಗ್ಗಿಹೋಯಿತು.

"ಥ್ಯಾಂಕ್ಸ್ ಸುಭಾ–ನನ್ನ ಮನಸ್ಸಿನಿಂದ ದೊಡ್ಡ ಭಾರ ಇಳುಹಿದಿರಿ. ವೃತ್ತಪತ್ರಿಕೆ ಪ್ರಾಯಶಃ ಆರೇಳು ತಿಂಗಳಲ್ಲಿ ಆರಂಭವಾಗಬಹುದು. ನೀವು ಸಂಪಾದಕರಾಗಲು ಸಾಧ್ಯವೇ ?"

"ಆ ವಿಷಯ ಈಗ ಬೇಡ. ನಾನು ವ್ಯಕಳಿದು ಎಂದಿನಂತಾಗಲು ಆರೇಳು ತಿಂಗಳು ಬೇಕೇಬೇಕು. ಈ ಮಧ್ಯೆ ಏನೇನಾಗುತ್ತದೋ ಹೇಳಲು ಸಾಧ್ಯವಿಲ್ಲ. ನಿಮ್ಮ ಕೆಲಸ ನೀವು ಮುಂದುವರಿಸಿ."

ಎಂದು ಹೇಳಿದರು. ಈ ಸುದ್ದಿಯನ್ನು ಕೂಡಲೆ ವಿಶ್ವನಾಥಶಾಸ್ತ್ರಿಗಳಿಗೆ ಮುಟ್ಟಿಸಬೇಕೆಂದು ಶಂಕರ ಉತ್ಸುಕನಾದ. ಸುಭದ್ರಾ ಅವನ ಆತುರ ಕಂಡು

"ನಾನು ಆಡಿದ ಮಾತು ನಮ್ಮಿಬ್ಬರಲ್ಲೇ ಇರಲಿ–ಸದ್ಯ ಇದು ಮೂರನೆಯವರಿಗೆ ಗೊತ್ತಾಗಬಾರದು."

"ಹಾಗೇ ಆಗಲಿ."

"ಶ್ರೀನಿವಾಸರ ವಿಷಯವೇನಾದರೂ ಗೊತ್ತೇ ?"

"ಅವರು ಮುಷ್ಕರದ ಗಲಾಟೆಯಲ್ಲಿದ್ದಾರೆ. ತಂದೆ ಮನೆ ಬಿಟ್ಟು ಹೊರಡಿಸಿದ ಸಂಗತಿ ಗೊತ್ತಿರಬಹುದು."

"ಗೊತ್ತಿದೆ. ಈಗೆಲ್ಲಿ ವಾಸ ?"

"ಕೂಲಿಕಾರರ ಸಂಘದ ಮಹಡಿಯ ಮೇಲೆ."

"ಆತನಿಗೆ ಸ್ವಲ್ಪವೂ ವಿವೇಕವಿಲ್ಲ."

"ಆ ಮಾತು ನೂರು ಸಲ ಹೇಳಿ."

"ಹೋಗಿಬಿಟ್ಟು ಬರುವಿರಾ ?"

ಎಂದು ಕೇಳಿದಳು. ಅವಳ ಸೂಚನೆ ಅರ್ಥ ಮಾಡಿಕೊಂಡು ಶಂಕರ ವಿಶ್ವನಾಥಶಾಸ್ತ್ರಿಗಳ ಮನೆಯ ಕಡೆ ಹೊರಟ.

## ೪೭

ಭಾನುವಾರ ಊರಿನಲ್ಲಿ ಕೋಲಾಹಲ. ಕಾರ್ಮಿಕರ ಮುಷ್ಕರ ಯಾವ ಸ್ಥಿತಿ ಮುಟ್ಟುತ್ತದೆಯೆಂದು ತಿಳಿಯಲು ಜನ ಕುತೂಹಲಿಗಳಾಗಿದ್ದರು.

ಶಾಂತರೀತಿಯಿಂದ ಮೆರವಣಿಗೆ ಕಾರ್ಮಿಕ ಸಂಘದಿಂದ ಹೊರಟಿತು. ಮೆರವಣಿಗೆಯ ಗುಂಪಿನ ಮುಂದೆ ಶ್ರೀನಿವಾಸ, ಮುನಿಸ್ವಾಮಿ, ಜ್ಞಾನ

ಮುತ್ತು. ಊರಿನ ನಾಲ್ಕಾರು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹಾದು. ಹೋಯಿತು. ಕೂಲಿಕಾರರು ಭಜನೆ ಹಾಡುಗಳನ್ನು ಹೇಳುತ್ತಿದ್ದರು. ಮಧ್ಯೆ ಮಧ್ಯೆ ಉತ್ಸುಕರಾದ ತರುಣ ಕೂಲಿಕಾರರು

"ಕೂಲಿಕಾರರಿಗೆ ಜಯವಾಗಲಿ."

"ಬಂಡವಾಳಶಾಹಿ ಧ್ವಂಸವಾಗಲಿ."

"ಕಾಮ್ರೇಡ್ ಶ್ರೀನಿವಾಸ್‌ಕಿ ಜೈ."

"ಕಾಮ್ರೇಡ್ ಮುನಿಸ್ವಾಮಿಕಿ ಜೈ."

"ಕಾಮ್ರೇಡ್ ಜ್ಞಾನಮುತ್ತೂಕಿ ಜೈ."

"ಜೈಬೋಲೋ ಭಾರತ ಮಾತಾಕಿ ಜೈ."

"ಮಹಾತ್ಮಾ ಗಾಂಧೀಕಿ ಜೈ-ಜೈ"

ಎಂದು ಜಯಘೋಷ ಮಾಡುತ್ತಿದ್ದರು. ಧರ್ಮಾಂಬುಧಿ ಕೆರೆಯ ಆವರಣದಲ್ಲಿ ಸಭೆ ಸೇರಿತು. ಊರಿನ ಬೇರೆ ಬೇರೆ ಮಿಲ್ಲುಗಳ ಸಹಸ್ರಾರು ಕೂಲಿಕಾರರು ಸಭೆಗೆ ಬಂದಿದ್ದರು. ಊರಿನ ಜನ, ವಿದ್ಯಾರ್ಥಿಗಳು ತಂಡ ತಂಡವಾಗಿ ನೆರೆದಿದ್ದರು.

ನಾಲ್ಕುಜನ ಕೂಲಿಕಾರರ ಹೆಣ್ಣುಮಕ್ಕಳು ನಿಂತು ಕೆಲವು ರಾಷ್ಟ್ರೀಯ ಪದಗಳನ್ನು ಹಾಡಿದರು ಮುನಿಸ್ವಾಮಿ—ಜ್ಞಾನಮುತ್ತು ಸಭೆಯನ್ನು ದ್ದೇಶಿಸಿ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀನಿವಾಸ ಭಾಷಣಕ್ಕೆ ನಿಂತು

"ಬಂಧುಗಳೇ-ಇಂದು ಇತಿಹಾಸ ಪ್ರಸಿದ್ಧವಾದ ದಿನ. ದೇಶದ ಕಾರ್ಮಿಕರು ತಮ್ಮ ಹಕ್ಕುಬಾಧ್ಯತೆಯನ್ನು ಸ್ಥಾಪಿಸಲು ಹೊರಟಿದ್ದಾರೆ. ಅವರಿಗೆ ಜಯ ದೊರೆತರೆ ನಾಡಿಗೆ ಕ್ಷೇಮವುಂಟು. ನಮ್ಮ ದೇಶ ಶ್ರೀಮಂತರ ದೇಶವಲ್ಲ. ಬಂಡವಾಳಗಾರರ ದೇಶವಲ್ಲ-ಕೂಲಿಕಾರರ ದೇಶ-ರೈತರ ದೇಶ. ದೇಶದ ಸಂಪತ್ತನ್ನು ಬೆಳಸುವ ಶ್ರಮಜೀವಿಗಳಿಗೆ ಬದುಕುವ ಹಕ್ಕನ್ನು ತಪ್ಪಿಸಲು ಮುಕ್ಕಣ್ಣನಿಂದಲೂ ಸಾಧ್ಯವಿಲ್ಲ.

ಶ್ರಮಜೀವಿ ಬಂಧುಗಳೇ. ನೀವು ಬಹಳ ಮಹತ್ತ್ವದ್ದಾದ ಮುಂದಡಿ ಯಿಟ್ಟಿರುವಿರಿ. ಸುಖವಾಗಲಿ ದುಃಖವಾಗಲಿ ಹಿಂದಕ್ಕೆ ಸರಿಯಬೇಡಿ ಶ್ರೀಕೃಷ್ಣ ಹೇಳಿದಂತೆ ಈ ಸಂಗ್ರಾಮದಲ್ಲಿ ಸತ್ತರೆ ಸ್ವರ್ಗ-ಬದುಕಿದರೆ ಇಹಲೋಕ ಸುಖ.

—ದೇಶಬಂಧುಗಳೇ-ಶ್ರಮಜೀವಿಗಳ ಈ ಸಂಗ್ರಾಮವನ್ನು ಹರಸಿ. ಮುಷ್ಕರ ಕಾಲದಲ್ಲಿ ಅವರಿಗೆ ಕೂಲಿಯಿಲ್ಲ. ಆದರೆ ಹಸಿವಿರುತ್ತದೆ. ಈಗ ನೀವು ನಿಮ್ಮ ಸಹಾನುಭೂತಿ ತೋರಬೇಕು-ನಿಮ್ಮ ಔದಾರ್ಯ ಹೊರಬರು ಬೇಕಾದ ಕಾಲವಿದು. ನಿಮ್ಮ ಧನಧಾನ್ಯದ ನೆರವು ಬೇಕು. ಕೂಲಿಕಾಗರು ಉಪವಾಸವಿರುವಾಗ ನೀವು ಊಟಮಾಡುವುದು ಮಹಾಪಾಪ. ಅವರ ಹೋರಾಟ ನಿಮ್ಮ ಹೋರಾಟ. ಅವರ ಜಯಾಪಜಯಗಳು ನಿಮ್ಮ ಜಯಾಪಜಯಗಳು"

ಎಂದು ಹೇಳಿದ. ಪ್ರಚಂಡ ಕರತಾಡನವಾಯಿತು. ವಾತಾವರಣ ವನ್ನು ಜಯಘೋಷದ ರವ ತುಂಬಿತು. ಜನ ತಮ್ಮ ಜೇಬಿನಲ್ಲಿದ್ದುದನ್ನು, ಕೈಯಲ್ಲಿದ್ದುದನ್ನು ಶ್ರೀನಿವಾಸನ ಕೈಗೆ ಕೊಡುತ್ತ ಬಂದರು. ಅಂದೇ ನೂರಾರು ರೂಪಾಯಿಗಳ ಸಂಗ್ರಹವಾಯಿತು.

ಸಭೆ ಶಾಂತವಾಗಿ ಚೆದುರಿತು. ಕೂಲಿಕಾರರು, ಅವರ ನಾಯಕರು ತೋರಿಸಿದ ಶಿಸ್ತು, ಸಂಯಮ ಕಂಡು ಪೋಲೀಸಿನವರು ಅಸಮಾಧಾನ ಗೊಂಡರು. ಗೋಪಾಲಕೃಷ್ಣಯ್ಯ, ಸಂಜೀವಶೆಟ್ಟರು, ಇತರ ಮಿಲ್ಲುಗಳ ಮಾಲಿಕರು ಬಾಯಿಗೆ ಅಕ್ಕೀಕಾಳು ಹಾಕಿಕೊಂಡು ಚಿಂತಿಸುತ್ತ ಕುಳಿತರು.

ಒಂದು ದಿನ ಕೂಲಿಗಾರರು ಸಂಘದ ಬಿಸಿಲು ಮಚ್ಚಿನ ಮೇಲೆ ಶ್ರೀನಿವಾಸ, ಮುನಿಸ್ವಾಮಿ ಮಾತನಾಡುತ್ತ ನಿಂತಿದ್ದಂತೆ ಒಂದು ಕಲ್ಲು ಹಾರಿ ಬಂದು ಶ್ರೀನಿವಾಸನ ತಲೆಗೆ ಬಡಿಯಿತು. ರಕ್ತ ಚಿಮ್ಮಿತು. ಮುನಿ ಸ್ವಾಮಿ ಕೂಡಲೆ ತನ್ನ ಕರವಸ್ತ್ರ ತೆಗೆದು, ನೀರಿನಲ್ಲಿ ಅದ್ದಿ ಶ್ರೀನಿವಾಸನ ತಲೆಗೆ ಬಿಗಿದ. ವಿಶೇಷ ಗಾಯವಾಗಿರಲಿಲ್ಲ. ಹಣೆಯ ಎಡಭಾಗ ಸ್ವಲ್ಪ ಕೆತ್ತಿ ಹೋಗಿತ್ತು. ಶ್ರೀನಿವಾಸ ಅಪಘಾತ ಕಂಡು ನಕ್ಕುಬಿಟ್ಟ. ಆದರೆ ಮುನಿಸ್ವಾಮಿಗೆ ಅಷ್ಟು ಬೇಗ ಸಮಾಧಾನ ತಂದುಕೊಳ್ಳಲಾಗಲಿಲ್ಲ.

"ಶ್ರೀನಿವಾಸ್, ನೀವು ಇರುವುದಕ್ಕೆ ನಾನು ಬೇರೆ ಸ್ಥಳ ವ್ಯವಸ್ಥೆ ಮಾಡುತ್ತೇನೆ. ನೀವು ಇಲ್ಲಿರುವುದು ಕ್ಷೇಮವಲ್ಲ."

"ಏನು ಹೀಗೆನ್ನುವಿರಿ ಮುನಿಸ್ವಾಮಿ. ನನ್ನ ಕಾರ್ಯರಂಗ ಬಿಟ್ಟು ನಾನೂ ಓಡಿ ಹೋಗಲೇ. ಅದೂ ಈಗ-ನನ್ನನ್ನು ನಂಬಿರುವ ಕಾರ್ಮಿಕರು ಏನು ಅಂದಾರು?"

"ನೀವೆಲ್ಲಿ ಓಡಿಹೋಗುತ್ತಿರುವಿರಿ. ಬೇರೆ ಸ್ಥಳದಲ್ಲಿದ್ದರೆ ಕೆಲಸಕಾರ್ಯ ನಡೆಯುವುದಿಲ್ಲವೇ ?"

"ಮುನಿಸ್ವಾಮಿ–ಮುಷ್ಕರ ಮುಗಿಯುವವರೆಗೆ ನಾನು ಈ ಸ್ಥಳ ಬಿಟ್ಟು ಕದಲುವುದಿಲ್ಲ. ಅನಂತರ ನನಗೂ ಸ್ವಲ್ಪ ವಿಶ್ರಾಂತಿ ಬೇಕು. ನೀವು ಹೇಳಿದ ಕಡೆ ಹೋಗುತ್ತೇನೆ"

ಎಂದು ಖಂಡಿತವಾಗಿ ನುಡಿದ.

ಮುಷ್ಕರ ಹದಿನೈದು ದಿವಸ ಸತತವಾಗಿ ಸಾಗಿತ್ತು. ಶ್ರೀನಿವಾಸ ಅವನ ಸಂಗಡಿಗರು ಕೂಲಿಗಾರರ ಊಟದ ವ್ಯವಸ್ಥೆ ನೋಡಿಕೊಂಡರು. ನಿರುದ್ಯೋಗದಿಂದ ಕೂಲಿಗಾರರು ಬೇಸರಗೊಳ್ಳದಂತೆ ಅವರಿಗೆ ಪಾಠ ಪ್ರವಚನಗಳು, ಕಥೆ ಭಜನೆಗಳು ವ್ಯವಸ್ಥೆಯಾದವು. ಊರಿನ ಕೆಲವು ನಾಟ್ಯ ವಿಲಾಸಿ ಸಂಸ್ಥೆಯ ತರುಣರು ನಾಟಕಗಳನ್ನಾಡಿ ತೋರಿದರು.

ಕೂಲಿಗಾರರ ಸಂಘಟನೆ ಕಂಡು ಮಿಲ್ ಮಾಲಿಕರು ಅಧೀರರಾದರು. ಸಂಧಾನುಸಂಧಾನಗಳಾರಂಭವಾದವು. ಮಾಲಿಕರು ಸಭೆ ಸೇರಿ ಮುಷ್ಕರದ ಪರಿಣಾಮ ಕುರಿತು ದೀರ್ಘವಾಗಿ ಆಲೋಚನೆ ಮಾಡಿದರು.

ಮುಷ್ಕರದ ಸುದ್ದಿ ಭಾರತಾದ್ಯಂತ ಪತ್ರಿಕೆಗಳ ಮುಖೇನ ವ್ಯಾಪಿಸಿತು. ಮುಂಬಯಿಯ ಪತ್ರಿಕೆಯಲ್ಲಿ ಸುದ್ದಿ ಓದಿದ ಇಲಾಹಿ, ಚೋಕ್ಸಿ, ತುಕೋಜಿ ಶ್ರೀನಿವಾಸನಿಗೆ ಅಭಿನಂದನೆ ಕಳುಹಿಸಿದರು. ಬೇರೆ ಬೇರೆ ಊರುಗಳ ಕಾರ್ಮಿಕ ಸಂಘಗಳು ಮುಷ್ಕರಕಾರರಿಗೆ ಸಹಾನುಭೂತಿ, ಬೆಂಬಲ ತೋರುವ ನಿರ್ಣಯಗಳನ್ನು ಮಾಡಿ ಕಳುಹಿಸಿದರು.

ಮಿಲ್ ಮಾಲಿಕರ ಜಂಘಾಬಲವೇ ಉಡಗಿ ಹೋಯಿತು. ಮುಷ್ಕರದ ಹದಿನೆಂಟನೆಯ ದಿನ ಜಾನ್‌ಸ್ಟನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಹೇಗಾದರೂ ಮುಷ್ಕರ ಕೊನೆಗಾಣಿಸಬೇಕೆಂದು ವಿಚಾರ ಮಾಡಿದರು. ಅರವಿಂದ ಮಿಲ್ ಪ್ರಕರಣ ತಮ್ಮ ಮಿಲ್ಲುಗಳಿಗೂ ವ್ಯಾಪಿಸಿ ಸಾರ್ವತ್ರಿಕ ಮುಷ್ಕರಕ್ಕೆ ಬುನಾದಿ ಹಾಕುತ್ತಿದೆಯೆಂಬದೇ ಅವರ ಭಯವಾಗಿತ್ತು. ಜಾನ್‌ಸ್ಟನ್ ಸಾಹೇಬರಿಗೂ ಮಾಲಿಕರ ವಾದ ಯುಕ್ತವೆಂದು ಕಂಡು ಬಂತು. ಎಲ್ಲರೂ ಸೇರಿ ಅರವಿಂದ ಮಿಲ್ ಮಾಲಿಕರಾದ

ಗೋಪಾಲಕೃಷ್ಣಯ್ಯ, ಸಂಜೀವಶೆಟ್ಟರ ಮೇಲೆ ಒತ್ತಾಯಪೂರ್ವಕವಾಗಿ ಆಗ್ರಹಮಾಡಿ, ಬೋನಸ್ ಕೊಡಬೇಕಾದುದು ನ್ಯಾಯವೆಂದು ಇತ್ಯರ್ಥ ಮಾಡಿದರು.

ಗೋಪಾಲಕೃಷ್ಣಯ್ಯ, ಸಂಜೀವಶೆಟ್ಟರಿಗೆ ಬೇರೆ ಮಾರ್ಗವೇ ಉಳಿಯಲಿಲ್ಲ. ಅರೆಮನಸ್ಸಿನಿಂದ ಮಾಲಿಕರ ಸಂಘದ ತೀರ್ಮಾನಕ್ಕೆ ಒಪ್ಪಿಗೆಯಿತ್ತರು.

ಹತ್ತೊಂಭತ್ತನೆಯದಿನ ಬೋನಸ್ ಕೊಡಲೊಪ್ಪಿರುವ ಸಂಗತಿ ತಿಳಿಸಿ ಕೂಲಿಗಾರರ ಸಂಘದ ಕಾರ್ಯದರ್ಶಿಗಳಿಗೆ ಅರವಿಂದ ಮಿಲ್ ಮಾಲಿಕರು ಪತ್ರ ಬರೆದು ಕಳುಹಿಸಿದರು.

ಪತ್ರ ಒಡೆದು ನೋಡಿ ಮುನಿಸ್ವಾಮಿ ಕುಣಿದಾಡಿದ. ಕೂಡಲೆ ಶ್ರೀನಿವಾಸನಿಗೆ ತೋರಿದ. ಸುದ್ದಿ ಒಂದರೆಕ್ಷಣದಲ್ಲಿ ಊರಿನಲ್ಲಿ ವ್ಯಾಪಿಸಿತು. ಕೂಲಿಗಾರರ ಸಭೆ ಸೇರಿಸಿ ಪತ್ರ ಓದಲಾಯಿತು. ಮಾರನೆಯ ದಿನದಿಂದ ಕೂಲಿಗಾರರು ಮತ್ತೆ ತಮ್ಮ ತಮ್ಮ ಕೆಲಸದ ಮೇಲೆ ಹೋಗಬಹುದೆಂದು ತೀರ್ಮಾನವಾಯಿತು.

ದೊರೆತ ಪೂರ್ಣ ಜಯ ಶ್ರೀನಿವಾಸನ ಧೃತಿ ಕೆಡಿಸಲಿಲ್ಲ. 'ಇದು ಮುಂದಿನ ಮಹಾಯುದ್ಧದ ಪಲ್ಲವಿ ಮಾತ್ರ ಮುನಿಸ್ವಾಮಿ, ಇಷ್ಟರಿಂದಲೇ ತೃಪ್ತರಾಗಬೇಡಿ, ಎಂದು ಎಚ್ಚರಿಕೆ ಕೊಡಲು ಅವನು ಮರೆಯಲಿಲ್ಲ.

## ೪೮

ಅರವಿಂದ ಮಿಲ್ಲಿನ ಕೂಲಿಕಾರರ ಮುಷ್ಕರ ಕೂಲಿಕಾರರೆಲ್ಲರಿಗೆ ಹತ್ತು ಭುಜ ಕೊಟ್ಟಿತು. ಅವರ ದಿಗ್ವಿಜಯದ ಪ್ರಭಾವ ಜನತೆಯ ಮೇಲೂ ಮೂಡಿತು. ಅರವಿಂದ ಮಿಲ್ಲಿನ ಸಣ್ಣ ಪ್ರಕರಣ ಸಂಸ್ಥಾನದ ಸ್ವಾತಂತ್ರ್ಯ ಪ್ರಭಾತಕ್ಕೆ ಪರ್ಯಾಯವಾಗಿ ಕಾರಣವಾಯಿತು.

೧೯೪೭ ಆಗಸ್ಟು ೧೫ನೆಯ ತಾರೀಖು ಭಾರತದ ಪುಣ್ಯದಿನ. ಅಂದು ದೇಶವನ್ನು ಭಾರತೀಯರಿಗೆ ಒಪ್ಪಿಸಿಕೊಟ್ಟು ಬ್ರಿಟಿಷರು ಭಾರತಬಿಟ್ಟು ತೊಲಗಲು ನಿರ್ಧರಿಸಿದರು. ೧೯೪೨ ಅಗಸ್ಟ್ ತಿಂಗಳಲ್ಲಿ ಗಾಂಧೀಜಿ ಊದಿದ ರಣಕಹಳೆಯ ಪರಿಣಾಮ ಐದು ವರ್ಷಗಳಾದನಂತರ ಸುಮುಖವಾಯಿತು.

೧೯೪೨ರ ಸಂಗ್ರಾಮದಲ್ಲಿಯೂ ಅದರ ಹಿಂದೆ ನಡೆದ ಹಲವು ರಾಷ್ಟ್ರೀಯ ಆಂದೋಲನಗಳಲ್ಲಿಯೂ ಸಂಸ್ಥಾನ ಭಾಗವಹಿಸಿತ್ತು. ದೇಶಸೇವಕರು ಯರವಾಡಾ, ಬೆಳಗಾಂವಿ, ಹಿಂಡಲಿಗ ಕಾರಾಗೃಹಗಳ ನರಕವಾಸ ಅನುಭವಿಸಿದ್ದರು. ಸಾಮ್ರಾಜ್ಯರಕ್ಷಕರ ಆಗ್ರಹಕ್ಕೆ ತುತ್ತಾಗಿ ಮೈಮೂಳೆಗಳನ್ನು ಮುರಿಸಿಕೊಂಡಿದ್ದರು. ದೇಹದ ಹಂಗುತೊರೆದು ಭಾರತದ ಬಿಡುಗಡೆಗೆ ಹೋರಾಡಿದ್ದರು.

ಭಾರತ ಸ್ವತಂತ್ರವಾಗಿ, ರಾಜ್ಯಾಡಳಿತ ದೇಶೀಯರಕೈಗೆ ಬಂದಿದ್ದರೂ ಸಂಸ್ಥಾನದ ಪರಿಸ್ಥಿತಿ ಸುಧಾರಿಸಲಿಲ್ಲ. ಬ್ರಿಟಿಷರ ಸಂಪ್ರದಾಯಗಳಲ್ಲಿ ಬೆಳೆದುಬಂದಿದ್ದ ಅಧಿಕಾರವರ್ಗ ಹೈದರಾಬಾದು, ಮೈಸೂರು, ಮೈಳೂರು ತಿರುವನಂತಪುರ, ಬರೋಡಾ, ಇಂದೂರ್ ಮೊದಲಾದ ಸಂಸ್ಥಾನಗಳಲ್ಲಿ ತಮ್ಮ ನಿರಂಕುಶ ಪ್ರಭುತ್ವವನ್ನು ನಿರ್ಲಜ್ಜೆಯಿಂದ ಸಾಗಿಸಿದ್ದರು.

ಸಂಸ್ಥಾನದ ಜನತೆಯಲ್ಲಿ ಶಾಂತಿ, ಸಹನೆ ಉಳಿಯಲಿಲ್ಲ. ಸ್ವರಾಜ್ಯ ಪಕ್ಷದ ತೀವ್ರಗಾಮಿಗಳು ‘ಅಂತಿಮ ಹೋರಾಟ’ವೊಂದನ್ನು ನಡೆಸಲೇ ಬೇಕೆಂದು ಒತ್ತಾಯಮಾಡುತ್ತಿದ್ದರು. ಸೂರಪ್ಪನವರಂಥ ಮಂದಗಾಮಿಗಳು ಅವರ ಆಸೆ ಆಕಾಂಕ್ಷೆಯನ್ನು ಬದಿಗೊತ್ತಿ ಹೋರಾಟ ನಡೆಯಲು ಅಡಚಣೆ ತಂದೊಡ್ಡಿದ್ದರು.

ಮುಷ್ಕರಾನಂತರ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ತೀವ್ರಗಾಮಿಗಳು ಪುಟ್ಟಣ್ಣನವರ ಮುಂದಾಳುತನದಲ್ಲಿ ಹೆಚ್ಚು ಸುಸಂಘಟಿತರಾಗಿ ಜನತೆಯ ಬಲವನ್ನು ದೊರಕಿಸಿಕೊಂಡರು. ಪಕ್ಷದ ಒಂದು ವಿಶೇಷ ಸಭೆಯನ್ನು ಕರೆಯಲು ತೀವ್ರಗಾಮಿಗಳ ಒತ್ತಾಯಮಾಡಿದರು. ವಿಶೇಷ ಸಭೆ ನಡೆಯದಿರಲು ಸೂರಪ್ಪನವರು ಮಾಡಿದ ಸಾಹಸವೆಲ್ಲಾ ನಿಸ್ಸಾರ್ಥಕವಾಯಿತು. ವಿಶೇಷ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿರುವ ಪಕ್ಷದ ಸದಸ್ಯರು ಕೂಡಲೆ ರಾಜೀನಾಮೆ ಸಲ್ಲಿಸಬೇಕೆಂಬ ನಿರ್ಣಯ ಬಹುಮತದಿಂದ ಒಪ್ಪಿಗೆ ಪಡೆಯಿತು. ತಮಗಾದ ಸೋಲಿಗೆ ಸೂರಪ್ಪನವರು ತಲೆ ತಗ್ಗಿಸಬೇಕಾಯಿತು.

ಅದೇ ಸಭೆ ಐದು ಜನಗಳ ಒಂದು ಕ್ರಿಯಾಸಮಿತಿ ರಚಿಸಿ ಅದು ಒಂದು ಕಾಲಾವಧಿ ಇಟ್ಟುಕೊಂಡು ಸರ್ಕಾರದೊಡನೆ ಸಂಧಾನ ನಡೆಸಿ ಶಾಂತಿಯುತವಾಗಿ ಜವಾಬ್ದಾರಿ ಸರ್ಕಾರ ದೊರಕಿಸಬೇಕೆಂದೂ, ಅದಕ್ಕೆ

ಸರ್ಕಾರ ಒಪ್ಪದಿದ್ದರೆ ' ಸಾಮೂಹಿಕ ಅಸಹಕಾರ ಚಳುವಳಿ ' ಯನ್ನಾರಂಭಿಸಬೇಕೆಂದೂ ನಿರ್ಣಯ ಮಾಡಿತು. ಕ್ರಿಯಾಸಮಿತಿಯ ಅಧ್ಯಕ್ಷ ಸ್ಥಾನ ಪುಟ್ಟಣ್ಣನವರಿಗೆ ಸಿಕ್ಕಿತು. ಪಂಚರ ಉಪಸಮಿತಿಯಲ್ಲಿ ಸೂರಪ್ಪನವರಿಗೆ ಸ್ಥಾನ ಸಿಗಲಿಲ್ಲ. ತೀವ್ರಗಾಮಿಗಳೇ ಅದಕ್ಕೆ ಚುನಾವಣೆಯಾಗಿ ಬಂದರು.

ಈ ಎರಡು ನಿರ್ಣಯಗಳೂ ಸಂಸ್ಥಾನದಲ್ಲಿ ವಿಶೇಷ ಜಾಗೃತಿಯನ್ನುಂಟುಮಾಡಿದವು. ಸಂಧಾನುಸಂಧಾನಗಳು ನಿಷ್ಫಲವಾಗುವವೆಂದು 'ಅಂತಿಮ ಹೋರಾಟ' ನಡೆಸದೆ ಗತ್ಯಂತರವೇ ಇಲ್ಲವೆಂದು ಜನ ನಿರ್ಧರಿಸಿದರು. ಸಂಧಾನಕ್ಕೆ ಹೊರಟಿದ್ದ ಪಂಚರೂ ಈ ನಿರ್ಧಾರಕ್ಕೇ ಬಂದಿದ್ದರು.

ಕಾರ್ಮಿಕರ ಸಹಕಾರವಿಲ್ಲದೆ ತಮ್ಮ ಹೋರಾಟ ಯಶಸ್ವಿಯಾಗುವುದಿಲ್ಲವೆಂದು ಪಂಚರು ಚೆನ್ನಾಗಿ ತಿಳಿದಿದ್ದರು. ಸರ್ಕಾರದೊಡನೆ ಸಂಧಾನ ಆರಂಭಿಸುವ ಮುನ್ನ ಪಂಚರು ಶ್ರೀನಿವಾಸ, ಮುನಿಸ್ವಾಮಿಯವರನ್ನು ಭೇಟಿ ಮಾಡಿ ಅವರ ಸಹಕಾರ ದೊರಕಿಸಿಕೊಂಡರು

ಪಂಚರು ಸರ್ಕಾರದೊಡನೆ ಸಂಧಾನ ಆರಂಭಿಸಿದರು. ಐದು ದಿವಸ ಸತತವಾಗಿ ವಾದ ಪ್ರತಿವಾದಗಳು ನಡೆದವು. ಸರ್ಕಾರ ತನ್ನ ಕಸಿ ಮುಷ್ಟಿಯನ್ನು ಸಡಲಿಸಲಿಲ್ಲ; ಪಂಚರು ತಮ್ಮ ಬೇಡಿಕೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಒಪ್ಪಲಿಲ್ಲ. ಪಂಚರಾಗಲಿ ಇತರರಾಗಲಿ ಕಾಯಿದೆಭಂಗ ಮಾಡಿದ ಕೂಡಲೆ ಅವರನ್ನು ಅರೆಸ್ಟ್ ಮಾಡಲು ಸರ್ಕಾರ ವ್ಯವಸ್ಥೆ ಮಾಡಿತು.

ಸುತ್ತ ದಳ್ಳುರಿ ವ್ಯಾಪಿಸುತ್ತಿದ್ದಾಗ ಶ್ರೀನಿವಾಸ ಕಾರ್ಮಿಕ ಸಂಘದ ಮಹಡಿಯ ಮೇಲೆ ವಾಸಮಾಡುವುದು ದುಸ್ಸಾಧ್ಯವಾಯಿತು. ಮುನಿಸ್ವಾಮಿ ಅದಕ್ಕೆ ಬೇರೆ ವ್ಯವಸ್ಥೆ ಮಾಡಿದ.

ಮುನಿಸ್ವಾಮಿಯ ಬಂಧು ಪೆರುಮಾಳ್ 'ಮೆಂಟಲ್ ಆಸ್ಪತ್ರೆ'ಯ ಬಳಿ ಒಂದು ನಿವೇಶನಕೊಂಡು ಒಂದು ಸಣ್ಣ ಮನೆ ಕಟ್ಟಿದ್ದ. ಅಲ್ಲಿ ಆಗತಾನೆ ಒಂದೊಂದು ಮನೆಗಳಾಗಿದ್ದವು. ನಿರ್ಜನ ಪ್ರದೇಶದಲ್ಲಿ ಹೋಗಿ ವಾಸಿಸಲು ಪೆರುಮಾಳನ ಮನೆಯವರು ಒಪ್ಪಲಿಲ್ಲ. ಪೆರುಮಾಳ್ ಅದನ್ನು ಬಾಡಿಗೆಗೆ ಕೊಟ್ಟು ಒಂದು ವರ್ಷ ಕಳೆದಾದನಂತರ- ಸುತ್ತಮುತ್ತ ಕೆಲವು ಮನೆಗಳು ಎದ್ದಮೇಲೆ ಅಲ್ಲಿ ವಾಸಕ್ಕೆ ಹೋಗುವುದೆಂದು ನಿಶ್ಚಯಿಸಿದ್ದ. ಮುನಿಸ್ವಾಮಿ ಅವನಿಂದ ಮನೆ ಪಡೆದುಕೊಂಡು ಶ್ರೀನಿವಾಸ ಅಲ್ಲಿ ವಾಸಿಸಲು ಎಲ್ಲ ವ್ಯವಸ್ಥೆ ಮಾಡಿದ.

ಶ್ರೀನಿವಾಸನ ಆರೋಗ್ಯ ತೀರ ಕೆಟ್ಟಿತ್ತು. ಹೊತ್ತಿಗೆ ಹೊತ್ತಿಗೆ ಊಟವಿಲ್ಲ, ನಿದ್ರೆಯಿಲ್ಲ, ಮೈಗೆ ನೀರಿಲ್ಲ. ಕೆಲಸದ ಕಾಯಕಷ್ಟದ ಜತೆಗೆ ಮನಸ್ಸಿನ ಧಾವಂತ, ಉದ್ವೇಗ ಅವನನ್ನು ಹಣ್ಣು ಹಣ್ಣು ಮಾಡಿದ್ದವು. ಕೆಲವು ದಿನವಾದರೂ ಪೂರ್ಣ ವಿಶ್ರಾಂತಿ ಪಡೆಯದಿದ್ದರೆ ಮುಂದಿದ್ದ ಹೋರಾಟದಲ್ಲಿ ಭಾಗವಹಿಸುವುದು ಸಾಧ್ಯವಾಗುವುದಿಲ್ಲವೆಂದು ಅವನಿಗೂ ಚೆನ್ನಾಗಿ ಮನವರಿಕೆಯಾಗಿತ್ತು. ಶ್ರೀನಿವಾಸ ಇದ್ದ ಸ್ಥಳ ಯಾರಿಗೂ ತಿಳಿಯಬಾರದೆಂದು ಮುನಿಸ್ವಾಮಿಯ ಇಚ್ಛೆ. ಜನ ವೃಥಾ ಶ್ರೀನಿವಾಸನಿಗೆ ತೊಂದರೆಯಿತ್ತು ಅವನ ವಿಶ್ರಾಂತಿಗೆ ಭಂಗತರಬಾರದೆಂದು ಅವನು ಆ ವಿಷಯವನ್ನು ಗೋಪ್ಯವಾಗಿಟ್ಟ.

ತನ್ನ ನೂತನ ಆವಾಸಸ್ಥಾನದಲ್ಲಿ ವಿಶ್ರಾಂತಿಗಾಗಿ ಶ್ರೀನಿವಾಸ ನಿಂತರೂ ವಿಶ್ರಾಂತಿ ಪಡೆದುಕೊಳ್ಳುವುದು ಅವನ ಜಾಯಮಾನಕ್ಕೆ ಬರಲಿಲ್ಲ. 'ಅಂತಿಮ ಹೋರಾಟ'ದ ರೂಪರೇಷೆ ರಚಿಸಿ, ಯಾವ ಯಾವ ಬಗೆಯಲ್ಲಿ ಅದನ್ನು ಮುಂದುವರಿಸಬೇಕೆಂದು ವಿಚಾರ ಮಾಡುವುದಕ್ಕೆ ಅವನಿಗೆ ವೇಳೆ ಸಾಲುತ್ತಿರಲಿಲ್ಲ. ಮುನಿಸ್ವಾಮಿ ಪ್ರತಿದಿನ ಎರಡು ಮೂರು ಸಲ ಬಂದು ಶ್ರೀನಿವಾಸನ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದ. ಕಣ್ಣನ್ ಶ್ರೀನಿವಾಸನ ಮೈಗಾವಲಿಗೆ ನಿಂತು ಅವನ ಸೇವೆ ಶುಶ್ರೂಷೆಯನ್ನು ಅತ್ಯಾದರದಿಂದ ಮಾಡುತ್ತಿದ್ದ.

ಒಂದು ದಿನ ಮುಂಜಾನೆಯಿಂದ ಸಂಜೆಯವರೆಗೆ ಶ್ರೀನಿವಾಸ ಮನೆ ಬಿಟ್ಟು ಕದಲಿರಲಿಲ್ಲ. ಸಂಜೆ ಬಹಳ ಬೇಸರವಾಯಿತು. ಮುನಿಸ್ವಾಮಿ ಏಕೋ ಬಂದಿರಲಿಲ್ಲ. ಮುನಿಸ್ವಾಮಿ ಬಂದರೆ ಇರಹೇಳಿ, ಕಣ್ಣನಿಗೆ ತಿಳಿಸಿ ತಿರುಗಾಡಿಕೊಂಡು ಬರಲು ಹೊರಟು.

ಲಾಲಬಾಗಿಗೆ ಬಂದು ಅಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು ಸಾವಕಾಶ ವಾಗಿ ನಡೆದು ಹೊರಟ. ವಿಲ್ಸನ್‌ಗಾರ್ಡನ್ ರಸ್ತೆಯಲ್ಲಿ ಹೋಗುತ್ತಿದ್ದಂತೆ ಎದುರಿಗೆ ಒಂದು ಕಾರು ಬಂತು. ಕತ್ತು ಬಗ್ಗಿಸಿಕೊಂಡು ತನ್ನ ಚಿಂತೆಯಲ್ಲಿ ಮಗ್ನನಾಗಿದ್ದ ಶ್ರೀನಿವಾಸ ಕಾರನ್ನು ಗಮನಿಸಲಿಲ್ಲ.

ಕಾರು ಶ್ರೀನಿವಾಸನನ್ನು ದಾಟಿ ಸ್ವಲ್ಪ ದೂರ ಮುಂದೆ ಹೋಯಿತು. ಅಲ್ಲಿ ತಟ್ಟನೆ ನಿಂತಿತು. ಡ್ರೈವರು ಕಾರಿನಿಂದಿಳಿದು ಶ್ರೀನಿವಾಸನನ್ನು ಹುಡುಕಿಕೊಂಡು ಬಂದ. ತನ್ನನ್ನು ಈ ಹೊತ್ತಿನಲ್ಲಿ, ಇಲ್ಲಿ ಮಾತನಾಡಿಸಿದ ಗಫೂರನನ್ನು ಕಂಡು ಶ್ರೀನಿವಾಸ ಚಕಿತನಾದ.

ಗಫೂರ್ ತನ್ನ ಚಿಕ್ಕ ದಣಿಯನ್ನು ಕಣ್ತುಂಬ ನೋಡಿದ. ಅವನ ಕಣ್ಣಲ್ಲಿ ನೀರು ಮಿಡಿಯಿತು. ಸ್ವಲ್ಪ ಹೊತ್ತು ಮೌನವಾಗಿ ಶ್ರೀನಿವಾಸನ ಮುಂದೆ ನಿಂತ.

"ಏನು ಗಫೂರ್, ಚೆನ್ನಾಗಿದ್ದೀಯಾ ? ಎಲ್ಲಿಗೆ ಹೋಗಿದ್ದೆ" ಎಂದು ಶ್ರೀನಿವಾಸ ಕೇಳಿದ.

"ನಂಗೇನು ಸಾಮಿ–ಚಂದಾಕೇ ಇದ್ದೀನಿ. ನೀವ್ಯಾಕೆ ಸಾಮಿ ಹಿಂಗಾಗಿ ಹೋಗಿಬಿಟ್ಟಿದ್ದೀರಿ–ಕಾಹಿಲೆಯಾಗಿತ್ತೇ ?"

"ಇಲ್ಲಪ್ಪ. ಸ್ವಲ್ಪ ಆಯಾಸವಾಗಿತ್ತು ಅಷ್ಟೆ, ನನಗೇನೂ ಇಲ್ಲ. ಆರೋಗ್ಯವಾಗಿರುವೆ. ಸಾಹೇಬರು ಚೆನ್ನಾಗಿದ್ದಾರೆಯೇ ಗಫೂರ್''

"ಅವರಿಗೇನು ಸಾಮಿ–ಮಾರಾಯರು."

"ಅಮ್ಮಾವರು ಹೇಗಿದ್ದಾರೆ ಗಫೂರ್"

ಪ್ರಶ್ನೆ ಕೇಳುವಾಗಲೇ ಶ್ರೀನಿವಾಸನ ಗಂಟಲುಬ್ಬಿ ಬಂತು. ಗಫೂರ್ ನಿಟ್ಟುಸಿರುಬಿಟ್ಟು

"ಸುಮ್ಮನೆ ಅಳ್ತಾರೆ ಸಾಮಿ. ಯಾರು ಸಮಾಧಾನ ಹೇಳಿದರೂ ಕೇಳಲ್ಲ. ಒಣಗಿ ಕಡ್ಡಿಯಾಗಿ ಹೋಗಿದ್ದಾರೆ. ಸ್ವಾಮಿ–ಒಂದು ಸಲ ನೀವು ಬಂದು ಅಮ್ಮಾವರನ್ನು ಸಮಾಧಾನ ಮಾಡಬಾರದೇ ?"

"ಆ ಮನೆಗೆ ನಾನು ಕಾಲಿಡುವುದಿಲ್ಲ ಗಫೂರ್."

"ಹೋಗಲಿ–ನೀವು ಎಲ್ಲಿರುವಿರಿ ಹೇಳಿ. ಅಲ್ಲೀಗೆ ನಾನು ಅಮ್ಮಾವರನ್ನು ಕರೆದುಕೊಂಡು ಬರುತ್ತೇನೆ. ನಾನು ಯಾರನ್ನು ಕೇಳಿದರೂ ನಿಮ್ಮ ಪತ್ತೆ ಸಿಕ್ಕಲಿಲ್ಲ."

ಶ್ರೀನಿವಾಸ ಅನುಮಾನಿಸುತ್ತ ನಿಂತ. ಗಫೂರ್ ಅದನ್ನು ತಿಳಿದು ಕೊಂಡು

"ನನ್ನ ವಿಚಾರ ಸಂಶಯ ಪಡಬೇಡಿ ಹುಜೂರ್. ನಾನು ನಿಮ್ಮ ಗುಲಾಮು. ನಮ್ಮಂಥ ಬಡವರಿಗಾಗಿ ನೀವು ಮಾಡಿರುವ ಕುರಬಾನಿ ನಾನು ಮರೆತೇನೇ ? ನಾನೂ ಬಡವ ಹುಜೂರ್–ನೀಯತ್ತೇ ನಮ್ಮ ಜಾತಿಯಲ್ಲಿ ದೇವರು."

ಶ್ರೀನಿವಾಸ ವಿಶ್ವಾಸದಿಂದ ಗಫೂರನ ಹೆಗಲ ಮೇಲೆ ಕೈಹಾಕಿ

“ನಿನ್ನ ಮೇಲೆ ಅನುಮಾನಪಡಲಿಲ್ಲ ಗಫೂರ್‌ಭಾಯ್. ನಾನಿರುವ ಸ್ಥಳ ಯಾರಿಗೂ ತಿಳಿಯಬಾರದೆಂದು ಮುನಿಸ್ವಾಮಿಯವರು ಕಟ್ಟಾಜ್ಞೆ ವಿಧಿಸಿದ್ದಾರೆ. ಅದಕ್ಕಾಗಿ ಯೋಚಿಸಿದೆ. ಚಿಂತೆಯಿಲ್ಲ ಬಾ.”

ಎಂದ. ಗಫೂರ್

“ಕಾರಿದೆ. ಅದರಲ್ಲಿಯೇ ಹೋಗೋಣ.”

ಎಂದು ಕಾರಿನಲ್ಲಿ ಶ್ರೀನಿವಾಸನನ್ನು ಕೂಡಿಸಿಕೊಂಡು ಅವನ ನಿವಾಸದ ಬಳಿ ಬಂದ. ಗಫೂರ್ ಕಾರನ್ನು ಹೊರಗೆ ನಿಲ್ಲಿಸಿ ಶ್ರೀನಿವಾಸನೊಂದಿಗೆ ಒಳಗೆ ಹೋಗಿ ನಿಂತ.

“ಕುಳಿತುಕೋ ಗಫೂರ್. ನಾವೀಗ ಸ್ಥಾಪಿಸಲು ಹೊರಟಿರುವುದು ಜನತೆಯ ರಾಜ್ಯ, ಅದರಲ್ಲಿ ನೀನೂ ನಾನು ಸಮಾನರು. ನಾನು ಊಟ ಮಾಡುತ್ತೇನೆ–ನೀನೂ ನನ್ನ ಜತೆ ಬಿಸ್ಮಿಲ್ಲಾ ಮಾಡಿಬಿಡು.’’

ಶ್ರೀನಿವಾಸ ಬಂದುದನ್ನು ಕಂಡು ಕಣ್ಣನ್ ಸ್ಟೋವ್ ಹಚ್ಚಿ ಕಾಫಿ ಮಾಡಿದ. ಬ್ರೆಡ್ಡು, ಬಾಳೆಯಹಣ್ಣು, ಎರಡು ಗ್ಲಾಸು ಕಾಫಿ ತಂದು ಶ್ರೀನಿವಾಸನ ಮುಂದಿಟ್ಟ. ಗಫೂರ್ ಅವನ ಊಟದ ವೈಖರಿ ಕಂಡು

“ಇದೇನು ಊಟ ಸಾಮಿ.”

“ಇಷ್ಟು ಊಟ ನಮ್ಮ ದೇಶದಲ್ಲಿ ಎಷ್ಟು ಜನಕ್ಕೆ ಸಿಕ್ಕುತ್ತದೆ ಗಫೂರ್. ತೆಗೆದುಕೋ”

ಎಂದು ಬ್ರೆಡ್ಡನ್ನು ಅವನಿಗಷ್ಟು ಹರಿದುಕೊಟ್ಟು, ಬಾಳೆಯಹಣ್ಣಿನ ತಾಟನ್ನು ಅವನ ಮುಂದೆ ಸರಿಸಿದ. ಇಬ್ಬರೂ ಉಪಾಹಾರ ಆರಂಭಿಸಿದರು– ಶ್ರೀನಿವಾಸ ಬ್ರೆಡ್ಡನ್ನು ಕಾಫಿಯಲ್ಲಿ ಅದ್ದಿ ತಿನ್ನುತ್ತಾ

“ಹೀಗೆಲ್ಲಿ ಹೋಗಿದ್ದೆ ಗಫೂರ್. ಇಷ್ಟು ಹೊತ್ತಿನಲ್ಲಿ.”

“ಇಲ್ಲೇ ಹೋಗಿದ್ದೆ ಸಾಮಿ–ಸಾಹೇಬರನ್ನು ಬಿಟ್ಟು ಬರಬೇಕಾಗಿತ್ತು”

“ಅವರು ಇಲ್ಲಿಗೆ ಬಂದಿದ್ದಾರೆಯೇ ? ಯಾರ ಮನೆಗೆ ?”

ಗಫೂರ್ ಶ್ರೀನಿವಾಸನನ್ನು ಕುತೂಹಲದಿಂದ ದಿಟ್ಟಿಸಿ ನೋಡಿ

“ಇದೇನು ಸಾಮಿ–ಹೀಗೆ ಕೇಳುತ್ತೀರಿ. ನಿಮಗೆ ಗೊತ್ತೇ ಇಲ್ವಾ ?”

‘‘ಯಾವ ವಿಷಯ ?”

“ಸಾಹೇಬರ ‘ದುಸರಿ ಘರ್’ ವಿಷಯ.”

“ಏನದು ಗಫೂರ್”

"ಸುಭದ್ರಮ್ಮನ ಸಂಸಾರ ಸಾಹೇಬರದು. ಸುಭದ್ರಮ್ಮನ ಮನೆ ಕೂಡ ಸಾಹೇಬರೇ ಕಟ್ಟಿಸಿಕೊಟ್ಟದ್ದು."

"ಏನಾಡುತ್ತಿರುವೆ ಗಫೂರ್? ರಂಗಣ್ಣ ಏನಾದ?"

"ಇದ್ದಾರೆ. ಮನೆ ಕೆಲಸಕಾರ್ಯ ಎಲ್ಲಾ ನೋಡಿಕೊಳ್ಳುತ್ತಾರೆ."

ಶ್ರೀನಿವಾಸನಿಗೆ ಸಿಡಿಲು ಬಡಿದಂತಾಯಿತು. ತನ್ನ ತಂದೆಗೂ ಸುಭದ್ರೆಗೂ ಸಂಬಂಧ ಬೆಳೆದಿದೆಯೆಂಬ ಸುದ್ದಿ ಆಗಾಗ್ಗೆ ಅವನ ಕಿವಿಯ ಮೇಲೆ ಬಿದ್ದಿತ್ತು. ಸಾರ್ವಜನಿಕ ಜೀವನದಲ್ಲಿ ಇಂಥ ಅರ್ಥವಿಲ್ಲದ ಒಡಕು ಮಾತುಗಳು ಹುಟ್ಟುವುದು ಸ್ವಾಭಾವಿಕವೆಂದು ಅವನು ಅದಕ್ಕೆ ಬೆಲೆ ಕೊಟ್ಟಿರಲಿಲ್ಲ. ಆದರೆ ಗಫೂರ್ ಸುಳ್ಳು ಹೇಳಿ ಏನೂ ಸಾಧಿಸಬೇಕಾಗಿರಲಿಲ್ಲ. ಗಫೂರ್ ಜಾತಿಯಲ್ಲಿ ಮುಸಲ್ಮಾನನಾದರೂ ನೀತಿವಂತ, ಸತ್ಯಸಂಧ, ಧರ್ಮ ಭೀರು.

"ಅಮ್ಮಾವರಿಗೆ ಈ ವಿಷಯ ಗೊತ್ತೇ ಗಫೂರ್?"

"ಗೊತ್ತಿಲ್ಲದೆ ಇರುವುದು ಹೇಗೆ ಸಾಧ್ಯ ಹುಜೂರ್"

"ಅಯ್ಯೋ!" ಎಂದು ಶ್ರೀನಿವಾಸ ಚೀತ್ಕರಿಸಿದ.

"ಇದು ಸೈತಾನರ ಜಗತ್ತು ಸರ್ಕಾರ್. ಇದರಲ್ಲಿ ನಿಮ್ಮಂಥ...."

ಗಫೂರನ ಬಾಯಲ್ಲಿಯೂ ಮಾತು ಹೊರಡಲಿಲ್ಲ.

ಹೊತ್ತು ಮೀರುತ್ತ ಬಂದಿತ್ತು. ಶ್ರೀನಿವಾಸ ಸೋತು, ಹಾಸಿಗೆಯ ಮೇಲೆ ಹಾಗೆ ಮಲಗಿದ. ಕಣ್ಣನ್ ಬಂದು ಹೊರಡಲು ವೇಳೆಯಾಯಿತೆಂದು ಗಫೂರನಿಗೆ ಸೂಚನೆಯಿತ್ತ.

## ೪೯

ಕಾಯಿದೆಭಂಗದ ಸುದ್ದಿ ಹೊರಬಿದ್ದ ಕೂಡಲೆ ಸರ್ಕಾರ ವೃತ್ತಪತ್ರಿಕೆಗಳ ಮೇಲೆ ಒಂದು ಅವಸರದ ಸುಗ್ರೀವಾಜ್ಞೆ ಹೊರಡಿಸಿ ಅವುಗಳ ಬಾಯಿ ಕಟ್ಟಿತು. ಸರ್ಕಾರದ ಮುಖ ಪತ್ರಿಕೆಗಳಂತಿದ್ದ ಕೆಲವು ಪತ್ರಿಕೆಗಳು ಮಾತ್ರ ಪ್ರಕಟವಾಗುತ್ತಿದ್ದವು. ಅವು ಹೋರಾಟದ ಬಗ್ಗೆ ವಿಗಡ ಸುದ್ದಿಗಳನ್ನು ಪ್ರಕಟಿಸಿ ಜನತೆಯಲ್ಲಿ, ಹೋರಾಟಗಾರರ ಬಗ್ಗೆ ಅಸಂತೋಷ ಹುಟ್ಟಿಸಲು ಪ್ರಯತ್ನಿಸಿದವು.

ಸ್ವರಾಜ್ಯಪಕ್ಷದ ಕ್ರಿಯಾಸಮಿತಿಯ ಸದಸ್ಯರು ಶ್ರೀನಿವಾಸನನ್ನು ಎಲ್ಲ ವಿಷಯಗಳಲ್ಲಿಯೂ ಸಲಹೆ ಕೇಳಲಾರಂಭಿಸಿದರು. ಹೋರಾಟದ ಆರಂಭದ ದಿನ ನಿಶ್ಚಯಿಸಿ ಆ ದಿನ, ಸರ್ಕಾರ ಜಾರಿಮಾಡಿದ ಸೆಕ್ಷನ್ ೧ಳಳ ಮುರಿಯ ಬೇಕೆಂದು ಶ್ರೀನಿವಾಸ ಸಲಹೆಯಿತ್ತ.

ಆಗಸ್ಟ್ ೧೫, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಬಂದ ದಿನವಾದ್ದರಿಂದ ಅದನ್ನೇ ನಿಶ್ಚಯಿಸಲಾಯಿತು. ಎಲ್ಲರೂ ಒಟ್ಟಿಗೆ ಸೆರೆಮನೆ ಸೇರಿದರೆ ಚಳುವಳಿ ಅನಾಯಕವಾಗುವುದೆಂದು ಪಕ್ಷದ ಸದಸ್ಯರು, ವಿದ್ಯಾರ್ಥಿ ಮುಖಂಡರು, ಕಾರ್ಮಿಕ ಮುಖಂಡರನ್ನು ತಂಡತಂಡವಾಗಿ ವಿಂಗಡಿಸಿ ಅವರು ಕ್ರಮವಾಗಿ ಕಾಯಿದೆಭಂಗ ಮಾಡತಕ್ಕದೆಂದು ನಿರ್ಧರಿಸ ಲಾಯಿತು.

ಮಿಂಚಿನ ವೇಗದಲ್ಲಿ ಹೋಗುತ್ತಿದ್ದ ರಾಜಕೀಯ ಪರಿಸ್ಥಿತಿಗೆ ಹೊಂದಿ ಕೊಳ್ಳುವುದು ಸೂರಪ್ಪನವರಿಗೆ ಸಾಧ್ಯವಾಗಲಿಲ್ಲ. ನ್ಯಾಯವಿಧಾಯಕ ಸಭೆಯಲ್ಲಿ ಕುಳಿತು ರಾಜಕೀಯ ಸೂತ್ರಗಳನ್ನು ಸುಲಭವಾಗಿ ಆಡಿಸಬಹು ದೆಂದು ಅವರು ಭಾವಿಸಿದ್ದರು. ಆದರೆ 'ಸ್ವರಾಜ್ಯ ಪಕ್ಷ'ದ ಕ್ರಿಯಾಸಮಿತಿ ಉಗ್ರ ಕಾರ್ಯಕ್ರಮಕ್ಕೆ ಸಿದ್ಧವಾಗಿ ಸೂರಪ್ಪನವರ ಬಣ್ಣವನ್ನು ಬಯಲಿಗೆ ಹಾಕಿತು.

ಸೂರಪ್ಪನವರು "ಮೊದಲು ಕಾಯಿದೆಭಂಗ" ವನ್ನಾರಂಭಿಸಬೇಕೆಂದು ಪಂಚರ ಕ್ರಿಯಾಸಮಿತಿ ಅವರಿಗೆ ನಿರೂಪ ಕಳುಹಿಸಿತು.

ಪುಟ್ಟಣ್ಣ ಅರಿತ ನುರಿತ ಕೆಲಸಗಾರರಾಗಿದ್ದರು. ಲೋಕಮಾನ್ಯ ತಿಲಕರು ಅರೆಸ್ಟ್ ಆದಾಗ ಶಾಲೆಯಲ್ಲಿ ಓದುತ್ತಿದ್ದ ಪುಟ್ಟಣ್ಣ ಮೊದಲನೆಯ ಸಾರಿಗೆ ವಿದ್ಯಾರ್ಥಿಗಳ 'ಹರಿತಾಳ' ವ್ಯವಸ್ಥೆಮಾಡಿದ್ದರು. ಅಂದಿನಿಂದ ದೇಶದ ರಾಜಕೀಯ ಚಲನಗಳಲ್ಲಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸಾಕಷ್ಟು ಅನುಭವ ಪಡೆದುಕೊಂಡಿದ್ದರು.

ಪುಟ್ಟಣ್ಣ ದಕ್ಷ ಕೆಲಸಗಾರರಾಗಿದ್ದಂತೆ ಉದಾರಿಗಳೂ ಆಗಿದ್ದರು. ರಾಜಕೀಯ ಚಟುವಟಿಕೆಗಳಿಗೆ ಸಾರ್ವಜನಿಕರಿಂದ ಹಣವೆತ್ತಿ ನಾಯಕರು ಅದರಲ್ಲಿ ಒಂದು ಭಾಗ ಚಳುವಳಿಗೆ ಉಪಯೋಗಿಸಿ, ಹೆಚ್ಚು ಭಾಗ ಸ್ವಾಹಾ ಮಾಡುತ್ತಿದ್ದುದು ಪುಟ್ಟಣ್ಣನವರಿಗೆ ಸಂಬೀಳುತ್ತಿರಲಿಲ್ಲ. ಕೈಯಿಂದ ಖರ್ಚು ಮಾಡಬೇಕು ಎಂದು ಅವರು ಹೇಳುತ್ತಿದ್ದುದಲ್ಲದೆ ಖರ್ಚುಮಾಡಿ ಇತರರಿಗೆ

ಮೆಲ್ಪಂಕ್ತಿ ಹಾಕಿಕೊಟ್ಟಿದ್ದರು. ಅವರ ಆಶ್ರಯದಲ್ಲಿದ್ದ ಯಾರೂ ಒಪ್ಪತ್ತೂ ಉಪವಾಸವಿರಲು ಸಾಧ್ಯವಿರಲಿಲ್ಲ, ಚಳುವಳಿಗಳಲ್ಲಿ ಕಾರಾಗೃಹ ಸೇರಿದ ಕೆಲಸಗಾರರ ಮನೆಯವರ ಕಷ್ಟಸುಖ ವಿಚಾರಿಸಿ ಅವರ ಉದರಂಭರಣಕ್ಕೆ ನೆರವಾಗುತ್ತಿದ್ದರು.

ಸ್ವರಾಜ್ಯಪಕ್ಷದ ಕೆಲಸಗಾರರಿಗೆ ಪುಟ್ಟಣ್ಣನವರೆಂದರೆ ಪಂಚಪ್ರಾಣ. ಒಮ್ಮೊಮ್ಮೆ ಪುಟ್ಟಣ್ಣನವರು ಒರಟು ಮಾತನಾಡಿ, ಜತೆಗಾರರ ಮನ ನೋಯುವಂತೆ ಆಚರಿಸುತ್ತಿದ್ದರೂ ಅವರ ತ್ಯಾಗ, ಸೇವಾನಿಷ್ಠೆ, ಉತ್ಸಾಹ ಕಂಡು ಎಲ್ಲರೂ ಅವರ ಬಗ್ಗೆ ಗೌರವ ತಳೆದಿದ್ದರು.

ಪುಟ್ಟಣ್ಣ ಹುಟ್ಟಾ ಶ್ರೀಮಂತರು. ತಿರುಮಕೂಡಲು ನರಸೀಪುರದ ಸುತ್ತಮುತ್ತಲಿದ್ದ ನೂರಾರು ಎಕರೆ ಜಮೀನು ಅವರದಾಗಿತ್ತು. ಅವರ ಮನೆಯವರು ಲೇವಾದೇವಿ ಮಾಡಿ ಸಾಕಷ್ಟು ಗಳಿಸಿದ್ದರು. ಪುಟ್ಟಣ್ಣನವರ ಅಣ್ಣ ರಾಮಯ್ಯ ಮನೆ ಯೋಗಕ್ಷೇಮ ನೋಡಿಕೊಂಡು ಹೋಗುತ್ತಿದ್ದರು. ತಮ್ಮನಿಗೆ ಬೇಕು ಬೇಕಾದಾಗ ಹಣ ಕಳಿಸುವುದೊಂದೇ ಅವರಿಗೆ ಗೊತ್ತು. 'ನನ್ನ ತಮ್ಮನ್ನ ದೇಶಸೇವೆಗೆ ದತ್ತು ಕೊಟ್ಟಿದ್ದೇನೆ' ಎಂದು ರಾಮಯ್ಯ ಆಗಾಗ್ಗೆ ಹೇಳುತ್ತಿದ್ದರು. ತಾವು ಕಳುಹಿಸುತ್ತಿದ್ದ ಹಣವೆಲ್ಲವನ್ನೂ ದೇಶ ಸೇವೆಗೇ ಪುಟ್ಟಣ್ಣ ಖರ್ಚುಮಾಡುವುದಿಲ್ಲವೆಂದು ರಾಮಯ್ಯನವರಿಗೆ ಗೊತ್ತಿಲ್ಲದಿರಲಿಲ್ಲ. ಪುಟ್ಟಣ್ಣ ಉದಾರಿಯಾಗಿದ್ದಂತೆ ಮಹಾರಸಿಕನೂ ಆಗಿದ್ದ ಸಂಗತಿ ಜಗದ್ವಿಖ್ಯಾತವಾಗಿತ್ತು.

ಮನೆಯೋಚನೆ, ಹೊಟ್ಟೆಪಾಡಿನ ಚಿಂತೆ ಇಲ್ಲದ ಪುಟ್ಟಣ್ಣ ತಮ್ಮ ಕಾಲ, ಶಕ್ತಿ, ಧನವನ್ನು ಸಾರ್ವಜನಿಕ ಕೆಲಸಗಳಿಗೆ ಧಾರಾಳವಾಗಿ ಉಪ ಯೋಗಿಸುತ್ತಿದ್ದರು. ರಾಜಕಾರಣಕ್ಕೆ ಅವರು ಕಾಲಿಟ್ಟಾಗ 'ಸ್ವರಾಜ್ಯಪಕ್ಷ' ಸೇರಿದರು. ಮುಂದೆ ಪಕ್ಷದಲ್ಲಿ ಭಿನ್ನಾಭಿಪ್ರಾಯ ಹುಟ್ಟಿ ಕೆಲವು ಪ್ರಧಾನ ಸದಸ್ಯರು ಪಕ್ಷ ತ್ಯಜಿಸಿ 'ಡೆಮೋಕ್ರ್ಯಾಟಿಕ್ ಪಕ್ಷ' ಕಟ್ಟಿಕೊಂಡರೂ ಪುಟ್ಟಣ್ಣ ಸ್ವರಾಜ್ಯಪಕ್ಷದ ಕೈ ಬಿಡಲಿಲ್ಲ. ಎಲೆಕ್ಷನ್ ಸಂದರ್ಭದಲ್ಲಿ ಪಾರ್ಟಿಯ ಸದಸ್ಯರು ಸೂರಪ್ಪನವರನ್ನು ಎತ್ತಿ ಕಟ್ಟಿದಾಗಲೂ ಪುಟ್ಟಣ್ಣ ಅಸಮಾಧಾನ ಗೊಳ್ಳಲಿಲ್ಲ. ಕೌನ್ಸಿಲ್‌ನಲ್ಲಿ ಸೂರಪ್ಪನವರನ್ನು ನಾಯಕರನ್ನಾಗಿ ಆರಿಸಿದಾಗ ಪುಟ್ಟಣ್ಣ ಬೇಸರಪಟ್ಟುಕೊಂಡರು. ಆದರೆ ಅದನ್ನು ಹೊರಗೆ ತೋರ ಗೊಡಲಿಲ್ಲ.

ಸೂರಪ್ಪನವರ ರಾಜಕೀಯ ಸಾಹಸದ ಪರ್ಯವಸಾನ ಹೇಗಾಗುತ್ತ ದೆಂಬುದನ್ನು ಪುಟ್ಟಣ್ಣ ಮೊದಲೇ ಎಣಿಕೆ ಹಾಕಿಕೊಂಡಿದ್ದರು. ಇದರಲ್ಲಿ ನಾಳೆ ಈ ಹುಚ್ಚಾಟ ಮುಗಿದು ತಮ್ಮ ಕಾಲ ಆರಂಭವಾಗುವುದೆಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಈಯೆಲ್ಲ ಕಾರಣಗಳಿಂದ ಸ್ವರಾಜ್ಯಪಕ್ಷದಲ್ಲಿ ಅವರ ಮಾತು ವೇದವಾಕ್ಯವಾಗಿತ್ತು.

'ಕ್ರಿಯಾಸಮಿತಿಯ' ಅಧ್ಯಕ್ಷತೆ ಪುಟ್ಟಣ್ಣನವರಿಗೆ ಗಂಟು ಬಿದ್ದ ಮೇಲೆ ಅವರು ಎಲ್ಲ ಪಕ್ಷಗಳ ಮುಖಂಡರ ನೆರವನ್ನು ದೊರಕಿಸಿಕೊಂಡು 'ಅಂತಿಮ ಹೋರಾಟ' ಜಯಶಾಲಿಯಾಗುವಂತೆ ಮಾಡಲು ಸಿಕ್ರಿಯಿ ಸಿದರು. ಸೂರಪ್ಪನವರ ಇಮ್ಮುಖ ವ್ಯವಹಾರ ಪುಟ್ಟಣ್ಣನವರಿಗೆ ತಳ್ಳಿ ಬೇಸರವನ್ನುಂಟುಮಾಡಿತ್ತು.

ಸುಭದ್ರೆಯ ನೆರವು ಪುಟ್ಟಣ್ಣನವರಿಗೆ ಅತ್ಯಗತ್ಯವಾಗಿ ಬೇಕಾಗಿತ್ತು. ವಿದ್ಯಾರ್ಥಿಗಳು. ಕೂಲಿಕಾರರು, ಜನತೆ ಹೋರಾಟದಲ್ಲಿ ಭಾಗವಹಿಸುವಂತೆ ಸ್ತ್ರೀಯರೂ ಭಾಗವಹಿಸಿದ್ದಾರೆ ಎಂದು ತೋರಿಸಿಕೊಳ್ಳಬೇಕಾಗಿತ್ತು.

ಕೆಲವು ತಿಂಗಳಿಂದ ಸುಭದ್ರೆ 'ಸ್ವರಾಜ್ಯ ಪಕ್ಷದ' ಕಛೇರಿಯ ಬಳಿ ಸುಳಿದಿರಲಿಲ್ಲ ಪುಟ್ಟಣ್ಣ ಆಕೆಯನ್ನು ಕಂಡು ಸಹಕಾರದ ವಿಷಯ ಮಾತನಾಡಿಕೊಂಡು ಬರಲು ಸುಭದ್ರೆಯ ಮನೆಗೇ ಹೋದರು.

ಪಕ್ಷದ ಮಹಾನಾಯಕ ತನ್ನ ಮನೆಗೆ ಬಂದುದನ್ನು ಕಂಡು ಸುಭದ್ರೆಗೆ ಅತ್ಯಾನಂದವಾಯಿತು. ಅದೃಷ್ಟವಶಾತ್ ಸೂರಪ್ಪನವರೂ ಮನೆಯಲ್ಲಿರಲಿಲ್ಲ. ಕಾಫಿ ತಿಂಡಿ ವ್ಯವಸ್ಥೆ ಮಾಡುವಂತೆ ರಂಗಣ್ಣನಿಗೆ ತಿಳಿಸಿ ತಾನು ಪುಟ್ಟಣ್ಣ ನವರ ಜತೆ ಮಾತಿಗೆ ಕುಳಿತಳು.

"ಪಕ್ಷದ ಕಛೇರಿಗೆ ನೀವು ಬಂದು ಬಹಳ ದಿನಗಳಾದವು" ಎಂದರು ಪುಟ್ಟಣ್ಣ.

ಸುಭದ್ರೆ ನಸುನಗುತ್ತಾ

"ಮನುಷ್ಯ ಯೋಚಿಸುವುದೊಂದು, ದೇವರು ಮಾಡುವುದೊಂದು ಪುಟ್ಟಣ್ಣನವರೇ. ಹೇಗೆ ಬರಲಿ ಹೇಳಿ–ನನ್ನ ಸ್ಥಿತಿ ನೋಡುತ್ತಿರುವಿರಲ್ಲಾ."

"ತಪ್ಪಾಯಿತಮ್ಮ ಕ್ಷಮಿಸಿ. ಪಕ್ಷದ ಮೇಲೆ ನಿಮ್ಮ ಅಭಿಮಾನ ಕಡಿಮೆಯಾಯಿತೆಂದು ನಾನು ತಪ್ಪು ಭಾವಿಸಿದೆ."

"ಅದು ಎಂದಿಗೂ ಶಕ್ಯವಿಲ್ಲ. ಪಕ್ಷಕ್ಕಾಗಿ ನಾನು ಪ್ರಾಣ ಕೊಡಲು ಸಿದ್ಧಳಾಗಿದ್ದೇನೆ."

"ಹೋರಾಟದ ಕೊನೆ ತೀರ್ಮಾನವಾಯಿತು. ಮಹಿಳೆಯರ ಸಹಕಾರ ಬೇಕಲ್ಲಾ."

"ನಿಜ–ನಾನೇನು ಮಾಡಬಹುದು ಹೇಳಿ. ಅವಶ್ಯಕವಾಗಿ ಮಾಡುತ್ತೇನೆ."

"ಕೂಲಿಕಾರರ ಹೆಣ್ಣು ಮಕ್ಕಳು ಬಂದು ಭಾಗವಹಿಸುತ್ತಾರೆ. ಇತರರೂ ಇದ್ದರೆ ಚೆನ್ನು."

"ಶಂಕರಮ್ಮ, ಚೆನ್ನಮ್ಮ, ಜಾನಕಿ ಬರುತ್ತಾರೆ."

"ನೀವೆ ಅವರಿಗೆ ಒಂದು ಮಾತು ಹೇಳಿ ಕಳಿಸಿಬಿಡಿ."

"ಆಗಬಹುದು, ನಾನೀಗ ನಿಮ್ಮೊಂದಿಗೆ ಸಹಕರಿಸಲು ಸಾಧ್ಯವಿಲ್ಲವಲ್ಲಾ ಎಂದು ತುಂಬಾ ವಿಷಾದಪಡುತ್ತೇನೆ."

"ಈಗ ನೀವು ಯಾವ ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನಿರಾತಂಕವಾಗಿ ಪ್ಕ ಕಳೆದುಕೊಂಡು ಪುತ್ರರತ್ನವೆನ್ನೆತ್ತಿಕೊಂಡು ಬನ್ನಿ."

"ನಿಮ್ಮ ಆಶೀರ್ವಾದ."

ರಂಗಣ್ಣ ತಿಂಡಿ ಕಾಫಿ ತಂದು ಪುಟ್ಟಣ್ಣನವರಿಗಿತ್ತ

"ಇವರು ಯಾರು ?" ಎಂದು ಪುಟ್ಟಣ್ಣ ಕೇಳಿದರು.

"ಇವರೇ ನನ್ನ ಯಜಮಾನರು"

ಎಂದು ಸುಭದ್ರೆ ನುಡಿದಳು. ತುಟಿ ಮೀರಿ ಬರುತ್ತಿದ್ದ ನಗೆಯನ್ನಡಗಿಸಿಕೊಂಡು ಪುಟ್ಟಣ್ಣ ಪ್ಲೇಟಿನಲ್ಲಿದ್ದ ಉಪ್ಪಿಟ್ಟನ್ನು ಬಾಯಿಗೆ ಹಾಕಿಕೊಂಡರು.

ಅವರ ಉಪಹಾರ ಮುಗಿದಮೇಲೆ ರಂಗಣ್ಣನೇ ಅವರನ್ನು ಕಾರಿನವರೆಗೆ ಮುಟ್ಟಿಸಿ ಬಂದ.

ಪುಟ್ಟಣ್ಣನವರ ಕಾರು ಎದುರಿಗೆ ಹೋದುದನ್ನು ಕಂಡು ಸೂರಪ್ಪನವರು ಮನೆಯ ಒಳಕ್ಕೆ ಪ್ರವೇಶಿಸಿದರು. ಅವರ ಮುಖದಲ್ಲಿ ಚಿಂತೆ ಮೂಡಿದ್ದುದನ್ನು ಸುಭದ್ರೆ ಕೂಡಲೇ ಗ್ರಹಿಸಿ

"ಪುಟ್ಟಣ್ಣನವರು ಬಂದಿದ್ದರು" ಎಂದು ಹೇಳಿದಳು

"ಏನಂತೆ !"

ಸೂರಪ್ಪನವರ ರಾಜಕೀಯ ಸಾಹಸದ ಪರ್ಯವಸಾನ ಹೇಗಾಗುತ್ತ ದೆಂಬುದನ್ನು ಪುಟ್ಟಣ್ಣ ಮೊದಲೇ ಎಣಿಕೆ ಹಾಕಿಕೊಂಡಿದ್ದರು. ಇದರಲ್ಲಿ ನಾಳೆ ಈ ಹುಚ್ಚಾಟ ಮುಗಿದು ತಮ್ಮ ಕಾಲ ಆರಂಭವಾಗುವುದೆಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಈಯೆಲ್ಲ ಕಾರಣಗಳಿಂದ ಸ್ವರಾಜ್ಯಪಕ್ಷದಲ್ಲಿ ಅವರ ಮಾತು ವೇದವಾಕ್ಯವಾಗಿತ್ತು.

'ಕ್ರಿಯಾಸಮಿತಿಯ' ಅಧ್ಯಕ್ಷತೆ ಪುಟ್ಟಣ್ಣನವರಿಗೆ ಗಂಟು ಬಿದ್ದ ಮೇಲೆ ಅವರು ಎಲ್ಲ ಪಕ್ಷಗಳ ಮುಖಂಡರ ನೆರವನ್ನು ದೊರಕಿಸಿಕೊಂಡು 'ಅಂತಿಮ ಹೋರಾಟ' ಜಯಶಾಲಿಯಾಗುವಂತೆ ಮಾಡಲು ನಿಶ್ಚಯಿ ಸಿದರು. ಸೂರಪ್ಪನವರ ಇಮ್ಮುಖ ವ್ಯವಹಾರ ಪುಟ್ಟಣ್ಣನವರಿಗೆ ತಲೆ ಬೇಸರವನ್ನುಂಟುಮಾಡಿತ್ತು.

ಸುಭದ್ರೆಯ ನೆರವು ಪುಟ್ಟಣ್ಣನವರಿಗೆ ಅತ್ಯಗತ್ಯವಾಗಿ ಬೇಕಾಗಿತ್ತು. ವಿದ್ಯಾರ್ಥಿಗಳು, ಕೂಲಿಕಾರರು, ಜನತೆ ಹೋರಾಟದಲ್ಲಿ ಭಾಗವಹಿಸುವಂತೆ ಸ್ತ್ರೀಯರೂ ಭಾಗವಹಿಸಿದ್ದಾರೆ ಎಂದು ತೋರಿಸಿಕೊಳ್ಳಬೇಕಾಗಿತ್ತು.

ಕೆಲವು ತಿಂಗಳಿಂದ ಸುಭದ್ರೆ 'ಸ್ವರಾಜ್ಯ ಪಕ್ಷದ' ಕಛೇರಿಯ ಬಳಿ ಸುಳಿದಿರಲಿಲ್ಲ ಪುಟ್ಟಣ್ಣ ಆಕೆಯನ್ನು ಕಂಡು ಸಹಕಾರದ ವಿಷಯ ಮಾತನಾಡಿಕೊಂಡು ಬರಲು ಸುಭದ್ರೆಯ ಮನೆಗೇ ಹೋದರು.

ಪಕ್ಷದ ಮಹಾನಾಯಕ ತನ್ನ ಮನೆಗೆ ಬಂದುದನ್ನು ಕಂಡು ಸುಭದ್ರೆಗೆ ಅತ್ಯಾನಂದವಾಯಿತು. ಅದೃಷ್ಟವಶಾತ್ ಸೂರಪ್ಪನವರೂ ಮನೆಯಲ್ಲಿರಲಿಲ್ಲ. ಕಾಫಿ ತಿಂಡಿ ವ್ಯವಸ್ಥೆ ಮಾಡುವಂತೆ ರಂಗಣ್ಣನಿಗೆ ತಿಳಿಸಿ ತಾನು ಪುಟ್ಟಣ್ಣ ನವರ ಜತೆ ಮಾತಿಗೆ ಕುಳಿತಳು.

"ಪಕ್ಷದ ಕಛೇರಿಗೆ ನೀವು ಬಂದು ಬಹಳ ದಿನಗಳಾದವು" ಎಂದರು ಪುಟ್ಟಣ್ಣ.

ಸುಭದ್ರೆ ನಸುನಗುತ್ತಾ

"ಮನುಷ್ಯ ಯೋಚಿಸುವುದೊಂದು, ದೇವರು ಮಾಡುವುದೊಂದು ಪುಟ್ಟಣ್ಣನವರೇ. ಹೇಗೆ ಬರಲಿ ಹೇಳಿ—ನನ್ನ ಸ್ಥಿತಿ ನೋಡುತ್ತಿರುವಿರಲ್ಲಾ."

"ತಪ್ಪಾಯಿತಮ್ಮ ಕ್ಷಮಿಸಿ. ಪಕ್ಷದ ಮೇಲೆ ನಿಮ್ಮ ಅಭಿಮಾನ ಕಡಿಮೆಯಾಯಿತೆಂದು ನಾನು ತಪ್ಪು ಭಾವಿಸಿದೆ."

"ಅದು ಎಂದಿಗೂ ಶಕ್ಯವಿಲ್ಲ. ಪಕ್ಷಕ್ಕಾಗಿ ನಾನು ಪ್ರಾಣ ಕೊಡಲು ಸಿದ್ಧಳಾಗಿದ್ದೇನೆ."

"ಹೋರಾಟದ ಕೊನೆ ತೀರ್ಮಾನವಾಯಿತು. ಮಹಿಳೆಯರ ಸಹಕಾರ ಬೇಕಲ್ಲಾ."

"ನಿಜ–ನಾನೇನು ಮಾಡಬಹುದು ಹೇಳಿ. ಅವಶ್ಯಕವಾಗಿ ಮಾಡುತ್ತೇನೆ."

"ಕೂಲಿಕಾರರ ಹೆಣ್ಣು ಮಕ್ಕಳು ಬಂದು ಭಾಗವಹಿಸುತ್ತಾರೆ. ಇತರರೂ ಇದ್ದರೆ ಚೆನ್ನ."

"ಶಂಕರಮ್ಮ, ಚೆನ್ನಮ್ಮ, ಜಾನಕಿ ಬರುತ್ತಾರೆ."

"ನೀವೆ ಅವರಿಗೆ ಒಂದು ಮಾತು ಹೇಳಿ ಕಳಿಸಿಬಿಡಿ."

"ಆಗಬಹುದು, ನಾನೀಗ ನಿಮ್ಮೊಂದಿಗೆ ಸಹಕರಿಸಲು ಸಾಧ್ಯವಿಲ್ಲವಲ್ಲಾ ಎಂದು ತುಂಬಾ ವಿಷಾದಪಡುತ್ತೇನೆ."

"ಈಗ ನೀವು ಯಾವ ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನಿರಾತಂಕವಾಗಿ ವ್ಯ ಕಳೆದುಕೊಂಡು ಪುತ್ರರತ್ನವೆನ್ನೆತ್ತಿಕೊಂಡು ಬನ್ನಿ."

"ನಿಮ್ಮ ಆಶೀರ್ವಾದ."

ರಂಗಣ್ಣ ತಿಂಡಿ ಕಾಫಿ ತಂದು ಪುಟ್ಟಣ್ಣನವರಿಗಿತ್ತ

"ಇವರು ಯಾರು ?" ಎಂದು ಪುಟ್ಟಣ್ಣ ಕೇಳಿದರು.

"ಇವರೇ ನನ್ನ ಯಜಮಾನರು"

ಎಂದು ಸುಭದ್ರೆ ನುಡಿದಳು. ಕುಟಿ ಮಾರಿ ಬರುತ್ತಿದ್ದ ನಗೆಯನ್ನಡಗಿಸಿಕೊಂಡು ಪುಟ್ಟಣ್ಣ ಪ್ಲೇಟಿನಲ್ಲಿದ್ದ ಉಪ್ಪಿಟ್ಟನ್ನು ಬಾಯಿಗೆ ಹಾಕಿಕೊಂಡರು.

ಅವರ ಉಪಹಾರ ಮುಗಿದಮೇಲೆ ರಂಗಣ್ಣನೇ ಅವರನ್ನು ಕಾರಿನವರೆಗೆ ಮುಟ್ಟಿಸಿ ಬಂದ.

ಪುಟ್ಟಣ್ಣನವರ ಕಾರು ಎದುರಿಗೆ ಹೋದುದನ್ನು ಕಂಡು ಸೂರಪ್ಪನವರು ಮನೆಯ ಒಳಕ್ಕೆ ಪ್ರವೇಶಿಸಿದರು. ಅವರ ಮುಖದಲ್ಲಿ ಚಿಂತೆ ಮೂಡಿದ್ದುದನ್ನು ಸುಭದ್ರೆ ಕೂಡಲೇ ಗ್ರಹಿಸಿ

"ಪುಟ್ಟಣ್ಣನವರು ಬಂದಿದ್ದರು" ಎಂದು ಹೇಳಿದಳು

"ಏನಂತೆ !"

"ಕೊನೆಯ ಹೋರಾಟದಲ್ಲಿ ತನ್ನ ಪಾತ್ರವೇನು ಎಂದು ಕೇಳಲು ಬಂದಿದ್ದರು.''

"ಸರಿ ನೀನು ಏನು ಹೇಳಿದೆ ?"

"ಈಗ ಇನ್ನೇನು ಹೇಳಲು ಸಾಧ್ಯ ನಾನು ಬರಲು ಸಾಧ್ಯವಿಲ್ಲವೆಂದು ತಿಳಿಸಿದೆ. ಕ್ರಿಯಾಸಮಿತಿಯು ನಿರೂಪದ ವಿಷಯ ಏನು ನಿರ್ಧರಿಸಿದಿರಿ ?"

"ಏನು ನಿರ್ಧರಿಸುವುದೋ ನನಗೊಂದೂ ತಿಳಿಯದಾಗಿದೆ."

"ಇದು ಡೋಲಾಯಮಾನ ಮಾಡುವ ವೇಳೆಯಲ್ಲ. ಯಾವದಾದರೂ ಒಂದನ್ನು ಇತ್ಯರ್ಥ ಮಾಡಿಬಿಡಬೇಕು.''

"ಪುಟ್ಟಣ್ಣ ಕೇಳಿದರೇನು ?"

"ನಿಮ್ಮ ವಿಷಯ ಅವರು ಪ್ರಸ್ತಾಪವೇ ಮಾಡಲಿಲ್ಲ. ನಾನೇ ಕೇಳುತ್ತಿದ್ದೇನೆ"

"ನಾನು ಏನು ಮಾಡಬೇಕೆಂದು ನಿನ್ನ ಮನಸ್ಸಿನಲ್ಲಿದೆ ಹೇಳು."

"ಅದನ್ನು ನಾನು ಹೇಗೆ ಹೇಳಲಿ. ನಿಮಗೆ ಯಾವುದು ಸೂಕ್ತವೆಂದು ತೋರುವುದೋ ಅದನ್ನು ನೀವೇ ಮಾಡುವಿರಿ. ನಿಮಗೆ ಬುದ್ಧಿವಾದ ಹೇಳುವಷ್ಟು ನಾನು ಪ್ರೌಢಳೇ ?"

"ಈ ದೊಂಬಿ ಜಗಳ ಸೇರುವುದಕ್ಕೆ ನನಗೆ ಇಷ್ಟವಿಲ್ಲ. ಇದರ ಪರಿಣಾಮವೇನಾಗುವುದೆಂದು ನಾನು ಚೆನ್ನಾಗಿ ಬಲ್ಲೆ ?"

"ಪರಿಣಾಮ ಏನಾಗುತ್ತದೆ ?"

"ಸರ್ಕಾರ ಇವರ ಮೂಳೆ ಮುರಿದು ಜೈಲು ತುಂಬುತ್ತಾರೆ. ಚಳುವಳಿ ತಾನೇ ತಾನಾಗಿ ಮಂಜಿನಂತೆ ಕರಗಿ ಹೋಗುತ್ತದೆ."

"ಹಿಂದಿನ ಚಳುವಳಿಗಳು ಹಾಗಾಗಲಿಲ್ಲವಲ್ಲ. ಅಜೇಯವಾಗಿದ್ದ ಸಾರ್ವಭೌಮ ಸರ್ಕಾರ ಕೂಡ ತಲೆಬಾಗಿಸಬೇಕಾಯಿತು."

"ಅದು ಬ್ರಿಟಿಷ್ ಇಂಡಿಯಾದ ಮಾತಾಯಿತು. ಇದು ಸಂಸ್ಥಾನ. ನಮ್ಮ ಜನಗಳ ಹಣೇಬರಹ ನಾನು ಕಾಣೆನೇ ?"

"ಒಂದು ವೇಳೆ ಹೋರಾಟಕ್ಕೆ ಜಯ ದೊರೆತರೆ ?"

"ಸೂರ್ಯ ಪಶ್ಚಿಮದಲ್ಲಿ ಹುಟ್ಟಿದಷ್ಟೇ ಆಶ್ಚರ್ಯಕರವಾದ ವಿಷಯವಾಗುತ್ತದೆ."

"ಹೋರಾಟ ಸೇರಬಾರದೆಂಬುದೇ ನಿಮ್ಮ ಕೊನೆಯ ನಿರ್ಧಾರವೇ?"

"ನಿಸ್ಸಂದೇಹವಾಗಿ-ಆ ಬಗ್ಗೆ ನಾನು ಕೂಲಂಕಷವಾಗಿ ವಿಚಾರ ಮಾಡಿದ್ದೇನೆ."

"ಸರಿ"

ಎಂದಂದು ಸುಭದ್ರಾ ಸುಮ್ಮನಾದಳು. ಅವಳ ಮನಸ್ಸು ಅವ್ಯಕ್ತ ಅಸಂತೋಷ, ಆಗ್ರಹ, ಜಿಗುಪ್ಸೆಗಳಿಂದ ತುಂಬಿಹೋಯಿತು.

ಅವಳನ್ನು ಹರ್ಷಗೊಳಿಸುವ ಸಾಹಸಕ್ಕೆ ಅಂದು ಸೂರಪ್ಪನವರು ಕೈಹಾಕಲಿಲ್ಲ.

## ೫೦

ಅಗಸ್ಟು ೧೫ ಬಂದೇಬಿಟ್ಟಿತು. ವಿದ್ಯಾರ್ಥಿಗಳು ಶಾಲೆಬಿಟ್ಟು ಹೊರಗೆ ನಿಂತರು; ಕೂಲಿಕಾರರು ಮಿಲ್ಲುಗಳ ಕಡೆ ಹಾಯಲಿಲ್ಲ; ಅಲ್ಲಲ್ಲಿ ಕಛೇರಿಯ ನೌಕರರು ಕೂಡ ಕಛೇರಿಗೆ ಶರಣುಹೊಡೆದುಬಿಟ್ಟರು. ಅಂಗಡಿ ಬಾಗಿಲು ಹಾಕುವವರಿಗೆ ಲೈಸನ್ಸ್ ರದ್ದುಮಾಡುವುದಾಗಿ ಸರ್ಕಾರ ಅಂಜಿಸಿತು. ಒಮ್ಮೆ ಧೈರ್ಯವಾಗಿ ನಿಂತು ಸರ್ಕಾರ ಎದುರಿಸಿ ನೋಡಿಯೇ ಬಿಡುವ, ಏನಾದರೂ ಆಗಿಹೋಗಲಿ ಎಂಬ ಮನೋಭಾವ ಜನತೆಯಲ್ಲಿ ಬೆಳೆದಿತ್ತು.

ನಗರದ ಅನೇಕ ಭಾಗ ಸ್ಮಶಾನದಂತೆ ಕಾಣುತ್ತಿತ್ತು. ಜನ ತಮ್ಮ ತಮ್ಮ ವಿಸ್ತರಣಗಳಲ್ಲಿ ಗುಂಪು ಗುಂಪಾಗಿ ನಿಂತಿರುತ್ತಿದ್ದರು. ಹೆಚ್ಚು ಗಲಭೆಯಾಗಬಹುದೆಂದು ಭಯದಿಂದ ಸರ್ಕಾರ 'ಕರ್ಫ್ಯೂ ಆಜ್ಞೆ' ವಿಧಿಸಿತು. ರಸ್ತೆಯಲ್ಲಿ ಎಲ್ಲಿ ನೋಡಿದರೂ ಪೋಲೀಸಿನವರು, ಮಿಲಿಟರಿಯವರ ಓಡಾಟವೇ ಓಡಾಟ, ಪೋಲೀಸ್ ವ್ಯಾನುಗಳ ಹಾರಾಟವೇ ಹಾರಾಟ.

ಕರ್ಫ್ಯೂಮೀರಿದವರನ್ನು ಪೋಲೀಸಿನವರು ಸಾಯುವಂತೆ ಹೊಡೆಯುತ್ತಿದ್ದರು. ಕರ್ಫ್ಯೂ ಆಜ್ಞೆ ಜಾರಿಯಲ್ಲಿದೆಯೆಂದು ತಿಳಿಯದು. ಅನೇಕ ನಿರಪರಾಧಿ ಪ್ರಜೆಗಳು ಪೋಲೀಸಿನವರ ದುರಾಗ್ರಹಕ್ಕೆ ಪಾತ್ರರಾಗಿ ಮೂಳೆ ಮುರಿಸಿಕೊಂಡರು. ಗುಂಪು ಕೂಡಿಕೊಂಡು ನಿಂತಿರುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸಿನವರು ಬಿದ್ದು ಲಾಠಿ ಚಾರ್ಜ್ ಮಾಡಿದರು. ಕುಪಿತರಾದ ವಿದ್ಯಾರ್ಥಿಗಳು ಕೈಗೆ ಸಿಕಿದುದನ್ನೆತ್ತಿಕೊಂಡು ಪೋಲೀಸಿನವರನ್ನೆದು

ರಿಸಿದರು. ರಸ್ತೆಗಳು ರಣರಂಗವಾದವು. ಪೋಲೀಸಿನವರಿಗೂ ವಿದ್ಯಾರ್ಥಿಗಳಿಗೂ, ಮಿಲಿಟರಿಯವರಿಗೂ ಕೂಲಿಕಾರರಿಗೂ ಬಿಲ್ಲಿ ಘರ್ಷಣೆಗಳಾದವು ಕೆಲವು ಮಿಲಿಟರಿ ಕುದುರೆಗಳುರುಳಿದವು. ಕೆಲವು ಸವಾರರು ಕುದುರೆಯಿಂದ ಬಿದ್ದು ಗಾಯಗೊಂಡರು. ಮಿನ್ನಿಮಿಲ್ಲಿನ ರಕ್ಷಣೆಗೆ ನಿಂತಿದ್ದ ಮಿಲಿಟರಿ ದಳದವರು ಕೂಲಿಕಾರರ ಗುಂಪು ಕಂಡು ಬೆದರಿ ಅವರ ಮೇಲೆ ಗುಂಡುಹಾರಿಸಿದರು. ಹತ್ತೆಂಟು ಜನ ಕೂಲಿಕಾರರಿಗೆ ಗಾಯಗಳಾದವು. ಒಬ್ಬ ಸ್ಥಳದಲ್ಲಿಯೇ ಸತ್ತುಬಿದ್ದ.

ಮಧ್ಯಾಹ್ನದೊಳಗಾಗಿ ಹೋರಾಟ ಉತ್ಕಟಾವಸ್ಥೆಗೇರಿತು. ಲಾಠಿ ಚಾರ್ಜು ಪ್ರಯೋಜನವಿಲ್ಲವೆಂದು ಪೋಲೀಸಿನವರು ಕೈಗೆ ಸಿಕ್ಕಿದ ವಿದ್ಯಾರ್ಥಿಗಳನ್ನು, ಕೂಲಿಕಾರರನ್ನು, ಇತರರನ್ನು ವ್ಯಾನಿನಲ್ಲಿ ತುಂಬಿಕೊಂಡು ಕಾನಕಾನಹಳ್ಳಿ ಕಾಡಿನಲ್ಲಿ ಬಿಟ್ಟು ಬರುತ್ತಿದ್ದರು. ಸಂಜೆಯೊಳಗಾಗಿ ಹತ್ತಿಪ್ಪತ್ತು ಸಾರಿ ಪೋಲೀಸಿನವರು ಹೋರಾಟಗಾರರ ಮೇಲೆ ಗುಂಡು ಹಾರಿಸಿದರು. ಕ್ರಿಯಾ ಸಮಿತಿಯ ಮೊದಲನೆಯ ತಂಡವನ್ನು ಸರ್ಕಾರ ಬಂಧಿಸಿತು. ಆ ಸುದ್ದಿ ಕಾಳ್ಗಿಚ್ಚಿನಂತೆ ವ್ಯಾಪಿಸಿ ಜನತೆಯಲ್ಲಿ ಮತ್ತಷ್ಟು ಕೋಪವನ್ನು ಕೆರಳಿಸಿತು.

ಸೂರಪ್ಪನವರು ಊರಿನೊಳಗೇ ಹಾಯಲಿಲ್ಲ. ಸುಭದ್ರೆ ಮನೆಯಲ್ಲಿ ಸುಖವಾಗಿ ಕುಳಿತುಬಿಟ್ಟರು. ಸಂಜೆಗೆ ರಾಮಾರಾಪ್ರಿ ಬಂದು ಊರಿನ ಸುದ್ದಿ ತಲುಪಿಸಿದ. ಸೂರಪ್ಪನವರ ಮನಸ್ಸಿನಲ್ಲಿ ವಿಶೇಷ ಕಳವಳವುಂಟಾಯಿತು. ಆದರೆ ಎಷ್ಟು ಧೈರ್ಯವಾಗಿ ಹೊರಗೆ ಹೋಗಲು ಮನಸ್ಸಾಗಲಿಲ್ಲ. ಸೂರಪ್ಪನವರ ಅಳ್ಳೆದೆ ಕಂಡು ಸುಭದ್ರೆಗೆ ಜಿಗುಪ್ಸೆಯಾಯಿತು. ಅವಳು ಅದನ್ನು ಹೊರಗೆ ತೋರಕೊಡುವ ಗೋಜಿಗೆ ಬೀಳಲಿಲ್ಲ.

ಸೂರಪ್ಪನವರು ಸ್ವರಾಜ್ಯ ಪಕ್ಷಕ್ಕೆ ಕೈಕೊಟ್ಟ ಸುದ್ದಿ ಊರಿನಲ್ಲಿ ವ್ಯಾಪಿಸಿತು. ರಾತ್ರಿ ಕೆಲವರು ಅವರ ಮನೆಯ ಮುಂದೆ ಹಾದು ಕಲ್ಲು ಬೀಸಿದರು, ಹೊರಗಿನ ಕಿಟಕಿಗಳ ಗಾಜುಗಳು, ವೆಂಟಿಲೇಟರ್ ಗಾಜುಗಳು ಒಡೆದು ಪುಡಿಪುಡಿಯಾದವು. ಒಳಗೆ ಗೌರಮ್ಮ ಗಡಗಡ ನಡುಗುತ್ತ ಕುಳಿತು ಬೆಳಗಾದೀತೇ ಎಂದು ಜಪಮಾಡತೊಡಗಿದರು.

ಬೆಳಗಾಗ ಗಫೂರ್ ಬರಲು ಗೌರಮ್ಮನವರು ಮಗನ ಬಳಿಗೆ ತಮ್ಮನ್ನು ಕರೆದೊಯ್ಯಬೇಕೆಂದು ಅಂಗಲಾಚಿ ಬೇಡಿದರು. ಗಫೂರ್ ಅವರನ್ನು ಕಾರಿನಲ್ಲಿ ಶ್ರೀನಿವಾಸನ ಬಳಿ ಕರೆದುಕೊಂಡುಬಂದ.

ತಾಯಿಯನ್ನು ಕಂಡು ಶ್ರೀನಿವಾಸ ಧಾವಿಸಿ ಓಡಿಬಂದ. ಕಾರು ಬಾಗಿಲು ತೆಗೆದು ಗೌರಮ್ಮನವರನ್ನು ಅಪ್ಪಿಕೊಂಡ. ಮಗನ ತೋಳ ತೆಕ್ಕೆಯಲ್ಲಿ ಗೌರಮ್ಮನವರು ಮೂರ್ಛಿತರಾದರು. ಒಳಕ್ಕೆ ಎತ್ತಿಕೊಂಡು ಹೋಗಿ ತನ್ನ ಹಾಸಿಗೆಯ ಮೇಲೆ ಮಲಗಿಸಿ ಶೈತ್ಯೋಪಚಾರ ಮಾಡಿದ.

ಗೌರಮ್ಮನವರಿಗೆ ಜ್ಞಾನಬರಲು ಮಗನನ್ನಪ್ಪಿ ಗೋಳೋ ಎಂದು ಅತ್ತುಬಿಟ್ಟರು. ಶ್ರೀನಿವಾಸ ಎಷ್ಟು ಸಮಾಧಾನ ಹೇಳಿದರೂ ಅವರಿಗೆ ಸಮಾಧಾನವಾಗದು. ಮಗನ ಕಂದಿದ ಮುಖ ಮುತ್ತೆ ಮುತ್ತೆ ಮುಟ್ಟಿ ಗೋಳಿಟ್ಟರು. ಅಳುವಿನ ಮಧ್ಯದಲ್ಲಿ ರಾತ್ರಿ ಮನೆಯ ಮೇಲೆ ಕಲ್ಲುಬಿದ್ದ ಸಂಗತಿಯನ್ನು ಮಗನಿಗೆ ತಿಳಿಸಿದರು. ತಂದೆಯ ದ್ರೋಹದ ಕತೆ ಕೇಳಿ ಶ್ರೀನಿವಾಸ ಕಿಡಿಕಿಡಿಯಾದ. ಆದರೆ ತನ್ನ ಆಗ್ರಹ ವ್ಯಕ್ತಪಡಿಸುವುದಕ್ಕೆ ಅದು ಸಮಯವಾಗಿರಲಿಲ್ಲ. ತಾಯಿಯನ್ನು ಸಂತೈಸುತ್ತಾ

"ನೀನು ಮನೆಗೆ ಹೋಗಮ್ಮ .ಕಲ್ಲು ಬೀಳದಂತೆ ನಾನು ನೋಡಿಕೊಳ್ಳುತ್ತೇನೆ."

"ನಿನ್ನ ಬಿಟ್ಟು ನಾನು ಹೋಗಲ್ಲ ಶ್ರೀನಿವಾಸೂ. ಆ ಮನೆ ಮುಖ ನೋಡಲಾರೆ. ಹೊಟ್ಟೆ ಹಿಡಿದು ಅಲ್ಲಿ ವಾಸಿಸಲಾರೆ."

"ನೀನು ಇಲ್ಲಿ ನನ್ನ ಜತೆ ಇರಲು ಸಾಧ್ಯವಿಲ್ಲ. ನಿನ್ನ ಸ್ಥಾನ ಮನೆಯಲ್ಲೇ. ನೀನು ಹೋಗಲೇಬೇಕು."

ಎಂದು ಸ್ವಲ್ಪ ಕಠಿಣವಾಗಿ ನುಡಿದ. ಗೌರಮ್ಮನವರು ಕಣ್ಣೀರಿನಿಂದ ಉತ್ತರವಿತ್ತರು.

"ನಾನು ಮನೆಗೆ ಬರುವ ಕಾಲ ಬರುತ್ತದೆ. ಆಗ ನಾನಾಗಿಯೇ ಬರುತ್ತೇನೆ. ಈಗ ನೀನು ಹೋಗಬೇಕು."

"ಮಗೂ-ಅವರ ಪಾಡು ಏನಾಯಿತು ? ನಿನ್ನೆಯಿಂದ ಮನೆಗೇ ಬಂದಿಲ್ಲ."

"ಅವರು ತಮಗೆ ಪ್ರಿಯವಾದ ಕಡೆ ಸುಖವಾಗಿದ್ದಾರೆ. ನೀನೇಕೆ ಚಿಂತೆಮಾಡುವೆ."

ಗೌರಮ್ಮನವರು ಮಗನನ್ನು ಬಿಟ್ಟು ಹೋಗಲೊಲ್ಲರು- ಶ್ರೀನಿವಾಸ ಬಿಡಲೊಲ್ಲ, ಈ ಕಿತ್ತಾಟ ನೋಡುತ್ತ ನಿಂತಿದ್ದ ಗಫೂರ್ ಶ್ರೀನಿವಾಸನ ನೆರವಿಗೆ ಬಂದು

"ಅಮ್ಮ... ಚಿಕ್ಕ ಯಜಮಾನರು ಹೇಳಿದಂತೆ ಮಾಡಿ. ಮನೆಗೆ ಹಿಂದಿರುಗಿ. ಅವರಿಗೆ ನೀವು ದುಃಖ ಕೊಡಬೇಡಿ"

ಎಂದು ಹೇಳಿದ. ಗೌರಮ್ಮನವರು ವಿಧಿಯಿಲ್ಲದೆ ಎದ್ದು ಕಾರಿನಲ್ಲಿ ಬಂದು ಕುಳಿತರು. ಶ್ರೀನಿವಾಸ ಕಾರು ಬಾಗಿಲು ಹಾಕುವ ಮುನ್ನ ತಾಯಿಯ ಪಾದಮುಟ್ಟಿ ನಮಸ್ಕರಿಸಿ

"ಅಮ್ಮ.... ಕಠಿಣವಾಗಿ ಮಾತನಾಡಿದುದ್ದಕ್ಕೆ ಕ್ಷಮಿಸು" ಎಂದ.

## ೫೧

ಹೋರಾಟ ಅವಿಶ್ರಾಂತವಾಗಿ ಸಾಗಿತು. ಸರ್ಕಾರವೂ ಜಗ್ಗಲಿಲ್ಲ; ಹೋರಾಟಗಾರರೂ ಜಗ್ಗಲಿಲ್ಲ, ಹಿಂದೂ ಧರ್ಮ ರಕ್ಷಣ ಸಭೆಯವರು ಹೋರಾಟವನ್ನೆದುರಿಸಿ ಪ್ರಕಟಣೆ ಹೊರಡಿಸಿದ್ದರು. ಶಂಕರ ವಿದ್ಯಾರ್ಥಿಗಳ ಜತೆ ಬೆರೆತು ಅವರ ಚಲನವಲನಗಳನ್ನು ಗೋಪ್ಯವಾಗಿ ಪೋಲೀಸಿನವರಿಗೆ ತಿಳಿಸುತ್ತಿದ್ದ.

ಹೋರಾಟಗಾರರ ಬೇರೆ ಬೇರೆ ತಂಡಗಳಾದವು. ಅವರು ಇದ್ದಲ್ಲಿಯೇ ಕೆಲಸ ಮಾಡಬೇಕಾಗಿತ್ತು. ಕರ್ಫ್ಯೂ ಪ್ರಭಾವದಿಂದ ಒಬ್ಬರನ್ನೊಬ್ಬರು ಸಂಧಿಸುವುದಕ್ಕೆ ಅವಕಾಶವಿರಲಿಲ್ಲ. ವೃತ್ತಪತ್ರಿಕೆಗಳ ಮೇಲಿದ್ದ ಬಿಚ್ಚು ಗತ್ತಿ ಹೋರಾಟಗಾರರಿಗೆ ದೊಡ್ಡ ಕುಂದನ್ನುಂಟುಮಾಡಿತ್ತು.

ಈ ವಿಷಮ ಪರಿಸ್ಥಿತಿಯಲ್ಲಿ ಸರ್ಕಾರಿ ಪ್ರಕಟನೆಗಳು, ಪ್ರತಿಗಾಮಿಗಳ ಪ್ರಕಟನೆಗಳು, ಹಿಂದೂ ಧರ್ಮ ರಕ್ಷಣ ಸಭೆಯವರ ಪ್ರಕಟನೆಗಳು ವಿಶೇಷ ದಾಂಧಲೆ ಮಾಡತೊಡಗಿದವು. ಅನೇಕ ಸುಳ್ಳು ಸುದ್ದಿಗಳು ಹರಡಿ ಕೊಂಡವು. ಸ್ವರಾಜ್ಯಪಕ್ಷ ಶರಣಾಗತವಾಯಿತೆಂದು ಪ್ರತಿಗಾಮಿಗಳು ವದಂತಿ ಹುಟ್ಟಿಸಿದರು.

ಈ ಸಮಯದಲ್ಲಿ ಅಧಿಕಾರಯುತವಾದ ಒಂದು ಪತ್ರಿಕೆಯನ್ನು ಹೋರಾಟಗಾರರ ಪರವಾಗಿ ಹೊರಡಿಸದಿದ್ದರೆ ಚಳುವಳಿ ಕುಸಿದು ಬೀಳ ಬಹುದೆಂದು ಶ್ರೀನಿವಾಸ ಭಾವಿಸಿ ಅದಕ್ಕೆ ಬೇಕಾದ ಸಲಕರಣೆಗಳನ್ನೊದಗಿಸಿ

ಕೊಳುವುದರಲ್ಲಿ ತೊಡಗಿದ. ಮುದ್ರಣಾಲಯಗಳ ಮೇಲೆ ಸರ್ಕಾರದ ಸರ್ಪ ಕಾವಲಿತ್ತು. ಪತ್ರಿಕೆಯನ್ನು ಅಚ್ಚು ಹಾಕಿಸುವುದಂತೂ ಸಾಧ್ಯವೇ ಇರಲಿಲ್ಲ. 'ಸೈಕ್ಲೋಸ್ಟೈಲ್' ಪತ್ರಿಕೆಗಳನ್ನು ಹೊರಡಿಸಲು ಶ್ರೀನಿವಾಸ ನಿರ್ಧರಿಸಿದ.

ಮಾರನೆಯ ಸಂಜೆಯೊಳಗಾಗಿ ಪತ್ರಿಕೆಗೆ ಬೇಕಾದ ಕಾಗದ, ಮಸಿ, ಎಣ್ಣೆ ಕಾಗದ, ರೋಲರ್, ಬರೆಯುವ ಲೇಖನಿಗಳನ್ನು ಮುನಿಸ್ವಾಮಿ, ಮತ್ತಿತರರು ಹೊಂದಿಸಿದರು. ಶ್ರೀನಿವಾಸ 'ಹೋರಾಟ' ಪತ್ರಿಕೆಯ ಮೊದಲನೆಯ ಸಂಚಿಕೆ ಸಿದ್ಧಗೊಳಿಸಿ ಹಂಚಿಕೆಗೆ ಊರಿನೊಳಗೆ ಕಳಿಸಿಕೊಟ್ಟ.

'ಹೋರಾಟ' ಸಂಚಿಕೆ ನೋಡಿ ಸರ್ಕಾರ ಬೆದರಿತು. ಅದರ ಕಛೇರಿಯನ್ನರಸುವುದಕ್ಕೆ ಸಿ.ಐ.ಡಿ. ತಂಡ ಹೊರಟಿತು.

ಶಂಕರ ಒಂದು ಸಂಚಿಕೆ ತಂದು ಸುಭದ್ರೆಯ ಕೈಗಿತ್ತ. ಅಲ್ಲೇ ಇದ್ದ ಪೂರಪ್ಪನವರು ಸಂಚಿಕೆ ನೋಡಿ

"ಇದು ಶ್ರೀನಿವಾಸನ ಕೆಲಸ. ಈ ಕಿತಾಪತಿಯೆಲ್ಲ ಅವನದೇ"

ಎಂದು ಹೇಳಿದರು.

'ಹೋರಾಟ' ಕಛೇರಿ ಪತ್ತೆಮಾಡಲು ಎಲ್ಲರಿಗಿಂತ ಹೆಚ್ಚು ಶ್ರಮಿಸಿದವನು ಶಂಕರ. ಅವನಿಗೂ ಅದರ ಜಾಡು ಸಿಕ್ಕಲಿಲ್ಲ.

ನಾಲ್ಕು ದಿವಸ ಓಂದೇ ಸಮನಾಗಿ ಹೋರಾಟ ಸಾಗಿತು. ಕ್ರಿಯಾ ಸಮಿತಿಯವರಿಂದ ನಿಯಾಮಕವಾದ ನಾಲ್ಕು ತಂಡಗಳು ಸೆರಮನೆ ಸೇರಿದವು. ಪುಟ್ಟಣ್ಣನವರನ್ನೂ ಸರ್ಕಾರ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿತು. 'ನಾನು ಗುಪ್ತವಾಗಿರಲೊಲ್ಲೆ—ಹೊರಗೆ ಬಂದು ಅರೆಸ್ಟ್ ಮಾಡಿಸಿಕೊಳ್ಳುತ್ತೇನೆ' ಎಂದು ಶ್ರೀನಿವಾಸ ಹೇಳಿದ. ಕ್ರಿಯಾ ಸಮಿತಿಯವರು ಅವನ ಸಲಹೆಯನ್ನು ಅಂಗೀಕರಿಸಲಿಲ್ಲ. ಎಲ್ಲರೂ ಅರೆಸ್ಟ್ ಆಗಿಬಿಟ್ಟರೆ ಮುಂದೆ ಚಳುವಳಿ ನಡೆಸುವವರು ಯಾರು? ಎಂದು ಕೇಳಿದರು.

'ಹೋರಾಟ' ಪತ್ರಿಕೆ ಸರ್ಕಾರಕ್ಕೆ ದೊಡ್ಡ ತಲೆನೋವಾಯಿತು. ಸರ್ಕಾರ ಅನುಮಾನದ ಮೇಲೆ ಸಿಕ್ಕಿದವರನ್ನು ಹಿಡಿದು ಹಿಂಸಿಸಿತು. ಆದರೆ ಯಾರಿಂದಲೂ ಸರಿಯಾದ ಸುದ್ದಿ ದೊರೆಯಲಿಲ್ಲ.

ಚಳುವಳಿ ದಿನದಿನಕ್ಕೆ ಪ್ರಬಲವಾಗುತ್ತ ಬಂತು. ಸರ್ಕಾರ ಕುಸಿದು ಬೀಳುವ ಪರಿಸ್ಥಿತಿಯೊದಗಿತು. ನಿರಪರಾಧಿ ಪ್ರಜೆಗಳು, ವಿದ್ಯಾರ್ಥಿಗಳನ್ನು

ಹೊಡೆದು ಬಡಿದ ಪೊಲೀಸಿನವರ ಕೆಲವು ದಳಗಳು ಮುಷ್ಕರ ಹಿಡಿಯುವುದಾಗಿ ಅಂಜಿಸಿದರು. ಸರ್ಕಾರದ ಮುಖ್ಯಾಧಿಕಾರಗಳಲ್ಲಿದ್ದ ಕೆಲವು ಅಧಿಕಾರಿಗಳು ದಬ್ಬಾಳಿಕೆಯನ್ನು ಖಂಡಿಸಿ ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತರು.

'ಹೋರಾಟ'ದ ಹದಿನೇಳನೆಯ ಸಂಚಿಕೆಯಲ್ಲಿ ಪ್ರಕಟವಾದ ಸುದ್ದಿ ಕಂಡು ಸರ್ಕಾರ ಗಡಗಡ ನಡುಗಿತು. ಹದಿನೆಂಟನೆಯ ದಿನ— ಸೆಪ್ಟೆಂಬರ್ ೨ನೆಯ ತಾರೀಖ ಕಾಮ್ರೇಡ್ ಶ್ರೀನಿವಾಸರು ಬನಪ್ಪಾ ಪಾರ್ಕಿನ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಿ, ಜವಾಬ್ದಾರಿ ಸರ್ಕಾರದ ಘೋಷಣೆ ಮಾಡುವುದಾಗಿ ಪ್ರಕಟವಾಗಿತ್ತು. ಸರ್ಕಾರ ೧೮ನೆಯ ದಿನಕ್ಕೇ ತಕ್ಕ ಬಂದೊಬಸ್ತು ಮಾಡಿಕೊಳ್ಳುವುದಕ್ಕೆ ಉದ್ಯುಕ್ತವಾಯಿತು. ತಾಲ್ಲೂಕುಗಳು, ಜಿಲ್ಲೆಗಳಲ್ಲಿದ್ದ ಪೋಲೀಸಿನವರ ತಂಡವನ್ನೂ ಬಲಮಾಡಿಕೊಂಡಿತು. ತಾನು ಯಾವದಕ್ಕೂ ಭಯಪಡುವುದಿಲ್ಲವೆಂದು ತೋರಿಸಿಕೊಳ್ಳಲು ಅಂಪೇ "ಕರ್ಫ್ಯೂ ಆಜ್ಞೆ' ಯನ್ನು ಹಿಂದಕ್ಕೆ ತೆಗೆದುಕೊಂಡಿತು.

ಕರ್ಫ್ಯೂ ಆಜ್ಞೆ ಹೋದುದನ್ನು ಕಂಡು ಜನ ಸಂತೋಷಭರಿತರಾದರು. ತಮ್ಮ ಅಂತಿಮ ವಿಜಯದ ಕಾಲ ಸಮೀಪಿಸಿತೆಂದು ಭಾವಿಸಿದರು.

'ಹೋರಾಟ' ಸಂಚಿಕೆ ನೋಡಿ ಸೂರಪ್ಪನವರು ಗಹಗಹಿಸಿ ನಕ್ಕರು. ಅವರ ಹಾಸ್ಯಕ್ಕೆ ಕಾರಣವನ್ನರಿಯದೆ ಸುಭದ್ರಾ ಕೇಳಿದಳು.

"ಅದರಲ್ಲಿ ನಗುವ ವಿಷಯವೇನಿದೆ ?"

"ನಮ್ಮ ಹುಡುಗ ಗಟ್ಟಿಗ ಎಂದಿದ್ದೆ. ಅವನೂ ಸ್ಟಂಟ್ (Stunt) ಮಾಡುವುದರಲ್ಲಿ ನಿಪುಣ."

"ಈ ಘೋಷಣೆ ಸ್ಟಂಟೇ ?"

"ಅಲ್ಲದೆ ಮತ್ತೇನು ?"

"ಹಾಗಾದರೆ ನಿಮ್ಮ ಮಗನ ವಿಷಯ ನೀವೇ ಅರಿಯಿರಿ."

"ನನಗಿಂತಲೂ ನಿನಗೆ ಚೆನ್ನಾಗಿ ಗೊತ್ತೋ ?"

"ಈ ವಿಷಯ ಗೊತ್ತು."

"ಏನು ಗೊತ್ತು ಹೇಳು."

"ಅವರು ಸಂಕಲ್ಪ ಮಾಡಿದುದನ್ನು ಮಾಡಿಯೇ ತೀರುವರು."

"ಇದು ಅವನ ಘೋಷಣೆಯೆನ್ನುವುದಕ್ಕೇನು ಆಧಾರ. ಯಾರೋ ಅವನ ಹೆಸರಿನಲ್ಲಿ ಈ ಘೋಷಣೆ ಹೊರಡಿಸಿರಬಹುದು."

"ಮನಸ್ಸಿಗೇ ಸುಳ್ಳು ಸಮಾಧಾನ ತಂದುಕೊಳ್ಳುವಿರಿ. ಈ ಚಳುವಳಿಯ ಹಿಂದೆ ನಿಮ್ಮ ಮಗನ ಪೂರ್ಣ ವರ್ಚಸ್ಸಿದೆ ಎಂಬುದು ನಿಮಗೆ ಗೊತ್ತಿಲ್ಲವೇ?"

"ಹಾಗೇನು?"

"ಇನ್ನೂ ಅನುಮಾನವಾದರೆ ನಾಳೆ ನೀವೇ ಬನಪ್ಪಾ ಪಾರ್ಕಿಗೆ ಹೋಗಿ ಬನ್ನಿ."

"ಸಂತೆಗೊಂದಲಕ್ಕೆ."

"ಹೌದು! ಹೋಗಲು ನಿಮಗೆ ಧೈರ್ಯವಿಲ್ಲ."

"ಹೋಗಲು ಇಷ್ಟವಿಲ್ಲ. ಈ ಬಗೆಯ ದಂಡಾವರ್ತಿ ರಾಜಕಾರಣ ನನಗೆ ಸೇರುವುದಿಲ್ಲ. ಪ್ರತಿಯೊಂದನ್ನೂ ಕಾನೂನು ಬದ್ಧವಾಗಿ ಮಾಡಬೇಕು."

"ಹೋಗಲಿ ಬಿಡಿ-ಈ ವಿಷಯ ಚರ್ಚೆಮಾಡಿ ಏನು ಪ್ರಯೋ ಪ್ರಯೋಜನ?"

"ಏಕೆ ಸುಭಾ-ನನ್ನ ಮೇಲೆ ಅಸಮಾಧಾನವೇ?"

"ಅಸಮಧಾನ ಪಡುವುದಕ್ಕೆ ನೀವು ನನಗೇನೂ ಅನ್ಯಾಯ ಮಾಡಿಲ್ಲ."

"ಸುಭಾ- ಪರಿಸ್ಥಿತಿ ಹತೋಟಿಗೆ ಬಂದ ಮೇಲೆ ನಾವು ಈ ಊರು ಬಿಟ್ಟು ಹೊರಟು ಹೋಗೋಣ."

"ನಿಮ್ಮ ಹೆಂಡತಿಯ ಗತಿ?"

"ಅವಳು ಸುಖವಾಗಿರುವುದಕ್ಕೆ ಸಾಕಷ್ಟು ಆಸ್ತಿ ಬಿಟ್ಟುಕೊಡುತ್ತೇನೆ"

"ನಾನೂ ಊರು ಬಿಡುವ ಸ್ಥಿತಿಯಲ್ಲಿದ್ದೇನೆಯೇ?"

"ನಿನ್ನ ವ್ಯೆ ಕಳೆದ ಮೇಲೆ ಆಗಲಿ. ಅಲ್ಲಿಯವರೆಗೆ ಇಲ್ಲಿ ಕಾಲ ನೂಕೋಣ."

"ಆಗಲಿ-ಯೋಚನೆ ಮಾಡೋಣ. ಅದಕ್ಕಿನ್ನೂ ಬೇಕಾದಷ್ಟು ಕಾಲಾವಕಾಶವಿದೆ"

ಎಂದು ಮಾತನ್ನು ಮುಗಿಸಿಬಿಟ್ಟಳು.

ಘೋಷಣೆಯ ಹಿಂದಿನ ರಾತ್ರಿ ಶ್ರೀನಿವಾಸನ ಮನೆಯಲ್ಲಿ ಮಂತ್ರಾಲೋಚನ ಸಭೆ ಸೇರಿತು. ಮುನಿಸ್ವಾಮಿ, ರಾಮುಸ್ವಾಮಿ, ಜ್ಞಾನಪುತ್ರ, ವಿದ್ಯಾರ್ಥಿ ಮುಖಂಡರು. ಕೆಲವು ಕಾರ್ಮಿಕ ಮುಖಂಡರು ಅರೆಸ್ಟ್ ಆಗದಿದ್ದ ಸ್ವರಾಜ್ಯ ಪಕ್ಷದ ನಾಯಕರೂ ಬಂದಿದ್ದರು. 'ಹೋರಾಟ' ಪತ್ರಿಕೆಯ ಪ್ರಧಾನ ಲೇಖನವನ್ನು ಶ್ರೀನಿವಾಸ ಕೆಲವರಿಗೆ ತೋರಿಸಿಯೇ ಪ್ರಕಟಿಸಿದ್ದ. ಅವನು ತೋರಿಸಿದಾಗ ಒಪ್ಪಿಗೆಯನ್ನಿತ್ತ ಮುನಿಸ್ವಾಮಿ, ರಾತ್ರಿಯೆಲ್ಲಾ ಸಾವಕಾಶವಾಗಿ ಆಲೋಚಿಸಿ, ಮಾರನೆಯ ದಿನವೂ ಆಲೋಚಿಸಿ ಸಂಶಯ, ಭಯ ತಳೆದಿದ್ದ.

ಉಗ್ರ ಪಕ್ಷಕ್ಕೆ ಸೇರಿದ್ದ ವಿದ್ಯಾರ್ಥಿ ಮುಖಂಡ ದಯಾನಾಥನಿಗೆ ಶ್ರೀನಿವಾಸನ ಮಾರ್ಗದಲ್ಲಿ ಸ್ವಲ್ಪವೂ ನಂಬಿಕೆಯಿಲ್ಲ. ಗಾಂಧಿ ದಾರಿಯಲ್ಲಿ ಹೋದರೆ ಬಲಿಷ್ಠ ಸರ್ಕಾರ ಮಣಿಯುವುದಿಲ್ಲವೆಂದು ಅವನು ಎಷ್ಟೋ ಸಲ ವಾದ ಮಾಡಿದ್ದ. ಆದರೆ ಒಂದು ಶಿಸ್ತಿಗೆ ಕಟ್ಟುಬಿದ್ದು ಶ್ರೀನಿವಾಸನ ನಾಯಕತನವನ್ನು ಒಪ್ಪಿಕೊಂಡಿದ್ದ.

"ನಾಳೆ ನೀವು ಘೋಷಣೆ ಮಾಡುವುದು ಖಂಡಿತ ತಾನೇ ?" ಎಂದು ದಯಾನಾಥ ಕೇಳಿದ.

"ಅದರಲ್ಲಿ ಸಂಶಯವೇಕೆ ? ನಾನು ಹೇಳದೆ ಕೇಳದೆ ಬೆಳಗಾಗುವಷ್ಟರಲ್ಲಿ ಕಂಬಿ ಕೀಳಬಹುದೆಂದು ಭಯವಿದೆಯೇನು ನಿಮಗೆ ?"

"ಛೆ ! ಛೆ ! ಅಂಥ ಭಯವೆಂದಿಗೂ ಇಲ್ಲ. ಪರಿಣಾಮ ಯೋಚಿಸುತ್ತಿದ್ದೆ."

"ಪರಿಣಾಮ ಏನಾಗುತ್ತದೆ."

"ನಿಮ್ಮನ್ನೂ ಅರೆಸ್ಟ್ ಮಾಡಿ ಕರೆದೊಯ್ಯುತ್ತಾರೆ. ಇದರಿಂದ ಬಂದ ಲಾಭವೇನು ? ಈಗ ನಮ್ಮ ಪಕ್ಷದ ನಾಯಕರೆಲ್ಲಾ ಸೆರೆಮನೆ ಸೇರಿದ್ದಾರೆ."

" ನಾವಷ್ಟೇ ಸೆರೆಮನೆ ಸೇರಿದರೆ ಸಾಲದು ದಯಾನಾಥ್. ಇಡೀ ದೇಶವೆ ಸೆರೆಮನೆ ಸೇರಲು ಸಿದ್ಧವಾಗಬೇಕು. ಸರ್ಕಾರ ಆಗ ಅವರಿಗೆಲ್ಲ ಸೆರೆಮನೆ ಹೇಗೆ ನಿರ್ಮಿಸುವುದೋ ನೋಡೋಣ. "

" ನನ್ನ ಮಿತ್ರರು, ಸಹಪಾಟಿಗಳ ಕೈಕಾಲು ಮುರಿದು ಹೋಯಿತು. ಎಷ್ಟು ದಿನ ಸರ್, ಈ ರಾಕ್ಷಸೀ ದಬ್ಬಾಳಿಕೆ ಸಹಿಸಿಕೊಂಡಿರಬೇಕು. "

" ವಾಸ್ವಾನಿಯವರು ಹೇಳಿರುವುದು ನಿಮಗೆ ಜ್ಞಾಪಕವಿದೆಯೇ?—Where will repression lead us?—To the gateway of FREEDOM—ದಬ್ಬಾಳಿಕೆ ನಮ್ಮನ್ನು ಎಲ್ಲಿಗೆ ಒಯ್ಯುವುದು. ಬಲ್ಲಿರಾ ; ಸ್ವಾತಂತ್ರ್ಯದ ಹೆಬ್ಬಾಗಿಲಿಗೆ."

ಕಾರ್ಮಿಕ ನಾಯಕರಲ್ಲೊಬ್ಬನಾದ ವಡಿವೇಲು ಸ್ವಲ್ಪ ಉದ್ವೇಗ ದಿಂದ

" ಶಾಂತಿಯಿಂದ ಪ್ರಯೋಜನವಿಲ್ಲ ಸರ್. ಸರ್ಕಾರದ ಒದೆ ನಾವು ತಿನ್ನುತ್ತ ಕುಳಿತರೆ ನಾವು ಕೈಯಲ್ಲಾಗದವರು ಎಂದು ಅವರು ಬಾವಿಸುತ್ತಾರೆ. "

" ಅವರು ಹಾಗೆ ಭಾವಿಸಿದ್ದರೆ ಕರ್ಫ್ಯೂ ಏಕೆ ತೆಗೆಯುತ್ತಿದ್ದರು. "

ಎಂದು ರಾಮುಸ್ವಾಮಿ ಕೇಳಿದ.

" ಅದನ್ನು ನಾನು ಸಮಯಸೂತ್ರ (Strategic move) ಎಂದು ಕರೆಯುತ್ತೇನೆ. "

ಎಂದು ಮುನಿಸ್ವಾಮಿ ಹೇಳಿದ.

ಪ್ರತೀಕಾರಕ್ಕೆ ಹಾತೊರೆಯುತ್ತಿದ್ದ ವಿದ್ಯಾರ್ಥಿ, ಕಾರ್ಮಿಕರ ಮುಖಂಡರ ಮನೊಭಾವಗಳನ್ನು ಶ್ರೀನಿವಾಸ ಚೆನ್ನಾಗಿ ಅರ್ಥಮಾಡಿಕೊಂಡ.

" ಈಗ ಏನು ಮಾಡಿದರೆ ಸರ್ಕಾರ ಮಣಿಯುವುದೆಂದು ನಿಮ್ಮ ಭಾವನೆ ವಡಿವೇಲು ?"

"ನಮನ್ನು ಬೆನ್ನಟ್ಟಿ ವಿನಾಕಾರಣ ಬಡಿಯುತ್ತಿರುವ ಪೋಲೀಸ್, ಮಿಲಿಟರಿ ದಳಗಳ ಮೇಲೆ ನಾವು ಬೀಳಬೇಕು. ನೀವು 'ಹೂ' ಎಂದು ಬಿಡಿ. ನಾವು ಅವರ ಕುಲಗಳನ್ನೇ ತೊಳೆದುಬಿಡುತ್ತೇವೆ.

" ಅವರಲ್ಲಿ ಮದ್ದು ಗುಂಡು ರಿವಾಲ್ವರ್‌ಗಳಿವೆ ?" ಎಂದು ಶ್ರೀನಿವಾಸ ಸೂಚಿಸಿದ.

"ನಮ್ಮಲ್ಲಿ ಕಂತ್ರಿ ಬಾಂಬೂಗಳೂ, ಆಸಿಡ್‌ಗಳೂ ಇವೆ. " ಎಂದು ದಯಾನಾಥ ಉತ್ತರಿಸಿದ.

ಶ್ರೀನಿವಾಸ ಕ್ಷಣಕಾಲ ಆಲೋಚನಾಕ್ರಾಂತನಾದ. ಹೋರಾಟಗಾರರಲ್ಲಿ ಮೂಡುತ್ತಿದ್ದ ಹಿಂಸಾಭಾವ, ಪ್ರತೀಕಾರ ವಿಷ ಕಂಡು ಅವನ ಮನಸ್ಸು ಮರುಗಿತು. ಅವನ ಕಣ್ಣುಗಳು ಕಿಡಿ ಕಾರುತ್ತಿದ್ದವು. ಮುಖದಲ್ಲಿ ಮಾತ್ರ ಶಾಂತಿ. ಗಭೀರವಾಗಿ

"ವಡಿವೇಲು, ದಯಾನಾಥ್-ಮಿತ್ರರೇ, ನೀವು ನನ್ನನ್ನು, ನನ್ನ ತತ್ವವನ್ನು, ನನ್ನ ನಾಯಕತನವನ್ನು ಪರೀಕ್ಷೆ ಮಾಡುತ್ತಿರುವಿರಿ ?"

"ಇಲ್ಲ ಸರ್" ಎಂದು ದಯಾನಾಥ್ ಮಧ್ಯೆ ಬಾಯಿ ಹಾಕಿದ.

"ಪೋಲೀಸಿನವರ ಬಳಿ-ಆಧುನಿಕ ಮದ್ದುಗುಂಡುಗಳಿವೆ. ನಿಮ್ಮ ಬಳಿ ಕಂತ್ರಿ ಬಾಂಬೂಗಳೂ, ಕತ್ತಿ ಚಾಕುಗಳು ಇವೆ. ನೀವು ಹಿಂಸೆಗೆ ಹಿಂಸೆ ಮಾಡಬಲ್ಲಿರಿ. ಪೋಲೀಸಿನವರು ನಿಮ್ಮನ್ನು ಘಾತಿಸಿ, ಸಾಯಿಸುವಂತೆ ನೀವೂ ಅವರನ್ನು ಘಾತಿಸಿ ಸಾಯಿಸಬಲ್ಲಿರಿ. ಆದರೇನು ಸಾರ್ಥಕ? ಇದರಿಂದ ನಿಮ್ಮ ಉದ್ದೇಶ ಒಂದು ಸೂಜಿಯ ಮೊನೆಯಷ್ಟು ಸಾಧಿಸಿತೆಂದು ತಿಳಿದಿರಾ ? ಈಗ ನಡೆಯುತ್ತಿರುವ ಅತ್ಯಾಚಾರಕ್ಕೆ ಪೋಲೀಸಿನವರೂ ಮಿಲಿಟರಿಯವರು ಕಾರಣರೇ ವಿಚಾರಮಾಡಿ. ಯಾವದೋ ಒಂದು ಅಧಿಕಾರ ಸೂತ್ರದ ಚಾಲಕರು ಅವರು. ಒಂದು ದೊಡ್ಡ ಯಂತ್ರದ ಸಣ್ಣ ಗಾಲಿಗಳು. ಒಂದು ಗಾಲಿ ಮುರಿದರೇನು ಬಂತು? ಒಬ್ಬ ಪೋಲೀಸಿನವನು ಸತ್ತರೇನಾಯಿತು? ಅವನ ಸ್ಥಾನದಲ್ಲಿ ಇನ್ನೊಬ್ಬ ನಿಲ್ಲುತಾನೆ. ಹೀಗೆ ಪೋಲೀಸಿನವರನ್ನು ಬಿಟ್ಟು ಜನತೆಯ ಹಕ್ಕುಬಾಧ್ಯತೆಯನ್ನು ತುಳಿಯುತ್ತಿರುವ ರಾಕ್ಷಸೀ ಶಕ್ತಿಯನ್ನೆದುರಿಸಬೇಕು. ಬುಡ ಕಿತ್ತೊಗೆಯದೆ ಟೊಂಗೆ ಕಡಿದರೆ ಬಂದ ಲಾಭವೇನು ?"

"ಅಹಿಂಸಾಮಾರ್ಗ ಅನುಸರಿಸಿದರೆ ಬುಡ ಕಡಿದಂತಾಗುವುದೇ ? ಅದನ್ನು ಅನುಸರಿಸಿ ನಾವು ಈಗ ಅನುಭವಿಸಿರುವುದು ಸಾಲದೇ ?"

ಎಂದು ದಯಾನಾಥ್ ಸ್ವಲ್ಪ ಕೋಪದಿಂದಲೇ ಕೇಳಿದ ಶ್ರೀನಿವಾಸ ಮರುಕೊಪಮಾಡಿಕೊಳ್ಳದೆ ಶಾಂತನಾಗಿ

"ನಾನು ಹೇಳುವುದನ್ನು ಪೂರ್ತಿ ಕೇಳಿ. ಅಹಿಂಸಾ ತತ್ವದಲ್ಲಿ ಪೂರ್ಣ ನಂಬಿಕೆಯನ್ನು ಪೂರ್ತಿ ನೀವೆಲ್ಲ ವ್ಯಕ್ತಪಡಿಸಿದುದರಿಂದಲೇ ನಾನು ಈ ಚಳುವಳಿಯಲ್ಲಿ ಭಾಗವಹಿಸಿದೆ. ನಾವು ಯಾವ ಕಾರಣಕ್ಕೂ - ಎಂಥೆಂಥ ವಿಪತ್ತು ಸಂಭವಿಸಿದರೂ-ಬಾಪೂ ಹೆಸರಿಗೆ ಕಳಂಕ ತರಬಾರದು.

ನನ್ನ ನಾಯಕತನದಲ್ಲಿ ನಿಮಗೆ ನಂಬಿಕೆ ಕಳೆದುಹೋಗಿದ್ದರೆ ಈಗಲೂ ತಿಳಿಸಿಬಿಡಿ. ನಾನು ಅದನ್ನು ನಿಮಗೆ ಬಿಟ್ಟುಕೊಡಲು ಸಿದ್ಧ. ಆದರೆ ನಾನು ಈ ಚಳುವಳಿಯಲ್ಲಿರುವವರೆಗೆ ಅಹಿಂಸಾಮಾರ್ಗ ಬಿಡಲಾರೆ. ನಾನು ನಿಮಗೆ ಬೇಕಾದರೆ ಈ ಮಾರ್ಗ ನೀವು ಅನುಸರಿಸಲೇಬೇಕು."

"ನಿಮ್ಮ ವಿಚಾರದಲ್ಲಿ ನಮಗೆ ಯಾರಿಗೂ ಅಸಂತುಷ್ಟಿ ಇಲ್ಲ ಸರ್" ಎಂದು ಎಲ್ಲರೂ ಏಕಕಂಠರಾಗಿ ನುಡಿದರು.

ಮುನಿಸ್ವಾಮಿ ತನ್ನ ಮನಸ್ಸಿನಲ್ಲಿ ಕಟೆಯುತ್ತಿದ್ದ ವಿಚಾರವನ್ನು ವ್ಯಕ್ತಪಡಿಸಿದ

"ನಾಳೆ ನೀವೇ ರಾಷ್ಟ್ರಧ್ವಜ ಹಾರಿಸಬೇಕೇ ಶ್ರೀನಿವಾಸ್."

"ನಾನೇ ಹಾರಿಸುತ್ತೇನೆಂದು ಘೋಷಿಸಿದ್ದೇನೆ."

"ಹೋರಾಟದಲ್ಲಿ ಸ್ವಲ್ಪ ಅದುಲು-ಬದಲು ಮಾಡಿಕೊಳ್ಳಬಹುದು."

"ಹೌದು! ಅದು ಐರೋಪ್ಯರ ಯುದ್ಧಗಳಲ್ಲಿ. ನಮ್ಮ ಸೇನಾಪತಿ ಗೋರಿಂಗ್ ಅಲ್ಲ ಗಾಂಧೀಜಿ."

ಮುನಿಸ್ವಾಮಿಗೆ ಮುಂದೆ ಮಾತು ಹೊರಡಲಿಲ್ಲ.

ಶ್ರೀನಿವಾಸ ತನ್ನ ಕಾರ್ಯವಿಧಾನ ವಿವರಿಸಿ, ತಾನು ಅರೆಸ್ಟ್ ಆದ ಮೇಲೆ ಮುನಿಸ್ವಾಮಿ, ಅವನಾನಂತರ ದಯಾನಾಥ, ಅವನಾನಂತರ ವಡಿವೇಲು, ಅವನಾನಂತರ ರಾಮುಸ್ವಾಮಿ ನಾಯಕತನ ವಹಿಸತಕ್ಕುದೆಂದು ಸೂಚಿಸಿದ.

ಇಷ್ಟೆಲ್ಲ ಮಾತುಕತೆ ಮುಗಿಯುವ ವೇಳೆಗೆ ಮಧ್ಯರಾತ್ರಿಯಾಗಿತ್ತು. ಸಿ. ಐ. ಡಿ. ಗಳ ಕಾಟದಿಂದ ಎಲ್ಲರೂ ಒಟ್ಟಿಗೆ ಹೋಗುವ ಹಾಗಿರಲಿಲ್ಲ. ಒಬ್ಬೊಬ್ಬರಾಗಿ ಸ್ಥಳ ಬಿಟ್ಟು ಕದಲಲಾರಂಭಿಸಿದರು. ಕೊನೆಯದಾಗಿ ಮುನಿಸ್ವಾಮಿ ರಾಮುಸ್ವಾಮಿ ಹೊರಟು ನಿಂತರು.

"ಬೆಳಿಗ್ಗೆ ನಾನೇ ಐದು ಗಂಟೆಗೆ ಸಂಘದ ಕಛೇರಿಗೆ ಬಂದು ಬಿಡುತ್ತೇನೆ" ಎಂದು ಶ್ರೀನಿವಾಸ ಹೇಳಿದ.

"ನೀವು ಹೊರಡುವ ಮುನ್ನ ನಾನೇ ಇಲ್ಲಿಗೆ ಬಂದು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ" ಎಂದು ಮುನಿಸ್ವಾಮಿ ಸೂಚಿಸಿದ.

ಶ್ರೀನಿವಾಸ ಮುನಿಸ್ವಾಮಿಯನ್ನಪ್ಪಿದ. ಇಬ್ಬರ ಕಣ್ಣಲ್ಲಿಯೂ ಹನಿಗಳುದುರಿದವು.

# ೫೩

ಬೆಳಿಗ್ಗೆ ನಾಲ್ಕು ಗಂಟೆಗೇ ಸ್ವಯಂಸೇವಕರ ಒಂದು ತಂಡ ಅಟ್ಟಣೆ, ಕುರ್ಚಿ. ಮೇಜು ತೋರಣ. ಬಾವುಟಪಂಕ್ತಿ ಹೊತ್ತು ಬನಪ್ಪಾ ಪಾರ್ಕ ಸೇರಿ ಅಲ್ಲಿ ಸಭಾವ್ಯವಸ್ಥೆ ಮಾಡಿದರು.

ಶ್ರೀನಿವಾಸ ಮುನಿಸ್ವಾಮಿಯೊಂದಿಗೆ ಕೂಲಿಕಾರರ ಸಂಘದ ಬಳಿಗೆ ಬಂದು, ಮೆರವಣಿಗೆಯ ವ್ಯವಸ್ಥೆಮಾಡಿ, ಘೋಷಣಾ ಪತ್ರವನ್ನು ಸಿದ್ಧಗೊಳಿಸಿದ.

ಆರು ಗಂಟೆಯ ವೇಳೆಗೆ ವಿದ್ಯಾರ್ಥಿಗಳು, ಕಾರ್ಮಿಕರು ಜನರು ಗುಂಪುಗುಂಪಾಗಿ ಸೇರಿದರು. ಮುಂದಿನ ಸಾಲಿನಲ್ಲಿ ರಾಷ್ಟ್ರಧ್ವಜ ಹಿಡಿದು ಸ್ವಯಂಸೇವಕರು. ಅವರಹಿಂದೆ ಬ್ಯಾಂಡಿನವರು, ಅವರ ಹಿಂದೆ ಶ್ರೀನಿವಾಸ ಮುನಿಸ್ವಾಮಿ, ಇತರ ನಾಯಕರು. ಅವರ ಹಿಂದೆ ಹೋರಾಟಗಾರರು ಮೆರವಣಿಗೆ ಹೊರಟರು. ದಾರಿಯುದ್ದಕ್ಕೂ ಸ್ವಯಂಸೇವಕರು ಜಯಘೋಷ ಮಾಡುತ್ತಿದ್ದರು.

ನಾಗರಿಕರು ಅಲ್ಲಲ್ಲಿ ಹೂವಮಾಲೆಗಳನ್ನು ನಾಯಕರಿಗೆ ಅರ್ಪಿಸಿದರು. ಹೆಣ್ಣು ಮಕ್ಕಳು ನಾಯಕರ ಹಣೆಗೆ ಕುಂಕುಮವಿಟ್ಟು ಆರತಿ ಬೆಳಗಿದರು.

ಮೆರವಣಿಗೆ ಎಂಟು ಗಂಟೆಯ ಸುಮಾರಿಗೆ ಬನಪ್ಪಾ ಪಾರ್ಕ ಸೇರಿತು. ಸಹಸ್ರಾರು ಜನ ಸೇರಿಬಿಟ್ಟಿದ್ದರು. ಗಫೂರನು ಬಂದು ಒಂದು ಕಡೆ ನಿಂತಿದ್ದ. ಮೂವತ್ತು ನಲವತ್ತು ಪೋಲೀಸ್ ವ್ಯಾನುಗಳು ಅಲ್ಲಲ್ಲಿ ನಿಂತಿದ್ದವು. ಎತ್ತ ನೋಡಿದರೂ ಪೋಲೀಸಿನವರ ಖಾಕಿ ಉಡುಪು. ವಾತಾವರಣದಲ್ಲಿ ಒಂದು ಬಗೆಯ ರುದ್ರಸೌಂದರ್ಯ ಬೆರೆತು ಗಂಭೀರವಾಗಿತ್ತು.

ಶ್ರೀನಿವಾಸ ಮುತ್ತಿತರರು ವೇದಿಕೆ ಹತ್ತಿ ಕುಳಿತರು. ಸ್ವಯಂಸೇವಕರು 'ವಂದೇ ಮಾತರಂ—ಜನಗಣಮನ, ಹಾಡಿದರು. ಅಂದಿನ ಸಭೆಯ ಉದ್ದೇಶವನ್ನು ಮುನಿಸ್ವಾಮಿ ನಾಲ್ಕೇ ಮಾತುಗಳಲ್ಲಿ ವರ್ಣಿಸಿ ಘೋಷಣೆ ಮಾಡಬೇಕೆಂದು ಶ್ರೀನಿವಾಸನನ್ನು ಪ್ರಾರ್ಥಿಸಿದ.

ವೇದಿಕೆಯ ಕೆಳಗೆ ನಾಲ್ಕು ಕಡೆಗಳಲ್ಲಿಯೂ ನಿಂತಿದ್ದ ಶಸ್ತ್ರಧಾರಿ ಪೋಲೀಸಿನವರು ಎಚ್ಚರಗೊಂಡು ನಿಂತರು.

ಶ್ರೀನಿವಾಸ ಎದ್ದು ನಿಲ್ಲಲು ಡಿ.ಎಸ್.ಪಿ. ಸಾಹೇಬರು ವೇದಿಕೆಯನ್ನು ಹತ್ತಿ ಬಂದು

"ಮಿಸ್ಟರ್ ಶ್ರೀನಿವಾಸ್ ನೀವು ಈ ಘೋಷಣೆ ಮಾಡಕೂಡದು." ಎಂದು ಆಜ್ಞೆ ವಿಧಿಸಿದರು.

"ಯಾವ ಕಾರಣಕ್ಕೆ ಡಿ. ಎಸ್. ಪಿ. ಯವರೇ. ಸ್ವಾತಂತ್ರ್ಯ ಪ್ರತಿಯೊಬ್ಬ ನಾಗರಿಕನ ಜನ್ಮಸಿದ್ಧ ಹಕ್ಕು."

"ನೀವು ಸಭೆಯನ್ನು ಚದುರಿಸಿ ಹೊರಟುಹೋಗಬೇಕು."

"ಹೋಗುವುದಕ್ಕೆ ನಾವು ಬಂದಿಲ್ಲವಲ್ಲ. ಇಲ್ಲಿ ಮಾಡಬೇಕಾದ ಅಗತ್ಯವಾದ ಕೆಲಸವಿದೆ."

"ಹಾಗಾದರೆ ನೀವು ಹೋಗುವುದಿಲ್ಲ?"

"ಖಂಡಿತವಾಗಿಯೂ ಇಲ್ಲ."

"ನಾವು ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ."

"ನಮ್ಮನ್ನು ಅಡ್ಡಿಪಡಿಸುವುದಕ್ಕೆ ನಿಮಗೆ ಹೇಗೆ ಅಧಿಕಾರವಿಲ್ಲವೋ ಹಾಗೆ ನಿಮ್ಮನ್ನು ಅಡ್ಡಿಪಡಿಸುವುದಕ್ಕೆ ನಮಗೂ ಅಧಿಕಾರವಿಲ್ಲ. ನಿಮ್ಮ ಮನಸ್ಸಿಗೆ ಬಂದುದನ್ನು ಮಾಡಬಹುದು."

"ಕೊನೆಯ ವಾರ್ನಿಂಗ್ (Warning) ಕೊಡುತ್ತಿದ್ದೇನೆ."

"ನಿಮ್ಮ ವಾರ್ನಿಂಗ್ ನಾನು ನಿರಾಕರಿಸುತ್ತೇನೆ."

"ಡಿ. ಎಸ್. ಪಿ. ಗಂಟಲು ಕಿತ್ತು ಹೋಗುವ ಹಾಗೆ ಸಭೆಯನ್ನುದ್ದೇಶಿಸಿ 'ಹೊರಟು ಹೋಗಿ' ಎಂದು ಅರಚಿದರು. ವ್ಯಾನಿನಲ್ಲಿದ್ದ ಶಸ್ತ್ರಧಾರಿ ಪೋಲೀಸಿನವರು ಕೆಳಗಿಳಿದು ಬಂದು ಜನರನ್ನು ಚದುರಿಸಲಾರಂಭಿಸಿದರು. ಅಲ್ಲಲ್ಲಿ ಕೆಲವರಿಗೆ ಪೆಟ್ಟುಗಳೂ ತಾಕಿದವು. ಗುಂಪಿನ ಕೆಲವು ಜನ ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಕೆಲವರು ಜಲ್ಲಿಕಲ್ಲಿನ ರಾಶಿ ಬಳಿಗೆ ಹೋಗಿ ವ್ಯಾನುಗಳ ಮೇಲೆ, ಪೋಲೀಸಿನವರ ಮೇಲೆ ಕಲ್ಲು ಬೀರಲಾರಂಭಿಸಿದರು.

ಈ ಗೊಂದಲ ನೋಡುತ್ತ ಶ್ರೀನಿವಾಸ ಪ್ರಶಾಂತನಾಗಿ ನಿಂತಲ್ಲಿಯೇ ನಿಂತಿದ್ದ. ಡಿ.ಎಸ್.ಪಿ.ಯವರು ಅವನನ್ನು ನೋಡುತ್ತ ನಿಂತಿದ್ದರು.

ಶ್ರೀನಿವಾಸ ಕಿಸೆಯಿಂದು ಒಂದು ಕಾಗದ ತೆಗೆದು ಓದುವುದಕ್ಕೆ ಪ್ರಯತ್ನಿಸಿದ.

ಡಿ.ಎಸ್.ಪಿ. ಶ್ರೀನಿವಾಸನ ಸಮೀಪಕ್ಕೆ ಬಂದು ರಿವಾಲ್ವರ್ ತೋರಿ ಸುತ್ತಾ

"ಬೇಡಿ-ಓದಬೇಡಿ-ನಾನು - ನಿಮ್ಮನ್ನು ಅರೆಸ್ಟ್ ಮಾಡಿದ್ದೇನೆ." ಎಂದರು. ಜನರ ಗುಂಪೊಂದು ವೇದಿಕೆಯ ಮೇಲೆ ಹತ್ತಲೆತ್ನಿಸಿತು. ಎಲ್ಲಿಂದಲೋ ಒಂದು ಕಲ್ಲು ಹಾರಿ ಬಂದು ಡಿ.ಎಸ್.ಪಿ. ಯವರ ತೋಳಿಗೆ ಬಡಿಯಿತು. ಡಿ.ಎಸ್.ಪಿ.ಯವರ ಕೋಪ ನೆತ್ತಿಗೇರಿತು. ಶ್ರೀನಿವಾಸನ ಕೈಹಿಡಿದು ಎಳೆದೊಯ್ಯಲೆತ್ನಿಸಿದರು. ಜನರ ಗುಂಪು ಅವರನ್ನು ಸುತ್ತುಗಟ್ಟಿತು. ಪೋಲೀಸಿನವರು ಬಂದೂಕಗಳನ್ನೆತ್ತಿ ಹಿಡಿದರು. ಡಿ.ಎಸ್.ಪಿ. ಯವರು "ಫೈರ್ (Fire)" ಎಂದು ಅರಿಚಿದರು

ಗುಂಡಿನ ಸುರಿಮಳೆಯಾಯಿತು. ಅತ್ತಿತ್ತ ಜನಸಮೂಹದ ಮಧ್ಯೆ ಯಿದ್ದ ಪೋಲೀಸಿನವರೂ ಗುಂಡು ಹಾರಿಸಿದರು.

ಈ ಘರ್ಷಣೆಯಲ್ಲಿ ಒಂದು ಗುಂಡು ಶ್ರೀನಿವಾಸನಿಗೆ ಬಂದು ಬಡಿಯಿತು. ಕೈಯಲ್ಲಿ ಬಲವಾಗಿ ಘೋಷಣಪತ್ರ ಹಿಡಿದಿದ್ದ ಶ್ರೀನಿವಾಸ ಕೆಳಗೆ ಬಿದ್ದ. ಜನತೆಯಲ್ಲಿ ಹಾಹಾಕಾರ ಮೂಡಿತು. ಜನ ಕಂಗೆಟ್ಟು ಸಿಕ್ಕಿದೆಡೆ ಓಡಿದರು. ಪೋಲೀಸಿನವರು ಅವರ ಬೆನ್ನಟ್ಟಿ ಬಂದೂಕದಿಂದಲೇ ಬಡಿದರು.

ಬನಪ್ಪಾ ಪಾರ್ಕ್ ಸ್ಮಶಾನ ಕುರುಕ್ಷೇತ್ರಯಿತು. ಹತ್ತಾರು ಹೆಣಗಳುರುಳಿದವು. ಸಾವಿರಾರು ಜನಕ್ಕೆ ಗಾಯಗಳಾದವು.

ಶ್ರೀನಿವಾಸ ಬಿದ್ದುದನ್ನು ಕಂಡ ಗಫೂರ್ ಒಂದೇ ಉಸಿರಿಲ್ಲಿ ಸೂರಪ್ಪನವರ ಮನೆಗೆ ಓಡಿ, ಗ್ಯಾರೇಜಿನಿಂದ ಕಾರು ತೆಗೆದು ಗೌರಮ್ಮನವರನ್ನು ಅದರಲ್ಲಿ ಕೂಡಿಸಿಕೊಂಡು ವಿಲ್ಸನ್ ಗಾರ್ಡನ್ನಿಗೆ ಹೊರಟ. ಸುಭದ್ರೆಯ ಮನೆ ಮುಂದೆ ಕಾರು ನಿಲ್ಲಿಸಿ

"ಸಾಬ್-ಸಾಬ್" ಎಂದು ಆರ್ತನಾಗಿ ಕೂಗಿದ.

ಸೂರಪ್ಪನವರು ಸಿಡಿಗುಟ್ಟುತ್ತಾ ಎದ್ದು ಬಂದರು. ಅವರು ಗದರುವುದಕ್ಕೆ ಮುಂಚೆಯೇ ಗಫೂರ್

"ಸಾಬ್-ಚೋಟಾ ಸರ್ಕಾರ್ ಅವರಿಗೆ ಗುಂಡಿನೇಟು ಬಿದ್ದಿದೆ"

ಎಂದ. ಸೂರಪ್ಪನವರು ಅವಾಕ್ಕಾದರು. ಗಫೂರನ ಸುದ್ದಿ ಅವರನ್ನು ಸ್ತಂಭೀಭೂತರನ್ನಾಗಿ ಮಾಡಿತು. ಕೋಟು ರುಮಾಲನ್ನು ಕೈಯಲ್ಲಿ ಹಿಡಿದು ಕಾರು ಹತ್ತಿ ಕುಳಿತರು. ಗೌರಮ್ಮ ಯಜಮಾನರನ್ನು ಕಂಡು

"ಏನಾಯಿತೂಂದ್ರೆ, ಏಕಿಷ್ಟು ಗಾಬರಿ" ಎಂದರು.

"ನಡೀ ಹೋಗೋಣ-ಎಲ್ಲಾ ಗೊತ್ತಾಗತ್ತೆ" ಎಂದರು ಸೂರಪ್ಪ ನವರು.

ಕಾರು ಬನಪ್ಪಾ ಪಾರ್ಕಿನ ಕಡೆ ಹೊರಟಿತು.

ವಿಲ್ಸನ್ ಗಾರ್ಡನ್ ಮನೆಯಲ್ಲಿ ಸುಭದ್ರೆಗೆ ಪ್ರಸವವೇದನೆ ಆರಂಭ ವಾಗಿತ್ತು.

## ೫೪

ಸೂರಪ್ಪನವರ ಕಾರು ಪಾರ್ಕಿಗೆ ಬರುವ ವೇಳೆಗೆ ಗುಂಪು ಚೆದುರಿತ್ತು. ಪೋಲೀಸಿನ ಪಡೆ, ವ್ಯಾನುಗಳೂ ಇರಲಿಲ್ಲ. ನಾಲ್ಕಾರು ಜನ ಪೋಲೀಸಿ ನವರು ಗಸ್ತಿ ಕಾಯುತ್ತಿದ್ದರು. ಗಫೂರ್ ಅವರನ್ನೇ ಕೇಳಿ ತಿಳಿದುಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ಕಾರನ್ನು ಓಡಿಸಿದ.

ಬನಪ್ಪಾ ಪಾರ್ಕಿನ ಗುಂಪು ವಿಕ್ಟೋರಿಯಾ ಆಸ್ಪತ್ರೆಯ ಕಾಂಪೌಂಡಿ ನಲ್ಲಿ ಶೇಖರವಾಗಿತ್ತು. ಕೆಲವು ಪೋಲೀಸ್ ವ್ಯಾನುಗಳೂ ನಿಂತಿದ್ದವು. ಯಾರ ಮುಖದಲ್ಲಿಯೂ ತೇಜಸ್ಸಿಲ್ಲ. ಒಂದು ಗಂಟೆ ಮುಂಚೆ ಕಂಡು ಬಂದ ಕ್ಷಾತ್ರ ಎಲ್ಲಿಯೋ ಮಾಯವಾಗಿತ್ತು.

ಸೂರಪ್ಪನವರು ಕಾರಿನಿಂದಿಳಿದು ವಾರ್ಡಿನ ಕಡೆ ಓಡಿದರು. ಅವರನ್ನು ಗೌರಮ್ಮನವರು, ಗಫೂರ್ ಅನುಸರಿಸಿಹೋದರು. 'ಎಮರ್ಜನ್ಸಿ' ವಾರ್ಡಿನ ಬಳಿಯಲ್ಲಿಯೂ ಜನಸ್ತೋಮ. ಸೂರಪ್ಪನವರನ್ನೂ ಗೌರಮ್ಮನವರನ್ನೂ ಕಂಡು ಜನ ದಾರಿಬಿಟ್ಟುಕೊಟ್ಟರು.

ಶ್ರೀನಿವಾಸನನ್ನು ಒಂದು ಮಂಚದ ಮೇಲೆ ಮಲಗಿಸಿ ಅವನ ಎದೆ ಯನ್ನು ಬಲವಾಗಿ ಕಟ್ಟಿದ್ದರು. ಬಟ್ಟೆಯ ಕಟ್ಟನ್ನು ರಕ್ತ ತೋಯಿಸಿತ್ತು. ಮುಖ ಬಿಳಿಚಿ ಬೆಂಡಾಗಿತ್ತು. ಅವನ ಮಂಚದ ಬಳಿ ಆಕ್ಸಿಜನ್ ಗ್ಯಾಸಿನ ಉಪಕರಣವಿತ್ತು. ಸೂರಪ್ಪನವರು ಒಮ್ಮೆ ಶ್ರೀನಿವಾಸನನ್ನು ಈಕ್ಷಿಸಿ ಡಾಕ್ಟರ ಕಡೆ ತಿರುಗಿ

"ಏನಾದರೂ ಆಸೆ ಇದೆಯೋ ?" ಎಂದರು.

ಡಾಕ್ಟರು ತಲೆಯಲ್ಲಾಡಿಸಿದರು.

ಗೌರಮ್ಮನವರು ಶ್ರೀನಿವಾಸನ ಹಾಸಿಗೆಯ ಬಳಿ ಕುಳಿತು ಮೆಲ್ಲನೆ ಮಗನ ಮುಖ ನೇವರಿಸಿದರು. ಡಾಕ್ಟರು ಅವರಿಗೆ ಯಾವ ಎಚ್ಚರಿಕೆಯನ್ನೂ ಕೊಡಹೋಗಲಿಲ್ಲ. ಡಿ.ಎಸ್.ಪಿ. ಯವರು ಶ್ರೀನಿವಾಸನ ಪಾದದ ಬಳಿ ಕೈಯಲ್ಲಿ ಹ್ಯಾಟು ಹಿಡಿದು ನಿಂತಿದ್ದರು. ಗಫೂರ್ ಮಂಚದ ಒಂದು ಕೊನೆಯಲ್ಲಿ ಬಂದು ನಿಂತ.

ಕಿಟಕಿಗಳಲ್ಲಿ ಬಾಗಿಲುಗಳಲ್ಲಿ ಜನ ಕಿಕ್ಕಿರಿದು ತುಂಬಿದ್ದರು.

ಡಾಕ್ಟರು ಶ್ರೀನಿವಾಸನ ಸಮೀಪಕ್ಕೆ ಬಂದು ನಾಡಿ ನೋಡಿದರು. ಸ್ಟೆತಾಸ್ಕೋಪ್ ತೆಗೆದು ಹೃದಯ ಪರೀಕ್ಷಿಸಿ, ಸ್ಮೆಲ್ಲಿಂಗ್ ಸಾಲ್ಟ್ (Smelling Salt) ಶೀಷೆ ತೆಗೆದು ಶ್ರೀನಿವಾಸನ ಮೂಗಿನ ಮುಂದೆ ತೋರಿದರು. ಸ್ವಲ್ಪ ಹೊತ್ತು ಕಳೆಯಲು ಶ್ರೀನಿವಾಸ ಉಸಿರುಬಿಟ್ಟ. ಡಾಕ್ಟರು ಅವನ ಮುಖಕ್ಕೆ ಮುಖವಿಟ್ಟು

"ಶ್ರೀನಿವಾಸ-ನಿಮ್ಮ ತಾಯಿ ತಂದೆ ಬಂದಿದ್ದಾರೆ. ನಿಮ್ಮ ತಾಯಿ—ತಾಯಿ—ತಾಯಿ" ಎಂದು ಹತ್ತೆಂಟು ಬಾರಿ ಹೇಳಿದರು.

ಡಾಕ್ಟರ್ ಸೂಚಿಸಲು ನರ್ಸ್ ಸ್ವಲ್ಪ ಬಿಸಿ ಕಾಫಿ ತಂದು ೨-೩ ಚಮಚ ಬಲವಂತವಾಗಿ ಶ್ರೀನಿವಾಸನಿಗೆ ಕುಡಿಸಿದಳು.

ಶ್ರೀನಿವಾಸ ಮೆಲ್ಲನೆ ಕಣ್ಣು ತೆರೆದ. ಅವನ ಕಣ್ಣಂಚಿನಲ್ಲಿ ನೀರು ನಿಂತಿತು. ಗೌರಮ್ಮ ತಮ್ಮ ಸೆರಗಿನಿಂದ ಅದನ್ನು ಒರಸಿದರು.

ಶ್ರೀನಿವಾಸನಿಗೆ ಎಡಗೈ ಮಾತ್ರ ಅಲುಗಾಡಿಸಲು ಸಾಧ್ಯವಾಗಿತ್ತು. ದೂರ ನಿಂತಿದ್ದ ತಂದೆಯನ್ನು ಹತ್ತಿರ ಕರೆದ. ಸೂರಪ್ಪನವರು ಅವನ ಎಡಗಡೆ ಬಂದು ನಿಂತರು. ಮೆಲ್ಲನೆ ಕೈಯೆತ್ತಿದ. ಸೂರಪ್ಪನವರು ಅದನ್ನಪ್ಪಿ ಕೊಂಡು ಕಂಬನಿಯಿಂದ ತೋಯಿಸಿದರು. ಶ್ರೀನಿವಾಸನ ಕಣ್ಣುಗಳಲ್ಲಿಯೂ ಧಾರಾವಾಹಿನಿ.

ಶ್ರೀನಿವಾಸ ಮಾತನಾಡಲು ಹವಣಿಸಿದ, ಡಾಕ್ಟರು ಬೇಡವೆನ್ನಲಿಲ್ಲ. ತಂದೆಯನ್ನು ನೋಡಿ

"ನ ನ್ನ .....ಕ್ಷ.....ಮಿ .....ಸು .....ವಿ......ರಾ ?" ಎಂದ.

"ನಾನು ಮಹಾಪರಾಧಿ-ನೀನು ನನ್ನನ್ನು ಕ್ಷಮಿಸು" ಎಂದು ಸೂರಪ್ಪ ನವರು ಗೋಳಿಟ್ಟರು.

ಶ್ರೀನಿವಾಸ ತಾಯಿಯ ಕಡೆ ತಿರುಗಿ ಆಕೆಯ ಮುಖ ಮುಟ್ಟಲೆತ್ನಿಸಿದ. ಗೌರಮ್ಮ ಅವನ ಮುಖದ ಹತ್ತಿರ ಬಂದರು. ಆಕೆಯ ತಲೆಯನ್ನು ಎದೆಯ ಬಳಿ ತಂದುಕೊಂಡು ನೇವರಿಸುತ್ತಾ

"ಅಮ್ಮ .. ....ನನ್ನ ಅಮ್ಮ.......?" ಎಂದ.

ಮಗನ ಮುಖಕ್ಕೆ ಗೌರಮ್ಮ ಮುದ್ದಿಟ್ಟರು. ಆಕೆಯ ಕಣ್ಣೀರಿನಿಂದ ಶ್ರೀನಿವಾಸನ ಮುಖ ತೊಯ್ದು ಹೋಯಿತು.

ಶ್ರೀನಿವಾಸ ಸುತ್ತಲೂ ನೋಡಿದ. ಅತ್ತ ಮುನಿಸ್ವಾಮಿಯ ಮಂಚ- ಅದರ ಪಕ್ಕದಲ್ಲಿ ಜ್ಞಾನಮುತ್ತು- ಅದರ ಪಕ್ಕದಲ್ಲಿ ದಯಾನಾಥ. ಎಲ್ಲರೂ ಬಲವಾಗಿ ಗಾಯಗೊಂಡು ಮಲಗಿದ್ದರು. ಯಾರಿಗೂ ಮೈಮೇಲೆ ಎಚ್ಚರವಿಲ್ಲ. ವಡಿವೇಲುವಿಗೆ ಮಾತ್ರ ಗಾಯವಾಗಿರಲಿಲ್ಲ. ಅವನನ್ನು ಶ್ರೀನಿವಾಸ ಹತ್ತಿರ ಕರೆದು

"ಹೋರಾಟ ಸಾಗಲಿ-ಅಹಿಂಸಾಮಾರ್ಗ ಬಿಡಬೇಡಿ-ಜಯ- ನಮಗೇ ಜಯ.... ಜಯ"

ಎನ್ನುತ್ತಾ ಸಮ್ಮನಾದ. ಡಾಕ್ಟರು ಗಾಬರಿಯಾಗಿ ಅವನ ನಾಡಿ ಹಿಡಿದು ನೋಡಿದರು-ಎದೆ ಮುಟ್ಟಿದರು. ಶ್ರೀನಿವಾಸ ಅಲ್ಲಿ ಇರಲಿಲ್ಲ.

## ೫೫

ಡಾಕ್ಟರನ್ನು ಕರೆದುಕೊಂಡು ಹೋಗಲು ಊರೊಳಗೆ ಬಂದ ವೆಂಕಪ್ಪಯ್ಯನವರಿಗೆ ಊರಿನ ವಿದ್ಯಮಾನ ತಿಳಿಯಿತು. ಕೂಡಲೆ ಸೂರಪ್ಪನವರ ಬಳಿಗೆ ಹೋಗಬೇಕೆಂದು ಅವರ ಮನಸ್ಸು ತವಕಪಟ್ಟಿತು. ಆದರೆ ಪ್ರಸವ ವೇದನೆ ಅನುಭವಿಸುತ್ತಿದ್ದ ಮಗಳನ್ನು ಬಿಟ್ಟು ಹೋಗುವಂತಿರಲಿಲ್ಲ. ಸುಭದ್ರೆಯ ಮನೆ ತಲುಪಿದೊಡನೆಯೇ ಸುದ್ದಿಯನ್ನು ಹೆಂಡತಿಗೂ ಅಕ್ಕನಿಗೂ ತಿಳಿಸಿದರು.

ಕಾವೇರಮ್ಮ ಅಲ್ಲಿ ನಿಲ್ಲಲಿಲ್ಲ. ನರಸಮ್ಮನವರಿಗೆ ನಾಲ್ಕು ಉಪಚಾರದ ಮಾತು ಹೇಳಿ ಸೂರಪ್ಪನವರ ಮನೆಗೆ ಹೊರಟುಬಿಟ್ಟಳು.

ಕಾವೇರಮ್ಮ ಸೂರಪ್ಪನವರ ಮನೆಯ ಹಾದಿಯ ಒಳಗೆ ಕಾಲಿಡುವುದು ಕಷ್ಟವಾಯಿತು. ಜನ ತಂಡೋಪತಂಡವಾಗಿ ಸೇರಿದ್ದರು. ಹಾಗೂ ಹೀಗೂ ದಾರಿ ಮಾಡಿಕೊಂಡು ಮನೆಯ ಒಳಗೆ ಬಂದಳು.

ವೆರಾಂಡದಲ್ಲಿ ಒಂದು ಹಾಸಿಗೆ ಹಾಸಿ ಅದರ ಮೇಲೆ ಶ್ರೀನಿವಾಸನನ್ನು ಮಲಗಿಸಿದ್ದರು. ಪಕ್ಕದಲ್ಲಿ ಗೌರಮ್ಮ ತಲೆಯಮೇಲೆ ಕೈಹೊತ್ತು ಕುಳಿತಿದ್ದರು. ಸೂರಪ್ಪನವರು ಒಂದು ಮೂಲೆಯಲ್ಲಿ ಮುಖಕ್ಕೆ ಟವಲಿಟ್ಟುಕೊಂಡು ಕುಳಿತಿದ್ದರು.

ಕಾವೇರಮ್ಮ ನಿದ್ರೆಮುದ್ರೆಯಲ್ಲಿ ಮಲಗಿದ್ದ ಶ್ರೀನಿವಾಸನನ್ನು ಕಣ್ತುಂಬ ನೋಡಿ 'ಹೋಗಿಬಿಟ್ಟೆಯಾ ನನ್ನಪ್ಪಾ' ಎಂದು ಉದ್ಗಾರ ತೆಗೆದು ಗೌರಮ್ಮನವರ ಬಳಿ ಬಂದು ಕುಳಿತು ಅವರನ್ನು ಬಿಗಿಯಾಗಿ ತಬ್ಬಿಕೊಂಡಳು.

ರಾಮಾಶಾಸ್ತ್ರಿ, ಗಫೂರ್ ದಿಕ್ಕೆಟ್ಟ ಮಕ್ಕಳಂತೆ ಕಾಂಪೌಂಡಿನಲ್ಲಿ ಒಂದೆಡೆ ನಿಂತಿದ್ದರು.

ವಡಿವೇಲು ರಾಮಾಶಾಸ್ತ್ರಿಯ ಬಳಿ ಬಂದು

"ಯಜಮಾನರನ್ನು ಕೇಳಿ—ಅಪ್ಪಣೆಯಾದರೆ ದೇಹವನ್ನು ನಾವು ತೆಗೆದುಕೊಂಡು ಹೋಗುತ್ತೇವೆ" ಎಂದು ಹೇಳಿದ. ಶಾಸ್ತ್ರಿ

"ಹೇಗೆ ಸಾಧ್ಯ. ಜಾತಿಪದ್ಧತಿಗನುಗುಣವಾಗಿ ಸಂಸ್ಕಾರವಾಗಬೇಡವೇ ?"

"ಶ್ರೀನಿವಾಸರ ಜಾತಿ ನಮ್ಮ ಜಾತಿ-ಅದಕ್ಕನುಗುಣವಾಗಿಯೇ ಸಂಸ್ಕಾರ ಮಾಡುವೆವು-ನೀವು ಹೋಗಿ ಯಜಮಾನರನ್ನು ಒಂದು ಮಾತು ಕೇಳಿಬನ್ನಿ"

ರಾಮಾಶಾಸ್ತ್ರಿ ಮೆಲ್ಲನೆ ಬಂದು ಸೂರಪ್ಪನವರ ಬಳಿ ಕುಳಿತು ವಡಿವೇಲು ತಿಳಿಸಿದುದನ್ನು ಹೇಳಿದ. ಸೂರಪ್ಪನವರು ಸಾವಕಾಶವಾಗಿ

"ಅವರು ಹೇಳುವುದು ನಿಜ ಶಾಸ್ತ್ರಿ. ಅವರಿಗೆ ಹೇಗೆ ಬೇಕೋ ಹಾಗೆ ಮಾಡಲಿ"

ಎಂದು ಹೇಳಿದರು. ಶಾಸ್ತ್ರಿ ಬಂದು ವಡಿವೇಲೂಗೆ ಸೂರಪ್ಪನವರ ಸಂದೇಶ ಮುಟ್ಟಿಸಿದ.

ಒಂದು ಗಂಟೆಯೊಳಗಾಗಿ ಹೂವಿನ ವಿಮಾನ ಸಿದ್ಧವಾಯಿತು. ಅದರೊಳಗೆ ಬಗೆಬಗೆಯ ಬಣ್ಣದ ಖಾದಿಯಿಂದ ಸಿಂಗಾರಮಾಡಿದರು. ವಿಮಾನದ ಮೇಲೆ ರಾಷ್ಟ್ರಧ್ವಜ.

ರಾಮಾಶಾಸ್ತ್ರಿ ಶ್ರೀನಿವಾಸನಿಗೆ ಸ್ನಾನಮಾಡಿಸಿ, ಶುಚಿಯಾದ ಉಡುಪು ಹಾಕಿದ. ಗೌರಮ್ಮನವರು ಮಗನನ್ನಪ್ಪಿ ಕುಳಿತುಬಿಟ್ಟರು

"ಹೊತ್ತು ಮೀರುತ್ತ ಬಂತು" ಎಂದು ಶಾಸ್ತ್ರಿ ಸೂಚಿಸಿದ.

"ನನ್ನ ಕಂದನನ್ನು ಹೇಗೆ ಕಳಿಸಲಿ" ಎಂದು ಗೌರಮ್ಮ ಅಂಗಲಾಚಿದರು.

ಕಾವೇರಮ್ಮ ಗೌರಮ್ಮನವರ ಎಡಬಿಡಲಿಲ್ಲ. ಕಾವೇರಮ್ಮನೇ ಮುಂದುವರಿದು

"ಗೌರಕ್ಕ–ಇದೇನು ಮೋಹ–ನೀವು ಜ್ಞಾನಿ .. ನಿಮ್ಮ ಶ್ರೀನಿವಾಸ ನಿಮ್ಮಲ್ಲಿ ಐಕ್ಯನಾಗಿದ್ದಾನೆ. ಇದೊಂದು ಮಣ್ಣಿನ ಮುದ್ದೆ. ಅದರ ಮೇಲಣ ಭ್ರಾಂತಿ ಬಿಡಿ" ಎಂದಳು.

"ಇಲ್ಲ ಕಾವೇರಮ್ಮ.....ಇದು ಮಣ್ಣಿನ ಮುದ್ದೆಯಲ್ಲ–ನನ್ನ ಭಾಗ್ಯದ ರಾಶಿ–ಇದನ್ನು ಹೇಗೆ–ಯಾವ ಹೊಟ್ಟೆ ಹಿಡಿದು ಕಳಿಸಲಿ ತಾಯಿ" ಎಂದರು.

ಗೌರಮ್ಮನವರನ್ನು ಕಾವೇರಮ್ಮ ಗಟ್ಟಿಯಾಗಿ ಹಿಡಿದುಕೊಳ್ಳಬೇಕಾಯಿತು. ಜನ ಬಂದು ಶ್ರೀನಿವಾಸನನ್ನೆತ್ತಿಕೊಂಡು ವಿಮಾನದಲ್ಲಿಳಿಸಿದರು. ಸೂರಪ್ಪನವರು ಕೊನೆಯ ಬಾರಿಗೆ ಮಗನ ಸಂದರ್ಶನ ಮಾಡಿ ಅವನ ಕಳೇಬರಕ್ಕೆ ಕೈಮುಗಿದರು.

ನೂರಾರು ಜನ ವಿಮಾನ ಹೊತ್ತರು. ಉಳಿದವರು ಸರದಿಯ ಮೇಲೆ ಹೊರಲು ಧಾವಿಸಿದರು. ಮುತ್ಸಂಜೆ ವೇಳೆ–ಸೂರ್ಯಾಸ್ತವಾಗಲಾರಂಭವಾಗಿತ್ತು-ಆಗಸದಲ್ಲಿ ಹೊನ್ನು ಬೆರೆದ ರಕ್ತಕಾಂತಿ-ಶ್ರೀನಿವಾಸ ತನ್ನ ಅಂತಿಮ ಯಾತ್ರೆ ಹೊರಟಿದ್ದ–ಪ್ರಿಯ ಜನರ ಹೆಗಲ ಮೇಲೆ ನಡೆದಿತ್ತು ಅವನ ಕೊನೆಯ ಪ್ರವಾಸ–ಮೂಕಪಶುವಿನಂತೆ ಜತೆಯಲ್ಲಿ ಬರುತ್ತಿದ್ದ ಗಫೂರ್ ವಡಿವೇಲುವನ್ನು ಮೆಲ್ಲನೆ

"ಅಣ್ಣಾ–ನಾನೂ ನನ್ನ ಸ್ವಾಮಿಗೆ ಹೆಗಲು ಕೊಡಬಹುದೇ ?" ಎಂದ.

ವಡಿವೇಲು ಅವನನ್ನು ವಿಮಾನದ ಬಳಿಗೆ ಕರೆತಂದು ಸ್ಥಳಮಾಡಿ ಕೊಟ್ಟ.

## ೫೬

ಮುಂಜಾನೆ ಬೇಗ ಎದ್ದು ಸ್ನಾನ ತೀರಿಸಿಕೊಂಡು, ತಾಯಿ ಕಟ್ಟಿಕೊಟ್ಟಿದ್ದ ಬುತ್ತಿಯನ್ನು ಕೈಯಲ್ಲಿ ಹಿಡಿದು ತನ್ನ ಫ್ಯಾಕ್ಟರಿಗೆ ಇಲಾಹಿ

ಹೋಗುತ್ತಿದ್ದ. ಹೋಗುವಾಗ ದಾರಿಯಲ್ಲಿ ಒಂದು ಇಂಗ್ಲಿಷ್, ಒಂದು ಉರ್ದು ಪತ್ರಿಕೆ ಕೊಂಡು, ದಾರಿಯುದ್ದಕ್ಕೂ ಟ್ರಾಮಿನಲ್ಲಿ ಓದಿಕೊಂಡು ಹೋಗುವುದು ಅವನ ಪದ್ಧತಿಯಾಗಿತ್ತು.

ಎಂದಿನಂತೆ ಬೆಳಿಗ್ಗೆ ಎದ್ದು ಹೊರಟ. "ಬಾಂಬೆ ಸೆಂಟಿನಲ್"— "ನಯಾ ಜಮಾನ" ಪತ್ರಿಕೆಗಳನ್ನು ಕೊಂಡು ಟ್ರಾಂ ಹತ್ತಿದ. ಮೊದಲನೆಯ ಪುಟದಲ್ಲಿ ದಪ್ಪ ಅಕ್ಷರಗಳಲ್ಲಿ ಕಂಡು ಬಂದ ಸುದ್ದಿ ಓದಿ ಚಕಿತನಾದ. ಶ್ರೀನಿವಾಸನ ಬಲಿದಾನ, ಅದಕ್ಕೊದಗಿದ ಸನ್ನಿವೇಶವನ್ನು ಎ. ಪಿ. ಐ. ಪ್ರತಿನಿಧಿ ವಿವರವಾಗಿ ವರ್ಣಿಸಿದ್ದ.

ಇಲಾಹಿ ಟ್ರಾಂ ಇಳಿದು ಹತ್ತಿರದಲ್ಲಿದ್ದ ಟೆಲಿಫೋನ್ ಬೂತಿಗೆ ಹೋಗಿ ಫ್ಯಾಕ್ಟರಿ ಮ್ಯಾನೇಜರಿಗೆ ರಜಾ ಬೇಕೆಂದು ತಿಳಿಸಿ ಮನೆಗೆ ಬಂದ.

ಮಗ ಇಷ್ಟು ಬೇಗ ಹಿಂದಿರುಗಿದುದನ್ನು ಕಂಡು ಬೀಯಮ್ಮ ಆಶ್ಚರ್ಯ ಪಟ್ಟು

"ಏಕೆ ಬೇಟಾ - ಮೈಯಲ್ಲಿ ನೆಟ್ಟಗಿಲ್ಲವೇ ?" ಎಂದಳು.

ಇಲಾಹಿಯ ಬಾಯಲ್ಲಿ ಮಾತು ಹೊರಡದು, ದುಃಖಿಸುತ್ತ ಸುಮ್ಮನೆ ಕುಳಿತುಬಿಟ್ಟ. ಬೀಯಮ್ಮ ಹತ್ತಿರ ಬಂದು ಅವನನ್ನು ನೇವರಿಸುತ್ತಾ

"ಏನಾಯಿತು—ಏಕೆ ದುಖಿಃಸುತ್ತಿರುವೆ" ಎಂದಳು.

ತಾಯಿಯ ಮುಖ ಇಲಾಹಿ ನೋಡಿದ. ದುಃಖ ಮರುಕಳಿಸಿ ಬಂತು. ಬಹು ಕಷ್ಟದಿಂದ ನುಡಿದ

"ಅಮ್ಮಾಜಾನ್, ಶ್ರೀನಿವಾಸಭಯ್........"

"ಏನಾಯಿತು ಅವನಿಗೆ ಅಮೀರ್ ?"

"ಗುಂಡಿನೇಟು ಬಿತ್ತು"

ಎಂದು ಪತ್ರಿಕೆಯಲ್ಲಿ ಬಂದಿದ್ದ ಸುದ್ದಿಯನ್ನು ಬಣ್ಣಿಸಿದ. ಬೀಯಮ್ಮ ಕಣ್ಣೀರು ಗರೆಯುತ್ತಾ

"ಹಾ ಖುದಾ ! ಪರವರ್ದಿಗಾರ್ " ಎಂದಳು

ಬೀಯಮ್ಮ ಕೂಡಲೇ ಕಾಲು ತೊಳೆದುಕೊಂಡು ಬಂದು ನಮಾಜ್ ಮಾಡಿ, ಶ್ರೀನಿವಾಸನ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸಿದಳು.

ಇಲಾಹಿ ಸೂಚನೆಯಂತೆ ಮಾರನೆಯ ಸಂಜೆ ಕಾಮಗಾರ್ ಮೈದಾನದಲ್ಲಿ ಚೋಕ್ಸಿಯವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ ಸೇರಿತು.

ಇಲಾಹಿ, ಚೋಕ್ಸಿ, ತುಕೋಜಿ ಮೊದಲಾದವರು ಶ್ರೀನಿವಾಸನ ಬಗ್ಗೆ ಮಾತನಾಡಿ ಅವನ ಗುಣಗಾನ ಮಾಡಿದರು. ದುಃಖಸೂಚನೆ ನಿರ್ಣಯ ಮಾಡಿ ಶ್ರೀನಿವಾಸನ ತಂದೆಗೂ, ಪತ್ರಿಕೆಗಳಿಗೂ ಕಳಿಸಲಾಯಿತು.

ಸಭೆ ದುಃಖಸೂಚಕ ನಿರ್ಣಯದಿಂದ ಇಲಾಹಿಯ ದುಃಖ ಉಪಶಮನವಾಗಲಿಲ್ಲ. ಅವನ ಮನಸ್ಸಿನಲ್ಲಿ ಕೊರಗೂ ಹತ್ತಿತು. ಬೀಯಮ್ಮ, ತುಕೋಜಿ ಎಷ್ಟು ಹೇಳಿದರೂ ಸಮಾಧಾನವಾಗಲೊಲ್ಲದು.

"ಗಾಢವಾದ ಪ್ರೇಮ ಎಂದಿಗೂ ಹಿತಕಾರಿಯಲ್ಲ ತುಕೋಜಿ" ಎಂದ.

"ನಿಜ ಇಲಾಹಿ—ಅದು ದುಃಖಹೇತು. ಅದಕ್ಕೇ ನಮ್ಮಲ್ಲಿ ಮನುಷ್ಯ ಅನಾಸಕ್ತನಾಗಿರಬೇಕು ಎಂದು ಹೇಳುವುದು. ಮನುಷ್ಯ ತಾವರೆಯೆಲೆಯ ಮೇಲಣ ಬಿಂದುವಿದ್ದ ಹಾಗಿರಬೇಕು."

"ಶ್ರೀನಿವಾಸ ಎಲ್ಲಿಯೋ ಇದ್ದವರು ನಾಲ್ಕುದಿನ ನನ್ನ ಜೀವನದಲ್ಲಿ ಸುಳಿದು, ನನ್ನ ಅಂತಃಕರಣ ಕಲಕಿ ಹೋಗಿಬಿಟ್ಟರು. ಇವನ್ನು ನೋಡುತ್ತಾ ನೋಡುತ್ತಾ ನಾನು ಹಿಂದುಗಳ ಹಾಗೆ ಜೀವನವೆಲ್ಲಾ ಮಾಯೆ ಎಂಬ ನಿರ್ಧಾರಕ್ಕೆ ಬರುತ್ತಿದ್ದೇನೆ"

ಮಾಯವಾದ ಕರ್ತವ್ಯಕ್ಕೆ ಅಡ್ಡಿಯಾಗಬಾರದು ಇಲಾಹಿ. ಜೀವನವೆಲ್ಲಾ ಮಾಯೆಯೆಂದುಕೊಂಡು ನೀನು ಫಕೀರ್ ಆಗಿಬಿಟ್ಟೀಯಾ. ಮುಂಬಯಿ ಕಾರ್ಮಿಕರಿಗೆ ಇಂದು ಫಕೀರ್ ಇಲಾಹಿಗಿಂತಲೂ, ಕಾಮ್ರೇಡ್ ಇಲಾಹಿಯ ಆವಶ್ಯಕತೆ ಹೆಚ್ಚಾಗಿದೆ."

"ಇಲ್ಲಾ ಭಯ್ಯಾ, ನಾನು ಹಾಗೆ ಮಾಡಿದರೆ ಕರ್ತವ್ಯಕ್ಕಾಗಿ ಪ್ರಾಣ ವೊಪ್ಪಿಸಿದ ನನ್ನ ಬಂಧು ಶ್ರೀನಿವಾಸರಿಗೆ ಅಪಚಾರ ಮಾಡಿದಂತಾಗುತ್ತದೆ. ನಾನು ಮತ್ತಷ್ಟು ಶ್ರದ್ಧೆಯಿಂದ ಕಾರ್ಯರಂಗಕ್ಕಿಳಿಯುವೆ."

ಎಂದು ಹೇಳಿದ. ಇಲಾಹಿಯ ನಿರ್ಧಾರ ಕಂಡು ತುಕೋಜಿಗೆ ತಳಮಳವಾಯಿತು. ಬದುಕುವ ಆಸೆಯೇ ಇಲಾಹಿಯಲ್ಲಿ ಅಳಿದು ಹೋಯಿತೇನೋ ಎನ್ನುವ ಶಂಕೆ ತುಕೋಜಿಯ ಮನಸ್ಸಿನಲ್ಲಿ ದೃಢವಾಗಿ ನಿಂತಿತು.

ಕಾವೇರಮ್ಮ ಸೂರಪ್ಪನವರ ಮನೆಯ ಯೋಗಕ್ಷೇಮ ನೋಡಿಕೊಂಡಳು. ಗೌರಮ್ಮ ಹಾಸಿಗೆ ಹಾಸಿ ಮಲಗಿಬಿಟ್ಟರು.

ರಾತ್ರಿ ವೆಂಕಪ್ಪಯ್ಯನವರು ಬಂದು ಸೂರಪ್ಪನವರನ್ನು ಸಮಾಧಾನಗೊಳಿಸಿ

"ಸುಭದ್ರಾ ಗಂಡು ಮಗು ಹೆತ್ತಳು"

ಎಂದು ತಿಳಿಸಿದರು. ಸೂರಪ್ಪನವರೂ ಯಾವದಕ್ಕೂ ಉತ್ತರ ಕೊಡಲಿಲ್ಲ.

ಗೌರಮ್ಮನವರ ಯೋಗಕ್ಷೇಮದ ಜವಾಬ್ದಾರಿಯನ್ನು ಪೂರ್ಣವಾಗಿ ಕಾವೇರಮ್ಮ ಹೊತ್ತಳು.

ಗೌರಮ್ಮ ಶುಷ್ಕಕಾಷ್ಟದಂತೆ ಮಲಗಿದರು. ಮಾತು ಪೂರ್ತಿ ನಿಂತು ಹೋಯಿತು. ನಿಸ್ತೇಜವಾದ ಕಣ್ಣುಗಳಿಂದ ಸುಮ್ಮನೆ ಧಾರಾಕಾರವಾಗಿ ನೀರು. ಕಾವೇರಮ್ಮ ಬಲವಂತ ಮಾಡಿ ಆಗಾಗ್ಗೆ ಒಂದೆರಡು ಚಮಚ ಹಾಲು, ಹಣ್ಣಿನ ರಸ ಕುಡಿಸುತ್ತಿದ್ದಳು.

ಡಾಕ್ಟರಿಗೆ ಪ್ರಬಲಸಮಸ್ಯೆ ತಲೆದೋರಿತು. ಗೌರಮ್ಮನವರ ಕಾಯಿಲೆ ಯೇನು ಎಂದು ಅವರಿಗೆ ಬಗೆ ಹರಿಯಲಿಲ್ಲ. ರಕ್ತದ ಒತ್ತಡ ಮಾತ್ರ ಸ್ಪಷ್ಟವಾಗಿ ಕಾಣುತ್ತಿತ್ತು. ಅದಕ್ಕೆ ನೂರಾರು ಇಂಜೆಕ್ಷನ್ ಚುಚ್ಚಿದರು.

ಶ್ರೀನಿವಾಸ ಕಣ್ಣು ಮುಚ್ಚಿಕೊಂಡ ಎಂಟನೆಯ ದಿನ. ಗೌರಮ್ಮನವರ ಪರಿಸ್ಥಿತಿ ತುಂಬ ಚಿಂತಾಜನಕವಾಯಿತು. ಬೆಳಿಗ್ಗೆ ಬಂದ ಡಾಕ್ಟರು ಊಟಕ್ಕೆ ಕೂಡ ಹೋಗಲಿಲ್ಲ. ಕಾವೇರಮ್ಮ ಸ್ನಾನ ಕೂಡ ಮಾಡದೆ ಗೌರಮ್ಮನವರ ಬಳಿಯಿದ್ದರು.

ಮಧ್ಯಾಹ್ನ ಹನ್ನೆರಡು ಗಂಟೆ ಸಮಯ. ಗೌರಮ್ಮನವರು ಇದ್ದಕ್ಕಿದ್ದಂತೆ ಕಣ್ಣನ್ನು ವಿಶಾಲವಾಗಿ ತೆರೆದು, ಅತ್ತಿತ್ತ ಏನನ್ನೋ ಹುಡುಕುವಂತೆ ನೋಡಿದರು. ಮನಸ್ಸಿಗೇನು ನಿರಾಶೆಯಾಯಿತೋ ಕಣ್ಣು ಮುಚ್ಚಿ

"ಶ್ರೀನಿವಾಸೂ - ಶ್ರೀನಿವಾಸೂ" ಎಂದರು. ಡಾಕ್ಟರು ನಾಡಿ ನೋಡಿ

ದರು. ಹೃದಯದ ಮೇಲೆ ಸ್ಟೆತಾಸ್ಕೋಪ್ ಇಟ್ಟು ನೋಡಿದರು. ಗೌರಮ್ಮನವರ ವಿಪ್ಲವ-ವೇದನೆ ಕೊನೆಗಂಡಿತ್ತು.

"ಹೃದಯದ ರಕ್ತನಾಳಗಳು ಒಡೆದು ಹೋದವು"

ಎಂದು ಡಾಕ್ಟರು ತಿಳಿಸಿದರು.

## ೫೮

ನೂರಪ್ಪನವರು ಇನ್ನು ಕಣ್ಣೀರು ಹಾಕುವುದಿಲ್ಲವೆಂದು ನಿಶ್ಚಯಿಸಿದರು. ಮಗ, ಹೆಂಡತಿ ಇಬ್ಬರ ಶ್ರಾದ್ಧಕರ್ಮವನ್ನು ಸಾಂಗವಾಗಿ ನೆರವೇರಿಸಿದರು. ಅದೇ ರಾತ್ರಿಯೆಲ್ಲಾ ನಿದ್ದೆಗೆಟ್ಟು ಕುಳಿತು ಬರದೇ ಬರೆದರು.

ಮಾರನೆಯ ಬೆಳಿಗ್ಗೆ ಶಾಸ್ತ್ರಿಯನ್ನು ಬರಮಾಡಿಕೊಂಡು

"ಗಫೂರ್ ಬಂದಿದ್ದಾನೆಯೇ ಶಾಸ್ತ್ರಿ–ಬಂದಿದ್ದರೆ ಕರೆ" ಎಂದರು.

ಶಾಸ್ತ್ರಿ ಹೋಗಿ ಕರೆಯಲು ಗಫೂರನೂ ಬಂದು ಯಜಮಾನರ ಕೋಣೆಯ ಬಾಗಿಲಲ್ಲಿ ನಿಂತ.

"ಶಾಸ್ತ್ರಿ–ಗಫೂರ್, ನೀವಿಬ್ಬರೂ ಪರಮ ಭಕ್ತಿಯಿಂದ ನನ್ನ ಸೇವೆಯನ್ನು ಇದುವರೆಗೆ ಮಾಡಿಕೊಂಡು ಬಂದಿದ್ದೀರಿ. ಇದೊಂದು ಕೊನೆಯ ಸೇವೆ. ಇದನ್ನೂ ಅಷ್ಟೇ ಭಕ್ತಿಯಿಂದ ಮಾಡಿಬಿಡಿ"

"ಸರ್ಕಾರ್" ಎಂದ ಗಫೂರ್.

"ಕೇಳು ಗಫೂರ್-ನನ್ನ ಆಸ್ತಿಯ ವಿನಿಯೋಗ ಹೀಗೆ ಮಾಡಿದ್ದೇನೆ ಈ ಮನೆ 'ಸ್ವರಾಜ್ಯ ಪಕ್ಷ'ದ ಕಚೇರಿ ಸೇರತಕ್ಕದ್ದು. ಇದಕ್ಕೆ ಶ್ರೀನಿವಾಸ ಸ್ಮಾರಕ ಭವನ ಎಂದು ಅವರು ನಾಮಕರಣ ಮಾಡಬೇಕು; ನನ್ನ ರಾಮೇನಹಳ್ಳಿ ಗದ್ದೆ ಶಾಸ್ತ್ರಿ ನಿನಗೆ, ನನ್ನ ಭೈರಸಂದ್ರದ ಗದ್ದೆ ಗಫೂರನಿಗೆ ನನ್ನ, ಮುತ್ತೂರು ಗದ್ದೆ ಹೊಲ ಕಾವೇರಮ್ಮನವರಿಗೆ. ಗಫೂರ್-ನನ್ನ ಕಾರು ನಿನಗೆ; ಶಾಸ್ತ್ರಿ, ನೀನು ಮನೆ ಕಟ್ಟಿಕೊಳ್ಳುವುದಕ್ಕೆ ಐದು ಸಾವಿರ ಮುಡಿಪಾಗಿಟ್ಟಿದ್ದೇನೆ. ನನ್ನ ಇನ್ಷ್ಯೂರೆನ್ಸ್ ಹಣ ಮತ್ತು ಮೈಸೂರು ಬ್ಯಾಂಕಿನ ಫಿಕ್ಸೆಡ್ ಡಿಪಾಸಿಟ್‌ನಲ್ಲಿರುವ ೪೦,೦೦೦ ರೂಪಾಯಿ ಸುಭದ್ರೆಯ ಮಗನಿಗೆ"

"ಸ್ವಾಮಿ ನೀವು ?" ಎಂದು ಶಾಸ್ತ್ರಿ ಕೇಳಿದ.

"ನನಗೆ ಬೇಕಾದಷ್ಟು ಇಟ್ಟುಕೊಂಡಿದ್ದೇನೆ. ಶಾಸ್ತ್ರಿ—ಸೀನೂ ಗಫೂರ್ ಇದರ ಟ್ರಸ್ಟಿಗಳು-ಕಾಗದ ತೆಗೆದುಕೋ-ನಾನು ಹೇಳಿರುವುದಕ್ಕೆ ಚಾಚೂ ವ್ಯತ್ಯಾಸ ಬರದಂತೆ ನಿರ್ವಹಿಸು"

ಎಂದು ಹೇಳಿ ಅವರಿಬ್ಬರನ್ನೂ ಕಳಿಸಿಕೊಟ್ಟರು. ಸಂಜೆ ಕೋರ್ಟ್ ಕೆಲಸ ಮುಗಿಸಿಕೊಂಡು ಶಾಸ್ತ್ರಿ ಮನೆಗೆ ಬಂದಾಗ ಸೂರಪ್ಪನವರಿರಲಿಲ್ಲ. 'ಎಲ್ಲಿ' ಎಂದು ಗಫೂರನನ್ನು ಕೇಳಿದ. ತನಗೆ ಗೊತ್ತಿಲ್ಲವೆಂದು ಅವನೂ ತಲೆಯಲ್ಲಾಡಿಸಿದ.

## ೩೯

ಶ್ರೀನಿವಾಸನ ಬಲಿದಾನ ನಿಸ್ಸಾರ್ಥಕವಾಗಲಿಲ್ಲ. ಬನಪ್ಪ ಪಾರ್ಕಿನ ಪ್ರಕರಣ ಕೇಂದ್ರ ಸರ್ಕಾರದವರೆಗೆ ಮುಟ್ಟಿತು. ಇಪ್ಪತ್ತುನಾಲ್ಕು ಗಂಟೆಯೊಳಗಾಗಿ ಜನತೆಯೊಂದಿಗೆ ಮೈತ್ರಿ ಬೆಳೆಸಿ ಜವಾಬ್ದಾರಿ ಸರ್ಕಾರ ಘೋಷಿಸಬೇಕೆಂದು ಸಂಸ್ಥಾನದ ಸರ್ಕಾರಕ್ಕೆ ಕೇಂದ್ರದ ಗೃಹ ಮಂತ್ರಿಗಳಿಂದ ನಿರೂಪ ಬಂತು.

ಬಂಧನದಲ್ಲಿದ್ದ ನಾಯಕರು, ಸ್ವಯಂ ಸೇವಕರು, ಕೂಲಿಕಾರರ ಬಿಡುಗಡೆಯಾಯಿತು. ಮೈಸೂರಿಗೆ ಮೈಸೂರೇ ಆನಂದಪರವಶವಾಯಿತು. ಕೆಲವೇ ದಿನಗಳಲ್ಲಿ ಸರ್ಕಾರ ಸಂಧಾನಕಾರ್ಯ ಪೂರೈಸಿ, ಕಾರ್ಯ ನಿರ್ವಹಿಸುತ್ತಿದ್ದ ಮಂತ್ರಿಮಂಡಲದ ರಾಜೀನಾಮೆಯನ್ನು ಸ್ವೀಕರಿಸಿತು. ಅಮಾತ್ಯಶ್ರೇಷ್ಠರು ಮಾತ್ರ ಉಳಿದುಕೊಂಡರು. ಅದರ ಹಿರಿಯತನದಲ್ಲಿ ನೂತನ ಮಂತ್ರಿಮಂಡಳ ನಿಯಾಮಕವಾಗತಕ್ಕದೆಂದೂ, ಮಂತ್ರಿ ಮಂಡಳಕ್ಕೆ ಸದಸ್ಯರನ್ನೂ ಸೂಚಿಸುವ ಜವಾಬ್ದಾರಿ 'ಸ್ವರಾಜ್ಯ ಪಕ್ಷ'ದ್ದೆಂದು ಅಧಿಕೃತ ಘೋಷಣೆ ಹೊರಬಿದ್ದಿತು.

ನೂತನ ಮಂತ್ರಿವರ್ಗವನ್ನು ನಿಯಮಿಸುವ ಜವಾಬ್ದಾರಿ ಪುಟ್ಟಣ್ಣನವರ ಮೇಲೆ ಬಿತ್ತು.

ಸುಭದ್ರೆ ಮತ್ತೆ ಚೇತನಗೊಂಡು ಏಳಬೇಕಾದರೆ ಆರು ತಿಂಗಳಾದವು. ಆ ಅವಧಿಯಲ್ಲಿ ಪುಟ್ಟಣ್ಣನವರೂ, ಇತರ ಸ್ವರಾಜ್ಯ ಪಕ್ಷದ ನಾಯಕರೂ ಮಂತ್ರಿಗಳಾಗಿ ವಿಜೃಂಭಿಸುತ್ತಿದ್ದರು.

ಮಂತ್ರಿತ್ವ ದೊರೆಯಿತೆಂದು ಪುಟ್ಟಣ್ಣನವರು ಹಿಂದಿನ ಗೆಳೆಯ ಗೆಳತಿಯರನ್ನು ಮರೆಯಲಿಲ್ಲ. ಅಧಿಕಾರ ಸ್ವೀಕಾರ ಮಾಡಿದ ದಿನವೇ ಸುಭದ್ರೆಯನ್ನು ಕಂಡು ಆಕೆಯ ಶುಭಾಶಯಗಳನ್ನು ಸ್ವೀಕರಿಸಿ ಹೊಗಿದ್ದರು.

ಮೈಸೂರಿಗೆ ದೊರೆತ ಅಪೂರ್ವ ವಿಜಯದಲ್ಲಿ ಅದನ್ನು ದೊರಕಿಸಿ ಕೊಟ್ಟ ಸ್ವರಾಜ್ಯ ಪಕ್ಷವನ್ನು ಅಭಿನಂದಿಸಲು ನಾಗರೀಕರ ಪ್ರಚಂಡ ಸಭೆಯೊಂದು ಲಾಲ್‌ಬಾಗ್ ಗ್ಲಾಸ್ ಹೌಸಿನಲ್ಲಿ ಏರ್ಪಾಟಾಯಿತು. ಅಧ್ಯಕ್ಷತೆಯನ್ನು ಪಕ್ಷದ ನೂತನ ನಾಯಕರಾದ ತಿಮ್ಮೇಗೌಡರು ವಹಿಸಿದ್ದರೂ ಕಾರ್ಯಕಲಾಪಗಳೆಲ್ಲಾ ಸುಭದ್ರೆಯ ಕೈಯಲ್ಲಿಯೇ.

ನಿಯೋಜಿತ ಭಾಷಣಕಾರರು ನೂತನ ಮಂತ್ರಿಮಂಡಳವನ್ನು ಮನಸಾರೆ ಹೊಗಳಿ, ಅವರಿಂದ ದೇಶದಲ್ಲಿ ಸುವರ್ಣಯುಗವಾರಂಭವಾಗುವುದೆಂದು ಭರವಸೆಯಿತ್ತರು.

ಸುಭದ್ರೆಯ ಭಾಷಣ ಅಂದಿನ ಕಾರ್ಯಕ್ರಮವನ್ನು ಮರೆಸಿತು. ಅಂದು ಅವಳು ತೋರಿದ ವಾಗ್ವಿಲಾಸ, ವಿಚಾರ ಪ್ರೌಢಿಮೆ, ದೇಶಾಭಿಮಾನ ಹಿಂದೆ ಎಂದೂ ತೋರಿರಲಿಲ್ಲ. ಪುಟ್ಟಣ್ಣನವರ ತ್ಯಾಗ, ಅವರ ದೇಶಸೇವಾ ಪರಾಯಣತೆ, ಸೌಜನ್ಯಗಳನ್ನು ಮುಕ್ತಕಂಠದಿಂದ ಸ್ತುತಿಮಾಡಿ ಕೊನೆಯಲ್ಲಿ

"ನಮ್ಮ ಸಂಸ್ಥಾನದಲ್ಲಿಯಾಗಲಿ, ಭಾರತದ ಇತರ ಕಡೆಯಲ್ಲಿಯಾಗಲಿ 'ಸ್ವರಾಜ್ಯಪಕ್ಷ' ಬಿಟ್ಟು ಬೇರೆ ಪಕ್ಷಕ್ಕೆ ಅವಕಾಶವಿರಬಾರದು. ದೇಶದಲ್ಲಿ ಜಾಗೃತಿಯನ್ನುಂಟುಮಾಡಿ, ಇಂದು ದೊರೆತಿರುವ ಜವಾಬ್ದಾರಿ ಸರ್ಕಾರವನ್ನು ಸಂಪಾದಿಸಿದವರು ಸ್ವರಾಜ್ಯ ಪಕ್ಷದವರು. ಕಾರಾಗೃಹಗಳನ್ನು ಸೇರಿ, ಪೋಲೀಸಿನವರ ಕೈಯಲ್ಲಿ ಮೂಳೆ ಮುರಿಸಿಕೊಂಡು ನಿದ್ರಾಹಾರಾದಿಗಳನ್ನು ತೊರೆದು ಅವರು ದೇಶದ ಕಲ್ಯಾಣಕ್ಕಾಗಿ ಅಹರ್ನಿಶಿ ದುಡಿದಿದ್ದಾರೆ. ಬೇರೆ ಬೇರೆ ಹೆಸರುಗಳಲ್ಲಿ ರಾಜಕೀಯ ಪಕ್ಷಗಳನ್ನು ಕಟ್ಟಿಕೊಂಡು, ಸ್ವರಾಜ್ಯಪಕ್ಷದ ಕಾರ್ಯ ಕಲಾಪಗಳಿಗೆ ಅಡ್ಡಿ ಆತಂಕ ತಂದೊಡ್ಡುವವರನ್ನೂ, ಅವರ ಪಕ್ಷಗಳನ್ನೂ ಜನ ಬಹಿಷ್ಕರಿಸಬೇಕು."

ಎಂದು ಹೇಳಿದಳು. ಸಭೆಯಲ್ಲಿ ಪ್ರಚಂಡ ಕರತಾಡನವಾಯಿತು. ಪುಟ್ಟಣ್ಣನವರು ಹಿಗ್ಗಿ ಹೋದರು.

ಉತ್ಸವಕ್ಕೆ ಬಂದಿದ್ದ ಶಂಕರ ನೇರವಾಗಿ ಸುಭದ್ರೆಯ ಮನೆಗೆ ಬಂದು ಅವಳ ದಾರಿ ಕಾಯುತ್ತ ಕುಳಿತ. ಅವಳು ಮನೆ ಸೇರಲು ಸ್ವಲ್ಪ ತಡವಾಯಿತು.

ಮನೆಯಲ್ಲಿ ಶಂಕರ ಕಾದಿರುವುದನ್ನು ಕಂಡು ಸುಭದ್ರಾ ಮುಗುಳ್ನಗೆ ಬೀರುತ್ತಾ

"ಏನು ಶಂಕರರಾವ್-ಇವತ್ತು ನಮ್ಮ ಪಾರ್ಟಿಗೆ ಬರಲಿಲ್ಲವೇ?" ಎಂದು ಕೇಳಿದಳು.

"ಬಂದಿದ್ದೆ. ಅದನ್ನು ಮುಗಿಸಿಕೊಂಡೇ ಇಲ್ಲಿಗೆ ಬಂದೆ?"

"ನನ್ನ ಭಾಷಣ ಹೇಗಿತ್ತು?"

"ಹೇಳಬೇಕಾದದ್ದೇನು ?—ಅದ್ಭುತವಾಗಿತ್ತು-ಮಾತುಗಾರಿಕೆಯಲ್ಲಿ ನಿಮ್ಮನ್ನು ಮೀರಿಸಿದವರು ಯಾರೂ ಇಲ್ಲ?"

"ಮಾತುಗಾರಿಕೆಯಲ್ಲೇ!"

"ಹೌದು! ನೀವು ಯಾವ ಹೊತ್ತಿನಲ್ಲಿ ಏನು ಹೇಳುವಿರಿ ಏನು ಮಾಡುವಿರಿ ಎಂಬುದರ ಅರಿವು ಆ ಪರಮಾತ್ಮನಿಗೊಬ್ಬನಿಗೇ ಸಾಧ್ಯ?"

"ಏಕೆ ಶಂಕರ್, ಬಹಳ ಕೋಪಗೊಂಡಿರುವ ಹಾಗೆ ಕಾಣುತ್ತದೆ?"

"ಹೀಗೆ ಚೆಲ್ಲಾಟವಾಡಬಾರದು ಸುಭದ್ರಾ. ಇದು ನ್ಯಾಯವಲ್ಲ."

"ಏನು ಚೆಲ್ಲಾಟವಾಡಿದೆ?"

"ನನ್ನ ಪ್ರೋತ್ಸಾಹಿಸಿ ಹಿಂದೂ ಧರ್ಮ ರಕ್ಷಣ ಸಭೆಗೆ ಗಂಟಹಾಕಿದಿರಿ. ಅದರೊಳಗೆ ನೀವೂ ಬರುವಿರೆಂಬ ಆಸೆಯಿಂದ ನಾನು ಸಭೆ ಸೇರಿದೆ. ಈಗ ಕೈಕೊಟ್ಟಿರಿ-ಸ್ವರಾಜ್ಯ ಪಕ್ಷವೊಂದನ್ನುಳಿದು ಉಳಿದ ಪಕ್ಷಗಳನ್ನು ನಾಶ ಮಾಡಲು ಹೊರಟಿರುವಿರಿ?"

ಸುಭದ್ರಾ ತಿರಸ್ಕಾರ ಸೂಚಕ ನಗೆ ಬೀರುತ್ತಾ

"ಶಂಕರ್, ನೀವಿನ್ನೂ ಕಾಲೇಜ್ ವಿದ್ಯಾರ್ಥಿ ದೆಶೆಯಿಂದ ಬೆಳದೇ ಇಲ್ಲ. ರಾಜಕಾರಣದಲ್ಲಿ ಸ್ವಲ್ಪ ಸಮಯಸೂತ್ರ ಪಾಲನೆಯೂ ಬೇಕು. ನೀವೇ ಯೋಚನೆ ಮಾಡಿ. ಇಂದು ಸಂಸ್ಥಾನದಲ್ಲಿ ಸ್ವರಾಜ್ಯ ಪಕ್ಷ ಬಿಟ್ಟು ಬೇರೆ ಪಕ್ಷ ಬಾಳಲು ಬದುಕಲು ಸಾಧ್ಯವೇ?"

ಕಂಡವರ ಮಕ್ಕಳನ್ನು ಭಾವಿಯಲ್ಲಿ ತಳ್ಳಿ ಆಳ ನೋಡುವ ಕಲೆ ನಿಮಗೆ ಚೆನ್ನಾಗಿ ಸಾಧಿಸಿದೆ."

"ನನ್ನ ಜತೆ ವ್ಯಾಜ್ಯ ಕಾಯಲು ಬಂದಿರುವಿರಾ ?"

"ಕಾದೇನು ಸಾರ್ಥಕ ?"

"ಹಾಗೆ ತಿಳಿದುಕೊಂಡು ಸುಮ್ಮನಿರಿ. ನನ್ನ ದಾರಿ ಬೇರೆ ನಿಮ್ಮ ದಾರಿ ಬೇರೆ. ಅವು ಕೂಡುವುದಿಲ್ಲ."

"ಈ ಮಾತು ಒಂದಲ್ಲ ಒಂದು ದಿನ ನಿಮ್ಮ ಬಾಯಲ್ಲಿ ಬರುವುದೆಂದು ನಾನು ನಿರೀಕ್ಷಿಸುತ್ತಿದ್ದ".

"ಇಂದು ಬಂತಲ್ಲಾ–ನಿಮ್ಮ ನಿರೀಕ್ಷಣೆ ಸಫಲವಾಯಿತು."

ಶಂಕರನ ಕಣ್ಣಲ್ಲಿ ನೀರು ತುಂಬಿತು. ಅವನ ಹೃದಯ ದುಃಖದಿಂದ ಬೆಂದುಹೋಯಿತು. ಕಣ್ಣಲ್ಲಿ ನೀರು ಸುರಿಯುತ್ತಿದ್ದಂತೆ

"ಸುಭದ್ರಾ–ನನ್ನನ್ನು ನೀವು ಕೊಂದುಬಿಟ್ಟರಿ".

ಎಂದು ಹೇಳುತ್ತಾ ಅಲ್ಲಿ ನಿಲ್ಲದೆ ಹೊರಟುಹೋದ.

ಸುಭದ್ರಾ ಅವನು ಹೋದುದನ್ನು ನೋಡುತ್ತಾ ನಕ್ಕು "ಸಿಲ್ಲಿ ಫೂಲ್ (Silly fool)" ಎಂದುಕೊಂಡಳು.

ಸ್ವರಾಜ್ಯ ಪಕ್ಷದಲ್ಲಿ ಸುಭದ್ರೆಯ ಸ್ಥಾನಮಾನ ದಿನದಿನಕ್ಕೆ ಬೆಳೆಯುತ್ತ ಹೋಯಿತು. ಮಂತ್ರಿಗಳಿಂದ ಯಾವ ಕೆಲಸವಾಗಬೇಕಾದರೂ ಜನ ಸುಭದ್ರೆಯ ಮರೆಹೊಗುತ್ತಿದ್ದರು. ಪುಟ್ಟಣ್ಣನವರು ಪ್ರವಾಸ ಹೊರಟರೆ ಜತೆಯಲ್ಲಿ ಸುಭದ್ರೆ ಇದ್ದೇ ತೀರಬೇಕು.

ಹೂವಿನಿಂದ ನಾರು ಸ್ವರ್ಗಕ್ಕೇರಿದಂತೆ ರಂಗಣ್ಣನ ಸ್ಥಾನವೂ ಏರುತ್ತಾ ಹೋಯಿತು. ಅವನನ್ನು ಆಶ್ರಯಿಸುವ ಜನರ ಸಂಖ್ಯೆಯೂ ದಿನದಿನಕ್ಕೆ ಬೆಳೆಯುತ್ತ ಹೋಯಿತು.

ಸುಭದ್ರಾ ತನ್ನ ನೂತನ ರಾಜಕೀಯ, ಸಾಮಾಜಿಕ ಜೀವನದಲ್ಲಿ ನೀರಿನಲ್ಲಿ ಮೀನು ಮುಳುಗುವಂತೆ ಮುಳುಗಿದಳು. ಆದರೆ ಅವಳ ಹೃದಯ ದಲ್ಲಿ ಆನಂದ, ಮುಖದಲ್ಲಿ ನಗೆ ಮಾಯವಾಗಿತ್ತು.

ಮನೆಗೆ ಬಂದಾಗ ಮಗುವನ್ನೆತ್ತಿಕೊಂಡು, ಅದನ್ನು ಅಪ್ಪಿ, ಮುದ್ದಿಟ್ಟು ಅದರ ಜತೆ ತಪ್ಪು ಮಾತನಾಡಿದರೆ ಆಗುತ್ತಿದ್ದ ಸಂತೋಷವೇ ಅವಳಿಗುಳಿದಿದ್ದುದು.

ಮಗುವನ್ನೆತ್ತಿ ತೂಗಿ, ಅಪ್ಪಿ, ಅದು ಉಸಿರುಬಿಡಲು ಅವಕಾಶವಿಲ್ಲದಂತೆ ಮುದ್ದಿಟ್ಟು 'ಶ್ರೀನಿವಾಸ', 'ನನ್ನ ಬಂಗಾರದ ಶ್ರೀನಿವಾಸ!' ಎನ್ನುತ್ತಿದ್ದಳು.

ಶ್ರೀನಿವಾಸ ಎಂದಾಗ ಅವಳಿಗೆ ರೋಮಾಂಚನವಾಗುತ್ತಿತ್ತು. ನೆನಪು ಗತಕಾಲಕ್ಕೆ ಹೋಗಿ ಸಿಲ್ಲುತ್ತಿತ್ತು.

ಮಮ್ಮಲ ಮರುಗುತ್ತಿದ್ದ ಸುಭದ್ರೆಯ ಹೃದಯದಲ್ಲಿ 'ಆ ನೆನಪು' ನಿತ್ಯನೂತನವಾಗಿ ಮಂಡಿಸಿ ನೋವಿನ ನಲವನ್ನು ಅವಳಿಗೆ ಸೀಡುತ್ತಿತ್ತು.

